ಗುಮೆ ಪೆಲೆಗೊಂಡೆನಾಬೆಲೆಗೆ ಮೆಯ್ವೆಲೆ ಮೆಸ್ಸೆ ನಿನತಿ[9]ತ್ತೆನೆಂಬ ಕೂ ।
ಟಮನದನೊಂದುಕೂಟಮೆನಲಕ್ಕುಮೆ ನಂಜಿನ ಕಾಳಕೂಟಮುಂ ॥ 144

ಕಂ ॥ ಪಿಡಿಯೆ ಮೆಲಲ್ ಬಿಡಿ ಸೃಕ್ವದೊ ।
ಳಡಸಿದ ಪಲ್ಲವಕೆ ಪಲ್ಲಮುಱಿ ನಿಳ್ಕುವುದುಂ ॥
ಕಡೆಗಣ್ಣೊಳ್ ಕಂಡೋದಿಭ ।
ಮುಡಿದಿತ್ತುದು ಸಾರ್ದ್ರಸಲ್ಲಕೀಪಲ್ಲವಮಂ ॥ 145

---

1 ಸತ್ವರಕುರು, 2 ಮುರಿ, 3 ಬಲಕ್ಕಮಧಿಕನಂ, 4 ಬರಿಸಿದುದವರಜನಂದಂ, 5 ಯೊಳ್, 6 ಮೋಪಳ, 7 ನಾಟ, 8 ಬಗೆಗೂಟ, 9 ಗಿತ್ತೆ,

ವಿಭಕ್ತಿಪರಿಣಾಮಕ್ಕೆ ॥

ವೃ ॥ ಅಸುಹೃತ್ಸೇನೆಗೆ ಸಾಲ್ಯನೊರ್ವ್ವನೆ ಗಡಂ ರುದ್ರಾವತಾರಂ ಗಡಂ ।
ನೊಸಲೊಳ್ ಕಣ್ ಗಡಮೆಂದು ನಂ[1]ಬಿ ಪೊರದೆಂ ತಾನಕ್ಕೆ ತಮ್ಮಮ್ಮನ ॥
ಕ್ಕೆಸಲಂಬಂ ತಿರುವಾಯ್ಗೆ ತಂ[2]ದಱಿವರೇ ತಮ್ಮಿರ್ವ್ವರುಂ ಕೆಯ್ದುವಂ ।
ಬಿಸುಟರ್ ಜೋಳದ ಪಾೞಿಯುಂ ಬಗೆದರಿ[3]ಲ್ಲಾ ದ್ರೌಣಿಯುಂ ದ್ರೋಣನುಂ ॥ 146

ಸೂತ್ರಂ ॥ 35 ॥

ಜಾತಿಯೊಳಂ ಸಂಖ್ಯಾನಾ[4] ।
ಖ್ಯಾತಿಯೊಳಂ ಕೂಡಿ ನೆ[5]ಗೞ್ಗನೇಕಬಹುತ್ವೋ ॥
ದ್ಯೋತನಪರಮೇಕತ್ವಂ ।
ಮಾತೇಂ ಭಾವದೊಳಮೇಕವಚನಮೆ ಅಕ್ಕುಂ ॥ 147

ಪ್ರಯೋಗಂ ॥

ಜಾತಿಗೆ ॥

ಕಂ ॥ ಕ[6]ರಿಯಿವು ಕರಿಯಲ್ಲಿವು ಗಿರಿ ।
ಗಿರಿಯಲ್ಲಿವು ಕರಿ ಕ[7]ರೀಂದ್ರನಲ್ಲಿವು ಗಿರಿ ಪೋ ॥
ಕ[8]ರಗಿರಿಯೆಂದಿನಿಸಪ್ಪೊಡ ।
ಮರಣ್ಯದೊಳಗಱಿಯಲಾಗ ಕರಿಯುಂ ಗಿರಿಯುಂ ॥ 148

ಸಂಖ್ಯೆಗೆ ॥

ಕಂ ॥ ದೆಸೆ ಪತ್ತು ಜಲಧಿ ನಾಲ್ಕಾ ।
ಗಸಮೊಂದು ಕುಲಾದ್ರಿಯೇೞು ತಾಮೆನೆ ಮತ್ತೀ ॥
ವಸುಧಾಮಧ್ಯದೊಳೆತ್ತಲ್ ।
ಮಿಸುಕುವನಿನ್ನೆತ್ತಲುೞಿವನಹಿತಕ್ಷಿತಿಪಂ ॥ 149

ಭಾವಕ್ಕೆ ॥

ಕಂ ॥ ನಡುವಣ ಕಪ್ಪುರ್ವ್ವಂ ಕಡೆಯಣ ।
ಕಡುವೆಳ್ಪುಂ ತುದಿಯ ಕೂರ್ಪ್ಪುಮೆಸೆದಿರೆ ವಿಟರಂ ॥
ಬಿಡದಿಸಲೆ ತೆಗೆದ ಮದನನ ।
ನೆ[9]ಡಿಯಲರ್ಗಣೆಗಳನೆ ಪೋಲ್ತುವಾಕೆಯ ಕಣ್ಗಳ್ ॥ 150

ಸಂಖ್ಯಾಜಾತಿವ್ಯತ್ಯಯಕ್ಕೆ ॥

ವೃ ॥ ಸಂತಮಿ[10]ರ್ಪ್ಪುದೆ ನವಗ್ರಹಮಾಶಾ ।
ದಂತಿಗಳ್ ಪದುಳಮೇ ದಿವದೊಳ್ ನಿ ॥
ಶ್ಚಿಂತಮಿರ್ಪ್ಪರೆ ಸುರರ್ ದಿತಿಪುತ್ರಾ ।
ಕ್ರಾಂತಿಯಿ[11]ಲ್ಲ ವಲಮೆಂಬುದುಮಾಗಳ್ ॥ 151

---

1 ನಚ್ಚಿ. 2 ದಂದವರಿದಂ. 3 ರಲ್ಲ್ಕಾ. 4 ನಾ. 5 ನೆಗಲ್ದ. 6 ಕರಿಯುವು. 7 ವರಾಗಳ್ಪ್ರಕಂ. 8 ಗಿರಿವರಮಂ. 9 ನಿಡಿದ. 10 ಮಿಕ್ಕ್ವರೆ. 11 ಯುಲ್ಲ.

ಸೂತ್ರಂ ॥ 36 ॥

ನೀನಾಂ ತಾನೆನಿಕುಂ ಪ್ರಥ ।
ಮಾನಿರ್ದ್ದೇಶಕ್ಕೆ ನಿನಗೆಯೆನಗೆ ತನಗೆಯೆಂ ॥
ಬೀನುಡಿ ಚತುರ್ತ್ಥಿಯೊಳ್ ಸಲೆ ।
ತಾನಕ್ಕುಂ ಯುಷ್ಮದಸ್ಮದನ್ಯೋಕ್ತಿಗಳೊಳ್ ॥ 152

ಉದಾಹರಣೆ ॥

ಕಂ ॥ ಆನುಂ ದುಶ್ಶಾಸನನುಂ ।
ನೀನುಂ ಮೂವರೆ ದಲಾತನುಂ ಕೆಱದ ಬೞ ॥
ಕ್ಕಾನುಂ ನೀ[1]ನೆ ದಲೀಗಳ್ ।
ನೀನುಮಗಲ್ದಿತ್ತಪ್ರೋದಯಂಗಾಧಿಪತೀ ॥ 153

ತಾನೆ ಗ[2]ಡಳಿಪಂ ಮೂರ್ಖಂ ।
ತಾನೆ ಗಡಂ ತೊಡರ್ದು ಮುಡಿಗೆಗಂ ಬೋ[3]ವಕ್ಕಂ ॥
ತಾನೆ ಗಡ ಬರ್ಪ್ಪನೆನಿಸುವೊ ।
ಡಾ[4]ನರನಯ್ದಱುದೆವಸಮುಂ ಬೞ್ದಪನೇ ॥ 154

ವೃ ॥ ಎನಗೆ ಕೂರ್ಪ್ಪದನಾಘಟಸಂಭವಂ ।
ನಿನಗೆ ಕೂ[5]ರನೞಲ್ ನಿನತಲ್ತು ಕೇ ॥
ಳೆನತು ತಂದೆಯ ಶೋಕಮನಿ[6]ರ್ವ್ವಮುಂ ।
ಮುನಿವರಂ ತವೆ ಕೊಂ[7]ದೊಡನೀಗುವಂ ॥ 155

ತನಗೆ ಮೇ[8]ಗಿನಿಸೆಂಬನಿತಾದೊಡಾ ।
ವನುಮನಾವನುಮೊಲ್ಗುಮೆ ಮೆಚ್ಚಲಂ ॥
ತಿನಿತು ಮೆಚ್ಚದರೆಲ್ಲಮನೆನ್ಗುಮೆಂ ।
ದನಿತಱಿಂ ಪೞ ಸಾಗ್ಗ್ರಮೆ ಗಂಡರಂ ॥ 156

ಸೂತ್ರಂ ॥ 37 ॥

ಅವನಾತನೆಂಬ ಮಾತುಗ ।
ಳವು ಪುಲ್ಲಿಂಗಪ್ರಯೋಗದೊಳ್ ಸ್ತ್ರೀಗುಣದೊಳ ॥
ನ್ನವಳಾಕೆಯೆಂಬ ನುಡಿ ಸಂ ।
ಭವಿಕುಂ ಶೇಷದೊಳದೆಂಬ ಮಾ[9]ತೆಸೆದಿರ್ಕ್ಕುಂ ॥ 157

---

1 ನೀನೇಳೆಂಗಳ್. 2 ಗಳಂದಂ. 3 ಜೋಳವಕ್ಕಂ, ಚೌವಕ್ಕಂ. 4 ದಾನವವೃಂದಾಮರಿವಸದೊಳ್ ಬಂದವನೇ.
5 ಕೂರ್ಪನಲ್ಲಿ ನಗಿಕ್ಕು. 6 ನಿರ್ವ್ವೇಗಂ. 7 ಕೊಂದೊಡನೀಗುವಂ. 8 ಮೆಗ್ಗಿನಿ. 9 ಮಾತೆಂಬಿದಿರ್ಕ್ಕುಂ.

ಪ್ರಯೋಗಂ ॥

ಕಂ ॥ ಅವನಾಕೆಯನಂತಾತನ ।
ನವಳುಮಗಲ್ದೊಂದುಪೊೞ್ತುಮಿರಲಾಱರ್ ಕೂ ॥
ರ್ಪ್ಪವರನಿತುವರೆಗಮಾರೆನೆ ।
ಭವಾಂತರಸ್ನೇಹಮವರೊಳಾದುದಳುಂಬಂ ॥ 158

ವೃ ॥ ಆದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾ ।
ೞ್ಕೆಮೊದಲದು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತ್ತಿಗೆ ॥
ತ್ತಿದ ಪೊಸಪಟ್ಟಮಂತದು ಮನೋಜನ ಕೆಯ್ಪಿಡಿಯೆಂದೆ ಮಾ[1]ೞ್ಪೆನಾ ।
ಸುದತಿಯ ರೂಪನಿಂ ಪೆಱತನೆಂದೊಡೆ ಚಿಃ ಕರಮೆಗ್ಗನಾಗೆನೇ ॥ 159

ಸೂತ್ರಂ ॥ 38 ॥

ನಿತ್ಯಂ ನಪುಂಸಕತ್ವಮ ।
ಪತ್ಯಕಲತ್ರಾದಿಶಬ್ದದೊಳ್ ಸ್ತ್ರೀಪುಂಸ ॥
ವ್ಯತ್ಯಯಮುಕ್ತಂ ಕರುಣೋ ।
ಪತ್ಯಕೆಗಳೊಳಂ ವಧಾಭಿಲಾಷಾದಿಯೊಳಂ ॥ 160

ಪ್ರಯೋಗಂ ॥

ಕಂ ॥ ತದಪತ್ಯಂ ಚಾ[2]ಗದ ಪೆಂ ।
ಪೊದವಿರೆ ನೆಗೞ್ದಳ್ ಜಗಕ್ಕೆ ವಿನಯಗುಣೈಕಾ ॥
ಸ್ಪದೆ ಸುಗ್ಗಿಯಬ್ಬೆ ತನಗೊಂ ।
ದಿದ ಚಾಗವೆಡಂಗಿಯೆಂಬ ಪೆಸರೆಸೆವಿನೆಗಂ ॥ 161

ಸರಸತಿಗಂ ಸಿರಿಗಂ ಮ ।
ಚ್ಚರಿಸುವ ವಿದ್ಯಾವಿಶೇಷವಿಭವೋನ್ನತಿಯಿಂ ॥
ಸುರಮಾನವಲಲನೆಯರೇ[3] ।
ದೊರೆಯುರುಮಾನ್ಯಪಕಳತ್ರಮಂ ಪೋಲ್ತಪರೇ ॥ 162

ಆದಿಗ್ರಹಣಕ್ಕೆ ॥

ವೃ ॥ ಬರ್ವ್ವಳೆ ಪೆಮ್ಮೃಗಳ್ ಬಗೆಪೊಡಿನ್ನೆಮಗೀಕೆಯೆ ಗಂಡುಗೂಸು ತಾಂ ।
ಸರ್ವ್ವಕಲಾವಿದಗ್ಧೆ ಪೆಱತೇನೊ ಸರಸ್ವತಿಗತ್ತಮತ್ತೆ ಪ ॥
ನ್ನಿ[4]ರ್ವ್ವರಲಗ್ಗಳಂ ಶ್ರುತದೊಳಾದೊಡಮೇನಿನಿಸೂನಮುಂಟು ಗಾಂ ।
ಧರ್ವ್ವಮನೊಂದುಮಂ ನೆಱೆಯೆ ಕಲ್ಲಳೆ ಕಲ್ಪಿಪುದಂ[5]ತದಂ ನೃಪಾ ॥ 163

1 ಮಾೞ್ಪೆ. 2 ಭಾವದ. 3 ರೇ. 4 ನ್ನಿರ್ವ್ವರೊಳಗ್ಗಳಂ. 5 ದಂತುಮಂ.

ಅಪರಾರ್ಧಕ್ಕೆ ।

ವೃ॥ ಕರುಣದಿಂ ಮೃಗಮಂ ನಿ[1]ಜಾಂಕದೊಳಿಟ್ಟೊಡಾಕಱೆಯಾದೊಡೇಂ ।
ಧರೆ ಮೃಗಾಧಿಪನೆಂದುದಿಲ್ಲ ಮೃಗಾಂಕನೆಂದುದು ಚಂದ್ರನಂ ॥
ಕರುಣಮಿಲ್ಲದ ಸಿಂಗಮಂ ಮೃಗರಾಜನೆಂದುದು ಭೂಪರೊಳ್ ।
ಧರೆಗಧೀಶ್ವರನಕ್ಕುಮೇ ಪರಚಕ್ರಕರ್ಕಶನಲ್ಲದಂ ॥ 164

ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್ ಸಾಂದ್ರೇಂದುಕಾಂತೋಪಳೋ ।
ಚ್ಛಳಿತಾಚ್ಛಾಚ್ಛಜಳಪ್ರವಾಹಭರದೊಳ್ ಮಂದಾನಿಳಾಂದೋಳನಾ ॥
ಕುಳಿತಾರಾಮಫಳಾಮೃತೋಪಮರಸಸ್ರೋತಂಗಳೊಳ್ ಸಾಲ್ವಿನಂ ।
ಬೆಳೆದೋರಂತೊ[2]ಱಗಿರ್ದ ಶಾಲಿವನದಿಂ ಸೇವ್ಯಂ ನಗೋಪತ್ಯಕಂ ॥ 165

ಕಂ॥ ಆವಳುಮನೊಲಿಸಿ ಕೂಟಿಸಿ ।
ಗೋ[3]ವರ ಗುಗ್ಗುರಿಗೆಮಾಡಿಯುಂ ತಣಿಯಮ್ಪೆ ॥
ಮ್ಮಾರ್ಗಮುಲಿಗನ[4]ಯೋ ಪೇೞಿಯೇಂ ।
ಸ್ತ್ರೀವಧೆ ನಿನಗಶ್ವಮೇಧಮೋ ಸಂ[5]ಬಳಮೋ ॥ 166

ವೃ॥ ಎನಗದಱಭಿಲಾಷೆ ತಾನದೇನುಂ ।
ಮನದೊಳಗಿಲ್ಲ ವಿವೇಕಶೂನ್ಯನಾದಂ ॥
ತನಗನುಚಿತಮ[6]ಪ್ಪುದೊಂದಕೃತ್ಯ ।
ಕ್ಕೆನಿತುಮರಂ ಬಗೆದಂದನೂಹೆಯಿಂದಂ ॥ 167

ಗ್ರೀವಾದಿಯೊಳ್ ವಿಕಲ್ಪಕ್ಕೆ ॥

ವೃ॥ ಕೈಲಾಸಾದ್ರಿಯನೆತ್ತಿ ನೊಂದ ಭುಜಸಂದೋಹಂಗ[7]ಳಂ ಕೃಷ್ಣಕೇ ।
ಳಾಲಂ ಸೋರ್ವಿನಮೆಯ್ದೆ ನೀಳ್ದನಿತುಮಾಗ್ರೀವಂಗಳಂ ರಾಗದಿಂ ॥
ನೀಲಗ್ರೀವನಳುಂಬಮಪ್ಪ ದಯೆಯಿಂದಂ ನೀವಿ ರಾಗಾಬ್ಧಿಕ ।
ಲ್ಲೋಲಂ ಪೆರ್ಚೆ ದಶಾನನಂಗೆ ಪಿರಿದೊಂದು[8]ತ್ಸಾಹಮಂ ಮಾಡಿದಂ ॥ 168

ಕಂ॥ ಗ್ರೀವೆ ಮೊಗಮಂಸಮುಳಿಕಂ ।
ಭ್ರೂ ವಕ್ಷಂ ತೋ[9]ಳ್ ತೊಳಂಕು ತೊಡೆಯೆಂಬೆಡೆಯೊಳ್ ॥
ತೀವಿದುವು ಭೀಮನಿಸೆ ವಿಶಿ ।
ಖಾವಲಿ ಮಾಱಾಂತರಾತಿಸೇನೆಯ ಮೆಯ್ಯೊಳ್ ॥ 169

ಸೂತ್ರಂ ॥ 39 ॥

ಅಕಾರಕ್ಕೆ ಲಘೂಕೃತ ।
ಮೇಕಾರಂ ಬಹುಳಮಕ್ಕುಮೀದೂದಂತ ॥
ಕ್ಕೇಕಾಕ್ಷರಪದಮುಱಿಯೆ ನಿ ।
ರಾಕುಳದಿಂ ಹ್ರಸ್ವಮಕ್ಕುಮೆಲ್ಲೆಡೆಗಳೊಳಂ ॥ 170

---

1 ನಿಜಾಂಗ. 2 ತೊಱೆದಿರ್ಪ, ತೆಱೆದಿರ್ಪ. 3 ಗೋವರುಗುಗ್ಗುರಿಕೆ. 4 ನೆಯೋ, ನೆಯಂ. 5 ಸಂಬಳ.
6 ಮಪ್ಪುದೊಂದಕೃತ್ಯ, ಮಪ್ಪುದೊಂದುಕೃತ್ಯ. 7 ಗಳಂ. 8 ದಾಹ್ಲಾದಮಂ. 9 ತೋಳ್ಗಳೆರಡು.

ಪ್ರಯೋಗಂ ||

ಕಂ || ಧರೆಯುಂ ಕ್ಷಮೆಯಿಂ ಹಿಮವ |
ದ್ಗಿರಿಸುತೆಯುಂ ಪೆಂಪಿನಿಂ ಸುರಾಪಗೆಯುಂ ಬಿ ||
ತ್ತರಿಸುವ ಜಸದೆಸಕದಿನನು |
ಕರಿಸುವಳಾಕಾಂತೆ ಕಾಂತಿಯಿಂ ಶಶಿಕಳೆಯಂ || 171

ಬಹುಳಗ್ರಹಣಕ್ಕೆ ||

ವೃ || ಕಮಲಂಬೊಲ್ ಮೊಗಮುತ್ಪಲಂಬೊಲಲರ್ಗಣ್ ಚಕ್ರಾಹ್ವಯಂಬೊಲ್ ಕುಚಂ |
ಭ್ರ[1]ಮರಂಬೊಲ್ ಕಚಮಿಕ್ಷುಚಾಪದಳಿನೀಜ್ಯಾಯಂತೆವೊಲ್ ಬಾಸೆ ಕ ||
ಣ್ಗಮರ್ದಿಂಬಾಗಿರೆ ಲ[2]ಕ್ಕಸೂೞ್ ಪರಸುತುಂ ಶ್ರೀಗಾ[3]ತ್ಮವಸ್ತೂಪಮೋ |
ಪಮೆಯುರ್ ದೈವದಗಣ್ಯಪುಣ್ಯವಧುವರ್ ಸೇಸಿಕ್ಕೆ ಬಂದಾಡಿದರ್ || 172

ಅಂತುಮಲ್ಲದೆಯುಂ ||

ವೃ || ಉದಯಾಸ್ತೋನ್ನತಶೈಲಸೇತುಹಿಮವತ್ಕುತ್ಕಿೞಪರ್ಯಂತಸಂ |
ಪದೆಯಂ ವಾರ್ಧಿತರತ್ತರಂಗನಿನದತ್ಕಾಂಚೀಕಳಾಪಾಂಚಿತಾ ||
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ[4] ನೆಲನಂ ನಿರ್ವ್ಯಾಜದಿಂದಂ ನಿಮಿ |
ರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಱಗ್ಗರ್ಕ್ಕುಮೇ || 173

ಅಪರಾರ್ಧಕ್ಕೆ ||

ವೃ || ಮದನವಿಭ್ರಮಲಕ್ಷ್ಮಿಗೆ ಮೂಲಂ ವಾಗ್ವಧೂಗಾಯತಿ ಲೀಲೆಗಾ |
ಸ್ಪದಮಳುಕ್ಕೆಗೆ ತಾಯುರುಸಾಭಾಗ್ಯಕ್ಕೆ ವಿಳಾಸನಿಕೇತನಂ ||
ಮದಗಜಾಲಸಗಾಮಿನಿ ತಾನಾಕಾಮಿನಿ ಗೋಮಿನಿಯಿಂ ಮಿಗಿಲ್ |
ಚದುರ ಪಾಱಿಮ ಸೀಳದ ಪೆಂಪಿಂದಾಸತಿಗಾರ್ ದೊರೆ ಧಾತ್ರಿಯೊಳ್ || 174

ಏಕಾಕ್ಷರಪದಕ್ಕೆ ||

ವೃ || ಆಗಳ್ ಜಸಂ ಕೆಯ್ವುದವನಿಕ್ಕೆ ವೀರ |
ಶ್ರೀಗಾಣ್ಮನುಮ್ ಪಾಣ್ಬತ[5]ನಕ್ಕೆಳಪ್ಪಯ್ ||
ಪೋಗೇಕೆ ನೀಂ ಮೆಯ್ಗರೆದಿರ್ಪ್ಪಯೆಂದಾ |
ಭೋಗೀಶ್ವರಂಗಂದು ವಿನಮ್ರನಾದಂ || 175

ಸೂತ್ರಂ || 40 ||

ಧಾತುವಿಹಿತಂ ತೃಶಬ್ದಂ |
ಖ್ಯಾತವಿಭಕ್ತ್ಯಂತರಂಗದೊಳ್ ನಿಲ್ಕುಂ ತಾ ||
ನಾ[6]ತೆಱದೆ ನಿಲ್ಲದೊದುಪ |
ಜಾಕಾರಾದೇಶಮಾಗಿ ನಿಯತಂ ನೆಗೞ್ಗುಂ || 176

1 ಚಮರಂ. 2 ಲಕ್ಕೆ. 3 ಗೋಃಕು. 4 ಗಿನೆವಲಂ. 5 ತಳಕ್ಕೆರ್ನಪ್ಪಯ್. 6 ನೇಕೆಱದಿಂದಲ್ಲದೊಡುಪ.

ಲಕ್ಷ್ಯಂ ॥

ಕಂ॥ ಹೋತೃವೆನಾನಧ್ವರಿಯುಮೆ ।
ಭ್ರಾತೃವೆ ನೀನುೞಿದಋತ್ವಿಜರ್ ಯಾದವರು ॥
ದ್ಗಾತೃ ಶುಚಿಸಚಿವನೆನೆ ಸುರ ।
ಜೇತೃವೆ ಪಶುವಾಗೆ[1]ಯಾವೆ ಪೇೞ್ವೆ ಮುನ್ನಂ ॥ 177

ವೃ ॥ ಆನ್ನೋಡರ್ಜುನನೆಂಬೆನಂತಕಸುತಂ ಭರ್ತಾರನೆಂಬಾತನ[2] ।
ಕ್ಕುಂ ನಾನಾನ್ನವಿಪಾಕಿ ವಲ್ಲಲನವಂ ಭೀಮಂ ಹಯಾಧ್ಯಕ್ಷತಾ ॥
ಸನ್ನದ್ಧಂ ನಕುಲಂ ಗವಾಧಿಕೃತನಾಸಾದೇವನಂದಾವೞಂ ।
ದನ್ನರ್ ಕೀಚಕರಕ್ಕಿದರ್ ಮಗಳವೊಳ್ ಸೈರಂಧ್ರಿ ಪಾಂಚಾಲನಾ ॥ 178

ಸೂತ್ರಂ ॥ 41 ॥

ಬಿದಿಗಭಿಧಾನಂ ತಾನಂ ।
ತದಾದೊಡಕ್ಕುಂ ವಿಧಾತೃಶಬ್ದಂ ರಾಂತಂ ॥
ತ್ರಿದಿವಸ್ಥತರೊಳರಾದೇ ।
ಶದಿಂದವೊಡಗೂಡಿ ವರ್ತಿಕುಂ ಪಿತೃಶಬ್ದಂ ॥ 179

ಉದಾಹರಣೆ ॥

ಪೂರ್ವಾರ್ಧಕ್ಕೆ ॥

ಕಂ॥ ಕೆಯ್ವಾರವೇಂ ಪೊಗೞ್ತೆಯೆ ।
ಮುಯ್ವಾಂಪನಿತಂದವೊಂದೆ ಸುಂದರಿಯೆರಡುಂ ॥
ಮು[3]ಯ್ವಂ ಪಡೆದಗ್ಗೞಿಕೆಗೆ ।
ಮೆಯ್ವೆರ್ಚೆ ವಿಧಾತ್ರನಿ[4]ರಚೆ ಮು[5]ಯ್ವಂ ನೋೞ್ಪಂ ॥ 180

ಅಪರಾರ್ಧಕ್ಕೆ ॥

ಕಂ॥ ಉಡುವವರುಮನುಣ್ಬರುವಂ ।
ನಡೆ ನೋಡಿ ಕನಲ್ದೊನಲ್ದು ಮುನ್ನಿನ ಭವದೊಳ್ ॥
ಕು[6]ಡದರ್ ಕಣ್ಬುಡಿನೊಳ್ ಧೃತಿ ।
ಗಿಡೆ ಬಡವರ ಪಿತರರಂತೆ ಮಱುಗುತ್ತಿರ್ಕ್ಕುಂ ॥ 181

ಸೂತ್ರಂ ॥ 42 ॥

ಶ್ವಯುಮಾರ್ಧ್ವಸಖಿಯುನ್ಪ್ರ ।
ತ್ಯಯುಮ[7]ನ್ಪಂತಂ ಬಹುತ್ವವಿಷಯಕೃತಾದೇ ॥
ಶಯುತಂ ವಿಕಲ್ಪದಿಂದಂ ।
ಪ್ರಯೋಗಿಸಲ್ಪಡೆಗುಮೆಸೆವಿನಂ ಕನ್ನಡದೊಳ್ ॥ 182

---

1 ಗಿವಾವೆ. 2 ನಂ।ನಾನಾಭೋಜ್ಯ. 3 ಮುಯ್ಯುಂ. 4 ನರಪೆ. 5 ಪ್ರಾಮ್ಯಾಂತಿಪ್ಯರಂ. 6 ಕೆತೆದಂ,
7 ಮುಮ್ಸಂಶ.

ಪ್ರಯೋಗಂ ॥

ವೃ ॥ ಶ್ವಾನಂಗಳ್ ಗಂ[1]ಧವಮಾರ್ತ್ತಂಡನನತಿಹಿತದಿಂ ಕಾಪುಗೊಂಡಿರ್ದ್ದವುಗ್ರ ।
ಶ್ವಾನಂಗಳ್ ಕಂಡು ದೂರಾಂತರದೊಳಿವರ ಬರ್ಪ್ಪಂದಮಿಂಬಲ್ತಿದಸ್ಮ ॥
ದ್ಭೂನಾರೀನಾಥನೊಳ್ ತಳ್ತಿಱಿವ ಬವಸೆಯುಂ ಪೂ[2]ಣ್ದು ಬಂದಪ್ಪರೀತಂ ।
ಗೀಸಿದ್ರಾಭಂಗಮಂ ಮಾಱ್ಪುದು ಪದನಣಮಲ್ತೆಂದು ನಿಂದಾಂತುವಾಗಳ್ ॥ 183

ಈಯುವಾನರನವದ್ಯವಿದ್ಯರಾ ।
ಮ್ನಾಯಶುದ್ಧರವದಾತಕೀರ್ತ್ತಿಗಳ್ ॥
ತೋಯಜಾಕ್ಷಿ ನಡೆ ನೋಡ ಮನ್ಮಥ ।
ಶ್ರೀಯನಾದರಿಸಿ ನಿಂದರಿಂತಿವರ್ ॥ 184

ಕಂ ॥ ಪ್ರಣುತಗುಣರೆನಿಪ ವಿಬುಧಾ ।
ಗ್ರಣಿಗಳ್ ಕೆಯ್ಕೊಂಡು ಪೊಗೞೆ ಸಲೆ ನೆಗೞ್ದುವು ಧಾ ॥
ರಣಿಯೊಳಗೆ ನಾಗವರ್ಮ್ಮನ ।
ಗುಣವರ್ಮ್ಮನ ಶಂಖವರ್ಮ್ಮನಧ್ವಾನಂಗಳ್ ॥ 185

ಸಮವಯಸಂ ಸಮಸತ್ವಂ ।
ಸಮಾನವಿಭವಂ ಸಮಾನಶೀಲವ್ಯಸನಂ ॥
ಸಮವಿದ್ಯಾವಿಭವಯುತಂ ।
ಸ[3]ಮಸುಖದುಃಖಂ ಸಹಾಯನಕ್ಕೆ ಸಖಾಯಂ ॥ 186

ವೃ ॥ ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ ಪೂರ್ವ್ವಪುಣ್ಯಾರ್ಜ್ಜಿತಂ ಕೇ ।
ಳೀಯಲ್ಬಂದತ್ತ[4]ದೊಂದಕ್ಷಯನಿಧಿಯೆನುತುಂ ತನ್ನನೊಲ್ದಾತ್ರಿಲೋಕ[5] ॥
ಶ್ರೀಯೆಲ್ಲಂ ಪೊರ್ದ್ದಿದಂತೇನೊಸೆದನೊ ಮನದೊಳ್ ಸೂಕ್ತಿಕರ್ಣ್ಣಾವತಂಸಂ ।
ಶ್ರೀಯಾಂಸಂ ಪ್ರೋನ್ನತಾಂಸಂ ಸುಕವಿಜನಮನೋಮಾನಸೋತ್ತಂಸಹಂಸಂ ॥ 187

ಕಂ ॥ ಅದ್ವೈತವಾದಿನಿವಹಮ ।
ದದ್ವಿರದಘಟಾವಿಪಾಟನೈಕಪಟಿಷ್ಠಂ ॥
ಸ್ಯಾದ್ವಾದಾಚಲಸಿಂಹಂ ।
ವಿದ್ವಾಂಸರ್ ಪೊಗೞೆ ವಾದಿರಾಜಂ ನೆಗೞ್ದಂ ॥ 188

ವಿಕಲ್ಪಗ್ರಹಣಕ್ಕೆ ॥

ವೃ ॥ ಜ್ಯಾಯನರಣ್ಯದೊಳ್ ನೆಲಸುಗುಂ[6] ಗಡಮ[7]ಯ್ಯ ಕನೀಯನನ್ವಯ ।
ಶ್ರೀ[8]ಯೊಳಧಿಷ್ಠಿತಂ ಗಡಮಿನಾನ್ವಯಜಾತರೊಳಿನ್ನವಿನ್ನವ ॥
ನ್ಯಾಯಮವಿನ್ನವಿನ್ನವಬಳಾಮುಖರತ್ವಮವಿನ್ನವಿನ್ನವ ।
ಶ್ರೀಯಮವಿನ್ನವಿನ್ನವಕೃತಕ್ರಮವೃತ್ತಿಯನಾರೊ ಸೈರಿಪರ್ ॥ 189

1 ಕಂಡು. 2 ವಾ[illegible]. 3 ಸಮದುಃಖಸ.ಖಂ. 4 ಶ್ರಿ. 5 ಕೀ. 6 ಮಂ. 7 ಮೆಯ್ಯ, ಮಯ್ಯ.
8 ಶ್ರೀಯೆ.ಶವಿಳದೀಕ್ಷಿತಂ.

ಸೂತ್ರಂ ॥ 43 ॥

ಪಡೆಗುಂ ವಿಭಾಷೆಯಿಂದಂ ।
ಕಡೆಯೊಳದಂತರೆಯನಸ್ವರಂ ವೃದ್ಧನವೋಲ್ ॥
ಪಡೆಗುಮದರ್ಶನಮಂ ಮೋಕ್ಷ ।
ಪಡೆಗುಂ ದ್ವಿರ್ಭಾವವೃತ್ತಿಯಂ ಮೋಕ್ಷ ಶ್ರು[1]ತಿವೋಲ್ ॥ 190

ಪ್ರಯೋಗಂ ॥

ಕಂ ॥ ಪರಿಣತವಯಸರೆವಿರ್ಕ್ಕ ।
ಣ್ಗುರುಡರೆವೆಮಗೆಂಬುಕೆಯ್ವುದುಚಿತಂ ನಿ[2]ನ್ನೇ ॥
ಗುರು ನುಡಿದ ನುಡಿಗೊಡಂಬಡು ।
ಗುರುವಚನಮ[3]ಲಂಘನೀಯಮೆಂಬುದು ಮೃಗನೇ ॥ 191

ಮೊದಲೊಳ್ ಚಪಲಂ ಮರ್ಕ್ಕಟ ।
ನದು ವೃಶ್ಚಿಕದಷ್ಟನೆಂಬವೋಲ್ ನ[4]ವಮೆಯದು ॥
ನ್ಮದಮಂ[5]ತೆ ಸುತಂ ಪಿತೃಧನ ।
ಮದಮತ್ತಂ ಮೂರ್ಕ್ಖನೆಂದೊಡೇನಱಿಸುವುದೋ ॥ 192

ವ್ಯವಸ್ಥಿತವಿಭಾಷೆಗೆ ॥

ವೃ ॥ ಇವಂಬುನಿಧಿಕೂಪದಿಂದಮರನಂದನಕ್ಕೇತಮೆ ।
ತ್ತುವಲ್ಲಿ ಗಱಿಯಾಗಲುಂ ಕಡಲ ಗುಣ್ಪುನಾರಯ್ವಲುಂ ॥
ದಿವಕ್ಕಡರಲೇಣಿಯುಂ ಸಮೆಯಲುಂ ವಲಂ ಬೞಿತ್ತಿಯೆಂ ।
ಬವೊಲ್ ಪಳೆದು ನಿಂದ ಪೆರ್ವಿದಿರ ಸುರ್ವ್ವಗುರ್ವ್ವಲ್ಲಿಯುಂ ॥ 193

ಲೋಪಕ್ಕೆ ॥

ಕಂ ॥ ಸರಿವೞಿಗೆ[6]ಱಿವಂತಿರೆ ಭೋ ।
ರ್ಗ್ಗರೆದೊರ್ಮ್ಮದಲೆಱಗಿ ದೆಸೆಗಳೆಲ್ಲಮನೊಡನಾ ॥
ವರಿಸಿ ತರತರದೆ ನಸು ಮಸು ।
ೞ್ದಿರೆ ಪುದಿದುವು ನಭವನಭವನಂಬುಗಳೆತ್ತಂ ॥ 194

ದ್ವಿರ್ಭಾವಕ್ಕೆ ॥

ಕಂ ॥ ದಿಕ್ಕನಿತುಂ ತೋಱಿದುವು ಜ ।
ಲಕ್ಕನೆ ಮೂಕಾದಿಗಳ್ಗಮಂದತಿಲಲಿತಂ ॥
ವಾಕ್ಕಾದುವು ಕುಸುಮಿಸಿದುವು ।
ಮಿ[7]ಕ್ಕೆ ಸೆವಾಕ್ಷಪಕಾಜಾತವೀರುತ್ತುಗಳುಂ 195

---

1 ಶ್ರುತಿವೋಲ್. ಶ್ರುತಿಯೊಳ್. 2 ನೀನೀ. 3 ಮಲಂಘ್ಯನಿಯತ. 4 ನವಯುವಮು, ನನಯುನ್ವನಮು. 5 ಮಂತ್ರಿ.
6 ಕಱಿ. 7 ಮಿಕ್ಕನವಾಕ್ಷರ.

ಸೂತ್ರಂ ॥ 44 ॥

ಅನುಸಂಧಿಸಿ ಕೃತ್ಸ್ನವ್ಯಂ ।
ಜನಂಗಳಿರೆ ಮುಂದೆ ಬಿಂದು ಪರಿವರ್ತಿಸುಗುಂ ॥
ಮನದೊಳ್ ವರ್ಗಂ ಪರಮಾ ।
ಗಿ ನಿಲೆ ವಿಕಲ್ಪದೆ ತದೀಯಪಂಚಮಮಕ್ಕುಂ ॥ 196

ಪ್ರಯೋಗಂ ॥

ಪೂರ್ವಾರ್ಧಕ್ಕೆ ॥

ಕಂ ॥ ಕುಲಮಂ ಚಲಮಂ ವಿದ್ಯಾ ।
ಬಲಮಂ ಶೌರ್ಯಾವಲೇಪಮಂ ಪೊಗೞೆ ನೆಲಂ ॥
ನೆಲಕೆಲ್ಲಂ ನೆಗೞ್ದಂ ದ್ವಿ ।
ಟ್ಕುಲಕುಲನಗದಳನಪಟುಪವಿಪ್ರತಿಮಭುಜಂ ॥ 197

ಅಪರಾರ್ಧಕ್ಕೆ ॥

ಕಂ ॥ ಪಂನಗತಳ್ಪಜ್ಞಂಸಹ ।
ರಂ ನಗಧರನಸುರಮರ್ದ್ದನಜ್ಞಕ್ರಿ ಮುಕು ॥
ನ್ದಂ ನ[1]ಳಿನನಾಭನೇಗೊಳ ।
ಲೆನ್ನಂ ಬಲಗರ್ವದಿಂದಿದಿಕ್ಚ್ರವನಾವಂ ॥ 198

ಇದು ಶಬ್ದಸ್ಮೃತಿಯೊಳ್ ನಾಮಪ್ರಕರಣಂ ದ್ವಿತೀಯಂ.

ಸ ಮಾ ಸ ಪ್ರ ಕ ರ ಣಂ.

ಸೂತ್ರಂ ॥ 45 ॥

ಸಂಗತಿಯಿಂದಂ ನಾಮಪ ।
ದಂಗಳವೇಕಾರ್ಥಗತಿಯೊಳಾಗೆ ಸಮಾಸಂ ॥
ಸಂಗಳಸುಗುಂ ವಿಭಕ್ತಿಗ ।
ಣಂಗಳ್ಗಂತರದೊಳಲ್ಲಿ ಲೋಪಮದಕ್ಕುಂ ॥ 199

ಲಕ್ಷ್ಯಂ ॥

ಕಂ ॥ ಕಡುಗಾಡಿ ನಾಡೆಯುಂ ಕ[2] ।
ಣ್ಗೆಡಱೆ ಮನಂ ಜೆಚ್ಚೆ ಸುತನ ಬರ್ಪಂದಂ ಚೆ ॥
ಲ್ವೊಡರಿಸಿ ಬ[3]ಲ್ವಿಡಿವಿಡಿದುದು ।
ತೊಡರ್ದಳಿಪಿಂ ನೋೞ್ಪ ನೋಟಕಕ್ಕಳ ಮನಮಂ ॥ 200

*ಕಱಿದ ಮನಃಪ್ರಿಯುವಿರಹದಿ ।
ನಱಲ್ದು ಬಸವೞಿದು ಮೋದೆ ತ[4]ನ್ನುರದೊಳ್ ಬಾ ॥
ಸುೞಿ ತಳ್ಪು ಶೋಕಶಿಖಿಯಂ ।
ಕೞಿಲ್ಪಲಿಂದೊಟ್ಟದನುಗೆದಳಿರಂ ಪೋಲ್ಕುಂ ॥ 201

---

1 ನಳನಾಭನೆನಿನಗೊಳ । ನೆನ್ನಂ, ನಳನಾಭನೆನಿನಗೊವಳ । ನೆನಂ, ನಳನನಾಭನೆಲೆಗೊಳ।ಲೆನ್ನಂ. 2 ಕ।ಣ್ಗೆರಱೆ, ಕ।ಣ್ಗೆಡಱೆ. 3 ಬಲ್ವಿಕೆ, ಬಲದೀ. * ಈ ಪದ್ಯಕ್ಕೆ ಹಿಂದೆ-ಅಲ್ಲಿ ಗಮಕತ್ವಕ್ಕೆ-ಎಂದು ಕೆಲವು ಪ್ರತಿಗಳಲ್ಲಿ ಇದೆ. 4 ತಮ್ಮುರ.

ಅಂತುಮಲ್ಲದೆಯುಂ ॥

ವೃ ॥ ಬಲಿಯು ಮಾಂತದ ಪೇಟದೊಳ್ ಪೊಲಗೆಟ್ಟು ಪ[1]ಜ್ಜನೆ ಬಿಟ್ಟ ಕ ।
ಣ್ಮಲರ್ಗಳಂ ಮುಱಿದಿ[2]ಟ್ಟನೆಯ್ತರೆ ಕಾಯ್ದುಸುಂಗೊಳೆ ದೈತ್ಯನಂ ॥
ಪೊಲಸುನಾರ್ಪ್ಪಿನೆಗಂ ತ್ರಿಶೂಲದಿನೊತ್ತಿ ಕೊಂದ ಕುಮಾರಿ ಕೂ ।
ರ್ತ್ತಲಸದಿರ್ಕ್ಕೆ ಭುಜಾಸಿಧಾರೆಯೊಳಂಕಮುಳ್ಳರದೇವನಾ ॥ 202

ಕಂ ॥ *ಆಜಂಬೂದ್ವೀಪಮಹಾ ।
ರಾಜಕಿರೀಟಾನುಕಾರಿ ಚಾಮೀಕರರುಚಿ ॥
ಭ್ರಾಜಿತಕಟಕಮಗೇಂದ್ರಸ ।
ಮಾಜಚಮೂಚಕ್ರವರ್ತ್ತಿ ಮಂದರಶೈಲಂ ॥ 203

ಸೂತ್ರಂ ॥ 46 ॥

ಉತ್ತರಪದದರ್ತ್ಥಂ ಮೆ ।
ಯ್ವೆತ್ತಿರೆ ತತ್ಪುರುಷಮಂತದೇಕಾಶ್ರಯಮಾ ॥
ಗುತ್ತುಮಿರೆ ಕರ್ಮ್ಮಧಾರಯ ।
ಮೆ[3]ತ್ತಂ ದ್ವಿಗುಸಂಜ್ಞಮದುವೆ ಸಂಖ್ಯಾದಿಪದಂ ॥ 204

ಪ್ರಯೋಗಂ ॥
ತತ್ಪುರುಷಕ್ಕೆ ॥

ವೃ ॥ ಅರಮನೆಗಲ್ತು ಸೂಳೆಮನೆಗಲ್ತು ಸವರ್ಣ್ಣನೆಗಲ್ತು ಕೂಡೆ ಬ ।
ಲ್ಲರ ಬಗೆಗಲ್ತು ವಸ್ತುಕೃತಿಯುಂ ಸಲೆ ಪೇೞ್ವುದು ಕಲ್ತು ಪೇೞದಂ ॥
ದರಮನೆಗಲ್ತು ಸೂಳೆಮನೆಗಲ್ತು ಸವರ್ಣ್ಣನೆಗಲ್ತು ಕೂಡೆ ಬ ।
ಲ್ಲರ ಬಗೆಗಲ್ತದಾವೆಡೆಗಮಲ್ತದು ಕಲ್ಪಿ ವಲಂ ಕವೀಂದ್ರರಾ ॥ 205

ಕರ್ಮ್ಮಧಾರಯಕ್ಕೆ ॥

ವೃ ॥ ಅಲರ್ಗಣೆ ಪೊಂಗಿದ ಲಾ[4]ಳಿವಾಯ್ ನಗೆಮೊಗಂ ತೊಂಗಲ್ಗುರುಳ್ ಕೆಂದಳಂ ।
ಸುಲಿವಲ್ ಸೋರ್ಮ್ಮುಡಿ ತೆಳ್ವಸಿಱು ಪೆಱೆನೊಸಲ್ ಪೊಂಬಱಿಪೆಚ್ಚೋಲೆ ನೇ ॥
ಱಿಲ ಪಣ್ಣಿಂ ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂತಪ್ಪ ನುಣ್ಗುರ್ಪ್ಪ ಪೆ ।
ರ್ಮ್ಮಾಲೆ ಚೆಲ್ವಾಗಿರೆ ನಿಂದ ಪೇಣತಿಯುರಂ ಕಂಡಂ ಮಹೀವಲ್ಲಭಂ ॥ 206

ದ್ವಿಗುವಿಂಗೆ ॥

ಕಂ ॥ ಇರ್ವ್ವಾಳ್ ಮೂವಾಳಿಕ್ಕಿ ।
ರ್ದ್ದುರ್ವ್ವರೆಯೊಳ್ ಬ[5]ಳಗೆ ಸಾರೆ ಕೊಳೆ ಪದವಱಿವೆಗಳ್ ॥
ಕರ್ವ್ವಿನ ಮಡಲಂತೆ ಕವ ।
ಲ್ತುರ್ವ್ವಿದ ಕೆಯ್ವೊಲಗಳೆನೆಗು[6]ಮೋಱೊಂದೆಡೆಯೊಳ್ ॥ 207

1 ಬಿನ್ನನಿ. 2 [illegible]. * ಈ ಪದ್ಯವು ಕೆಲವು ಪ್ರತಿಗಳಲ್ಲಿ ಇಲ್ಲ. 3 ಮಾತ್ರಂ. 4 ಲೋಳೆ.
5 ಬೆದಗಿಸಾಲೆ. 6 ದುಮೋ.

ಸೂತ್ರಂ ॥ 47 ॥

ದ್ವಿಪದಂ ಮೇಣ್ ಬಹುಪದಮು ।
ನ್ಯಪದಾರ್ತ್ಥದೊಳೊಂದಿ ನಿಲೆ ಬಹುವ್ರೀಹಿ ಸಮು ॥
ಸ್ವಪ[1]ದಾರ್ತ್ಥಂ ದ್ವಂದ್ವಂ ಪೂ ।
ರ್ವಪದಪ್ರಾಧಾನ್ಯಮವ್ಯಯೀಭಾ[2]ವಾಖ್ಯಂ ॥ 208

ಪ್ರಯೋಗಂ ॥

ಬಹುವ್ರೀಹಿಗೆ ॥

ಕಂ ॥ ಕುಡುಮಿಲ್ಲನೆಕ್ಕ ಸರಲುಂ ।
ನಡೆದು ದಲಂದೊರ್ವ್ವನೆರ್ದೆಯನೊಳ್ಗಬ್ಬಮುಮೊ ॥
ಳ್ನುಡಿಯುಂ ಗೇಯಮುಮುಚ್ಚ್ವದ ।
ಕಡುಗಲ್ಲೆರ್ದೆಯೆರ್ದೆಯನಂಬು ಮೇಣುಚ್ಚ್ವಗುಮೇ ॥ 209

ಪಟ್ಟುಕಮೂಗಿನ ಮು[3]ರವುಲಿ ।
ಪ್ರೊಟ್ಟೆಯ ಕುಸಿಗೊರಲ ಕೆಂ[4]ಚುದಲೆನವಿರ ಕ[5]ರಂ ॥
ಕೆಟ್ಟೊಡೆದ ಸ[6]ರದವಂ ಕ[7]ಡೆ ।
ಪಟ್ಟು ಮನಂಗೆಟ್ಟು ನಾಡುನಾಡಂ ತಿರಿಗುಂ ॥ 210

ದ್ವಂದ್ವಕ್ಕೆ ॥

ಕಂ ॥ ಕಱೆಮುಱೆಗಳೊಳವು ನೋೞ್ಪೊಡೆ ।
ಪೆಱಪೆಱರ ಕುಲಕ್ಕೆ ಕೊಂಡಕೊಟ್ಟೆಡೆಗಳೊಳಂ ॥
ಕಱೆಯಿಲ್ಲ ತೈಲನಲ್ಲದೆ ।
ಪೆಱನಾವೊಂ ಪಿ[8]ಕ್ಕಿ ನೋೞ್ಪೊಡಿತ್ತ್ರಲೆಗೋಜಂ ॥ 211

ವೃ ॥ ತೊಱಗಿಲೆ ಜಟ್ಟಹಳ್ಳಿ ನೆಗೞ್ದ ಜಿರಗೋಳಮೆನಿಪ್ಪಗುರ್ವ್ವವೆ ।
ತ್ತುಱಿಕೆಯ ಪೇಡವಟ್ಟುಗಳ ಬೂತುಗಬೇರುಗಗೋ[9]ಯೆಯರ್ಕ್ಕಳಂ ॥
ನೆಱೆಯರೆನಿಪ್ಪೊಡಂ ಕಿಡಿಸಲಂಕದ ಮುನ್ನಿನ ಚಕ್ರವರ್ತ್ತಿಗಳ್ ।
ಪೆ[10]ಱರಳವಲ್ತುವಂ ಕಿಡಿಸಿತೊಟ್ಟಜೆ ತೈಲಪಚಕ್ರವರ್ತ್ತಿಯಾ ॥ 212

ಅವ್ಯಯೀಭಾವಕ್ಕೆ ॥

ಕಂ ॥ ಸಂತಂ ಕಿೞ್ಕೆಱೆಗಳೊಳೋ ।
ರಂತಿರೆ ಕೆಯ್ಗಾವವಳ್ದಿರಂ ನೋೞ್ಪವರಂ ॥
ಮಿಂತಲೆವಾಯ್ತುರೆ ಪೊಱಮು ।
ಯ್ವಂ ತಾಗಿರೆ ತಗೆದು ಮದನನಾರ್ದ್ದಿಸುತಿರ್ಪ್ಪಂ ॥ 213

1 ಪದಾರ್ತ್ಥದ್ವಂದ್ವಂ. 2 ಭಾವಾರ್ತ್ಥಂ. 3 ಮರದುಲಿ। ದೊಟ್ಟೆಯು. 4 ಕೆಂದಲೆಯನವಿರ. 5 ಕರ್ದ್ದಂ. 6 ಳಗದವಂ 7 ಬಗೆ। ಗೆಟ್ಟು. 8 ಬಕ್ಕಿ. 9 ಗೋಲೆ. 10 ಪೆಱರಳವಲ್ಲವಂಕೆಡಿಸಿದೊಟ್ಟಜೆ.

ಸೂತ್ರಂ ॥ 48 ॥

ಪತ್ತಿರೆ ಕಾರಕದೊಳ್ ಮುಂ ।
ದೊತ್ತಿ ಸಮರ್ತ್ಥಕ್ರಿಯಾಪದಂ ಪದವಿಧಿ ತಾ ॥
ನೊತ್ತರಿಸುಗುಮದಱೊಳ್ ತ ।
ಳ್ತ್ತಮದಂತಕ್ಕೆ ಬಿಂದು ಸಂದಿಸಿ ನಿಲ್ಕುಂ ॥ 214

ಪ್ರಯೋಗಂ ॥

ಕಂ ॥ ಊ[1]ರೇಱಲ್ ಮನೆಮಾಡ ।
ಲ್ಕಾರಂಬಂಗೆಯ್ಯಲೆೞ್ತುಗೊಳಲಾಳಾಳ[2] ॥
ಲ್ಕಾರಾಮಮಿಡಲ್ಕೆಂದುಂ ।
ದಾರುಣತಾರೆಗಳನಾಱಿಯೆ ಪೆಱವಱೊಳುಚಿತಂ ॥ 215

ಸೂತ್ರಂ ॥ 49 ॥

ಉತ್ತರಪದಂ ವಿಶೇಷ್ಯದೊ ।
ಳೊತ್ತರಿಸಿರೆ ಪೂರ್ವ್ವಪದದುಪಾಂತ್ಯಸ್ವರದಿಂ ॥
ದತ್ತಿರ್ದ್ದವರ್ಕ್ಕೆ ಲೋಪಂ ।
ಮತ್ತಮಿಕಾರಕ್ಕೆ ಬಹುಳಮುಕ್ಕುಮೆಕಾರಂ ॥ 216

ಪ್ರಯೋಗಂ ॥

ಕಂ ॥ ಪೆರ್ಮ್ಮರನನಡರ್ದ ವನಲತೆ ।
ಕಾರ್ಮ್ಮುಗಿಲಂ ತಳ್ತ ಮಿಂಚು ವಿಂಧ್ಯಾಚಲಮಂ ॥
ನೆರ್ಮ್ಮಿದ ನರ್ಮ್ಮದೆಯೆನಿಸಿದ ।
ಳೊರ್ಮ್ಮೆಯೆ ವನಚರನನಪ್ಪಿ ವನಚರಿಯೊರ್ವ್ವಳ್ ॥ 217

ಬಹುಳಗ್ರಹಣಕ್ಕೆ ॥

ಕಂ ॥ ಪಸಾಗ್ಗೆಯೆ ತಳ್ತ ತುಱುಂಗಲ ।
ಬಿಸಗ್ಗನೆಯಿಂ ತೂಗಿ ತೊನೆವ ಕೌಂಗಂ ತನ್ನ ॥
ತ್ತಸಗ್ಗ ಬರೆ ತೆಗೆವ ತೆಱದಿಂ ।
ಕಸಗ್ಗಳಿಸಿದುದೆಳಸಿ ನಾಗಲತೆ ದಾಂಗುಡಿಯಿಂ ॥ 218

ಸೂತ್ರಂ ॥ 50 ॥

ಸ್ವರಮಾದಿಯುಪ್ಪವಪ್ಪು ಮುಂ ।
ತಿರೆ ದೀರ್ಗ್ಘಂ ಮೊದಲೊಳ್ಗುರುಗಕ್ಕುಂ ತದಮಾಂ ॥
ತರದೊಳ್ ಣಟಳನತಂಗಳ್ ।
ದೊರೆಕೊಳೆ ತಳೆಗುಂ ದ್ವಿರುಕ್ತಿಯುಂ ಬಹುಳತೆಯಿಂ ॥ 21

---

1 ಊರಱಲ್. 2 ಗ.

ಪ್ರಯೋಗಂ ॥

ಪೂರ್ವಾರ್ಧಕ್ಕೆ ॥

ಕಂ॥ ಕಾರೊಸಡುಂ ಕರ್ಬ್ಬಯುಂ ।
ಪೇರೊಡಲುಂ ತೊಳಪ ದಾಡೆಯುಂ ಪೆರ್ಬ್ಬಸಿಱುಂ ॥
ಕ್ರೂರೇಕ್ಷಣಮುಂ ದನುಜಾ ।
ಕಾ[1]ರಮನೊಡರಿಸೆ ನಿಶಾಟರರ್ವ್ವಿಸಿ ತೋರ್ಪ್ಪರ್ ॥ 220

ಅಗುರುಗ್ರಹಣಕ್ಕೆ ॥

ವೃ॥ ಮೇಲುದಂ ಮಱೆದು ಮೆಯ್ಮಱೆದೊರ್ವ್ವಳೊಱಲ್ದ ಮುಂ।
ಬಾಲೆಯುಂ ತಿರಿಪಿ ನೂಂಕಿ ಪವಿತ್ರಮನಿಟ್ಟು ಪ ॥
ಚೊೞ್ೞೀಲೆವಚ್ಚದೊಳೊಡಂಬಡೆ ಬಂದು ವಿದಗ್ಧ ಭೂ ।
ಪಾಲನಂದನನನಂದರುಣಾಧರೆ ನೋಡಿದಳ್ ॥ 221

ಣಕಾರಕ್ಕೆ ॥

ಕಂ॥ ಪಣ್ಣನೆ ತೊೞಲ್ದು ತೀಡುವ ।
ತಣ್ಣೆಲರೊಳೆಲರ್ಚ್ಚಿ ವನಚರವ್ರಜಮದಱೊಳ್ ॥
ತಣ್ಣನೆ ತಣಿದಿರೆ ಬ[2]ನದೊಳ್ ।
ಪಣ್ಣನೆ ತಿನುತಿರ್ಪ್ಪವೆಳಸಿ ತರುಚರಕುಳಮುಂ ॥ 222

ಟಕಾರಕ್ಕೆ ॥

ಕಂ॥ ನಿಟ್ಟೆಯ್ದಿಯಾಗು ಪ[3]ತಿಯೊಳ್ ।
ತೊಟ್ಟನುವಶಿಯಾಗು ಶೀಲವತಿಯಾಗು ಚಿರಂ ॥
ನಿಟ್ಟಾಯುಮಾಗು ನೀನೆಂ ।
ದಿಟ್ಟರ್ ಸೇಸೆಯನಗಣ್ಯಪುಣ್ಯಾಂಗನೆಯರ್ ॥ 223

ೞಕಾರಕ್ಕೆ ॥

ಕಂ॥ ಅೞ್ಕಡಿ ನರನ ಕೂರ್ಗ್ಗಣೆ ।
ಯೞ್ಕೀಱಿಂಗೞ್ಕಿ ಬೞ್ಕಿ ಕುರುಬಲಮೆಲ್ಲಂ ॥
ಬೆೞ್ಕೇಟಮೋಡೆ ನ[4]ೞ್ಕನಿ ।
ಸೊೞ್ಕೞಿಡೆಗೋದನೊದಱಿ ಚಟ್ಟನೊಳೊವಜಂ ॥ 224

ನಕಾರಕ್ಕೆ ॥

ಕಂ॥ ಇನಿಯಳ ತ[1]ನಿಸೊಂ[5]ಕಿನ್ನಣಿ ।
ಸನೆ ಮಾಲ್ಯಾಭರಣಲೇಪನಂ ತಂಬುಲವೆಂ ॥
ಬಿನಿತುಂ ರಾಗಮನಾಗಿಸೆ ।
ಮನದೊಳ್ ದಿವಿಜೇಂದ್ರವಿಭವದಿಂ ಸುಖಮಿರ್ದ್ದಂ ॥ 225

1 ಕಾರಮುಮೊಡರಿಸೆ. 2 ಪೀನಂ. 3 ಪತಿಗೋ । ಟಟ್ಟನುವಸೆ. 4 ಕಳ. 5 ಸೊಂಕಿನ್ನಣ.

ತಕಾರಕ್ಕೆ ॥

ವೃ ॥ ಮಡದೊಳೊಂದುವುದೆತ್ತ ಕಿತ್ತಡಿಗಳ್ಗೆ ನಿಪ್ಪತೊಳಪ್ಪುವಾ ।
ಮಡದೊಳೊಂದಿಯೆ ನಿಂದ ಕಿತ್ತಡಿಗಳ್ಗೆ ನಿತ್ಯನಿಯಾಮಮೆಂದಿಂ ॥
ಪೊಡೆವಡಿಂಗಡಿಮೆಂದು ನೀಱಿರನೂಱಿ ಸಾ[1]ಱುವ ಮಾಱ್ಕೆಯಿಂ ।
ಪೊಡೆವ ಡಿಂಡಿಮಮೆಂಬಿನಂ ಕಳನೂಪುರಧ್ವನಿ ಪೊಣ್ಮುಗುಂ ॥ 226

ಬಹುಳಗ್ರಹಣಕ್ಕೆ ॥

ಕಂ ॥ ಅಂಚೆಯರಗಿಳಿಯ ಪುರುಳಿಯ ।
ಕೊಂಚೆಯ ಕೋಗಿಲೆಯ ನವಿಲ ಪಾರಾವತದೊಂ ॥
ದಿಂಚರದಿಂದಂ ಶಬ್ದಾ ।
ತ್ಮಂ ಚರಮಚರಂ ಜಗಂ ದಲೆನಿಸಿದುದು ಬನಂ ॥ 227

ಸೂತ್ರಂ ॥ 51 ॥

ಕಡಿದು ನಿಡಿದೆಂಬಿವೆರಡಱ ।
ಕಡೆಯೊಳ್ ಟತ್ವಂ ತಕಾರಮುಕ್ಕುಂ ಕಿಱಿದಿಂ ॥
ಬೆಡೆಯೊಳ್ ಸ್ವರಮಿರೆ ತಾಮವು ।
ಪಡೆಗುಮುಕಾರಾಂತಭಾವಮಂ ವ್ಯಂಜನದೊಳ್ ॥ 228

ಪ್ರಯೋಗಂ ॥

ಕಂ ॥ ಕಟ್ಟಾಯದ ಕಣಿ ಪೆಂಪಿನ ।
ಕಟ್ಟಳೆ ಚಾ[2]ಪಟದ ಮೇರು ನನ್ನಿಯ ತವರೂರ್ ॥
ಸೆಟ್ಟನೆನಿಸಿದ ಜಸಂ ನೇ ।
ರ್ವಟ್ಟರ[3] ನಿಟ್ಟಾಯುವಕ್ಕೆ ದುಟ್ಟತ[4]ಳಕ್ಕಂ ॥ 229

ಬಾಱೆಯ ಖರ್ಜ್ಜೂರದ ಕಿ ।
ತ್ತೀಱೆಯ ಕರ್ಮ್ಮರದ ಮಾವಿನರನೇಱಿಲ ಕಂ ॥
ಚೇಱಿಯ ಪಲಸಿನ ಮೇದಿಂ ।
ನೂಱಿದುಮೆಸೆದಿ[5]ರ್ಕ್ಕುಮದಱ ಬಹಿರುದ್ಯಾನಂ ॥ 230

ಉದಂತಕ್ಕೆ ॥

ಕಂ ॥ ತೊ[6]ಡೆಯಿಂ ಕಡುಗುದುರೆಗಳಂ ।
ಮಡದಿಂ ನ[7]ಡುಪಟ್ಟು ದಂತಿಯಂ ನಿಡುದೋಳಿಂ ॥
ಕಡುವಾಳಂ ಕೂರಸಿಯಿಂ ।
ಕಡಂಗಿದ[8]ಣಿಯುಂ ಸಮಂತು ಬಸದಾ[9]ಗಿಸುವಂ ॥ 231

1 ನೂಱಿಸ. 2 ಚಾಪಟದವೇಗ. 3 ರದಿಟ್ಟ್ಯಯ. 4 ತುಳಕ್ಕಂ, ಶಳಕ್ಕಂ. 5 ದಿರ್ದ್ದಮದಱ. 6 ಉಡೆಯಿಂ. 7 ನಡೆ. 8 ದಣಿ. 9 ವಶ.

ಕಂ ॥ ಕಿಱುನೆಲೆಯ ಲತಾಲಲಿತೆಗೆ ।
ತಿಱಿದುಕೊ[1]ಳಲ್ಕಪ್ಪ ಸಾಕ್ಕರ್ೆಯೊಳ್ಗೊಂಬುಗಳೊಳ್ ॥
ತುಱುಗಿದ ತಳಿರಿಂ ನನೆಯಿಂ ।
ಕಿಱುಮಿಡಿಯಿಂದೆಸೆದುದಸದಳಂ ಮಾಕಂದಂ ॥ 232

ಸೂತ್ರಂ ॥ 52 ॥

ಪೆಟ್ಟನೆಯುಂ ಕೆಟ್ಟನೆಯುಂ ।
ಬೆಟ್ಟನೆಯುಮೆನಿಪ್ಪ ಶಬ್ದದಂತಕ್ಕಕ್ಕುಂ ॥
ಬೆಟ್ಟಂತಿರೆ ಮತ್ವಂ ಕೆಲ ।
ರಿಟ್ಟಯಿಪರ್ ಸ್ವಂತಮುಮನಿ[2]ಕಾರ್ಯತ್ವಮುಮಂ ॥ 233

ಪ್ರಯೋಗಂ ॥

ಮತ್ವಕ್ಕೆ ॥

ಕಂ ॥ ಪಂದಳಿರ ತೋರಣಂ ತ ।
ಳ್ತೊಂದಿದ ಕೆಂಗುಡಿಯ ಪುದಿವು ಮುತ್ತಿನ ಕ[3]ಡೆ ಚೆ ॥
ಲ್ವಿಂದೆಸೆವ ಮಂಗಳಾನಕ ।
ದೊಂದು ರವಂ ಬಗೆಗೆ ವಂದುದಂದರಮನೆಯೊಳ್ ॥ 234

ಎನಿತುಂ ಕಾಯ್ದುಂ ಪೆಂನೀರ್ ।
ಮನೆಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ ॥
ಮನದೊಳ್ ಪೊ[4]ಲ್ಲದನೆಂತುಂ ।
ನೆನೆಯರಿ[5]ದಂ ನಂಬು ಕುರುಕುಲಾಂಬರಭಾನೂ ॥ 235

ಸ್ವಂತಕ್ಕೆ ॥

ಕಂ ॥ ಪಸುರ್ವೊನ್ನ ಜಗಲಿ ಪಟ್ಟೆಯ ।
ಪಸುರ್ವಂಪರ್ ಮುತ್ತಿನಕ್ಕಿ ನೀಲದ ಜಾಗಂ ॥
ಕಿಸುಗಲ್ಲರುಣಸರೋರುಹ ।
ಮೆಸೆದಿರ್ದ್ದುವು ರಾತ್ರಿಮತಿಯ ಬೀಡಿನೊಳೆತ್ತಂ ॥ 236

ವಾಸರಪತಿ ಬಿಸುಗದಿರಿಂ ।
ಪೇಸದೆ ತವೆ ಪೀರ್ಗ್ಗುವೆಂಬ ಮಱುಕದೊಳಂಭೋ ॥
ಜಾಸನನಂಬುಜವನಮಂ ।
ಬಾಸಣಿಸಿದನೆನಿಪುವಿ[6]ಡಿದ ತಾವರೆಯೆಲೆಗಳ್ ॥ 237

* ಇತ್ವಕ್ಕೆ ॥

ಕಂ ॥ ಪೇಸಱಿಸುವಂಗಜಾಗ್ನಿಯ ।
ಕೇಸುರಿ ಕೊಳೆ ಕಱಿದ ಪತಿಯ ವಿರಹದಿನಾಗಳ್ ॥
ಕೀಸುಗಳೆದಂ[7]ತೆ ಕಡಗಮ ।
ನಾಸತಿ ಕಳೆದಿತ್ತಳಾತ್ರಕರಪಲ್ಲವದಿಂ ॥ 238

---

1 ಕೊಳಲ್ಬಪ್ಪರ್. 2 ನೆಕಾರತ್ವ. 3 ಕೊಣೆ. 4 ಪೊಲ್ಲವು. 5 ರದಂ. 6 ವೆಸೆದ. * ಇದಕ್ಕೆ ಪ್ರತಿಯಾಗಿ—ಯೋಗವಿಭಾಗದಿಂ ಕೇವಲಸ್ವಂತಕ್ಕುದಾಹರಣೆ—ಎಂದು ಪ್ರತಿಗಳಲ್ಲಿದೆ. 7 ವಂತೆ.

ಸೂತ್ರಂ || 53 ||

ಪೊ[1]ಸತು ಪೞದೆಳದು ಪೊಱಗೊಳ |
ಗು ಸಮಮೆನಿಪ್ಪ[2]ವಱೊಳತ್ವಮಂತಕ್ಕೆ ನಿಪಂ ||
ತಿಸೆಪಡೆಗುಮವಱೊಳೊಳಗಿಂ |
ಗಸಂಗದಿಂ ಸಮನಿಸಿಕ್ಕುರ್ಗಮುಳ್ಳಾದೇಶಂ || 239

ಪ್ರಯೋಗಂ ||

ಕಂ || ಪೊಸದೇಸೆಯುಂ ಪೆಡಂಗಂ |
ರಸಪುಷ್ಟಿಯುನರ್ತ್ಥಸೃಷ್ಟಿಯುಂ ಬಗೆವರೆ ಭಾ ||
ವಿಸುವರೆ ಸಾ[3]ರಣಿಗೆಯುಮೊಲ್ |
ಕಸವನೆ ಪಿ[4]ಡಿವರ್ ಕೆಲರ್ ಮಹಾಪುರುಷರ್ಕ್ಕಳ್ || 240

ತುಱಿಕಲಡುಗೆಗಳೊಳೇಂ ಪೞ |
ಗೞವೆಯ ಕೂೞ್ ತಿವುಡುಗಳೆದ ತೊವರಿಯ ತೊವೆ ಕಾ ||
ಯ್ದಿೞಿಪಿ[5]ದ ತುಪ್ಪಂ ಕೋಸುವ |
ಕೞಲಲ್ಲದೆ ದಿವ್ಯಭೋಜನಂ ಪೆ[6]ಱತುಂಟೇ ||

ಎಳದಳಿರ ತುಱುಗಲೊಳ್ ನೆಱೆ |
ದಳದಳಿಪೆಳಮಾವಿನಳ್ಳೆಗೊಂಬಂ ತಳ್ಪೊ ||
ಯ್ದಳಸಿದ ವಸಂತದೂತಿಯು |
ಮಿಳಿರ್ವುರ್ಗ್ಯಲನಾಡುವಬಲೆ ಪಾಡಿದಳೊರ್ವ್ವಳ್ || 242

ಅಳವಿಗೞಿದುರುನಿತಂಬ |
ಸ್ಥಳಭಾರಮನಾಂತ ಕಾಲ್ಗೆ ಪೊಱ ಅ[7]ಡಿಗಳೊಳೀ ||
ಲಳಿತತುಳಾಕೋಟಿಗಳಂ |
ತಳೆವುದದೇವಿರಿದೊ ಮದಗಜಾಲಸಗತಿಯಾ || 243

ಬಳಕೆಯ್ಯೊಳಿರ್ದ್ದ ಪಲ್ಗಿರಿ |
ದೊಳವಾಲಂಗೊಂಡು ಮೊರೆವ ಭಷಕನ ತೆಱದಿಂ ||
ದೊಳಪೊಕ್ಕು ದುರ್ಗ್ಗಮಂ ಸಂ[8] |
ಚಳಚಿತ್ತಂ ನುಡಿಗುಮೆಮಗೆ ಬಲ್ಗಂಡಿಕೆಯುಂ || 244

ಸಮಸು[9]ತಿಯೊಳೊಂದಿದೊಳ್ಪಿನ |
ರಮಣೀರಮಣೀಯಗೇಯಮಾಸ್ಥಾಯಿಕೆಯೊಳ್ ||
ಸಮಸಂದಮೆರ್ದಿನ ಸರಿವೞಿ |
ಸಮಂತು ಕ[10]ಱಿದಪ್ಪುದೆಂಬಿನಂ ರಂಜಿಸುಗುಂ || 245

1 ಪೊಸದು. 2 ಪ್ಪ. 3 ಸಾರಣೆಯುಂತಿರ. 4 ಪಿಡಿವೆಳಸುವರ್ ಮಹಾ. 5 ಸಿದ. 6 ಪಱಿತೊಳವೇ. 7 ಮಡಿ. 8 ಚಂ. 9 ಸ್ಮೃತಿ, ಶ್ರುತಿ. 10 ಕಱಿದಪುವಿವೆಂಬಿನಂ.

ಕಂ॥ ಬಳಗುಳ್ಳೋವಣಮಮರ್ದಿರೆ ।
ಚೆ[1]ಳನಂ ಪೊಱಗೆಸೆಯೆ ಬೆಳಪನೆಯ್ದುವ ಬೆಳಗಂ ॥
ಪೊಳೆವ ಸುಲಿವಲ್ಲ ಮಸುಳಿಸೆ ।
ವಿಳಾಸದಿಂ ದರ್ಭ್ಭಶಯನತಳಗತನಾದಂ ॥ 246

ಸೂತ್ರಂ ॥ 54 ॥

ತತ್ಪುರುಷಸಮಾಸದೊಳು ।
ದ್ಯುತ್ಪೂರ್ವ್ವಪದಾಂತ್ಯಲೋಪಮಕ್ಕುಂ ಪ್ರಚುರಂ ॥
ವ್ಯುತ್ಪಾದಿಸಲ್ಕೆ ಪಡೆಗುಂ ।
ತತ್ಪರದೊಳ್ಬೞಿಯಮುಚಿತವರ್ಣ್ಣಾಗಮಮುಂ ॥ 247

ಪ್ರಯೋಗಂ ॥

ಕಂ॥ ಆರನೇಱಿಲ ಪೊಂಬಾಱಿಯ ।
ಸುರಯಿಯ ಮಾಮರದ ಬಕ್ಕೆವಲಸಿನ ಪುದುವಿಂ ॥
ಪೆ[2]ರೆದುರ್ಬ್ಬಿದ ಕಟ್ತಿಲೆ ದಿನ ।
ಕರಾಂಶುಗಳ್ಗಂ ವಿಭೇದಿಸಲ್ಕರಿದದಱೊಳ್ ॥ 248

ಪ್ರಚುರಗ್ರಹಣಕ್ಕೆ ॥

ಕಂ॥ ಅರಸುಗುಣಂಗಳನತಿಭೀ ।
ಕರಕಾಂತಂಗಳನಮಂ ವಿಯಚ್ಚರರಾಜಂ ॥
ಧರಿಯಿಸಿದಂ ಜಳನಿಧಿ ಜಳ ।
ಚರಚಯಮುಮಂ ರತ್ನಚಯಮುಮಂ ಧರಿಯಿಪನ್ವೊಲ್ ॥ 249

ಪರಾರ್ದ್ಧಕ್ಕೆ ॥

ಕಂ॥ ಮಾಂಗಾಯ ಗೊಂಚಲೊಳಗುಱಿ ।
ದಿಂಗೊರಲಿಂದುಲಿವ ಗಣ್ಡುಗೋಗಿಲೆಗ[3]ಳರ ॥
ಲ್ದೊಂಗಲ ನಿಱಿದಳಿರೊಳಗೆ ಜಿ ।
ನುಂಗುವ ಪೆಣ್ದುಂಬಿಗಳುಮಳುಂಬಂ ಬನದೊಳ್ ॥ 250

ಸೂತ್ರಂ ॥ 55 ॥

ಪ್ರಾಯಿಕಮಕ್ಕುಂ ದೀರ್ಗ್ಘ ।
ಮ್ನಾಯಮದಂತೆಲ್ಲಶಬ್ದದೊಳ್ವ್ಯಾಪ್ತಿಗತಂ ॥
ಮಾಯೆಂಬುದು ಮಹಿಮಾಭಿ ।
ಪ್ರಾಯದೊಳೞಿಂದಿರ್ಕ್ಕವೊಂದಿ ಮ[4]ಹತೆಂಬುದಱೊಳ್ ॥ 251

1 ಚೆಳವೊಂ. 2 ಪರಿದು. 3 ಯಮಲ॥ ದೆರ್ಕ್ಕೆ. 4 ಮಹದೆಂ, ಮಹಮೆಂ.

ಪ್ರಯೋಗಂ ॥

ವೃ ॥ ಬಲ್ಲಂತೆಂತುಂ ಗುಣಮನೊಳಕೆ[1]ಯ್ದಾದ್ಪರ್ಪನಾಪ್ಪಂದದಿಂದಿ ।
ನ್ನೆಲ್ಲಿದ್ದರ್ಗಂ ಪೊಲ್ಲಮೆಯುನುಗುಗೆಂಬುಕ್ತಿಯುಂ ನನ್ನಿಮಾಳ್ಪಿಂ ॥
ತೆಲ್ಲಾ ರ[2]ತ್ನಂಗಳುಮನೊಳಕೊಂಡೊಳ್ಪನಂಭೋಧಿ ಲೋಕ ।
ಕ್ಕೆಲ್ಲಂ ಬೀಱಲ್ ಪೊಱಗೆ ಕಸಮಂ ನಿಚ್ಚಮಿಾಡಾಡುತಿರ್ಕ್ಕುಂ ॥ 252

ಪ್ರಾಯೋಗ್ರಹಣಕ್ಕೆ ॥

ಕಂ ॥ ಎಲ್ಲಂಗವೆಲ್ಲಧನಮುಮ ।
ನೆಲ್ಲೆಡೆಯೊಳಮೆಲ್ಲತೆಱದೊಳಂ ಕುಡುಗೆಮ ಸಿ ॥
ಲ್ಕಿಲ್ಲದೆ ಬವರದೊಳೇಂ ಗಳ ।
ಗೆಲ್ಲಂಗುಡದಿರ್ಕ್ಕೆ ಪೊಣದೊರ್ಡಾಗ್ಗಂ ಗಂಡಂ ॥ 253

ಉತ್ತರಾರ್ಧಕ್ಕೆ ॥

ಕಂ ॥ ಮಾದೇವನುಮಾದೇವಿಗೆ ।
ಸಾದರದಿಂ ಪೇ[3]ಳ್ದನೀತನುತ್ತಮಸತ್ವಂ ॥
ಮಾದಾನಿ ಶೌ[4]ರ್ಯ್ಯಧನನುದಿ ।
ತೋದಿತಪುಣ್ಯಂ ಹರಿಪ್ರಿಯುಂ ನರನೆಂಬಂ ॥ 254

ಸೂತ್ರಂ ॥ 56 ॥

ಪರಿಗದಿತಬಹುವ್ರೀಹಿಗೆ ।
ಚರಮದೊಳಕ್ಕುಂ ಯಥಾಪ್ರ[5]ಯೋಗಮಕಾರಂ ॥
ಪರಪದಮಿಲ್ಲಂ[6]ಬೊಂದಿದು ।
ದೊರೆಕೊಂಡಿರೆ[7]ಲಿತ್ವಮಂತ್ಯವರ್ಣ್ಣಕ್ಕೆ[8]ಕ್ಕುಂ ॥ 255

ಪ್ರಯೋಗಂ ॥

ಕಂ ॥ ಬಲ್ದಲೆಯುಂ ತೋಳ್ನೀಳ್ದನ ।
ಗಲ್ದುರದಂ ಬಟ್ಟದೊಡೆಯುವಂ ಕೆಂಗಣ್ಣಂ ॥
ನೇಲ್ದ ಕಿವಿಯಾತನೆನಿಸುವ ।
ನೊಲ್ದೊಲಿಸುಗುಮೆಸೆವ ಬೀರಸಿರಿಯಂ ಧುರದೊಳ್ ॥ 256

ಉತ್ತರಾರ್ಧಕ್ಕೆ ।

ಕಂ ॥ ಸೊಗೆಯಿಸುಗುಮೆ ಪಲ್ಲಿಲಿ ವಾ ।
ಯು[9]ಗಿಲಿಲಿ ಗಂಧಂ ಸಮಂತು ಕೂರಿಲಿ ಕುಚುಗೋ ॥
ಲ್ಮಿಗೆ ಸಾಣಿಲಿಯೆನಿಸುವ ವಧು ।
ನಗೆಗೆಡೆಯಾಕ್ಕುಂ ಸಮಸ್ತಜಗತೀತಳದೊಳ್ ॥ 257

1 ಕೊಳ್ಗಿಪ್ಪರ್. 2 ಲೋಕಂ. 3 ಪೇಳ್ದುವಿಶಾತ. 4 ಶೌರ್ಯ್ಯಕರ. 5 ಪ್ರಕಾರ. 6 ಬಿಂತಿಪ್ಪ. 7 ರಲಿಕ್ಕ.
8 ದೊಳಕ್ಕುಂ. 9 ಪಗಲಿಲಿವಣ್ಣಂ.

ಸೂತ್ರಂ ॥ 57 ॥

ಬಂದೆಂಬುದರ್ಕ್ಕೆ ರೇಫಂ ।
ಸಂದಿಸುಗುಂ ಕಡೆಯೊಳೆರಡೆನಿಪ್ಪುದಱೊಳ್ತು ॥
ನೊಂದಿ ನೆಲಸುಗುಮಿರಾದೇ ।
ಶಂ ದಲ್ಮೇಣ್ಮೇಣುಕಾರಲೋಪಮದಕ್ಕುಂ ॥ 258

ಪ್ರಯೋಗಂ ॥

ಕಂ ॥ ಓರೆಂಜಲ್ಗೊಪ್ಪರ್ಂತಿಗೆ ।
ವಾರದ ಖಳರೊಡನೆ ಬೆರಸಿ ಮೋ[1]ಳಂಗೊಂಡಂ ॥
ದಾರುಂ ಲಘುವಪ್ಪಪ್ರ್ ।
ಸ್ತ್ತಾರದೊಳಮರ್ದೆಂಬ ಶಿಥಿಲಸಂಯೋಗದವೊಲ್ ॥ 259

ಇರ್ಮ್ಮೆಯರ್ಗ್ಗಂ ಹಿತಮಂ ಜಿನ ।
ಧರ್ಮ್ಮಮನಿಂಬಾಗಿ ತಿಳಿದು ನೆಗೞ್ದಂಗಕ್ಕುಂ ॥
ಸ್ವರ್ಮ್ಮೋಕ್ಷಸಿದ್ಧಿ ಬಗೆವಂ ।
ಧರ್ಮ್ಮಂ ಪೆಱತಿಲ್ಲ ದೇಹಿಗೀಸಂಸೃತಿಯೊಳ್ ॥ 260

ಉಕಾರಲೋಪಕ್ಕೆ ॥

ವೃ ॥ ಗೆಲಮಂ ಕೊಂಡಭಿಮಾನಿಯಾದನೊಳಕೊಂಡನ್ಯಾವನೀಕಾಂತೆಯಂ ।
ಸಲೆ ಶೌಚವ್ರತಿಯಾದನಿ[2]ರ್ತ್ತೆಱದೆರಲ್ಮಾತಾಡಿ ಬೞ್ದಂ ಜಗ ॥
ದ್ವಲಯಕ್ಕೊನ್ನರ್ಡಿಕಾ[3]ಱನಾದನ[4]ನಯಕ್ಕುೞ್ಳ್ಕೆ ಸಂಗ್ರಾಮದೊ ।
ಳ್ಕಲಿಯಾದಂ ವಿಪರೀತಜಾತಚರಿತಂ ಭೂಪಾಲರೊಳ್ಕಾಮದಂ ॥ 261

ಸೂತ್ರಂ ॥ 58 ॥

ಅದಿದೆನ್ನದೆ ಮೂಱೆಂಬೀ ।
ಪದದಂತಂ ಲೋಪಮೆಯ್ದುಗುಂ ಕಪವರ್ಗ್ಗಂ ॥
ತುದಿಯೊಳ್ತ[5]ಗುಳ್ದು ಪುದಿದಿರೆ ।
ತದಾಗಮಂ ಹ್ರಸ್ವಪೂರ್ವ್ವಮಕ್ಕುಂ ಬಹುಳಂ ॥ 262

ಪ್ರಯೋಗಂ ॥

ವೃ ॥ ನೆಲಸಿರ್ದ್ದಪ್ಪುದಧಸ್ಥಳಂಬಿ[6]ಡಿದಧೋಲೋಕಂ ಸಮಂತೆಯ್ದೆ ಸು ।
ತ್ತಲುಮಿರ್ದ್ದಪ್ಪುದು ಮಧ್ಯಲೋಕಮೆಸೆದಿರ್ದ್ದಾಚೂಲಿಕಾಭಾಗದಾ ॥
ದಲೆಯೊಳ್ನಿಂ[7]ದಪುದೂರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂ ।
ದಲೆಯಾಗಿರ್ದ್ದುದು ದೇವದಂಪತಿರತಶ್ರೀಸುಂದರಂ ಮಂದರಂ ॥ 263

1 ಮೆಳ್ಗಂ. 2 ನಿಶ್ಚಳಬಿದೆರಲ್ಮಾತಾಗೆ. 3 ಗಾಱ. 4 ನಯಶ. 5 ಳೊದಲ್ವ. 6 ಬಿಡ. 7 ಳ್ನಿಂದುದಲೂ.

ಪರಾರ್ಧ್ದಕ್ಕೆ ॥

ವೃ ॥ ಮುಕ್ಕೊಡೆ ಪುಷ್ಪವೃಷ್ಟಿ ಸುರದುಂದುಭಿ ಕೇಸರಿಪೀಠಮೊಂ[1]ದಿದಂ ।
ತಿಕ್ಕುವ ಚಾಮರಂ ಮಿಱುಪ ಪೂಗಳ ಗೊಂಚಲಶೋಕೆ ಭಾ[2]ನುವಂ ॥
ಮಿಕ್ಕು ತೊ[3]ಳಪ್ಪ ಭಾವಳಯಮೊಪ್ಪುವ ಪನ್ನೆರಡುಂ ಗು[4]ಣಾಳಿ ಲೋ।
ಕಕ್ಕೆ ವಿನೂತವೀರಜಿನಪಾಶ್ರಯಮೆಂ[5]ಬಿವು ಸರ್ವ್ವಮಂಗಳಂ ॥ 264

ಕಂ ॥ ಅನವರತದಾನದಿಂ ವಿ ।
ಕ್ಕನೂನಸೂನೃತದಿನ[6]ಸಮಶೌರ್ಯೋನ್ನತಿಯಿಂ ॥
ವನನಿಧಿಪರೀತಸಕಲಾ ।
ವನಿಯೊಳ್ಮೆಪ್ಪುರಿವೊಲಾದುದಾನೃಪನ ಗುಣಂ ॥ 265

ಬಹುಳಕ್ಕೆ ॥

ವೃ ॥ ತೀವಿದ್ದ್ರತ್ತುಮೊದಲ್ ಮೊವಲ್ಗೆ ಪ[7]ಣೆಯುಂ ಮೂಗ[8]ಯ್ಯಮೂಗಯ್ಯನಿ ।
ತ್ತಾವಕ್ಕೆಯ್ದೆ ಕವಲ್ಕವಲ್ತು ಪಲವುಂ ಕೊಂಬಾದುವೊಳ್ಗೊಂಬುಮಂ ॥
ತೀವಿದ್ದ್ರತ್ತು ತಳಿರ್ ಮೊದಲ್ ಪಣೆ ಕವಲ್ಕೊಂಬೆಂಬುವೀಕೆಂದಳಿರ್ ।
ಮಾವಿಂಗಲ್ಲದೆ ಮಾವುಗಳ್ಗೆ ಪೆಱವಕ್ಕಿಂತೇಂ ಪೆಡಂಗಕ್ಕುಮೋ ॥ 266

ಸೂತ್ರಂ ॥ 59 ॥

ಉಪಹತಿ ನಾಲ್ಕುಯ್ದೆಂಬಿವ ।
ಱು[9]ಪಥೆಯೊಳಾಱೆಂಬಿದರ್ಕ್ಕೆ ಮೊದಲೊಳ್ ಹ್ರಸ್ವಂ ॥
ಸ್ವಪರಸ್ವರಲೋಪಂ ವ ।
ತ್ತಿ್ರಪುದೇೞಱೊಳಂತ್ಯಲೋಪಮೊಂಟರ್ಕ್ಕರ್ಕ್ಕುಂ ॥ 267

ಪ್ರಯೋಗಂ ॥

ಕಂ ॥ ಉರಗಂ ಕೊಂಡಲ್ಲಿಂ ನಾ ।
ಲ್ವೆರಲನಿತಂ ಕಳೆದು ಕಟ್ಟು ಮೇಗಂ ಬೇಗಂ ॥
ಸೆರೆವಿಡುಗೆ ಸುಡುಗೆ ಕಡಿದಿರ ।
ದರಿದಿಕ್ಕುಗೆ ನೀ[10]ವಿ ಕಳೆಗೆ ನಿರ್ವ್ವಿಷಮಕ್ಕುಂ ॥ 268

ಕೀಱು ಪುಗಲೆನೆಯುಮೆಂತುಂ ।
ಮೂಱುದಿ[11]ನಂ ಪೊಕ್ಕು ಶಾಲೆಯಂ ಶಾರ್ಙ್ಗಮನಂ ॥
ದೇಱುಸಿದಪನಹಿಶಯ್ಯೆಯ ।
ನೇಱುದನಯ್ವಾಯ ಶಂಖಮಂ ಪೂರಿಸಿದಂ ॥ 269

ಅಱುದಿಂಗಳಾಯು[12]ವುಂಟೆನೆ ।
ಮಱುಗುವುದುಂ ನಲ್ಲರಲ್ಲಿ ತಮ್ಮಿಂ ಮುನ್ನಂ ॥
ಪಱುವಟ್ಟು ಬರೆ ಕನಲ್ವುದು ।
ಮಱುಪದೆ ನಾಲ್ವರ್ಗ್ಗೆ ನರಕದುಃಖದ ತೆಱನಂ ॥ 270

---

1 ಮೊದಲು । ದಿಕ್ಕು. 2 ಭಾಷಣಂ. 3 ಬೆಳಪ್ಪ, 4 ಗಣಾಳಿ. 5 ಮೆಂದಿವು. 6 ನೆಸೆವ. 7 ಪಣೆಯಿಂ.
8 ಗಯ್ಯುಮೂಗಯ್ಯು. 9 ಱುಪಥೆಯಿನಾ. 10 ಗಿವಿದುಗಳಗೆ, 11 ದಿನಂ. 12 ವೊಂಟೆನೆ.

॥ ಪರಿಮುದ್ದಿರ್ಗಸು[1]ವುದು ಮುತ್ತೊ ।
ರರಸಮನಿಂಬಾಗಿ ಪಿಱಿದು ನೆಲದೊಳ್ ಲವಣಂ ॥
ಬೆರಸೊರಸಿಕೊಂಡು ಪೊಸಗೆ ।
ಕರಗುಗುಮೇೞ್ವೊರೆಯೆನಿಪ್ಪ ಕುಱುವುಂ ಕ್ಷಣದೊಳ್ ॥ 271

ಕಣ್ಗೆ ದಱಿದೊಡನೆ ನಾಲ್ವ ।
ತ್ತೆಣ್ಗಾವುದವರೆಗಮುಗಿದೊಡಂಬುಧಿ ಕಡಲ ॥
ತ್ತೆಣ್ಗೆ ಹರಿ ಬಂದುದಂ[2]ಕಡು ।
ಜಾಣ್ಗೆ ಡದಱಿದಾಗಳವಧಿಬೋಧೋದಯದಿಂ ॥ 272

ಸೂತ್ರಂ ॥ 60 ॥

ಒಂಬತು ದಶಾಹತಿಯಿಂ[3]।
ತೊಂಬತ್ತೆನೆ ಸಲ್ಗುಮಗ್ರದೊಳ್ನೂಱಿರೆ ಮ ॥
ತ್ತೊಂಬಯ್ಯಾದೇಶಮನವ ।
ಲಂಬಿಸುಗುಮದಂತೆ ಮುಂತೆ ಸಾಸಿರಮಿರೆಯುಂ॥ 273

ಪ್ರಯೋಗಂ ॥

ಕಂ ॥ ಸಾಸಿರಯೋಜನಮುೞ್ದ ಸು ।
ರಾಸುರಸಂಸೇವ್ಯಮಾಗಿ ತೊಂಬತ್ತೊಂಬ ॥
ಯ್ಸಾಸಿರಯೋಜನಮಂ ನೆಗೆ ।
ದೀಸುರಗಿರಿ ಪೆಂಪನೇಂ ಪುದುಂಗೊಳಿಸಿದುದೋ ॥ 274

ಸೂತ್ರಂ ॥ 61 ॥

ಬಂದೆರಡೆಂಬಿವು ಪರದೊ ।
ಳ್ಸಂದಿಸೆ ಪತ್ತರ್ಕೆ ಪನ್ನೆನಿಕ್ಕುಂ ರೂಪಂ ॥
ಮುಂದೆ ಪೆಱವೊ[4]ಂದಿ ನಿಲೆ ಪದಿ ।
ಯೆಂದಕ್ಕುಂ ಸ್ವರದೊಳಮದರ್ಕೆ ನಾಗಮಮಕ್ಕುಂ ॥ 275

ಪ್ರಯೋಗಂ ॥

ಕಂ ॥ ಎನಗಿದು ಚೋದ್ಯಂ ಪನ್ನೊಂ ।
ದನೆಯುದು ನೆಲೆ ತನ್ನ ನೆಗೞ್ದದಂತದು ಪದಿನಾ ॥
ಱನೆಯು ನೆಲೆಗುಯ್ದನೆಂಬುದ ।
ನೆನೆ ಸುವಿಧಿನರೇಂದ್ರನಚ್ಯುತೇಂದ್ರನುಮಾದಂ ॥ 276

ವೃ ॥ ಸಾರಲ್ಸಲ್ಲದು ಪನ್ನೆರಬ್ಬರಿಸಮಂ ನಾಡಂ[5]ತಡಂಗಿಪ್ಪುರ್ದು ।
ಗ್ರಾರಣ್ಯಂಗಳೊಳೆತ್ತಮೊಂದು ಬರಿಸಂ ಮೊಯ್ದೋಜಲಃಗಾರ್ಗ್ಗಮಂ ॥
ದಾರಯ್ದಾತ್ತರ್[6]ಡಮಾಡಿದಂದು ಮಗುೞ್ದಿತ್ತೀರಾಱುವರ್ಷಂಬರಂ ।
ಸಾರಲ್ಸಲ್ಲದು ನಾಡನೆಂಬ ಸಮಕಟ್ಟಂತಾದೊಡೆಂತಕ್ಕುವೋ ॥ 277

---

1 ಸಿದುಕತ್ತುರಸ್ವರಸಮನಿಂಬಾಗಿ. 2 ಕಂಡೊಡೆ. 3 ಯೊಳ್. 4 ತೊಂದು. 5 ಡತ್ತ. 6 ತ್ತರಡೆ.

ಸೂತ್ರಂ ॥ 62 ॥

ಸಾಸಿರಮಿರೆ ಮುಂದೊತ್ತಿಸ ।
ಮಾಸದೊಳಕ್ಕುಂ ಪಱೆನ್ನದರ್ಕ್ಕೆ ಯಥೋಕ್ತಂ ॥
ಶಾಸಿಸುವನ್ನರ್ಬೞಿಕ್ಕರ್ಗಂ ।
ಸಾಸಿರಕಂ ಪ್ರಾಂತಲೋಪಮುಂ ಕೆಲವೆಡೆಯೊಳ್ ॥ 278

ಪ್ರಯೋಗಂ ॥

ವೃ ॥ ಪಿಡಿಯೆಂ ಚಕ್ರಮನೆಂಬ ಚಕ್ರಿಯ[1]ನಿಳಾಚಕ್ರಂ ಭಯಂಗೊಳ್ವಿನಂ ।
ಪಿಡಿಯಿಪ್ಪೆಂ ಮ[2]ರಚಕ್ರಮಂ ನರರಥಂ ತೂಳ್ದಾಕುರುಕ್ಷೇತ್ರದಿಂ ॥
ಪಡುವೆಣ್ಗಾವುದಮೋಗೆ ಪೋ[3]ಗಲಿಸುವೆಂ ನಿಚ್ಚಂ ಧರಾಧೀಶರಂ ।
ಪಡಲಿಟ್ಟಂತಿರೆ ಮಾಱ್ಪಿನೋವದೆ ಪಯಿಂಚಾಸಿರ್ವ್ವರಂ ಯುದ್ಧದೊಳ್ ॥ 279

ಪರಾರ್ಧಕ್ಕೆ ॥

ವೃ ॥ ಬರ್ಪ್ಪಂ ಬಂದೊಂದೆತೇರೊಳ್ನೆರೆದ ಕುರುಬಲವ್ಯೂಹಮಂ ೞಿ ಬೆಂ[4]ಕೊಂ ।
ಡುರ್ವ್ವೀಶಂ[5] ನೋಡೆ ಮಾಱಾಂತೆನಗಮರಿಯುನಾಗಿರ್ದ್ದನೀಮಿಟ್ಟುಗೊಡ್ಡಂ ॥
ಸರ್ವ್ವಾಗ್ರಂ ಸಲ್ಲವೇದೆಂದೊವಜನೊದಱಿ ನಿಂದೊರ್ವ್ವನುಂ ನೂಱಿನೂರ್ಚ್ಛ ।
ಸಿರ್ವ್ವರ್ದ್ರೋಣಕರ್ಣರ್ಳುದಂತಿ[6]ಸೆ ಮೊಗಸಿ ಸರಲ್ವಾಯ್ದುವಂದತ್ತಮಿತ್ತಂ ॥ 280

ಕಂ ॥ ಸಾಸಿರ್ವ್ವರ್ವ್ವನಿತೆಯರ ।
ಯ್ಯಾಸಿರ್ವ್ವರ್ಪ್ರಿಯತನೂಜರಱಿಕೆಯ ಪದಿನೆ ॥
ಣ್ಬಾಸಿರ್ವ್ವರರಸುಗಳ್ವೆರ ।
ಸಾಸಾಸಿಗನುಚಿತದೀಕ್ಷೆಯಂ ಕೆಯ್ಕೊಂಡಂ ॥ 281

ಸೂತ್ರಂ ॥ 63 ॥

ಬೆರಸಿ ಸಮಸಂಸ್ಕೃತಂಗ ।
ಳ್ಬರೆ ಕನ್ನಡದೊ[7]ಳಗೆ ಸಮತೆಯಿಂಪಂ ಸಲ್ಗುಂ ॥
ನಿರವದ್ಯಮಾಗಿ ಪದವಿಧಿ ।
ವಿರುದ್ಧಮಕ್ಕುಂ ತದನ್ಯಥಾವೃತ್ತಿಗಳೊಳ್ ॥ 282

ಪ್ರಯೋಗಂ ॥

ಕಂ ॥ ಅರಸುಗುಣಾಂ ಪಱಿಯುನಣಾಂ ।
ಬರಲಿತ್ತುದೆ ಶಾಚದಳವು ಪರವೆಣ್ಗಳಿಸಂ ॥
ತರಲಿತ್ತುದೆ ಅಱಿಜನದೊ ।
ಳ್ಬ[8]ರಸಿರಲಿತ್ತುದೆ ಮಹಾನುಭಾವಂ ನೃಪನಾ ॥ 283

---

1 ಯು. 2 ಶರ, 3 ಪೋಗಡಿಸುವೆಂ. 4 ವಾಱಿಂ । ತು. 5 ಕರ. 6 ತಿರ, 7 ದೊಡನೆ. 8 ಬೆರಸಲ್ಕೆತ್ತದ.

ವಿರುದ್ಧಕ್ಕೆ ॥

ವೃ॥ ತರವೇೞ್ಮಾಣಿಕ್ಯಭಂಡಾರದ ಪುಡಿಕೆಗಳಂ ಪುಂಜಿಸಲ್ವೇೞ್ಸುವರ್ಣ್ಣೋ ।
ತ್ಕರಮಂ ತೋಱಲ್ಕೆ ವೇೞ್ದಂತಿಗಳಸಿರಿಸವೇೞ್ಮುಂದೆ ವಾಹಂಗಳಂ ಬಿ ॥
ತ್ತರಿಸಲ್ವೇೞ್ಚಿತ್ರಚೀನಾಂಬರಪರಿಕರಮಂ ಮಾಣದೆಂದೋಳಿಯಿಂ ಲೆಂ ।
ಕರನಾಗಳ್ವೇೞ್ದನೀಯಲ್ಕೆ [1]ರೆದವರ್ಗೆ ಮಹಾದಾನಮಂ ವಿಕ್ರಮಾಂಕಂ ॥ 284

ಇಲ್ಲಿ ಕೆಲರ್ತ್ತುರಗಾಸಿಶಬ್ದಂಗಳೊಳ್ ಸಮತೆಯ ನಿಚ್ಛೈಸುವರವರ್ಕ್ಕೆ ಲಕ್ಷ್ಯಂ ॥

ಕಂ॥ ತುರಗದಳಿಂಗಳ್ಕವಿತರೆ ।
ತುರಂಗಮಾರೂಢನಾಗಿ ತನ್ನಯ ಹಯಮುಂ ॥
ಪರಿಯಿಸಿ ಕೊಂಗುೞಿವರ್ಮ್ಮಂ ।
ಕರಾಸಿಯಿಂದಿಱಿದು ತವಿಸಿದಂ ಹಯಬಲಮುಂ ॥ 285

ಕಂ॥ ಕೂರಿಸಿ ವೀರಶ್ರೀಯುಂ ।
ಕೂರದರಂ ಕೊಂದು ಸಮರಜಯಮುಂ ಮಾಡ ॥
ಲ್ಕೂರಸಿಯೊಳ್ನಲಸುಗೆ ಕಂ ।
ಠೀರವವಾಹನೆ ಚಳುಕ್ಯಕಂಠೀರವನಾ ॥ 286

ಸೂತ್ರಂ ॥ 64 ॥

ಚಾಪಲವೀಪ್ಸಾಭೀಕ್ಷ್ಣ್ಯಸ ।
ಮೀಪಾನುಕೃತಿಕ್ರಿಯಾಸಮಭಿಹಾರಾದಿ ॥
ಖ್ಯಾ[2]ಪನೆಯೊಳ್ ಪ[3]ದಕಕ್ಕಂ ।
ರೂಪದ್ವಿತ್ವಂ ಯಥಾಪ್ರಯೋಗಾನುಗತಂ ॥ 287

ಪ್ರಯೋಗಂ ॥
ಚಾಪಲಕ್ಕೆ ॥

ಕಂ॥ ಅದಱಿಂದಮೊಪ್ಪಿಸೊಪ್ಪಿಸು ।
ಸುದತಿಯನಣ್ಮಣ್ಮ ಸಾರ್ಚ್ಚುಸಾರ್ಚ್ಚಲೆ ಎಲೆ ನೀ ॥
ನದಿರದೆ ನಿಲ್ನಿಲ್ನೀನಿ ।
ಲ್ಲಿದಿರ್ಚ್ಚಿದಿರ್ಚ್ಚೆನೆ ಜಟಾಯು ರಾವಣನೆಂಗುಂ ॥ 288

ವೀಪ್ಸೆಗೆ ॥

ವೃ॥ ಮುದಮೂರೂರಬಲಾಜನಕ್ಕೆ ಪರಿನೀರೂರೂರ ತೋಂಟಕ್ಕೆ ಸಂ ।
ಪದಮೂರೂರ ಗೃಹಕ್ಕೆ ಪಂಕಜಗ ಚೆಲ್ವೂರೂರ ಗುಯ್ಯಲ್ಗೆ ಸಂ ॥
ಮದಮೂರೊರ ಮ[4]ದಾಳಿಗಂಚೆಗಳ ಚೆಲ್ವೂರೂರ ಷಂಡಕ್ಕೆ ಪಾ ।
ಳೊದವೂರೂರ ದನಕ್ಕೆ ತರ್ಕ್ಕೈಮದಱಿಂ ರ[5]ಮ್ಯಂ ತದುರ್ವೀತಳಂ ॥ 289

ಅಭೀಕ್ಷ್ಣ್ಯಕ್ಕೆ ॥

ವೃ॥ ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ ।
ಡಳಿಯೊಡನಾಡಿಯಾಡಿ ನಡೆಗಲ್ತು ಕಳಾಪಿಗಳಾಟಮಂ ಮನಂ ।
ಗೊಳೆ ನಡೆ ನೋಡಿನೋಡಿ ಕುಣಿಯಲ್ಕೆಱೆ ಕಲ್ತು ಕಲಾಗುಣಂ ಪೊದ ।
ಳ್ದಿಳವಡೆ ಬಾಲಭಾವದೊಳೆ ಬಾಲಕಿಯುರ್ಬ್ಬೆಳೆವನ್ನಿ[6]ರಂತರಂ ॥ 290

1 ಲ್ಪವರವರ್ಗೆ. 2 ವ್ಯಾಪನೆ. 3 ಪದದಕ್ಕಂ. 4 ಮಧಾಳಿ. 5 ರಮ್ಯಂ. 6 ನಿರಾಕುಳಂ.

ಸವಿಷಪಕ್ಕೆ ||

ಕಂ || ಅಱಿವು ಕೊಲೆ ಕಳವು ಪುಸಿಯುವ |
ಗಱಿಯುಂ ಪಱಿಯೆಂಬ ದೋಷದೊಳ್ಪೊರೆದ ನರಂ ||
ಕೆಱಿಕೆಱಿಗೆ ನರಕಬಿಲದೊ |
ಳ್ಗಱಿಗಱಿಸಿಱಿಗುಂ ರಸಾಂತವಮಂ ತಾ[1]ಪಿನೆಗಂ || 291

ಅನುಕೃತಿಗೆ ||

ಕಂ || ವಿನುತಕ್ರೌಂಚಾಚಳರಂ |
ಧ್ವನಿಕಟುದಿಂ ವೊಗಸಿ ಬರ್ಪ್ಪ ಹಂಸಾಳಿಯನಂ ||
ದನುಕರಿಸಿ ಪರಿದು ಭೋಪ್ಭೋರ್ |
ರೆನೆ ಪಾಱ್ದುದು ಹಿ[2]ಮನಗಕ್ಕೆ ಗಂಗಾಸ್ರೋತಂ || 292

ತ್ರಿಪ್ರಯೋಗವುಮಿಲ್ಲಿ ಸಾ[3]ಧುವಕ್ಕುಂ ||

ಕಂ || ಬೆಳಗೆಯ್ಗಳೊಳಿರ್ದ್ದತ್ತಂ |
ಕಳರವದಿಂ ಕೆಯ್ಯನೆತ್ತಿ ಹ[4]ಯಲಲ್ಲೆನುತುಂ ||
ಬಳೆಗಳ್ಘಲ್ಘಲ್ಘ[5]ಲ್ಲೆನೆ |
ಗಿಳಿಸೋವಾಕೆಗಳಿನೊಪ್ಪುಗುಂ ಕೆಲವೆಡೆಯೊಳ್ || 293

ಕ್ರಿಯಾಸಮಭಿಹಾರಕ್ಕೆ ||

ಕಂ || ಅಡವಿ ಬಯಲಾಗೆ ನ[6]ದವೊ |
ಟ್ಕುಡುಗೆ ತೆವರ್ಸ್ಱಿಸವಾಗೆ ಬಟ್ಟೆಯೊಳೆಲ್ಲಂ ||
ನಡೆ ನಡೆಯೆಂದೇಂ ನಡೆದುದೊ |
ಪಡೆ ಪಡೆದಚ್ಚರಿಯನಾಸುರಾಪಗೆವರೆಗಂ || 294

ಆದಿಗ್ರಹಣಕ್ಕೆ ||

ಕಂ || ಅಂ[7]ತಂತೆನೆ ಪರಿಚಾರಕಿ |
ಗಿಂತೆಂದಂ ಬ್ರಹ್ಮಚಾರಿ ಕೆಳೆಕೆಳೆ ಸಿತಗಂ ||
ಗಿಂತು ಕಿಡಿಸುವುದೆ ತಪವನ |
ದೆಂತುಗ ಗಿರಿಸು[8]ತೆಯಾ ಬಯಸಲಾತಂ ದೊರೆಯೇ || 295

ಸೂತ್ರಂ || 65 ||

ಪಲ್ಲಟಿಸಿ ಡಕಾರದ ನೆಲೆ ||
ಯೆಲ್ಲಿ ಱಕಾರಂ ಱಕಾರದೊಳ್ ರೇಫಂ ತಾ ||
ನೆಲ್ಲಿಯುಮುಕ್ಕುಂ ಪದವಿಧಿ |
ಯೆಲ್ಲಿ ಪರಂ ವ್ಯಂಜನಾದಿಯಾಗಿರೆ ಬಹುಳಂ || 296

1 ತಾಗುವಿನಂ. 2 ಹೇಮನಗಕೆ. 3 ಸಾತ್ಥ್ವಕ. 4 ಚಲಲಲೆನು. 5 ಘಲ್ಲನೆ. 6 ನವೊ | ಳ್ಕುಡಿಯ್ಯ. 7 ಅಂತಗೆಯುವೆ. 8 ಸುತೆಯು.

ಅದೆಂತೆನ್ದೊಡೆ ॥

ಕಂ ॥ ಕಾಡುಂ ಕೋಡುಂ ನಾಡುಂ ।
ನೀಡುಂ ನಾಮಂಗಳೊಳ್ ಕ್ರಿಯಾರ್ತ್ಥಂಗಳೊಳಂ ॥
ಮಾಡುವುದುಂ ನೋಡುವುದುಂ ।
ಬೇಡುವುದುಂ ಱತ್ವವಿಧಿಗೆ ಪರಿಗಣಿತಂಗಳ್ ॥ 297

ಅನಿತರ್ಕ್ಕಂ ಯಥಾಕ್ರಮದಿಂ ಪ್ರಯೋಗಂ ॥

ಕಂ ॥ ಕಾಱ್ಕಿಚ್ಚು ತಗುಳೆ ತಮ್ಮೊಳ್ ।
ಕೋಱ್ಕಟ್ಟಿ ವನದ್ವಿಪೇಂದ್ರಚಯಮತಿಭಯದಿಂ ॥
ನೀ[1]ಱ್ಕಿರಿಸಿ ನಿಲ್ಲದೆನಸುಂ ।
ನಾ[2]ಱ್ಕಡಿಪ್ಪೋಪಂತೆ ಪೋಪುದೀನಗತಟದಿಂ ॥ 298

ವೃ ॥ ಕಾಱ್ಪಿರಮಾಗೆ ಕಾವ್ಯರಸಮರ್ತ್ಥಮುಮಕ್ಕರಮುಂ ಪ್ರತೀತಿಯುಂ[3] ।
ಮಾಱ್ಪಿನೆಗಂ ಜಲಕ್ಕನಿರೆ ಪೇ[4]ಱದೆ ಕೆಮ್ಮನೊ[5]ಱಂಟುಮೇಱ್ದು ಚೀಃ ॥
ನೋಱ್ಪದೆ ಮುಯ್ಯನಾಕೃತಿಗೆ ಪಂ[6]ಜಿಕೆ ಮೇಱ್ಪದದರ್ಕ್ಕೆ ಟಿಪ್ಪಣಂ ।
ಬೇಱ್ಪದು ಟೀಕು ಮೇಱ್ಪದೆನೆ ಪೇೞ್ದವನುಂ[7] ಕವಿಯೆಂಬ ಲೆಕ್ಕಮೋ ॥ 299

ಅಲ್ಲಿ ರೇಫಕ್ಕೆ ॥

ಕಂ ॥ ಮಾರ್ಪ್ಪಡಿಯೆ ಮಾಣನೀಭಟ ।
ನೇರ್ಪ್ಪಸವಿ[8]ಗನೀತನಿದಿರ್ಗೆ ಬರಲಾರ್ಪ್ಪವರಾರ್ ॥
ಮಾರ್ಪ್ಪಡೆಯೊಳ[9]ನ್ನ ಘನದೋ ।
ರ್ದ್ದರ್ಪ್ಪಮನಾಮರಿಸಿ ನೆಗೞ್ದ ಕ[10]ಲಿ ರಣವಜ್ರಂ ॥ 300

ಬಹುಳಗ್ರಹಣಕ್ಕೆ ॥

ವೃ ॥ ಪೇೞಿದಿರ್ದ್ದರ್ಪ್ಪತ್ತು ತೋಳುಂ ದಶಮುಖಮು[11]ಖರಾಟೋಪಮುಂ ಮಿೞ್ತುರೂಪಂ ।
ತೋೞಿದಿರ್ದ್ದಂತಿ[12]ರ್ದ್ದ ರೂಪುಂ ಹರನಿದಿರೊಳಗುರ್ವ್ವಪ್ಪಿನಂ ಪೊಣ್ಮಿದಣ್ಮಂ ॥
ಬೀೞುತ್ತುಂ ದೇವನಂ ಪೂ[13]ಜಿಸಲಮಯಮದಿಂದೊಂದೆರಱ್ಮೂಱುನಾಲ್ಕ ।
ಯ್ದಾಱೇೞೆಂಟೊಂಬತೆಂದಿಂತರಿಗುಮೆ ತಲೆಯೊಂ[14]ಬತ್ತುಮಂ ದೈತ್ಯರಾಜಂ ॥ 301

ಸೂತ್ರಂ ॥ 66 ॥

ಕೆಲಬರುಪಾಂತ್ಯದಕಾರದ ।
ನೆಲೆಯೊಳೊಕಾರಂ ಮಯುದ್ವಯಕ್ಕಾದ್ಯೈತ್ವಂ ॥
ಸಲೆ ಕೂಡೆ ಣಕಾರಂ ಕೇ ।
ವಲಂ ನಕಾರಕ್ಕೆ ಣತ್ವಮಕ್ಕುಮದೆಂಬರ್ ॥ 302

ಪ್ರಯೋಗಂ ॥

ಕಂ ॥ ಆವ್ರೊಂ ಕಾವ್ರೊಂ ಲೋಕಮ ।
ನಾವ್ರೊನಿನಮರರ್ಕ್ಕಳಮರರೆನಿಸಿದರೊಲವಿಂ ॥
ದಾವ್ರೊನುರಸ್ಥಳದೊಳ್ ಲ ।
ಕ್ಷ್ಮೀವಧು ನೆಲಸಿರ್ಪ್ಪಳಾಮುರದ್ವಿಷನೀತಂ ॥ 303

---

1 ಕಿಱ್ಕಿಲಿಸಿ. 2 ನಾೞ್ಕಡಿ. 3 ಯಿಂ. ಯುಂ. 4 ಪೇೞ್ವುದು. 5 ನೆಗೆಂಟು. 6 ಪಂಚಿಕೆ. 7 ನಂಕವಿಯೆನ್ನ ಬಕ್ಕಮೋ, 8 ದಿಗ. 9 ಳನ್ನಪದದೋ. 10 ಕವಿ. 11 ಕುಹ. 12 ಶಪ್ಪ. 13 ಮೆಚ್ಚಿಸ. 14 ಯುಂಪತ್ತು.

ವಕಾರದೌತ್ವಕ್ಕೆ ॥

ವೃ ॥ ಕಸವರದಾಸೆಯಿಂ[1] ಪದಪುದೋರ್ಪ್ಪಱವೆಂಡಿರ ನಲ್ಮೆಯೊಂದು ಭಾ ।
ವಿಸದಿರು ನೀಂ ಮನೋನಯನವಲ್ಲಭ ಕೂಗಿಸಿ ಕೂರ್ತ್ತ ನಿನ್ನ ಮೆಯ್ ॥
ಕಸವರಮೆನ್ನನಿನ್ನುಸಿರದೌ[2]ದಲೆಗಾಣ್ಬೆನಮೆಂದೆ ನಂಬು ಚೀಃ ।
ಕಸವರಬೇಟಮೆಂಬುದೆರೆಕೊಳ್ವರ ಪೇಟಮದೆನ್ನ ಪೇಟಮೋ ॥ 304

ಯಕಾರದ್ವೈತ್ವಕ್ಕೆ ॥

ವೃ ॥ ಅಸಿತೇಂದೀವರಲೋಲಲೋಚನೆಯನಂದಂತಾಸಭಾಮಧ್ಯದೊಳ್ ।
ಪಸುವಂ ಮೋದುವವೋಲೆ ಮೋದೆಯುಮದಂ ಕಂಡಂತೆ ಪಲ್ಗರ್ಚ್ಚಿ ಸೈ ॥
ರಿಸಿದೆಂ ನಿನ್ನಯ ನನ್ನಿಗಿನ್ನೆವರೆಗಂ ದುಶ್ಯಾಸನೋರಸ್ಥಲೋ ।
ಚ್ಛ್ವಸಿತಾಸೃಗ್ಜಲಪಾನಮಂ ಬಯಸಿ ಬಾಯ್ ತೇರ್ವೈಸೆ ಸೈತಿರ್ಪ್ಪೆನೇ ॥ 305

ನಕಾರಣ[3]ತ್ವಕ್ಕೆ ॥

ಕಂ ॥ ಕಣ್ಣಾರೆ ನೋಡಿ ಮಾವಿನ ।
ತಣ್ಣೆೞಲೊಳ್ ನಲಿವ ಸಿದ್ಧಚಾರಣಗಣಮಂ ॥
ಪಣ್ಣನೆ ಬಂದೆಳಗಾಯರ ।
ಪಣ್ಣನೆ ಪೞಿಪೞಿದು ತಿಂಬ ಬಲಿಮುಖಕುಲಮಂ ॥ 306

ಸೂತ್ರಂ ॥ 67 ॥

ಪ್ರೊಯ್ ಬಯ್ ಮತ್ತಾರಯ್ ಗೆಯ್ ।
ಸಯ್ಯೆಂಬ ವಿಕಲ್ಪದಿಂ ಯಸಂಯೋಗದೊಳಾ ॥
ಶ್ರಯಿಸಿಕ್ಕುರ್ಗಂ ಗುರುಲಘುಗ[4]ತಿ ।
ನಿ[5]ಯಮಮಮದೇದೋದ್ವ್ಯಯಕ್ಕಮಕ್ಕುಂ ಪ್ರಾಯಂ ॥ 307

ಪ್ರಯೋಗಂ ॥

ಕಂ ॥ ನಡೆ ಕೋಲ್ವರಮಂದಂಬುರ ।
ದೆಡೆಯುಂ ಪು[6]ಣ್ಗೊತ್ತುರ್ಗ ಕಾಳವಟ್ಟದ ಕೊ[7]ಪ್ಪಂ ॥
ಪಿಡಿದು ನೆಱೆಲ್ದಕ್ಕರ್ಗಸುತಂ ।
ಗಿಡಿಗಂ ಪೊಯೆ ನೊಂದ ಭುಜಗನಿರ್ಪ್ಪಂತಿರ್ದ್ದಂ ॥ 308

ಮೆಯ್ಯ್ ಮಸಿ ಕೊರಲ ಬ[8]ಕ್ಕಳ್ ।
ಪೊಯ್ಯ್ ಪು[9]ಗಿಲ್ಗರೆವ ಕೆಯ್ಯ್ ಕಂಕರಿಕೆ ಕರಂ ॥
ರಯ್ಯಮೆನೆ ಪಾಡುತಿರ್ದ್ದಳ್ ।
ನೊಯ್ಯನೆ ಕಡೆಗಣ್ಣೊಳಡರೆ ಚಪ್ಪರಿಸುತ್ತುಂ ॥ 309

ವೃ ॥ ಪಿಡಿದು ಮೆ[10]ಚ್ಚದೆ ನೋವದೆ ಪೆಂಡಿರಂ ।
ಜ[11]ಡಿಯೆಯುಂ ಬಯೆಯುಂ ಬಲಗರ್ವ್ವದಿಂ ॥
ಮಿಡುಕಲಣ್ಮದೆ ನೋಡಿದ ಸಾಸಿಗಂ ।
ನುಡಿಯದಿಕ್ಕುವ ಬೀರಮನಾರೊಳಂ ॥ 310

---

1 ಯೊಳ್ವೆಂಪು. 2 ದೌತಲೆಕಾಣ್ಬೆನ. 3 ಣಕಾರಕ್ಕೆ. 4 ಗತಿ. 5 ನಿಯಮಮದೇ. 6 ಪುಣ್ಗೊತ್ತುರ್ಗ.
7 ಕೊಳ್ವಂ. 8 ಬಕ್ಕಂ. 9 ಕನಲ್ಗರೆವ, ಘೆಲ್ಗರೆವ. 10 ಮೆಚ್ಚದ. 11 ಜಡಿಯಲುಂ ಬಯಲುಂ.

ಕಂ ॥ ಸುೞ್ಯ ನಿಡುಪು[1]ಡುಗದಿರೆಯುಂ ।
ಮೆ[2]ಯ್ಯರೆ ಮಱ್ಗಿದೆಯುಮಿಂತು ಸಂದಂದಿನಿಬರ್ ॥
ಬಯ್ಯಲೆ ಪೊಯ್ಯಲೆ ಕು[3]ರುಳಂ ।
ಕೊಯ್ಯಲೆ ಪೋಯಿತ್ತಿಂತು ವಿನಯವತಿಗಂ ಪತಿಗಂ ॥ 311

ಆರಯೆ ಜಡನಾದೊಡಮಧಿ ।
ಕಾರಿಯ ಮಾಡಿದುದೆ ಪವಣದಂತಿಂತೆನವೇ ॥
ಡೂರೂರೊಳಱುಗನಾದೊಡ ।
ಮೂ[4]ರಡಿ ಪವಣೆಂಬುದಲ್ತೆ ನಾಣ್ಣುಡಿ ಜಗದೊಳ್ ॥ 312

ಆರಯ್ಯೆ ಸರ್ವಭೂತಾ ।
ಧಾರಂ ಮಱೆಯುಂ ನೃಪೇಂದ್ರನುಂ ಮಱೆಗಾಲಂ ॥
ಬಾರದೊಡಂ ನಿರ್ವಹಿಸುವ ।
ರಾರುಂ ನೃಪನಿಲ್ಲದಂದು ನಿರ್ವಹಿಸುವರೇ ॥ 313

ವೃ ॥ ಏಳಿದಂಗೆಯುಲಿವಿಾಗಡೆ ನಮ್ಮ ।
ಳ್ಗಳನೊಳ್ಗುದುರೆಯುಂ ರಥಕ[5]ಟ್ಯಾ ॥
ವ್ಯಾಳದಂತಿಕುಲಮುಂ ಸಮಕಟ್ಟಿಂ ।
ಕಾಳೆಗಕ್ಕೆ ತಡೆದಪ್ಪುರ್ದಯುಕ್ತಂ ॥ 314

ಕಂ ॥ ನಿಮ್ಮಂ ಪಿಂಬಡಿನೊಳದೇ ।
ಸಮ್ಮದಮೆಮಗಂ ಧರಿತ್ರಿಗಂ ರಾಜ್ಯದ ಮೋ ॥
ಹಮ್ಮಱಿದುಮೊಂದದೆಮ್ಮೊಳ್ ।
ಕೆಮ್ಮನೆ ನೀಮಿನಿತುಮಾಗ್ರಹಂಗೆಯ್ಯದಿರಿಂ ॥ 315

ಆಯತಿ ನಿಮಿರ್ವಂತು ಗುಣಾ ।
ಮ್ನಾಯಮನೊಳಕೊಂಡು ಬ[6]ಱಿಯ್ದಡದು ಬಾಱಿನಿಕುಂ ॥
ನ್ಯಾಯಮಸೊಕ್ಕಳೆ ಪೞುವಿನ ।
ಮಾಯಂ ಸಯೆ ಬೞ್ದದೊಂದು ಬಾೞುಂ ಬಾೞೇ ॥ 316

ಕಾಯದೆ ಚಲಮಂ ಪಲರುಂ ।
ಚೀಯೆನೆ ಪತಿ ಸಾಯೆ ಸ[7]ಯ್ಯಲಂಜಿದ ನಾಯಂ ॥
ನಾಯೆಂಬೆಸಾ[8]ಳ್ದನಂ ಕಾ ।
ದಾಯತಿ ನಿಲೆ ಸತ್ತ ನಾಯನಾಂ ನಾಯೆಂಬೆಂ ॥ 317

ಏಕಾರಕ್ಕೆ ॥

ವೃ ॥ ಕುಡಿದಂಭೋಧಿಗಳೇೞುಮಂ ತವಿಪುದೇ ಗೋತ್ರಾದ್ರಿಸಂಘಾತಮಂ ।
ಪಿಡಿದೇಂ ಕೀೞ್ವುದೆ ದಿಗ್ಗಜೇಂದ್ರಚಯಮಂ ಮಾ[9]ರ್ಪೊರ್ವಯ್ವುದೇ ಕಟ್ಟಿ ನಿ ॥
ಮ್ಮಡಿಗೊಪ್ಪಿಪ್ಪುದೆ ಲೋಕಪಾಲಕರನಾಬ್ರಹ್ಮಾಂಡಮಂ ಚುಂಚುವಿಂ ।
ದೊಡೆದೀಡಾಡುವುದೇ ವಿಹಂಗಮಮಿದೆಂದೇಕಬ್ಬ ನೀಮೇೞಿಪಿರ್ ॥ 318

---

1 ಕಡುಗ. 2 ಮೆಯ್ಯುಡಗಡನಾಗಿ ಮಱ್ಗಿ. 3 ಕರೆಯಂ. 4 ಮೂಱು. 5 ಪಕ್ಕಿ. 6 ಬಾಱ್ವದದು. 7 ಸಾಯು.
8 ನಾಳ್ವನಂ ಕೊಂಡಾ. 9 ಮಾರ್ಪಸ್ಸರ.

ಒಕಾರಕ್ಕೆ ॥

ವೃ ॥ ತಂದೆಯು ನನ್ನಿಗಿತ್ತನನುಜಂಗೆಳೆಯಂ ರಘುವಂಶನೆಂದು ಜೇ ।
ಯೆಂದವುದೀಜಗಜ್ಜನವಿದಂ ಸಿ[1]ರಿಗೆಂಬುದೊ ಲೋಭವೆಂಬುದೋ ॥
ಪಂದೆತನಕ್ಕೆ ವೊತ್ತವೊದಲೆಂಬುದೊ ವುತ್ತಿನ[2]ನೆಂಬೊಡೂನನೆಂ ।
ಗುಂ ದೊರೆವೆತ್ತನೆಂಗುವೊ ಕುಲೋದ್ಗತನೆಂಗುವೊ ತಕ್ಕನೆಂಗುವೋ ॥ 319

ಪ್ರಾಯೋಗ್ರಹಣಕ್ಕೆ ॥

ಕಂ ॥ ಎಲೆವಳ್ಳಿಯ ತಳ್ಪಿಂದೇ ।
ಱಲೆವಾೞೆಯ ಪರಪಿನಿಂದಶೋಕೆಯ ಪೊದಱಿಂ ॥
ವುಲೆವಾಯ್ವ ಲತೆಯ ಪುದುವಿಂ ।
ತೊಲಗದು ಬನದೊಳಗೆ ಬೆ[3]ಳೆದ ಕತ್ತಲೆ ಪಗಲುಂ ॥ 320

ಒಲೆಯನೋಲೆಯೊಳಿಕ್ಕಿದ ।
ನಾಲೀಢವನಿಟ್ಟು ಬೇೞೆ ನು[4]ಡಿದಟ್ಟಿದನೇಂ ॥
ಚೋಳನೆ ಕೇರಳಧಾತ್ರೀ ।
ಪಾಲಂ ನುಡಿದಂತೆ ನಾಳೆ ನಿಲ್ಕಾಹವದೊಳ್ ॥ 321

ಇದು ಶಬ್ದಸ್ಮೃತಿಯೊಳ್ ಸಮಾಸಪ್ರಕರಣಂ ॥

ತದ್ಧಿತಪ್ರಕರಣಂ.

ಸೂತ್ರಂ ॥ 68 ॥

ಇವು ಪಣ್ಯಮಿವರ್ಗೆ ಮೇಣಿಂ ।
ತಿವು ಶಿಲ್ಪಂ ಮೇಣ್ ನಿಯೋಗಮಿವನಱಿವಂ ಮೇ ॥
ಣಿವನಾಚರಿಸುವನೆಂದಿಂ ।
ತಿವಱೊಳಗಪ್ರತ್ಯಯಂ ಯಥೋಕ್ತಿಯಿನಕ್ಕುಂ ॥ 322

ಪ್ರಯೋಗಂ ॥

ಕಂ ॥ ಗಂದಿಗನೆರವಣಿಗಂ ಸರ ।
ವಂದಿಗನಾಪಟ್ಟಸಾಲಿಗಂ ಬಾಣಸಿಗಂ ॥
ವಾಂ[5]ದರಿಗಂ ಜೋಯಿಸಿಗಂ ।
ಸಂದಱಿಕೆಯ ಕಬ್ಬಿಗಂ ಸಮಂಜಸನೊಳನೇ ॥ 323

---

1 ಶಿರ. 2 ನೆಂಬುದೊನ. 3 ಪೊಳೆವ. 4 ನಡು. 5 ಮುದುರಿಗಂ.

ಸೂತ್ರಂ ॥ 69 ॥

ಇದಱೊಳವಂ ವ್ಯಾಪೃತನೆನೆ ।
ತದಗ್ರದೊಳ್ ಕಾಱಶಬ್ದಮುಕ್ಕಂ ಕೆಯ್ಕೊಂ ॥
ಇದನೀತಂ ನಡೆಯಿಪನೆನೆ ।
ತೊದಳೇಂ ವಳಮೆಂದು ವಳ್ಳಮೆಂದಿವು ಸೆಗೞ್ಗಂ ॥ 324

ಪ್ರಯೋಗಂ ॥

ಕಂ॥ ನಗೆವಡಿಕಾಱಂ ನೀಱಂ ।
ಬಗೆಕಾಱಂ ಪಾಟಕಾಱನೊ[1]ಳ್ನುಡಿಕಾಱಂ ॥
ಪಗೆಕಾಱನಾಗಿಯುಂ ಕೆ ।
ಯ್ಮಿಗೆ ತಕ್ಕಂ ಕೆಯ್ದುಕಾಱನೆನಿಸಲ್ಕಾಱಂ ॥ 325
ಅಡಪವಳಂ ಪಡೆವಳ್ಳಂ ।
ಮಡಿವಳ್ಳಂ ಸೆಜ್ಜೆವಳ್ಳನಜ್ಜಂ ಬೆಜ್ಜಂ ॥
[2]ಅಡುವಳನೆಂದಿಂತಿವರಂ ।
ಕಡಂಗಿ ಬಿಡೆ ಜಡಿಯದಿರ್ಕ್ಕೆ ನುಡಿಮುಱಿವರಸಂ ॥ 326

ಸೂತ್ರಂ ॥ 70 ॥

ಇದನೀತಂ ಮಾೞ್ಪನೆನೆ ।
ಪ್ಪುದಱೊಳ್ ಗಾಱಪ್ರಯೋಗಮುಕ್ಕುಮುಪಭ್ರಂ ॥
ಶದೊಳಮದೆ ವರ್ತ್ತಿಕುಂ ಮು ।
ತ್ತದರ್ಕ್ಕೆ ಕರ್ಮ್ಮಾದಿಯಾದೊಡಾದಿಗೆ ಲೋಪಂ ॥ 327

ಪ್ರಯೋಗಂ ॥

ಕಂ॥ ಅಣಿಯರಮೆಸೆದೊಪ್ಪುರ್ಪ್ಪವು ।
ಮಣಿಗಾಱರ ಕಂಚಗಾಱರೊಱೆಗಾಱರ ತಿಂ ॥
ತಿಣಿಯೆನಿಪ ಮಾಲೆಗಾಱರ ।
ಗಣನಾತೀತಂಗಳಾಪಣಂಗಳೆ ಪೊೞಲೊಳ್ ॥ 328

ಆದಿವರ್ಣ್ಣಲೋಪಕ್ಕೆ ॥

ಕಂ॥ ಅಱಿದು ನರನೊ[3]ವಜರನ್ನಂ ।
*ಕುಱಿಗೋಱದ. ಱಿ. ನದಱಿನೊಡ್ಡಿಸಿದಂ ಕ ॥
ಮ್ಮಱನಂಬು ಕಮ್ಮಱಂಗಂ ।
ದಱಿಯದೆ ನುಡಿವಂತು ನಾಡವರ್ ಗಾವಿಲರೇ ॥ 329

1 ನೊಳ್ನಗೆ, 2 ಅಡೆಬಳ, ಅಡಬಳ. 3 ನೋದಜನ್ನಂ. * ಕುಱಿಗೋಣ್ಬಱಿದಱಿದನದಱಿನೊಡ್ಡಿಸಿದಂ—ಎಂದಿರಬಹುದೋ ಏನೋ ತಿಳಿಯದು, ಪದ್ಯದ ಅರ್ಥವು ಸ್ಪಷ್ಟವಾಗಿಲ್ಲ.

ಸೂತ್ರಂ ॥ 71 ॥

ಈಪೇೞ್ದನಿತುಂ ಶಬ್ದಕ ।
ೞಾಸಂ ಸ್ತ್ರೀವಿಷಯಮಾ[1]ದೊಡಿತಿಪರಮಕ್ಕುಂ ॥
ರೂಪಾನ್ಯತ್ವದೊಳಾದಿಗೆ ।
ಲೋಪಂ ತತ್ಪ್ರತ್ಯಯಕ್ಕೆ ಸಂಭವಿಸಿರ್ಕ್ಕುಂ ॥ 330

ಪ್ರಯೋಗಂ ॥

ಕಂ ॥ ಮಡಿಯುಂ ಮಡಿವಳ್ತಿಯುಮೋಲ್ ।
ಬಿಡದಮೃತಾನ್ನಮನೊಱಲ್ದು ಬಾಣಸಿಗಿತಿವೋಲ್ ॥
ಕುಡುತಿ[2]ರ್ದ್ದಳ್ ಪೂಮಾಲೆಯು ।
ನೆಡೆಯುಡುಗದೆ ಮಾಲೆಗಾರ್ತ್ತಿವೋಲ್ ಮತ್ತೊರ್ವಳ್ ॥ 331

ಸೂತ್ರಂ ॥ 72 ॥

ಇಂತಿದು ವಿಭಾಷೆಯಿಂ ಪ ।
ದ್ಯಾರ್ಗಂತರದೊಳಮಕ್ಕುಮುಱಿವ ಗುಣವಚನಮುಕಾ ॥
ರಾಂತಮು[3]ಳಂತಂ ಸ್ತ್ರೈಣದೊ ।
ಳಂತವಱಿಂ ಪೆಱವು ಪುಂಸ್ತ್ವದೊಳ್ ಸ[4]ಮರೂಪಂ ॥ 332

ಪ್ರಯೋಗಂ ॥

ಕಂ ॥ ಬಕ್ಕಲಿತಿ ಜೋಡೆಯಾದಂ ।
ತಕ್ಕುಮ[5]ವಳ ಸಿತಗೆ ಪತಿಗೆ ಮಿಗೆ ಕಾಯ್ವಳ್ ನೋ ॥
ಟಕ್ಕೆ ಕಡುಸೊಂದಿ ಸಾಣಿಲಿ ।
ಬಕ್ಕಂಬಯಲೊಳಮುದಾರುಮಂ ಬಂ[6]ಚಿಸುವಳ್ ॥ 333

ಸೂತ್ರಂ ॥ 73 ॥

ಅಲ್ಲಿಯೆ ಪುಟ್ಟಿದನಿಂತಿವ ।
ನಲ್ಲಿಯೆ ತಾಂ ಬಳೆದನೆಂದು ಪೇೞ್ವರ್ತ್ಥದೊಳಂ ॥
ತೆಲ್ಲಮಿಱಪ್ರತ್ಯಯಮಿಂ ।
ತಲ್ಲಿ ಯಥಾಲಕ್ಷ್ಯಮಾದಿಗಕ್ಕುಂ ಹ್ರಸ್ವಂ ॥ 334

ಪ್ರಯೋಗಂ ॥

ಕಂ ॥ ಪೊಱಲಿಂದ್ರಪುರಂ ಕಾಲೂರ್ ।
ಪೊಱಲಿಂದ್ರರ್ ಪೊಱಲ ಮಾನಸರ್ ಕಾಲುರಿಗರ್ ॥
ಪೊಱಲಿಗರೆನೆ ಸೊಗಯಿಸುವುದು ।
ಪೊಱಲಿಂ ಕಾಲೂರ್ಗ್ಗಳೆಂದಮಂತಾವಿಷಯಂ ॥ 335

---

1 ಮಾಪೊಸಂಪನ. 2 ತಿಪ್ಪರ್ಳ್. 3 ಮದಂಶಂ. 4 ಸ್ತ್ರೀರೂಪ. 5 ದಪಳ್. 6 ಭುಜಿ.

ಸೂತ್ರಂ ॥ 74 ॥

ಅಲ್ಲಿ ಇದುಂಟೆಂಬರ್ತ್ಥದೊ ।
ಳೆಲ್ಲಿಯುಮುಳ್ಳುಡೆಯುಮಂತಶಬ್ದಮು[1]ವಕ್ಕುಂ ॥
ಎಲ್ಲಂದದೊಳಂ ಪೋಲಿಸು ।
ವಲ್ಲಿ ಗುಣಾಧಿಕ[2]ರೊಳಂತೆ ವೋ[3]ಲ್ ತಾನಕ್ಕುಂ ॥ 336

ಪ್ರಯೋಗಂ ॥

ಕಂ॥ ಸಿರಿಯೊಡೆಯುಂ ಸಿರಿಯುಳ್ಳಂ ।
ಸ[4]ರೂಪಿ ಗುಣವಂತನಧಿಕದಾನಿ ಮ[5]ಹೇಚ್ಛಂ ॥
ನರರೊಳಿವನೆನಿಸಿ ಬಾಳ್ವುದು ।
ಪುರಾತನೋದಾತ್ತಪುಣ್ಯಪರಿಪಾಕಫಲಂ ॥ 337

ಪರಾರ್ದ್ಧಕ್ಕೆ ॥

ವೃ ॥ ಸುರಪತಿಯಂತೆ ವಿಸ್ಫುರಿತನೇತ್ರಸಹಸ್ರವಿರಾಜಿತಂ ನರೇ ।
ಶ್ವರಭವನಾಗ್ರದಂತೆ ದೃಢವೇತ್ರಲತಾಶತದುಷ್ಪ್ರವೇಶವಂ ॥
ಬರತಳದಂತೆ ಋಕ್ಷಮೃಗಲುಬ್ಧಕಸಂಗತಮಂಬುರಾಶಿಯುಂ ।
ತಿರೆ ತತವಿದ್ರುಮದ್ಯುತಿ ನಿರಂತರಮೊಪ್ಪುಗುಮಾವನಾಂತರಂ ।. 338

ಕಂ ॥ ಕರಿವೋಲ್ ಭದ್ರಗುಣಂ ಕೇ ।
ಸರಿವೋಲ್ ನಿರ್ವ್ಯಾಜಶೌರ್ಯ್ಯನಂಭೋನಿಧಿವೋಲ್ ॥
ಶರಣಾಗತರಕ್ಷಣಪಟು ।
ಗಿರಿವೋಲ್ ನಿಷ್ಕಂಪಚಿತ್ತನಾನೃಪತುಂ[6]ಗಂ ॥ 339

ಸೂತ್ರಂ ॥ 75 ॥

ಅವಱೊಳ್ ವೋಲ್ಗಕ್ಕುಂ ಹ್ರ ।
ಸ್ವವಿಧಾನಂ ಪಾಕ್ಷಿಕಂ ಮಕಾರಾಗಮದಿಂ ॥
ವ್ಯವಧಾನಮುವರ್ಣ್ಣಕ್ಕ ।
ಕ್ಕವಲ್ಲಿ ಬಶ್ರುತಿ ವಕಾರದೊಳ್ ನೆಲೆಗೊಳ್ಗುಂ ॥ 340

ಪ್ರಯೋಗಂ ॥

ಪೂರ್ವ್ವಾರ್ದ್ಧಕ್ಕೆ ॥

ವೃ ॥ ಶ್ರೀಯು ಜವ್ವನ[ದ] ರೂಪಿನ ಗಾಡಿಯು ಪೆಂಪಿನೊಂ ।
ದಾ[7]ಯು ತಾನೆ ನಡೆತರ್ಪ್ಪವೊಲೊಪ್ಪಿರೆ ಬಂದಭಿ ॥
ಪ್ರಾಯಸಿದ್ಧಿಯನೆ ಚಿಂತಿಸುತುಂ ಮನದೊಳ್ ಜಯ ।
ಶ್ರೀಯು ದೂದವಿವೊಲಾಸತಿ ಕಂಡು ಶಿಖಂಡಿಯುಂ ॥ 341

ಅಪರಾರ್ದ್ಧಕ್ಕೆ ॥

ನಿಗಳಂಬೊಲ್ ತೊಡರ್ದಿರ್ದ್ದ ಮೋಹನಿಗಳಂ ನಿರ್ವ್ಯಾಕುಳಂ ಪಿಂಗೆ ಮು ।
ತ್ತಗಜೇಂದ್ರಂಬೊಲಲರ್ಗ್ಗಳಂ ವ[8]ನಮನಂದಾನಂದದಿಂ ಪೊಕ್ಕನಾ ॥
ವಗಮಾದಳ್ಕಱಳುಕ್ಕೆಯಿಂ ಮಕುಟಬದ್ಧರ್ ನೂರ್ವ್ವರಂತಲ್ಲಿ ದೀ ।
ಕ್ಷೆಗೊಳಲ್ ತನ್ನೊಡನೋಗೆ ನಿಶ್ಚಿತಮನಂ ಶ್ರೀಚಂದ್ರಭೂವಲ್ಲಭಂ ॥ 342

1 ಮುಮಕ್ಕುಂ. 2 ಳದೊ. 3 ಪೋಲೆನಲಕ್ಕುಂ. 4 ಸುರೂಪಿ. 5 ಮಹೋಂತಂ. 6 ಪುತ್ರಂ. 7 ದಾಯು. 8 ಪರವು.

ಸೂತ್ರಂ ॥ 76 ॥

ತನಮಿಕೆಯುಮವೆಂಬಿವುಂ ಚೇ ।
ತನಭಾವದೊಳಕ್ಕುಮುೞಿದ ಭಾವಾರ್ತ್ಥದೊಳಂ ॥
ತನಿತಜಿಯೊಳಂ ಪು ಕೆಯೆಂಬಿವು ।
ಜನಿಯಿಕುಮಂತಲ್ಲಿ ಕದ್ವಿರುಕ್ತಿ ವಿಕಲ್ಪಂ ॥ 343

ಪ್ರಯೋಗಂ ॥

ಕಂ ॥ ಕಡುಗಲಿತನಮುಂ ಚಾಗದ ।
ಪೊಡಪ್ಪುವೊ[1]ಳ್ನುಡಿಯೊಳಾದ ಮಾನಸಿಕೆಯುಮು ॥
ಕ್ಕುಡುಗದ ಶೌಚಮುಮಾಯದ ।
ಪಡೆವಾತುಂ ಪೆರ್ಮೆವ[2]ಡೆದುವವನಿಂದಿಳೆಯೊಳ್ ॥ 344

ಪರಾರ್ದ್ಧಕ್ಕೆ ॥

ಕಂ ॥ ವಾ[3]ರಿಧಿಯದೊಂದು ಗುಣ್ಪುಂ ।
ಧಾರಿಣಿಯ ಪೊಗೞ್ತೆವೆತ್ತ ಪೆಂಪಿನ ತಿಣ್ಪುಂ ॥
ಮೇರುವಿನ ಬಿಣ್ಪುಮಾನೃಪ ।
ಧೀರನೊಳೊಂದಾಗಿ ನಿಂದುವೆನ್ನದರೊಳರೇ ॥ 345

ನಮಿತಾರಿಗೆ ದಮಿತಾರಿಗೆ ।
ಸಮಸ್ತಧಾತ್ರೀವಿಭಾಗದೊಳ್ ಭಾವಿಸೆ ವಿ ॥
ಕ್ರಮದ ನಿಮಿರ್ಕೆಗಮಾಯತಿ ।
ಯಮರ್ಕೆಗಂ ಪೇ[4]ೞ ಪೋಲ್ಕೆಗಾವಂ ಬಪ್ಪಂ ॥ 346

ಕಕಾರದ್ವಿತ್ವಕ್ಕೆ ॥

ಕಂ ॥ ಬೇಸಱದಾಸಱದೆ ಮನಾ ।
ವಾಸಂಗಳೊಳುನ್ನತಿಕ್ಕೆ ನಿ[5]ಲೆ ನಮೆದವರೊಳ್ ॥
ನೇ[6]ಸನ್ನಿಕೆಯಿಂ ಕುರುಪತಿ ।
ಬೇಸರಮಂ ನುಡಿಯದೊಳ್ಪಿತಂ ನುಡಿದಪನೇ ॥ 347

ಸೂತ್ರಂ ॥ 77 ॥

ಒನ್ದೆರಡು ಮೂಱು ನಾಲ್ಕ ।
ಯ್ದೆನ್ದಿನಿತರ್ಕ್ಕಂ ಬಹುತ್ವವಾಚಿಗಳ[7]ಮರ್ದಂ ॥
ತೊನ್ದಿ ನೆಗೞ್ಗುಂ ವಿಕಲ್ಪಂ ।
ಸನ್ದಿಸಿ ನೆಲಸಿರೆ ಮೆಯೆಂಬುದಕ್ಕುಂ ಸೂೞೊಳ್ ॥ 348

---

1 ಪೊನ್ನ್ನರಿ. 2 ಪಡೆಗುಮವನಿಂ. 3 ವಾರಿನಿಧಿಯೊಂದು. 4 ಪೇೞ್ಪೊಗರ್ಕ್ಕೆ. 5 ಗಿಡೆ. 6 ನೀಸನ್ನಿಕೆ.
7 ಳಮರ್ದರ್ತ್ತಿಂದಿ.

ಪ್ರಯೋಗಂ ॥

ವೃ ॥ ಶಯುದಂಷ್ಟ್ರಾವಿಷದಂಶವೊಂದೆ ಜತುಗೇಹೋದ್ದೀಪನಂ ತಾನದೊಂ ।
ದೆ ಯುಧೇಷ್ಟ[1]ಪ್ರಕೃತಂ ದುರೋದರಜಯಂ ಮತ್ತೊಂದೆ ಕಷ್ಟಪ್ರತಿ ॥
ಕ್ರಿಯೆ[2]ಯಪ್ಪಾವಿಷದೂಷಿತಾಶನನುದಂತೇನೊಂದೆ ಪೇೞ್ವಾಗಳೊ ।
ರ್ಮೆಯೊ ಮೇ[3]ಣಿರ್ಮೆಯೊ ಮೂರ್ಮೆಯೋ ಕುರುಕುಳಪ್ರಾರಬ್ಧದುರ್ವೃತ್ತಕಂ ॥ 349

ಕಂ ॥ ನೂರ್ಮೆ ಪಶು ಕಱೆವುದಂ ತಾ ।
ನೊರ್ಮೆಯೆ ಕಱೆವೆರ್ಮೆಯಲ್ಲದೞಿಯೆರ್ಮೆಗಳೇ ॥
ಯೆರ್ಮೆಗಳೊಳಗಿಲ್ಲೆನಿಸಿ ।
ದ್ದೆರ್ಮೆಯು ಪಿಂಡುಗಳಿನೊಪ್ಪುಗುಂ ಕೆಲವೆಡೆಯೊಳ್ ॥ 350

ವಿಕಲ್ಪಕ್ಕೆ ॥

ವೃ ॥ ತನಗಿಂಬಪ್ಪುದನಾಯ್ದು ನೋಡಿ ಪಲವುಂ ಬಿಲ್ವಿಲ್ಗಳೊಳ್ ಬಿಲ್ಲನೊಂ ।
ದನೆ ಕೊಂಡೇಱಿಸಿ ನೀವಿ ಜೇವೊಡೆದಡುತ್ತೋರ್ವಂಬಿನಿಂದೊಂದು[4] ಸೂ ॥
ೞ್ವನೆಯಂ ಪಾವಿನ ಜನ್ಮೋಳಾದುವನತಿಪ್ರಾರಂಭದಿಂದೇೞುವಂ ।
ಜನಕಾಧೀಶತನೂಜೆಯಾಣ್ಮನಿಸುವಂತೆಚ್ಚಂ ಮಹೇಂದ್ರಾಂ[5]ತಕಂ ॥ 351

ಸೂತ್ರಂ ॥ 78 ॥

ಆಳಿಪ್ರತ್ಯಯಮುಕ್ಕಂ ।
ಶೀಳಾದ್ಯರ್ಥಂಗಳಂ ವಿವಕ್ಷಿಸೆ ಪೆಱತೊಂ ॥
ದಾಳಾಪಮಂತದೇನೊ ಯ ।
ಥಾಳೋಕನಿರೂಪಿತೋಕ್ತಿಗಳ್ಗನುಸಾರಂ ॥ 352

ಪ್ರಯೋಗಂ ॥

ಕಂ ॥ ಮೂಱಾಳಿಯುಮೋದಾಳಿಯು ।
ಮೇೞಾಳಿಯುಮಪ್ಪನಾಗಿ ಪೆ[6]ಡೆಪಾಳಿಯೆ ಕೇಳ್ ॥
ನೀೞಿಂ ಜೂದಾಳಿ ಕರಂ ।
ನೀೞಿಂ ಮಾತಾಳಿ ಕರೆಯೆ ಸಿಗ್ಗಾಳಿಯಿ[7]ವಳ್ ॥ 353

ಸೂತ್ರಂ ॥ 79 ॥

ಅದುವಿದುವುದುವೆಂಬಿಂತೀ[8] ।
ವಿದಿತಾರ್ಥದ ಸರ್ವನಾಮಶಬ್ದಕ್ಕಕ್ಕುಂ ॥
ತದುಪಾಧಿವಿಹಿತಪ[9]ರಿಮಾ ।
ಣದೊಳನಿತಿನಿತೆನಿತೆನಿಪ್ಪ ರೂಪನಿಪಾತಂ ॥ 354

---

1 ಷ್ಟಂಪ್ರಕೃತಂ. 2 ಯಮಪ್ಪಾ. 3 ಪೇೞಿ. 4 ದೆಸೂ । ೞ್ವನೆಯಂ. 5 ದ್ರಾತ್ಮಕಂ. 6 ಪಡಪಾಳಿ. 7 ಯಿವಂ. 8 ತಿಪು. 9 ಪರಿಣಾಮ.

ಪ್ರಯೋಗಂ ॥

ವೃ ॥ ಅನಿತೊಂದಣ್ಮನಿತೊಂದು ದರ್ಪ್ಪಮನಿತೊಂದೌದ್ಧತ್ಯಮುಂ ಮುನ್ನಮಾ ।
ದನೊಳಿನ್ನಪ್ಪನೊಳುಂಟೆ ದಾನವರೊಳೆಂಬುದ್ವೃತ್ತನಂ ನಾರಸಿಂ ॥
ಹನ ರೂಪಿಂ ನಖದೊಳ್ ವಿದಾರಿಸಿ ಕುಸುಂಭಾರಕ್ತಮಂ ಪಟ್ಟಗಾ ।
ಜಿನೆ ಪಾಸಂ ತ[1]ವೆ ತೋಱುವಂತೆ ಕರುಳಂ ನೀಂ ತೋಱಿದೈ ದೈತ್ಯನಾ ॥ 355

ಕಂ ॥ ಇನಿತೞಲುಮಿನಿತು ಮಱುಕಮು ।
ಮಿನಿತು ಮನಃಕ್ಷತಮುಮಾವನಿಂದಾದುದವಂ ॥
ಗಿನಿತೞಲನಿನಿತು ಮಱುಕಮ ।
ನಿನಿತು ಮನಃಕ್ಷತಮನ[2]ಬ್ಬ ಮಾಡದೆ ಮಾಣೆಂ ॥ 356

ಜನನೀಜನಕಸಹೋದರ ।
ವನಿತಾಸುತಪಾತ್ರಮಿತ್ರಸಂಬಂಧಮುದಂ ॥
ತೆನಿತೆನಿತು ಭವದೊಳಾಯ್ತು ।
ಲ್ಲೆನಿತೆನಿತಂ ನೆನೆವುದೆನಿತನವಧರಿಸುವುದೋ ॥ 357

ಇವರ್ಕ್ಕೆ ದ್ವಿತ್ವಪ್ರಯೋಗಮುಂ ಸೂತ್ರನಿರ್ದ್ದೇಶದೊಳ್ ಜ್ಞಾಪಕಸ್ಥಿ[3]ತಮಕ್ಕುಂ ॥

ವೃ ॥ ಕಾಯಲುಂ ಬಲಗರ್ವ್ವದಿಂ ನೆಲನೆಲ್ಲಮುಂ ನೆಲಕೆಲ್ಲಮಾ ।
ತ್ತಿರ್ದ್ದಯಲುಂ ತನಗಾಜಚತುರ್ಭ್ಭುಜಮುಂ ಭುಜದ್ವಯಮಾದನಿ ॥
ತ್ತಾಯದಾಯತಿ ತೋಳೊಳೊಪ್ಪಿರೆ ಮಿಕ್ಕ ಪೆಂಪಿನ ಕೀರ್ತ್ತಿನಾ ।
ರಾಯಣಂ ದಯೆಗೆಯ್ಗೆ ಚಾ[4]ಗಚತುರ್ಭ್ಭುಜಂ ಗರುಡಧ್ವಜಂ ॥ 358

ಎನಿತ್ತೆನಿತ್ತಂಬುಜಪತ್ರನೇತ್ರೆಯಾ ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ ॥
ಅನಿತ್ತನಿತ್ತಂ ವನದೊಳ್ ವನೇಚರಂ ।
ತನತ್ತು ಬಿಲ್ಲಾನದನನ್ನು ಕೀಸುಗುಂ[5] ॥ 359

ಸೂತ್ರಂ ॥ 80 ॥

ಮತ್ತಮುವರ್ಕ್ಕಕ್ಕುಂ ಸವು ।
ಪೊತ್ತನಕಾರಂ ಪ್ರಕಾರಕಾಲಾರ್ತ್ಥಂ ಮೆ ॥
ಯ್ವೆತ್ತಿರೆ ತುದುವೆಂಬಿವು ವಿ[6] ।
ದ್ಯೋತ್ತಮರೀತೆಱದಿನಱಿಗೆ ಪೆಱವುಮನಿ[7]ದಱೊಳ್ ॥ 360

ಪ್ರಯೋಗಂ ॥

ಪ್ರಕಾರಾರ್ತ್ಥಕ್ಕೆ ॥

ವೃ ॥ ಅಂತು ಕಾಡುಗುಮೆ ಲೋಕಮನಿಂದ್ರಂ ।
ಗಂತು ಮಾಡುಗುಮೆ ಬನ್ನಮನೋರ್ವ್ವೋ ॥
ಅಂತು ಸೂಡುಗುಮೆ ಕೇಸುರಿಯುಂ ಪೇ ।
ಱಿಂತು ಕೂಡುಗುಮೆ ಬೀ[8]ರಮುದಗ್ರಂ ॥ 361

1 ತನೆ, ತಸೆ. 2 ನಬೆ. 3 ಸಿದ್ಧ. 4 ಭಾಗ. 5 ವಂ. 6 ವಿ। ದ್ವೃತ್ತಮು. 7 ನಿವಱಿನೊಳ್. 8 ಸಾಹಸಮಾ.

ಕಂ ॥ ಇಂತಿಂತೆ ಪಲಬರುಂ ತ ।
ತ್ಸಂತತಿಯೊಳ್ ಕೞಿದು ಪೋಗೆ ಜನಿಯಿಸಿದಂ ದು ॥
ಷ್ಯಂತಂ ದುಷ್ಯಂತಂಗವು ।
ನಂತಗುಣಂ ಭರತರಾಜನಾ[1]ದಂ ತನಯಂ ॥ 362

ಎಂತೆಡಱಿದಯೆಂತುಕ್ಕಿರ್ದ ।
ಯೆಂತೊದವಿದಯೆಂತುಮಗುೞ್ದಯೆಂತೊದಱಿದವಾ ॥
ಯೆತ್ತಂತೆನಗಿದಿರ್ಚಿರ್ದಯ್ ಮಗು ।
[2]ೞ್ಗಿಂ ತೊಡರದಿರೆನೆ ಸಿತಾಶ್ವನೆಂದಂ ಕರ್ಣಂ ॥ 363

ಕಾಲಾರ್ತ್ಥಕ್ಕೆ ॥

ವೃ ॥ ಮುನಿಸಿಂ ಮೇಲೆತ್ತಿ ಬರ್ಪ್ಪಂದಿನ ವಿಪುಳಶಿಲಾಸ್ತಂಭಮಂ ಕೀೞಿ ಕೀೞ್ವಂ ।
ದಿನ ಬೆಂಕೊಂಡಟ್ಟಿ ಕೊಲ್ವಂದಿನ ತಿರಿಪಿ ಕಪಿತ್ಥಾವನೀಜಾತದಿಂದಂ ॥
ಬನದೊಳ್ ಮೆಯ್ವೆರ್ಚ್ಚಿ ಪೊಯ್ವಂದಿನ ನಿಜಭುಜವಿಕ್ರಾಂತಮೇನಾದುದಿಂತೀ ।
ಜನಮೆಲ್ಲಂ ನೋಡೆ ಚಾವಟ್ಟದ ಬಿಸುವುಡಿಯೊಳ್ ಬಿೞ್ದು ಸಾವಂತುಟಾಯ್ತೇ ॥ 364

ಇಂದು ಪಿಂಗಿದುವೆಮ್ಮ [3]ಪೀಡೆಗಳಿಂದು ಸಾರ್ದ್ದುವು ಸಂಪ್ಪು ತಾ ।
ವಿಂದಮೋಘಫಲಂಗಳಾದುವು ಯಜ್ಞದಾನಸಮಾಧಿಗಳ್ ॥
ಇಂದು ನಂಬಿಗೆವಾಮುಮೆಮ್ಮ ನೆಗೞ್ತೆಯೊಳ್ಪನದಲ್ಲದೆ ।
ವಿತ್ತಂದುವಂಶಮುಮಿಂದು ನಿರ್ಮ್ಮಳಮಾದುದಿಂದುಧರೋಪಮಾ ॥ 365

ಕಂ ॥ ಎಂದಮರರನರೆಯುಟ್ಟುವೆ ।
ನೆಂದಮರಾವತಿಯನೀೞ್ದುಕೊಳ್ವೆಂ ಶಕ್ರಂ ॥
ಗೆಂದಭಿಭವಮಂ ಮಾಡುವೆ ।
ನೆಂ[4]ದಲ್ಲಿ ಪಲುಂಬಿ ಚಿಂತಿಕುಂ ದನುತನಯಂ ॥ 366

ಅಲ್ಲಿ ಪೆಱವು ಗ್ರಹಣಕ್ಕೆ ॥

ವೃ ॥ ವಿರಹದೊಳಾದ ವೇದನೆಯನಾಱಿಸಲಾಮರನೊಳ್ಳಿತೆಂದು ಮಾ ।
ಮರದ ನೆೞಲ್ಗೆ ಪೋಪೆ ಗಡ ಕಾಮನ ಡಾಮರಮಲ್ಲಿ ಕೋಕಿಲೋ ॥
ತ್ಕರರ[5]ವಮಲ್ಲಿ ಚಾವಳಿಪ ರಾಜಶುಕವ್ರಜಮಲ್ಲಿ ಕಾಯ್ದು ಪ ।
ಲ್ಮೊರೆವ[6]ಮದಾಳಿಯಲ್ಲಿ ಸಖಿ ಸಾರದಿರಾಮರನಂ ವಸಂತದೊಳ್ ॥ 367

ಸೂತ್ರಂ ॥ 81 ॥

ಗಣನಾವಿಶೇಷಪರಿಪೂ ।
ರಣದೊಳಮನಿತಿನಿತೆನಿತ್ತು ಶಬ್ದಂಗಳ ಪೂ ॥
ರಣದೊಳಮನೆಯಪ್ರತ್ಯಯ ।
ಮೊಣರ್ದ್ದು ಸಮಂತೊಂದಿ ತೋಱುಗುಂ ತದ್ಧಿತದೊಳ್ ॥ 368

1 ನೆಂಬಂ, 2 ೞ್ದಿಂ. 3 ಸೇದೆ. 4 ನೆಂದೆಂದು. 5 ದುಳಿಪಲ್ಲಿ. 6 ವಳಿಮಾಲ್ಗೆ.

ಪ್ರಯೋಗಂ ॥

ಕಂ॥ ಜಿನಮದನರೊಳಗೆ ಪದಿನಾ ।
ಱನೆಯಂ ತತ್ಸಕಲಚಕ್ರವರ್ತ್ತಿಗಳೊಳಗ ॥
ಯ್ದನೆಯನೆನೆ ಪುಣ್ಯಪುಂಜಾ ।
ರ್ಜ್ಜನಕ್ಕೆ ಶಾಂತೀ[1]ಶನಂತು ನೋಂತರು[2]ಮೊಳರೇ ॥ 369

ಇನಿತನೆಯ ಭವದೊಳಿಂತಾ ।
ಯ್ತಿನಿತನೆಯ ಭವಾಂತರಂಗಳೊಳ್ ಮತ್ತಂ ಮೇ ॥
[3]ಲಿನಿತು ಸುಖದುಃಖಫಲಮುಂ ।
ಜನಿಯಿಕುಮೆಂದಱಿವುದರಿದು ಸಂಸೃತಿಗತಿಯೊಳ್ ॥ 370

ಸೂತ್ರಂ ॥ 82 ॥

ಇರೆ ತದ್ಧಿತಪ್ರಯೋಗಂ ।
ಪರದೊಳ್ ಚರಮಸ್ವರಕ್ಕೆ ಲೋಪಮದಕ್ಕುಂ ॥
ನಿರವಿಸಿ ಮುನ್ನೆ ಸಮಾಸಂ ।
ತರದೊಳ್ ಪೇೞ್ದೊಂದು ಕಾರ್ಯ್ಯಮುಂ ಬಂದಿರ್ಕ್ಕುಂ ॥ 371

ಪ್ರಯೋಗಂ ॥

ವೃ॥ ತೊಟ್ಟು ತೀವಿ ಬಳೆಯಂ ನಿಡುದೋಳ್ಗಳೊಳೊಂದುಃ ,
ತುಟ್ಟು ಪೆಣ್ಣುಡೆಯನಾ[4]ಡಿಸಿ ಬಾಳ್ವಿಃಖಂಡಿ ಮುಂ ॥
ನೆಟ್ಟನರ್ಜ್ಜನನ ಸಾರಥಿಯೆಂಬುದನೀಗಳೀ ।
ಘಟ್ಟವಳ್ತಿ ನುಡಿದಳ್ ತಿಳಿವಂತೆಮಗೆಲ್ಲಮುಂ ॥ 372

ಬರ್ಮ್ಮ ಪೋಗಿ ಮೃಗಯಾನಿಮಿತ್ತದಿಂ ।
ಧರ್ಮ್ಮಮಂ ಮಱೆದು ನೋ[5]ಡ ಬೇಡಿದೊಂ ॥
ಪೆರ್ಮ್ಮಗೆಟ್ಟು ಜಮದಗ್ನಿಯಂ ನೃಪಂ ।
ದುರ್ಮ್ಮದಂ ಸುರಭಿಯಂ ವಿಮೋಹದಿಂ ॥ 373

ಇದು ಶಬ್ದಸ್ಮೃತಿಯೊಳ್ ತದ್ಧಿತಪ್ರಕರಣಂ ॥

---

1 ಶೇಶ. 2 ವರೊಳರೇ. 3 ಗಿನಿತು. 4 ನಾಟಿಸಿ. 5 ನೋಡಿ.

ಆಖ್ಯಾತಪ್ರಕರಣಂ.

ಸೂತ್ರಂ ॥ 83 ॥

ಭೂತವತಿ ವರ್ತಮಾನಂ ।
ಖ್ಯಾತಭವಿಷ್ಯಂತಿ ಸರ್ವಸಾಧನಿಯೆಂ[1]ಬಾ ॥
ಖ್ಯಾತವಿಭಕ್ತಿಗಳಕ್ಕುಮ ।
ತೀತಭವದ್ಭಾವಿಕಾಲವಿಧ್ಯಾದಿಗಳೊಳ್ ॥ 374

ಪ್ರಯೋಗಂ ॥

ಭೂತವತಿಗೆ ॥

ವೃ ॥ ತ್ರಿಭುವನರಾಜ್ಯಪಟ್ಟದೊಡವುಟ್ಟಿದನಾವಿಭು ಪುಟ್ಟಿದ[2]ನ್ತೆ ತಾಂ ।
ರಭಸದೆ ಸಿಂಹವಿಷ್ಟರಮನೇಱಿದನೆತ್ತದೆ ತಾಮೆ ಮುಂದೆ ಬಂ ॥
ದಭಿಮತಮಪ್ಪ ಬೆಳ್ಗೊಡೆಗಳುಂ ನೆಗೆದೊಪ್ಪಿದುವಿಂತೆ ದಲ್ ಜಗ ।
ತ್ಪ್ರಭುತೆ ಜಗತ್ತ್ರಯಂಗಳೊಳಗಗ್ಗಳಮಾದುದು ದೈತ್ಯರಾಜನಾ ॥ 375

ವರ್ತಮಾನಕ್ಕೆ ॥

ವೃ ॥ ಎಸಗಿದುದೀಗಳೀಗಳೆನಿಸೊಯ್ಯನೆ ತೆಂಕಣ ಗಾಳಿ ಕೋರಕ ।
ಪ್ರಸರದಿ[3]ನೀಗಳೀಗಳೆಸೆದ[4]ಪ್ಪುದು ಚೂತಮಹೀಜಮೆಯ್ದೆ ರಾ ॥
ಗಿಸಿ ಬೆಸೆಗೀಗಳೀಗಳುಲಿದಪ್ಪುದು ಕೋಗಿಲೆ ಕಂತು ಬಿಲ್ಲನೇ ।
ಱಿಸಿದಪನೀಗಳೀಗಳೆಲೆ ಸುಗ್ಗಿಯದೊಂದು ಪೊಡರ್ಪಿದಾಗದೇ ॥ 376

ಭವಿಷ್ಯಂತಿಗೆ ॥

ವೃ ॥ ಕಡುಕೆಯ್ದಾಂತನ್ಯಸೈನ್ಯಂಗಳನಳಱೆ ಭರಂಗೆಯ್ದು ನಿಮ್ಮೊಂದೆ ಮೆಯ್ಯೊಳ್ ।
ಕಿಡಿಸಲ್ ಸಾ[5]ರ್ವೆರ್ ಸಮಾಸಾದಿತರಣರಸಿಕರ್ ನಿಮ್ಮ ಮುಂದಾದಮಣ್ಮಂ ॥
ನುಡಿವಾಗಳ್ ನಾ[6]ಡೆ ಲಜ್ಜಾಕರಮದಱಿನದಂತಿರ್ಕೆ ಜೀಯೆಂಬಿನಂ ಮಾ ।
ರ್ಪಡೆಗೆನ್ನೀಬಾಳಕೇಳೀವಿಳಸ[7]ನಮನದಂ ಯುದ್ಧದೊಳ್ ನಾಳೆ ತೋರ್ಪೆಂ ॥ 377

ವಿಧ್ಯಾದಿಗೆ ॥

ಕಂ॥ ಮ[8]ಚ್ಚರದಿರು ಬಸನಮಂ ಗಿಳಿ ।
ಗಚ್ಚರದಿರು ಖಳಸ್ವಭಾವಮಂ[9] ಮನೆಯತ್ತಲ್ ॥
ಸೊಚ್ಚರ ಹಿತರಪ್ಪರಂ ಸಲೆ ।
ಪೆರ್ಚಿಸು ತಳವರ್ಗಮಂ ಮನಂಗೊಳೆ ಮಗನೇ ॥ 378

---

1 ಯೆಂಬಾ. 2 ದನ್ನಿರಾ 3 ದೊಳೀ, 4 ದಿರ್ದಪುದು, 5 ಸಾರ್ವರ್. 6 ನೋಡೆ, 7 ಸಿತಮು, 8 ಮಚ್ಚರಿಸು.
9 ದೊಳಮು,

ಸೂತ್ರಂ ॥ 84 ॥

ಕವದಿನಮುರಯಿಃರೆನೆವೆನಿ ।
ಪ್ಪವು ವರ್ತ್ತಿಕುಮನ್ಯಯುಷ್ಮದಸ್ಮದ್ವಿಷಯು ॥
ವ್ಯವಹೃತಿಗಳ್ಗೇಕಾನೇ ।
ಕವಚನದಿಂ ಪ್ರತಿವಿಭಕ್ತಿಪುರುಷಾಖ್ಯಂಗಳ್ ॥ 379

ಪ್ರಯೋಗಂ ॥

ಪ್ರಥಮಪುರುಷಕ್ಕೆ ॥

ಕಂ॥ ತೊಟ್ಟಂ ಸಂಮೋಹನಮಂ ।
ತೊ[1]ಟ್ಟನೆ ಭುಜವಿಜಯಶಾಲಿ ಫಲ್ಗುಣನಾಗಳ್ ॥
ಪುಟ್ಟಿದ ನಿದ್ರಾಭ[2]ರದಿಂ ।
ದೊಟ್ಟೈಸಿ ವಿರೋಧಿಭೂಭುಜರ್ ಮೆಯ್ಮಱೆದರ್ ॥ 380

ಮಧ್ಯಮಪುರುಷಕ್ಕೆ ॥

ಕಂ॥ ನುಡಿದಯ್ ಪೊಚ್ಚಱವಾತಂ ।
ಬಿಡದೆನ್ನೊಳ್ ಜಱುಸುತಿರ್ಪ್ಪುದಾವುದು ಗಂಡು ॥
ಳ್ಳೊಡೆ ಮೊನೆಗಿದಿರ್ಚ್ಚಿ ಬರವೇಱಿ ।
ತೊಡರ್ದ[3]ಗಳ್ ಕಾಣ್ಬಿರೆಮ್ಮ ನಿಮ್ಮೊಂದಳವಂ ॥ 381

ಉತ್ತಮಪುರುಷಕ್ಕೆ ॥

ಕಂ॥ ಅಸುರಹರಂ ತೇರಂ ಸ ।
ಯ್ತೆಸಗುವನಾಂ ಕೀಱಿ ನಿಂದು ಬಿಲ್ಗೊಳ್ವೆನೆನಲ್ ॥
ವಿಸಸನಮುದಾವುದರಿದ ।
ಕ್ಕರ್ಣಸೂನುವಂ ಕೊಂದೆವೆಂದು ನಿಶ್ಚಿಂತಮಿರಿಂ ॥ 382

ಸೂತ್ರಂ ॥ 85 ॥

ಮಿಗದಾಸ್ವಾರ್ತ್ಥದೊಳಂತವು ।
ನೆಗಳ್ಗುಂ ತಂತಮ್ಮ ಸಾಧನಂಗಳೊಳನಿತುಂ ॥
ಯುಗಪತ್ಪ್ರಯೋಗಮಾದಂ ।
ದು ಗಣನೆಯೊಳ್ ಮುಂದೆ ನಿಂದುದಾವುದದಕ್ಕುಂ ॥ 383

ಪ್ರಯೋಗಂ ॥

ಸ್ವಾರ್ತ್ಥಕ್ಕೆ ॥

ವೃ ॥ ಎಂದಿಂತಾತನನಂದು ನಂಬಿಸಿಪೊಡಾಮುತ್ಸ್ವಾತ್ಮಜಂ ನಂಬಿ ಸಾ ।
ನಂದಂ ಬಂದು ಸುರೇಂದ್ರಸೂನುಗೆ ತುಱಿಲ್ಗೆಯ್ದಂದವನಾನಿನ್ನೆಗಂ ॥
ಬ[4]ಂದ ನೀಂ ದಯೆಯಿಂದನೂನಱಿಪೆನಿಲ್ಲೀಗಳ್ ಮನಂದಂದೆನಿ ।
ನ್ನೊಂದುಂ ಸಂದೆಯಮಿಲ್ಲ ತೇರನೆಸಪೆಂ ನೀಂ ಕಾದಿ ಗೆಲ್ ಫಲ್ಗುನಾ ॥ 384

1 ನಟ್ಟನೆ. 2 ಭರಮಿರಮೊಟ್ಟೈಸಿ. 3 ದಾಗನೆ. 4 ಬಂಧಮೊಳಂತಮುಮಿಂದಯೆಯಿಂದಮಾ.

ಯುಗಪತ್ಪ್ರಯೋಗಕ್ಕೆ ॥

ಕಂ ॥ ಆಮುಂ ದ್ರೋಣರುಮಶ್ವ ।
ತ್ಥಾಮನುಮಂಗಾಧಿರಾಜನುಂ ಕೃಪನುಂ ಸಂ ॥
ಗ್ರಾಮದೊಳಾಂಪೆಮರಾತಿಯ ।
ನೇಮಱತಡಿಯೆತ್ತು ತಡೆಯದಿರ್ ಭುವನಪತೀ ॥ 385

ಸೂತ್ರಂ ॥ 86 ॥

ದದಪವಕಾರಂಗಳ್ ಮೂ ।
ಲದೊಳಕ್ಕುಂ ಭೂತವರ್ತ್ತಮಾನಭವಿಷ್ಯ ॥
ದ್ವಿದಿತವಿಭಕ್ತಿತ್ರಿತಯ ।
ಕ್ಕದೆಲ್ಲವಚನಂಗಳೊಳಮಿ[1]ದಾಗಮಮಕ್ಕುಂ ॥ 386

ಪ್ರಯೋಗಂ ॥

ಭೂತವತಿಗೆ ॥

ವೃ ॥ ಆಡಿದನಿಂದ್ರನಿಂದ್ರಗಣಿಕಾಗ[2]ಣಮಟ್ಟಿಱೊಳೊಲ್ದು ಮಂಗಳಂ ।
ಬಾಡಿಪುದಬ್ಜಜಂ ಪರಸಿ ಸೇಸೆಯನಿಕ್ಕಿದನದ್ರಿ ತಾನೆ ಮುಂ ॥
ಪಾಡಿ ವಿಭೂತಿಯಿಂದೊಸಗೆಮಾಡಿದನಂಗಜನಂಗಲಕ್ಷ್ಮಿಯೊಳ್ ।
ಕೂಡಿದನೆಂದೊಡೇವೊಗೞ್ವುದೋ ಭವಶೈಲಭವಾವಿವಾಹಮಂ ॥ 387

ವರ್ತ್ತಮಾನಕ್ಕೆ ॥

ಕಂ ॥ ಮಾಡಿದಪಂ ಖಳಸಮಿತಿಗೆ ।
ಕೇಡಂ ತಕ್ಕರನುದಾತ್ತಮಹಿಮೋನ್ನತಿಯೊಳ್ ॥
ಕೂಡಿದಪಂ ನೀಡಿಲ್ಲದೆ ।
ನೀಡಿದಪಂ ಪೇೞ್ವವಂಗೆ ಬೇೞ್ಪುದನಿಂದ್ರಂ ॥ 388

ಭವಿಷ್ಯಂತಿಗೆ ॥

ವೃ ॥ ಬರ್ಪ್ಪನಮೋಘಮಬ್ದಸಮಯಕ್ಕೆ ಪಲುಂಬದೆ ಪಾರುತಿರ್ಪ್ಪದಾಂ ।
ಬರ್ಪ್ಪಗನೆಂದು ಪೋದನಿನಿಯಂ ಜಲದಾಳಿಗಳಿಂತಿವೀಗಳೇ ॥
ಬರ್ಪ್ಪವೆ ಬಂದನಿಲ್ಲ ತಡೆದಂ ಪರದೇಶದೊಳಾದ ಮರ್ಚ್ಚಿನಿಂ ।
ಕೂರ್ಪ್ಪೊಡೆ ಪರ್ಬ್ಬರಲ್ಲದೊಡೆ ಬರ್ಪ್ಪರೆ ಕಲ್ಲೆರ್ದೆಯಪ್ಪ ಮಾನಸರ್ ॥ 389

ಸೂತ್ರಂ ॥ 87 ॥

*ಭೂವಿಭವತ್ಕಾಲಂಗಳೊ ।
ಳಾವಿಹಿತವಿಭಕ್ತಿಯಾದಿ[3]ಗಳೊಳಾಗಮದಿಂ ॥
ತಾವ್ರೊಲ್ವರ್ ಕೆಲಬರ್ ಭಾ ।
ಷಾವಿದರುದ್ವಾದಿಯಕ್ಕುಮದುಮಂ ಪ್ರಾಯಂ ॥ 390

1 ಗಿದಾಗನು. 2 ಜನ. 3 ದ. * ಒಂ ೧ ಪ್ರತಿಯಲ್ಲಿ ಈ ಸೂತ್ರವೇ ಇಲ್ಲ.

ಸೂತ್ರಂ || 88 ||

ಅವಱೊಳಗೆ ನಪುಂಸಕಲಿಂ ।
ಗವಿಷಯಮಾದಲ್ಲಿ ಮೊದಲ ಪುರುಷಂಗುದುಮೆಂ ||
ಬುಮೆ ದಲ್ ಸಮನಿಸುಗುಂ ಸ್ತ್ರೀ ।
ವಿವಕ್ಷೆಯೊಳ್ ನೆಗೞ್ಗುಮೇಕವಚನಮುಳಂತಂ || 391

ಪ್ರಯೋಗಂ ||

ಕಂ || ಊದಿದುದು ತಣ್ಣೆಲರ್ ಕಳ ।
ನಾದಂ ಸಾ[1]ದರದೊಳೊಂದಿ ನೆಗೞ್ದುದು ಪದ್ಮಾ ||
ಮೋದಮಿ[2]ನಿಸುಂ ತೊವತ್ತೊರ್ತ್ತ ವ ।
ರಾದುದು ಕೂಗಿದುವು ತಾಮ್ರಚೂಡಕುಳಂಗಳ್ || 392
ಅಱಿವಳ್ ಪಾಂಡುತನೂಜರ ।
ತೆಱನೆಲ್ಲಮನೀಕೆ ನುಡಿವಳಲ್ಲಳ್ ತಪ್ಪಂ ||
ಮಱಸಿ ಪುಸಿನುಡಿವ ಜಱುಚರ ।
ತೆಱನಂ ಕಂಡಱಿಯದಂತು ಕುೞಿಯರುಮೊಳರೇ || 393

ಸೂತ್ರಂ || 89 ||

ಅರೆಬರ್ ತದೇಕವಚನಾಂ ।
ತರಂ ನಪುಂಸಕದೊಳಾಗೆ ತುತ್ತ್ವನ್ಯತರಂ ||
ದೊರೆಕೊಳ್ಗುಮೆಂಬರವು ಮಱುಂ ।
ತಿರೆ ಪೊ[3]ದ್ದುರ್ಗುಮುಮುರ್ದಿಕಾರಮುಕ್ಕೆಯುಕಾರಂ || 394

ಪ್ರಯೋಗಂ ||

ವೃ || ಮುಟ್ಟಿತು ಮುಟ್ಟದು ದಿವಮಂ ।
ಮೆಟ್ಟಿತು ಮೆಟ್ಟದು ರಸಾತ[4]ಳಾಗ್ರಮನೆಂಬೋ ||
ೞ್ಪಟ್ಟಳಮಾಗಿರೆ ದಿವಿಜರ ।
ದಿಟ್ಟಿಗೆ ಸೊಗಯಿಸಿತು ಮುಂದೆ ಮಂದರಶೈಲಂ || 395
ಉರಗರಗಿದರ್ ದೈತ್ಯರ್ ಬಳ್ಕುತ್ತರಲ್ಕೆ ದನಿಂದ್ರನೀ ।
ಶ್ವರನ ಮನಮು[5]ಱ್ಕುಡಿತ್ತೋ[6]ಡಿತ್ತು ಕಿನ್ನರಸೈನ್ಯಮಾ ||
ಸರಲ ಬರಮಂ ಕಂಡಿಂ ಕೆಟ್ಟಿತ್ತು ಭಾರತಮೆಂದು ತಾ ।
ವರಯೆಲೆಮು ನೀರಂತಾಯ್ತೆತ್ತಂ ಸುರಾಸುರಮಂಡಲಂ || 396

ಸೂತ್ರಂ || 90 ||

ಅವಿಶಿಷ್ಟಲಿಂಗವಚನ ।
ವ್ಯವಸ್ಥೆಯಿಂದೊಂದಿ ಗುಂ ಕುಮಾದೇಶಂಗಳ್ ||
ಬವರಿಸುಗುಂ ಸಂಪ್ರತಿಗಂ ।
ಭವಿಷ್ಯ ದರ್ತ್ಥದೊಳಮನ್ಯವಚನೋಕ್ತಿಗಳೊಳ್ || 397

---

1 ಗಾಂದರ. 2 ಮಿನಿಸಂ. 3 ಪೊದ್ದುರ್ಗೆಯುಮುರ್ದಿಕಾರಮುಕ್ಕೆವಿಕಾರಂ. 4 ತಳಾಂತಮು. 5 ಮಳ್ಕಾಡಿ.
6 ತೊತ್ತಿತ್ತು.

ಪ್ರಯೋಗಂ ॥

ವೃ ॥ ಮೀಱುಗುಮಲ್ಲಿ ದೇವರೆಡೆವೊಕ್ಕೊಡನಾತ್ಮಭುಜಪ್ರತಾಪಮಂ ।
ತೋಱುಗುಮುರ್ಕ್ಕಿ ದ[1]ನ್ಯನೃಪನಂದನರಂ ತವೆ ಕೊಂದು ನಾಱುಗ್ಗಳಂ ॥
ತೀಱುಗುಮಾಗಳ[2]ಲ್ಲಿ ತೊಡದಾರ್ರುಮನುಗ್ರಪತತ್ರಿಭಾರಮಂ ।
ಪೇಱುಗುಮಂತುಮಾಂತೊಡಮರಂ ಬಡಿಯೊಳ್ ಪುಡಿಗುಟ್ಟಿ ತೂಱುಗುಂ ॥ 398

ಕಂ ॥ ಅರ್ಕ್ಕೇಂದುಗಳಂ ತವೆ ನುಂ ।
ಗಿರ್ಕ್ಕಂ ಕಱ್ತಲೆ ಸಿಡಿಲ್ಗಳೆಱುಗುಗುಮಂತುಂ ॥
ಬರ್ಕ್ಕಂ ನಿನ್ನೊಳ್ಪಳ್ ಭಯ ।
ಮಿಕ್ಕರ್ಕ್ಕಮೆ ನೀನಿರ್ಪ್ಪ ಮನದೊಳು[3]ಗ್ರತುಳಾರ್ಕ್ಕ ॥ 399

ಸೂತ್ರಂ ॥ 91 ॥

ಉಗೆಕೆವಿಕಲ್ಪಿತಮನ್ಯಾ ।
ರ್ತ್ಥಗತಿಯೊಳುತ್ವೇತ್ವಯು[4]ಕ್ತಿ ಯುಷ್ಮತ್ಸಂಜ್ಞೋ ॥
ಕ್ತಿಗಳೊಳಮಸ್ಮದ್ಬಹುವಚ ।
ನಗತಿಯೊಳಂ ನೆಗೞ್ದ ಸರ್ವ್ವಸಾಧನಿಗಕ್ಕುಂ ॥ 400

ಪ್ರಯೋಗಂ ॥

ಅನ್ಯಾರ್ತ್ಥಗತಿಗೆ ॥

ವೃ ॥ ಮೇದಿನಿ ಸಾಗರಾಂತಮದು ನಿನ್ನನೆ ಪತ್ತುಗೆ ನಿನ್ನ ವಕ್ಷದೊಳ್ ।
ಶ್ರೀ ದೊರೆಕೊಂಡು ಪೆ[5]ರ್ಚ್ಚುವೆರಸಿರ್ಕ್ಕೆ ಸಮುನ್ನತ ನವಗ್ರಹಂಗಳೇ ॥
ಕಾದಶಮುಕ್ಕೆ ಕೀರ್ತ್ತಿ ಪರೆದಿರ್ಕ್ಕೆ ಜಯಾಂಗನೆ ಕೂ[6]ರ್ಕ್ಕೆ ನಿಚ್ಚಲುಂ ।
ವೇದದೊಳೋ[7]ದಿದಾಯು ನಿನಗಕ್ಕೆ ಚಿರಂ ಕಲಿಕಾಲಸೂ[8]ದನಾ ॥ 401

ಯುಷ್ಮತ್ಸಂಜ್ಞೋಕ್ತಿಗೆ ॥

ವೃ ॥ ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು ಕಚ್ಛಪೋ ।
ಪಾಯದಡಂಗಿ ನಿಲ್ ಭ್ರಮರಿಯೊಳ್ ಭ್ರಮಿಯಂತಿರೆ ಪಚ್ಚರಾಗು ಖ ॥
ಡ್ಗಯುಧಚಾ[9]ಮರಂ ಪೊಳೆವ ಮಿಂಚನೆ ಪೋ[10]ಲ್ತಿರೆ ಬೀಸು ನೀಂ ಖಳ ।
ನ್ಯಾ[11]ಯದಿನೆಲ್ಲಮಂ ನೆಱೆಯೆ ಕಲ್ತುಪದೇಶಕನಾಗು ಲೋಕದೊಳ್ ॥ 402

ಕಂ ॥ ಹರಿ ನುಡಿಯೆ ನುಡಿಯಿಮುಳಿಯಲಿ ।
ಮೀರಿಮುಸಿರಲಿಮತ್ತಸಾರಿಮೆಲೆ ಮಿಡುಕದಿರಿಂ ॥
ಪಿರಿದಂ ಗ[12]ಟಪಲಿಮೆಡೆಗೊಂ ।
ಡಿರದರಿಮೆನುತಿರೆ ಕಡಂಗಿ ಪಡಿಯಱಿರೆತ್ತಂ ॥ 403

1 ದಂದು. 2 ಮಲ್ಲಿ. 3 ಳುಗ್ರತಳರ್ಕ್ಕ. 4 ಯುಕ್. 5 ಪರ್ಚ್ಚು. 6 ಕೂರ್ಗ್ಗ. 7 ಳೊಂದಿ. 8 ಸಾಧನಾ. 9 ಚಾಪಮಂ. 10 ಪೊತ್ತಿರೆ. 11 ನ್ಯಾಯಮ. 12 ಗಳಪರಿಮೆದೆಗೊಂದಿರದಿರಿ

ಅಸ್ಮದ್ಬಹುವಚನಗತಿಗೆ ॥

ಕಂ ॥ ನೆನೆಯದೆ ಕಜ್ಜದ ಬಿಣ್ಪಂ ।
ಮುನಿವಮ್ ನೀನೊರ್ವನೆಂಬ ಹರಿಗಮಸಾಧ್ಯಂ ॥
ಮನುಜಪಿಶಾಚರಾಂ[1]ಕನೊ ।
ಪಲಬರುಮೊಂದಾಗಿ ತಾಗುವಂ ಫಲ್ಗುಣನೊಳ್ ॥ 404

ಸೂತ್ರಂ ॥ 92 ॥

ತದುಪಗತಮಧ್ಯಮೈಕ ।
ತ್ವದೊಳಕ್ಕುಂ ಪ್ರಾಯದಿಂದಿಕಾರಮುಕಾರಂ ॥
ವಿದಿತಸ್ವರೂಪಲೋಪಮು ।
ಮದಂತೆ ಪೆಱವುೞಿಯೊಳಂ ಪ್ರ[2]ಕೃತ್ಯಂತಮೊಳಂ ॥ 405

ಪ್ರಯೋಗಂ ॥

ವೃ ॥ ಬಿಗಿ ಪುಗು ಬಿ[3]ಟ್ಟು ಕೂಡು ಜಡಿ ಒಗ್ಗಿಸು ಪೊ[4]ಯ್ನ್ಲೆನೋಡು ಸಾ[5]ಯಿ ಸಾ ।
ರ್ದ್ದಗಿ ಕೊಳೆ ನೂಂ[6]ಕು ಸಾಚರ್ಬ ಕಡೆದೋಱುಡಸಂದಿಸು ಸಾರ್ದ್ದು ದಂ[7]ಡೆಗೊಳ್ ॥
ಪುಗದೆಡೆಮಾಡು ಚಪ್ಪರಿಸು ರೂಪಿಡು ಕೂ[8]ಪಿಡು ಕೂ[9]ರ್ಪ್ಪುಗೋಱು ಪಾ ।
ಜಗಿಯದೆ ಕೂರ್ಮ್ಮೆಮಿಕ್ಕು ತ[10]ಗೆ ತೊಂಗಲನಿಂಬೆನೆ ನೂಂಕು ಯು[11]ದ್ಧಮಂ ॥ 406

ಸೂತ್ರಂ ॥ 93 ॥

ಕ್ರಿಯೆ ತಾಂ ಕ್ರಿಯಾರ್ತ್ಥಮಪ್ಪ ।
ಲ್ಲಿಯುಮಕ್ಕುಂ ವರ್ತ್ತಮಾನಗತಿಗುತ್ತುಮುತುಂ ॥
ದ್ವಯುಮಕ್ಕುಂ ಪೂರ್ವ್ವಭವ ।
ಕ್ರಿಯೆಯೊಳದುತ್ಪ್ರತ್ಯಯಂಗಳಕ್ಕುಂ ಪೀನಂ ॥ 407

ಪ್ರಯೋಗಂ ॥

ಕಂ ॥ ತಿಂಗಳನಪ್ಪಿಕೊಳಲ್ ಪಾ[12] ।
ಪಿಂಗಂ ಬೆಳೆಯಿಕ್ಕಲಮರಗಿರಿಶಿಖರಕ್ಕಂ ॥
ಲಂಗಿಸಲೊಡರಿಸುವರ್ ಪ ।
ರ್ವ್ವಂಗಳ್ ಪತ್ತುಂಟು ದೇವಸಮಾನ ಜಲಿವೆಣ್ಗಳ್ ॥ 408

ವೃ ॥ ಕೆದಱುತ್ತುಂ ಮಣಲಂ ತೆಮಳ್ದು ಕೊಳುತುಂ ಭೂರೇಣುವಂ ಸೂಸುತುಂ ।
ನದನದ್ಯಚ್ಛಜಲಂಗಳಂ ಮುಱಿಯುತುಂ ಭೂಜಂಗಳಂ ನುಗ್ಗುರ್ತುಂ ॥
ಪೊಂದಱಿಂ ಸೀಳುತುಮೆಯ್ದು ವಂಶವನಮಂ ಕಾಡಾನೆಯುಂ ಪೋಲ್ತು ಪೊ ।
ಕ್ಕುದು ಬೀಡಂ ಲಯಕಾಲಕಾಲವಿ[13]ಚಲದ್ಭೀಮಾರುತಂ ಮಾರುತಂ ॥ 409

---

1 ರಾಂಕನೊ. 2 ಪ್ರಕೃತ್ಯಂತರದೊಳ್. 3 ಬಿಟ್ಟುಕೂಡೆ. 4 ಮೆಯ್ನ್ಲೆ. 5 ಪಾಯಿ, ಸಾಯಿ. 6 ನೂಂಕಿ.
7 ದಂಗೆಗೊಳ್. 8 ಕಾಪಿಡು. 9 ನೋಪ್ಪುರ್. 10 ನೆಗೆ. 11 ಬಿಪ್ಪರನಂ. 12 ಪಾ । ಪಿಂಗಂಬೇಪಿಕ್ಕ. 13 ವಿಲಸ.

ಕಂ ‖ ನಡುಗಿ ತ[1]ಡವರಿಸಿ ಪಂಕೆಯು ।
ಕಡುಗಾಯ್ಪಿಂಗಗಿದು ಜೆಡೆಗಳೆಡುವಿನೊಳಹಿಗಳ್ ‖
ತೊಡರ್ದು ನುಸುಳ್ದೋಡಿ ಗಂಗೆಯು ।
ಮ[2]ಡುಗಳನಡಹಡಿಸಿ ಪುಗುವಿನಂ ಭಯವಶದಿಂ ‖ 410

ಸೂತ್ರಂ ‖ 94 ‖

ಪ್ರತಿಷೇಧದೊಳಂ ಕೆಲಬರ ।
ಸ್ರುತದಿಂವಲ್ ವರ್ತಿಕಂ ಪದಾಂತರದಿಂ ಸಂ ‖
ಗತಿಯಾಗ[3]ಲ್ಲೋಪಂ ವೇಳ್ಕು ।
ಚತುರ್ಥಿ ಸಮಾಸಲ್ವಿ ವೆಂಬರದಱೊಳ್ ಕೆಲಬರ್ ‖ 411

ಪ್ರಯೋಗಂ ‖

ಕಂ ‖ ನಗೆಯೊಳಮಪ್ಪೊಡಮಿಂತೀ ।
ತೆಗಟಿ ದುರುಕ್ತಿಗಳನೆಮ್ಮೊಳಿಂ ನುಡಿಯಲ್ ನೀಂ ‖
ಬಗೆಯೊಳ್ ೀಱೊಂಪನೆಣಂ ।
ಬಗೆಯಲ್ ಗಡ ನಿನಗೆ ಸುಮತಿ ಪೇಱಿಂ ಪೇಱೇ ‖ 412

ಪರಾರ್ಥಕ್ಕೆ ‖

ಕಂ ‖ ತರವೇಱ್ ಮದವಾರಣಮುಂ ।
ಬರವೇಱ್ ಸನ್ನದ್ಧವಾಜಿಸಾಧನಮುಂ ಬಿ ‖
ತ್ತ[4]ರಿಸಲ್ಕೆ ವೇಱ್ ವರೂಥೋ ।
ತ್ಕರಮುಂ ಬಲಿದೊಡ್ಡವೇಱ್ ಪದಾತಿಯನೀಗಳ್ ‖ 413

ಸೂತ್ರಂ ‖ 95 ‖

ಎಸೆಗುಂ ಭಾವದೊಳ್[5]ಮರ್ದೇ ।
ಕಸಂಜ್ಞಾವಚನಂ ಕ್ರಿಯಾಸಮಭಿಹಾರಂ ವ ‖
ರ್ತಿಸುತಿರೆ ತಾನಕ್ಕುಂ ಸ ।
ರ್ವಸಾಧನೀಮಧ್ಯವೈಕವಚನಮದೆಂದುಂ ‖ 414

ಪ್ರಯೋಗಂ ‖

ಭಾವಾರ್ಥಕ್ಕೆ ‖

ಕಂ ‖ ಸಿಡಿಲಂ ಪೊಸೆವುದು ಶೇಷನ ।
ಪೆಡೆಯೊಳ್ ಪಟ್ಟಿರ್ಪ್ಪುದೆಂಟುಮಾನೆಯ ಕೋಡಂ ‖
ಪಿ[6]ಡಿದೊತ್ತಿ ಕೀಳ್ವುದೇಱಿಂ ।
ಕಡಲೊಳಗೋಲಾಡುತಿರ್ಪ್ಪುದವನ ವಿನೋದಂ ‖ 415

1 ತಡವಡಿಸಿ. 2 ಮಡುವಿನೊಳಟಲಟಿಸಿ. 3 ಗಲುಲೋಪಂ. 4 ತ್ತರಿಸಿಬರ. 5 ಳಮಱ್ರೇ । ಕಸಂಖ್ಯೆ. 6 ಪಿಡಿದಾಡಿದುಕೀಳ್ವು.

ಕ್ರಿಯಾಸಮಭಿಹಾರಕ್ಕೆ ॥

ಕಂ॥ ಕೊಳ್ಕೊಳ್ಳೆಂದೊಡನೊಡನೆಯೆ ।
ತುಳ್ಕುವ ಯುವತಿಯರ ಕರಪರಿಚ್ಯುತಸಲಿಲಂ॥
ಗಳ್ಕೊಳೆ ಬಿಡೆ ಕೆದಱುವ ಕಿಂ।
ಜಳ್ಕದಿನಾದುದು ಸರೋವರಂ ಕಪಿಶಜಳಂ॥ 416

ಸೂತ್ರಂ ॥ 96 ॥

ಧಾತುಗನೇಕಾಕ್ಷರಕಾ ।
ಖ್ಯಾತವಿಭಕ್ತಿಗಳ ಮೊದಲೊಳಸು ತಾನಕ್ಕುಂ ॥
ಹೇತುಪ್ರಯೋಗದೊಳ್ ತ ।
ಜ್ಜಾತಿಯೆ ಕರ್ಣಾಟಧಾತುಗಳ್ಗಮು[1]ದಿರ್ಕ್ಕುಂ ॥ 417

ಪ್ರಯೋಗಂ ॥

ವೃ॥ ಎಸೆಗುಂ ಋಜ್ವಾಗತಂ ಕಣ್ಗೊಸುಗುಮಳವಟ್ಟುರ್ದ್ಧಋಜ್ವಾಗತಂ ಶೋ ।
ಭಿಸುಗುಂ ಪಾರ್ಶ್ವಾಗತಂ ನೋೞ್ಪರನೆಱಿಸುಗುಂ ಸಾಚಿ ತದ್ವಿದ್ವರಂ ರಂ ॥
ಜಿಸುಗುಂ ದ್ವ್ಯ[2]ರ್ದ್ಧಾಕ್ಷಿಯೆಂಬಂತೆವೋಲಿರೆ ನೆ[3]ಗೞ್ದಿರ್ದಂಗನಾಭಂಗಿಯಿಂ ಚಿ ।
ತ್ರಿಸಿ ಚಿತ್ರಕ್ಕಾಯುಮೊಯ್ದಂ ಮದನನೆನೆ ಕರಂ ಕಾಂತೆ ಕಣ್ಗೊಪ್ಪಿ ತೋರ್ಕ್ಕುಂ॥ 418

ಇಲ್ಲಿ ಉಪಾಂತ್ಯಕ್ಕೆ ಲಘ್ವೇಕಾಕ್ಷರಕ್ಕೆ ವಂತಪ್ರಯೋಗಂ ॥

ಕಂ॥ ಸುರರೊಸೆಯೆ ಸ[4]ಕಳ...ಮು ।
ಸುರನಿಕರಮತರ್ಕ್ಯಮಪ್ಪ ವಿಕ್ರಮಗುಣಮಂ ॥
ಧರಿಯಿಸಿ ಸಂದಿರ್ದ್ದಂ ಭಾ ।
ಸುರತೇಜನುದಾತ್ತಕೀರ್ತ್ತಿನಿಳಯಂ ಕೃಷ್ಣಂ ॥ 419

ಪ್ರಕೃತಿಗಳಂ ಧಾತ್ವರ್ತ್ಥದ ।
ವಿಕಲ್ಪದಿಂದಱಿದು ಸಮಱಿಕೊಳ್ವುದು ಬಹುರೂ ॥
ಪಕಮನ[5]ದಂ ಪೇೞಿಲ್ಕಾ ।
ಸಕಳಂ ವಾಕ್ಪತಿಯುಮಾಱನುಱಿದವರಳವೇ ॥ 420

ಪ್ರತಿಬುದ್ಧರಂ ಕುಱಿತ್ತೀ ।
ಸ್ಥಿತಿಯಿಂದಂ ಕಿಱಿದು ಮಾರ್ಗ್ಗಸೂಚಕನೆಗೆಯ್ದಂ ॥
ಮತಿವಂತರಱಿದು ಪೇೞ್ವುದು ।
ವಿತರ್ಕ್ಕದಿಂ ಮತ್ತಮುಕ್ತಶೇಷಮನಿದಱೊಳ್ ॥ 421

ಇದು ಶಬ್ದಸ್ಮೃತಿಯೊಳ್ ಅಯ್ದನೆಯ ಆಖ್ಯಾತಪ್ರಕರಣಂ ॥

1 ಮುಮಕ್ಕುಂ. 2 ದ್ವ್ಯಕ್ಷಮೆಂ, ವ್ಯರ್ಥಾಕ್ಷಮೆಂ. 3 ಬರೆದಿದ್ದರಂ. 4 ಕಳಸಿಯೇಳುಕಳಮು, 5 ನಮ[illegible]ಂಬಿಸಲ್ಕ.

ಗೀತಿಕೆ ॥ ಇಂತಿರೆ ಶಬ್ದಂ ಸಂದೇಹ ।
ಧ್ವಾಂತೌಘಂ ಪಿಂಗಿರೆ ಜಲಕನಾಗೆ ಬುಧ ॥
ಸಂತತಿಗಪ್ಪಂತು ಪೇೞ್ದನಿದಂ ।
ಶಾಂತಮನಂ ಕವಿತಾಗುಣೋದಯಂ ॥ 422

ವೃ ॥ ಅಭಿಮತಶಬ್ದಸಂಸ್ಮರಣದಿಂ ಜನಮಂ ತಿಳಿವಂತು ಮಾಡಿ ವಾ ।
ಗ್ವಿಭವಮುದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯಂತನೆಯ್ದೆ ತ ॥
ತ್ಸಭೆಗ[1]ಳೊಳಗ್ರಪೂಜೆನಡೆದೊಂದು ಮಹಾಮಹಿಮಾನುಭಾವದಿಂ ।
ದಭಿನವಶರ್ವ್ವವರ್ಮ್ಮನಿವನೆಂದಪುದುರ್ವ್ವರೆ ನಾಗವರ್ಮ್ಮನಂ ॥ 423

ಇದು ಸಕಳಸಃಕವಿಜನಮನಸ್ಸರೋಜಿನೀರಾಜಹಂಸಾಯಮಾ
ನಾನೂನಕವಿತಾಗುಣೋದಯಂ ಶ್ರೀನಾಗವರ್ಮ್ಮ
ಪ್ರಣೀತಮಪ್ಪ ಕಾವ್ಯಾವಲೋಕನ
ದೊಳ್ ಶಬ್ದಸ್ಮೃತಿಯೆಂಬುದು
ಪ್ರಥಮಾಧಿಕರಣಂ ॥

---

1 ಜೊಳಗಗ್ರ.

2. ಕಾವ್ಯಫಲವ್ಯಾವೃತ್ತ್ಯಧಿಕರಣಂ.

ಪದಪದಾರ್ತ್ಥ ಸಂಧಿದೋಷ ವಿನಿಶ್ಚಯ ಪ್ರಕರಣಂ.

ವೃ ॥ ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ ।
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇಱ್ವೊಡಂತಾ ॥
ಪ್ರತಿಭಾನಂ ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರ ।
ನ್ವಿತನಪ್ಪಂ ವೃದ್ಧನಾಲಸ್ಯಮನುಱಿದಸಪುದ್ಯೋಗಮಭ್ಯಾಸಕರ್ಮ್ಮಂ ॥ 424

ಕಂ॥ ಶ್ರುತವಾರಿನಿಧಿಯ ಪಾರಮ ।
ನತಿಪ್ರಬಂಧಾ[1]ಭಿಯೋಗರಾರೆಯ್ದಿದೊಡಂ ॥
ಕೃತಪುಣ್ಯಂಗಲ್ಲದೆ ವಿ ।
ಶ್ರುತಕವಿತಾರತ್ನಮಲ್ಲಿ ಸಂಭವಿಸುಗುಮೇ ॥ 425

ಮದಮಿಲ್ಲದಿಭಂ ಮಧುವಿ ।
ಲ್ಲದ ಕುಸುಮಂ ಚಂದ್ರನಿ[2]ಲ್ಲದಿರುಳಾಳಾರ್ಪ್ಪಿ ॥
ಲ್ಲದ ನೃಪತಿ ಕವಿತೆಯಿಲ್ಲದ ।
ವಿದಗ್ಧತಾಗುಣಮದೇಂ ಮನಂಗೊಳಿಸುಗುಮೇ ॥ 426

ಪರಮಪ್ರೀತಿನಿಮಿತ್ತಂ ।
ನಿರತಿಶಯಯಶೋನಿ[3]ದಾನಮಪ್ಪುದಱಿನಿಹಂ ॥
ಪರಮೆಂಬರಡರ್ಕ್ಕಂ ಬಂ ।
ಧುರಕಾ[4]ವ್ಯನಿಬಂಧದಿಂ ಹಿತಂ ಪೆಱತುಂಟೇ ॥ 427

ಕೃತಿಸತಿಯ ಮೆಯ್ಯೊಳೆಳ್ಳನಿ ।
ತು ತಾನದೊಂದಱಿಯೆ ದೋಷಮಾಗೆ ತದಾವ ॥
ರ್ಜ್ಜಿತಮಪ್ಪ ಕೀರ್ತ್ತಿಯುಂ ನಿಂ ।
ದಿತಮಕ್ಕುಂ ದರ್ಪ್ಪಣಾರ್ಪ್ಪಿತಚ್ಛಾಯೆಯವೋಲ್ ॥ 428

ಕಂ ॥ ಅದಱಿಂದುಪೇಕ್ಷೆಗೆಯ್ಯದೆ ।
ಸದಭಿಮತೋದಾತ್ತಕೀರ್ತ್ತಿಯಂ ಬಯಸುವವಂ ॥
ಪದವಾಕ್ಯಾರ್ತ್ಥಂಗಳೊಳೊಂ ।
ದದಂತು ಪಿಂಗಿಸುಗೆ ದೋಷಮಂ ಕೃ[5]ತಿಯಿಂದಂ॥ 429

1 ಧಾನುರಾಗ. 2 ಇಲ್ಲದೊಂದಿರುಳಳಪ್ಪಿರ್. 3 ವಿಧಾನ. 4 ವಾಕ್ಯ. 5 ಕ್ರಮದಿಂದಂ.

ಪ್ರ[1]ಯೋಜನಸ್ಥಾಪನಂ॥

ಸೂತ್ರಂ ॥ 97 ॥

ಇರೆ ಶಬ್ದಾರ್ತ್ಥಂಗಳ್ ತ।
ತ್ಪರತೆಯಿನದು ಕಾವ್ಯಮದಱೊಳುಚಿತೈಕಾರ್ತ್ಥಂ ॥
ತರವಾಚಿ ಶಬ್ದಮು[2]ವಭಾ।
ಸರೂಪಮಾಹ್ಲಾದಕಾರಿಯುಪ್ಪುದದರ್ತ್ಥಂ ॥ 430

ಸೂತ್ರಂ ॥ 98 ॥

ಪ್ರಕರಣದಿಂ ಶಬ್ದಾಂತರ।
ದ ಕೂಟದಿಂದಭಿನಯಂಗಳಿಂದಿಷ್ಟಾರ್ತ್ಥ ॥
ಪ್ರಕಟನಮಕ್ಕುಮನೇಕ।
ಪ್ರಕಾರಮರ್ತ್ಥಂ ಪದಕ್ಕೆ ಸಂಭವಿಸುವೊಡಂ ॥ 431

ಉದಾಹರಣೆ ॥

ಪ್ರಕರಣಕ್ಕೆ ॥

ಕಂ॥ ಏನೇನುಂ ಮದನುಜರೆನ।
ಗಾನತರಣಮಾಗದಿರ್ದ್ದರುಂ ಮದಮವರ್ಗಂ ॥
ತೇನೇತಱೊಳಾಯ್ತದನಿನಿ।
ಸಾನುಂ ಬೇಗದೊಳೆ ಕಳೆದು ತೋಱೆನೆ ರಣದೊಳ್ ॥ 432

ಶಬ್ದಾಂತರಸಂಸರ್ಗ್ಗಕ್ಕೆ ॥

ಕಂ॥ ಹರಿ ಪೊಯ್ಯೆ ಬಿರಿದ ಮದವ।
ತ್ಕರಿಕುಂಭದಿನಗದೊಳೊಕ್ಕ ರಕ್ತಾರಕ್ತ ॥
ಸ್ಫುರಿತನವಮೌಕ್ತಿಕಂಗಳ।
ನರೆಲುಱಿ ವನಚರಿಯರೆರದ ಪಣ್ಗೆತ್ತಾಯ್ದರಿ ॥ 433

ಅಭಿನಯಕ್ಕೆ ॥

ಕಂ॥ ಇನಿವಿರಿಯಮಪ್ಪ ಮೊಲೆಯುವ।
ಳಿನಿವಿರಿಯವೆನಿಪ್ಪ ಕಣ್ಗಳಾಕೆ ಮನಂಗೆ ॥
ಟ್ಟನಿತು ದಿವಸಂಗಳಂ ತ।
ನ್ನಿನಿಯನನಗಲ್ದಿಂ ಬಱಿಕ್ಕಮಿಂತಿಂತಾದಳ್ ॥ 434

1 ಪ್ರಯೋಗಸ್ಥಾಪನಂ. 2 ಮದಭಾ.

ಸೂತ್ರಂ ॥ 99 ॥

ಅಸಮರ್ಥಮಪ್ರತೀತಂ ।
ವಿಸಂಧಿ ವಿಪರೀತಕಲ್ಪನಂ ಕಷ್ಟಂ ನೀ ॥
ರಸಮೆಂದು ದೋಷಮಿವು ಸಮ ।
ನಿಸುಗುಂ ಪದದೊಳ್ ಪದಾಗಮಜ್ಞರ ಮತದಿಂ ॥ 435

ಸೂತ್ರಂ ॥ 100 ॥

ತೆಱೆದಿರೆ ತದ್ವಾಚಕತೆಯು ।
ನಱಿಪಲ್ ನೆಱೆಯದುದೆ ಕೃತಿಯೊಳಸಮರ್ಥಪದಂ ॥
ಪೆಱತೇಂ ಪ್ರತೀತಿ ಬಗೆಗೇ ।
ತಱೊಳಂ ತೋಱದುದದಪ್ರತೀತಂ ಗೂಢಂ ॥ 436

ಉದಾಹರಣೆ ॥

ಅಸಮರ್ಥಕ್ಕೆ ॥

ಕಂ ॥ ಉರಗಾ[1]ಳಿ ನಂದನಾವಳಿ ।
ತರತರದಿಂದೆಱಗಿ ಜಳಭೃದಂತಿಕದೊಳ್ ಮಾ ॥
ಣ್ದಿರದೆ ಕುಡಿದುಪ್ಪುನೀರಂ ।
ಧರೆಗಿನಿದಂ ಕಱೆವುದಿಂತಿದೇಂ ವಿಸ್ಮಯಮೋ ॥ 437

ಅಪ್ರತೀತಕ್ಕೆ ॥

ಕಂ ॥ ಅಸಿತ[2]ರ್ದ್ಧಿ ವಯಸ್ಯಾಧ್ವದೊ ।
ಳೆಸೆವ ನವಾಬ್ಜನ್ಮಶೋಭೆ ಮೋಚಕದೂಷ್ಯ ॥
ಪ್ರಸರದ ಮೆಯ್ಯೊಳ್ ಪ[3]ರ್ವ್ವಿರೆ ।
ಪಸರಿಸಿದ ಗುಣಂಗಳ[4]ವನನೇಸಿಱಿಸಿದುವೋ ॥ 438

ಸೂತ್ರಂ ॥ 101 ॥

ಅವಿ[5]ಹಿತಸಂಹಿತೆ ಮೋಣ್ ಸಂ ।
ಧಿವಿರೂಪಂ ಬಗೆಯೆ ತಾಂ ವಿಸಂಧಿಯೆನಿಕ್ಕುಂ ॥
ಸ್ವವಿಕ[6]ಲ್ಪಿತದೊಳನಿಷ್ಟಾ ।
ರ್ಥವಾಗೆ ವಿಪರೀತಕಲ್ಪನಂ ತಾನಕ್ಕುಂ ॥ 439

1 ಗಾದಿ, ಗಾಡಿ. 2 ತರ್ತ್ರಿ. 3 ಪರ್ಜ್ಞಂ. 4 ಳಳವನೇ. 5 ವಿದಿತ. 6 ಕಲ್ಪನ.

ಉದಾಹರಣೆ ॥

ವಿಸಂಧಿಗೆ ॥

ಕಂ ॥ ಅಪಿಯ ಬಱಿ ಪಸದ ಪ[1]ಟ್ಟಿಗೆ ।
ಮಿಸುಗುವ ಆರಂ ತೊಳೆಪ್ಪ ಕನ್ನವುರಂ ಚೆ ॥
ಲ್ವೆಸೆದಿರೆ ಬಲವರ್ಪ್ಪ ವಿಟರ್ ।
ಕುಸುಮೇಷುವ ಮೇಳದವರ್ಗಳೆನಿಸಿದರ[2]ದಱೊಳ್ ॥ 440

ವಿರೂಪಸಂಧಿಗೆ ॥

ಕಂ ॥ ಪ[3]ಸುರಂ ಬಿಡದೆಸಪ ಮಳೀ ।
ಮುಸರ್ಗೆಂದುದಿತೋಡುರಾಜನಂ ನಯದಿಂ ಕ ॥
ಲ್ಪಿಸಿ ಜಲಧಿ ನುಡಿವ ಮಾಱ್ಕೆಯಿ ।
ನೆಸೆದತ್ತು ಲ್ಲೋಲಬಹಲಕಲ್ಲೋಲರವಂ ॥ 441

ವಿಪರೀತಕಲ್ಪನಕ್ಕೆ ॥

ಕಂ ॥ ಬಳವದರಿಭೂಪದಾವಾ ।
ನಳಃ ಕಳಿಂಗಾಧಿರಾಜ ನಿನ್ನುಗ್ರಶರಾ ॥
ವಳಿವಿಳಸಿತೋರುಧಾರಾ ।
ಜಳಸಿ[4]ಕರನಿಂದಮೆಯ್ದು ಮಾಱ್ಗಿಗೆ ಧು[5]ರದೊಳ್ ॥ 442

ಸೂತ್ರಂ ॥ 102 ॥

ಶ್ರುತಿವಿರಸಪದಕ್ಷೇಪ ।
ಸ್ಥಿತಿ ಕಷ್ಟಂ ಗ್ರಾಮ್ಯಶಬ್ದಸಂದರ್ಭಸಮು ॥
ನ್ವಿತಮುಮಸಭ್ಯಾರ್ತ್ಥಕೃತಿ ।
ಸ್ಮೃತಿಯುಂ ನೀರಸಮೆನಿಪ್ಪುದಕ್ಕುಂ ದೋಷಂ ॥ 443

ಉದಾಹರಣೆ ॥

ಕಷ್ಟಕ್ಕೆ ॥

ಕಂ ॥ ಇದಿರ್ವರ್ಪ್ಪನ್ಪೊಲಾಯ್ತು ಪವನ ।
ವಿದಳತ್ತ[6]ರ್ವ್ವಾದ್ರಿಪ್ರೋಥಪುಷ್ಪರಜಸ್ಸ ॥
ಕ್ತದಿನೊದವಿ ಮಾರುತಂ ಭ್ರಾ ।
ಮ್ಯದತ್ಯುದಗ್ರೋರ್ಝುಂಕೃತೋಜ್ಜೃಂಭಧ್ವಾನಂ ॥ 444

ನೀರಸಕ್ಕೆ ॥

ಕಂ ॥ ಅಂಗನೆಯೊಳ್ ಕಳ್ದಿರ್ಪ್ಪುದ ।
ನಂಗಾಹಿಯನಱಿದು ಪೇ[7]ಱ್ದು ಪೊಡೆಯಂ ಕಡುಪಿ ॥
ನ್ನಂಗಂ ದೊರೆಕೊಂಡಿರೆ ಕೊಂ ।
ಡಂ ಗಡಮೆಲಿ ತ್ರೈ[8]ಗಹುಲಿಲದೇಂ ಚೋಜಿಗಮೋ ॥ 445

1 ಪಟ್ಟಿಗೆ, ಕಟ್ಟಿಗೆ. 2 ರವರೊಳ್. 3 ಪಸರಂಗುಡದೆಸಗುವಮುಮು । ಳಿಸರ್ಗ. 4 ಸೀಕರದಿಂದ. 5 ಧರೆಯೊಳ್. 6 ತ್ತುರ್ವ್ವಾದ್ರಿಪೋದ. 7 ಪೊದ್ದ ಪೊಡೆಯುಂಕುಱುಪಿ. 8 ತ್ರೈಗುಹುಃಯದೇಂ

ತಲೆಮುಟ್ಟೆ ಪಾ[1]ಯ್ದು ವೀ[2]ರ್ಯ್ಯ ।
ವಲೇಪದಿಂದಿೞಿದು ಬಿೞ್ದುಮೆೞ್ದಂ ಮತ್ತಂ ॥
ಚಲಕ[3]ಲದಿಂದೊಡನಿಕ್ಕಿದ ।
ನೊಲೆದದಿರೊಳೆ ಮಣಿಪುದಾಂತ ಪರವಾಹಿನಿಯಂ ॥ 446

ಸೂತ್ರಂ ॥ 103 ॥

ಮಱಸುಂದು ಸೂೞಿಸುಂದೆನೆ ।
ಪಿೞಿತಿನಿಯೆನೆ ಪೂೞಿಯೆನೆ ಪದಾಂತರದಿಂದಂ ।
ನೆಱೆದು ನಿಲೆ ದು[4]ಷ್ಪ್ರತೀತಿಯ ।
ನೞಿಪುವ ಪೆಱಪೆಱವುಮಿನ್ನವೇ ಗ್ರಾಮ್ಯಂಗಳ್ ॥ 447

ಅದೆಂತೆನೆ ॥

ಕಂ॥ ನೆಱೆಗೊಂಡು ತೊನೆವ ಸರಲಿಂ ।
ನೆಱಿಲ್ದ ರಥದೊಳಗೆ ಬಿೞ್ದು ಚಕ್ರಧರಂ ಮೆ ॥
ಯ್ಮಱೆದು ಗುಹಾಂತರದೊಳ್ ಮಿಗೆ ।
ಮಱಸುಂದಿದ ಪುಲಿಯನಾಗಳಿನಿಸಂ ಪೋಲ್ತಂ ॥ 448

ಮುಚ್ಚರದ ಸೂೞಿಸುಂ[5]ದಿನ ।
ಪೊಚ್ಚಱನಾಂ[6]ತಿರ್ದ್ದ ಬಿರುದಿನೆಸಕದ ಪೆಱವುಂ ॥
ಕ[7]ಚ್ಚ ಕಳಿಗಳ ತೊಡರ್ಪ್ಪಿನ ।
ಮೆಚ್ಚವಣಿಗೆಯಂಕಮಂ ಮಹೀಶಂ ನೋೞ್ಕಂ ॥ 449

ಕೊಱೆವಲ್ ಬ[8]ತ್ತಿದ ಕಾಲ್ ಪಿಂ[9] ।
ಬಱಿಗೇಸಂ ನೆಕ್ಕ ಕದಪು ಪೊಕ್ಕಿರ್ದ್ದ ಬಸಿಱ್ ॥
ತೆಱೆದ ಮುಖಕುಹರಮ[10]ಬ್ಬಿಸೆ ।
ಪಿೞಿತಿನಿಗಳಬಳಗಮೆಯ್ದೆ ತಂ[11]ದುದು ಮುನಿಯಂ ॥ 450

ವೃ॥ ಮ[12]ತ್ತರುಡಂಗೆಗೊಂಡು ಬಡಿಯಲ್ ಚಲದಿಂದೆನಸುಂ ದುರಾಗ್ರಹಂ ।
ಚಿತ್ತದೊಳಾಗೆ ನಿನ್ನ ಬೞಿಯಂ ಬರಲೀಮು[illegible]ಸೇಂ[13]ಟಮಾಳದಿಂ ॥
ಸುತ್ತುವರ್ಗಲ್ಲದೊಲ್ಲೆ ಬಿಡು ನೀನೆನಗಿಲ್ಲಳ ಪೂೞಿ ತೋ[14]ೞಿ ಪೇ ।
ೞ್ತಿರಲಾಸೆಯಂ ಬಿಸುಟು ನೀಂ ಕ[15]ಳೆ ಪಾಂಟಮತಕ್ಕೆ ಸೈರಿಸೆಂ ॥ 451

ಇಂತೀಪೇೞ್ದುವುಮನಱಿದು ಪೆಱಪೆಱವು ಮನಱಿದುಕೊಳ್ವುದು ॥

ಕಂ॥ ಅನುಕರಣದೊ[16]ಳೊಂದಿದ ಮಾ ।
ತಿನಲ್ಲಿ ನಿರ್ದ್ದೋಷಮಾಗೆ ಸಲ್ಗುಂ ಪೇೞ್ದಿಂ ॥
ತಿನಿತುಂ ಸ್ವರೂಪಕಥನದೊ ।
ಳನುವಾದಂ ಭಿನ್ನಶಬ್ದಮಪ್ಪುದಱಿಂದಂ ॥ 452

ಇದು ಕಾವ್ಯಮಲವ್ಯಾವೃತ್ತಿಯೊಳ್ ಪದಪದಾರ್ತ್ಥಸಂಧಿದೋಷ
ವಿನಿಶ್ಚಯಪ್ರಕರಣಂ ಪ್ರಥಮಂ ॥

1 ಪೊಯ್ದು. 2 ವಿಯರ್ಯ್ಯ । ಸ. 3 ಚಲನಿಂ. 4 ದುಃಪ್ರತೀತಿ. 5 ಸುಂದಿದ. 6 ಕಾಂತಿರ್ದ್ದ. 7 ನಚಕಳೆ. 8 ತತ್ತಿರ. 9 ಸಿಂಪಿೞಿ. 10 ಮುಬ್ಬಿಸೆ. 11 ಬಂದವು. 12 ಪೆತ್ತರು. 13 ಸಿಂತ. 14 ತೋಱಿ. 15 ಕಟಿ. 16 ದಿನೊಂ.

ಕಾವ್ಯವಾಕ್ಯಾರ್ತ್ಥದೋಷಾನುಕೀರ್ತ್ತನಪ್ರಕರಣಂ.

ಸೂತ್ರಂ ॥ 104 ॥

ವಿದಿತಾರ್ತ್ಥಂ ಕ್ಷೋದಕ್ಷಮ ।
ಮುದಾತ್ತಶಬ್ದಂ ಪರಸ್ಪರಂ ಸಾಪೇಕ್ಷಂ ॥
ಪದಸಮುದಾಯಂ ವಾಕ್ಯಂ ।
ವೃದಸ್ತಕಾಂಕ್ಷಂ ತದೇಕವಸ್ತುನಿಬದ್ಧಂ ॥ 453

ಕ್ಷ್ಯಂ ॥

ಅಸಮಸದಿಂ ಪಱಿಗೆಯ್ಯಂ ।
ಕಸಮಂ ಸೋದಿಸದೆ ಬಿತ್ತಿದೊಕ್ಕಲಿಗನವೋಲ್ ॥
ಸಸಿಯಂ ನೋಡಿ ತಳೋದರಿ ।
ಬಸುಸುಯ್ಗುಂ ಬಯ್ಗುಮಂ[1]ತೆ ಮಾಡಿದ ಬಿದಿಯಂ ॥ 454

ಸೂತ್ರಂ ॥ 105 ॥

ವ್ಯವಹಿತಮೇಕಾರ್ತ್ಥಂ ವ್ಯ ।
ರ್ತ್ಥಮಪಕ್ರಮಮಖಿಳಲೋಕಶಾಸ್ತ್ರವಿರುದ್ಧಂ ॥
ಸುವಿದಿತಯತಿಭಂಗಂ ಭಿ ।
ನ್ನವೃ[2]ತ್ತಮೊಂದಿಂತು ವಾಕ್ಯದೋಷಮಿವಕ್ಕುಂ ॥ 455

ಸೂತ್ರಂ ॥ 106 ॥

ವ್ಯತಿಕೀರ್ಣ್ಣಪದಕ್ರಮಮನು ।
ಚಿತಾನ್ವಯಂ ವ್ಯವಹಿತಾನ್ವಯಂ ತಾನದು ದಲ್ ॥
ಮತಿಸಮ್ಮೋಹಮನಿದಿರವ ।
ರ್ಗೆ ತೊಡರ್ಚ್ಚಲ್ವೇೞ್ಪೊಡಲ್ಲಿಗ[3]ಲ್ಲದು ದೋಷಂ ॥ 456

ಅ[4]ವರ್ಕ್ಕೆ ಲಕ್ಷ್ಯಂ ॥

ಕಂ ॥ ಬಳಕೊಳ್ ಮುಂ ಸಿನಗಿಲ್ಲದ ।
ಮುಳಿಸಂ ಕಾಲ್ಗೆಱಗಿದೋಪನಂ ತೋಱೆ ದಯೆಯಿಂ ॥
ತಳಮ[5]ಳಗುತ್ತನುನಯದಿಂ ।
ತಿಳಿಪಲ್ಕೆಂದೆಱಗದನ್ನಮೆನ್ನರುಮುಱಿಗುಂ ॥ 457
ಪತ್ರಂ ಭುಜಂಗಸಮಿತಿ ಕ ।
ಳತ್ರಂ ದಳ್ಳುರಿ ವಿಭೂಷಣಾವಳಿ ಭೂಭೃ ॥
ತ್ಪುತ್ರಿ ಗವಾಧಿಪನಜಿನಂ ।
ನೇತ್ರಂ ನಿವಸನಮೆನಿಪ್ಪಸೊಸೆಗೆಮಗಭವಂ ॥ 458

---

1 ಮಿಂತು. 2 ವೃತ್ತಿಯಿಂ. 3 ಗಲ್ಲಂ. 4 ಅದರ್ಕ್ಕೆ. 5 ಮಳಂಕು.

ಸೂತ್ರಂ ॥ 107 ॥

ಅವಧಾರಿಸದುಕ್ತಾರ್ತ್ಥವು ।
ನವಿಶೇಷದೆ ಪುಗುೞ್ದುನು[1]ಡಿದೊಡೇಕಾರ್ತ್ಥಂ ಕ್ರೋ ॥
ಧ ವಿಷಾದಖೇದಭಯಹ ।
ರ್ಷವಿಸ್ಮಯಾದಿಗಳೊಳನ್ನವಿಷ್ಟ್ಯಮದುಷ್ಟಂ ॥ 459

ಪ್ರಯೋಗಂ ॥

ಪೂರ್ವಾರ್ದ್ಧಕ್ಕೆ ॥

ಕಂ॥ ಉನ್ಮನವೆ ಮಾಱ್ಕುಮುತ್ತೆಯು ।
ನುನ್ಮದಬರ್ಹಿಣಶಿಖಂಡಿಕೇಕಾವಿರುತಂ ॥
ತನ್ಮಧುರಧ್ವನಿಯುಂ ಜಳ ।
ಧ್ಯನ್ಮೇಘನಿನಾದವೊದವ ದೆ[2]ಸದೆಸಗೆಸೆಗುಂ ॥ 460

ಅಪರಾರ್ದ್ಧಕ್ಕೆ ॥

ವೃ॥ ಗಗನಾಧ್ವರ್ ಶರಣಾಗಿವಾಗಿವುವುರರ್ ನಿಂದಾ[3]ನಿವಾನಿಂ ದಿಶಾ ।
ೞಗಧೀಶರ್ ನೆರೆದೊಡ್ಡಿವೊಡ್ಡಿವುುಗರ್ ಬಂದೆಯ್ದಿವೆಯ್ದಿಂ ಮನ ॥
ಸ್ವಿಗಳೀದೈತ್ಯನನಿಕ್ಕಿಮಿಕ್ಕುವುದಟರ್ ಪೂಣ್ಬಣ್ಮಿಮಣ್ಮಿಂ ಯಶೋ ।
ರ್ತ್ಥಿಗಳನ್ನಂ ನೆಲೆಗುಯ್ಯಿಮುಯ್ಯಿ ಎನುತುಂ ತನ್ವಂಗಿ ಪುಲ್ಯ್ಯಲ್ಚಿದಳ್ ॥ 461

ಸೂತ್ರಂ ॥ 108 ॥

ಕರಿಕಳಭವೆನೆ ಶಿರಶ್ಯೇ ।
ಖರವೆನೆ ನವಪುಷ್ಪಮಾಲೆಯೆನೆ ಮೌಕ್ತಿಕಭಾ[4] ॥
ಸುರಹಾರಯಷ್ಟಿಯೆನೆ ಪಾ ।
ನರುಕ್ತ್ಯಮಾಗದು ವಿಶೇಷಸಂಭಾವನೆಯೊಳ್ ॥ 462

ಪ್ರಯೋಗಂ ॥

ಕಂ॥ ಆರಾಜಶಿರಶ್ಯೇಖರ ।
ನಾರಿಂದಂ ಪಿರಿಯನಳವಿಯೊಳ್ ಬಳವದಹಂ ।
ಕಾರದೆ ಬ[5]ರೆ ತಗೆವಂ ಸ್ತಂ ।
ಬೇರಮುಕಳಭಮನು[6]ಪಾತ್ತವಾಲಧಿಮೂಲಂ ॥ 463

ನವಕುಸುಮಮಾಲೆ ಮೌಕ್ತಿಕ ।
ವಿವಿಕ್ತಹಾರಾನುಕಾರ ಕ[7]ರವೊಪ್ಪಿಕ್ಕುಗಂ ॥
ಸವಿಲಾಸದಸ್ತ್ಯವನಿತಾ ।
ನಿವಹಘನಸ್ತನತಟಾಂತರವ್ಯಾಲಗ್ನಂ ॥ 464

---

1 ಪಿಡುವುದೇ, ಜಿಡುವುದೇ, 2 ದಶದಿಶೆ, 3 ದಾಗಿವಾಗಿಂ, 4 ಬಂಧುರ, 5 ನಿಲೆತೆಗೆದಂ, 6 ನುಪಾತ್ತ 7 ಕಳ.

ಸೂತ್ರಂ ॥ 109 ॥

ವ್ಯರ್ತ್ಥಂ ಪೂರ್ವ್ವಾಪರವಿಹಿ ।
ತಾ[1]ರ್ತ್ಥವ್ಯಾಘಾತದಿಂ ವಿರುದ್ಧಾರ್ತ್ಥಪದಂ ॥
ಸಾ[2]ರ್ತ್ಥಕಮುಕ್ತಮನರ್ತ್ಥಕ ।
ಮರ್ತ್ಥಿತಜನದುಕ್ತಿವಿಷಯದೊಳ್ ಮತ್ತದುವುಂ ॥ 465

ಆಯೆರಡರ್ಕ್ಕಂ ಲಕ್ಷ್ಯಂ ॥

ಕಂ॥ ಎಱಗಿಸು ಭುಜವಿಜಯದಿನಣ ।
ಮುಱಿದೆ ಬಿಗುರ್ತ್ತಿರ್ಪ್ಪರಾತಿನೃಪರಂ ಧ[3]ರ್ಮ್ಮ ॥
ಕ್ಕೆಱವಟ್ಟಾಗಿರ್ದ್ದಯೆ ನೀಂ ।
ಪೆಱರಾರುಂ ನಿನಗೆ ಪಗೆವರೇೞರುಮೊಳರೇ ॥ 466

ಪರದಾರಗಮನಮಾ[4]ಯಾರ
ಚರಿತಂಗೆ[5]ನಗೇತು ಯುಕ್ತಮಕ್ಕುಂ ತತ್ಸಂ ॥
ದರರುಚಿರಮಧುರವ[6]ನಿತಾ ।
ಧರಪಾನಂ ತಾನದೆಂತು ಪೇೞ್ ಕೂ[7]ಡುಗುಮೋ ॥ 467

ಸೂತ್ರಂ ॥ 110 ॥

ಮೊದಲೊಳ್ ಮುಂ ಪೇೞ್ದ್ದೇ ।
ಶದಂದಮನುದ್ದೇಶಮಾಗದಂದಕ್ರಮಮಿ ॥
ನ್ನದುವುಂ ಸಂಬಂಧಕ್ಕಾ ।
ಮುದಾನುಮನುಬೋಧಹೇತುವಾದೊಡದೋಷಂ ॥ 468

ಉದಾಹರಣೆ ॥

ವೃ॥ ಸತ್ವರಜಸ್ತಮೋಗುಣವಿಭಾಗದಿನೀತ್ರಿಜಗಕ್ಕೆ ತಾನೆ ಕ ।
ರ್ತ್ತೃತ್ವದೊಳೊಂದಿಯುಂ ನೆ[8]ಱೆಯೆ ಸಂಹರಿಸಲ್ ನೆ[9]ಱೆದಂ ಸಮಂತು ನಿ ॥
ತ್ಯತ್ವಮನಾಂತುವಿನಾಶನಜನಚ್ಯುತನೆಂಬಿನೆಗಂ ವಿಭಿನ್ನಮೂ ।
ರ್ತ್ತಿತ್ವಮನಪ್ಪುಕೆಯ ಪರಮೇಶ್ವರನೀಗೆಮಗಾಪ್ತತತ್ವಮಂ ॥ 469

ಕಂ॥ ವಾತಂ ಪಿತ್ತಂ ಕಫಮೆಂ ।
ಬೀತೆಱದಿಂ ಮೂಱು ದೋಷಮಾದ್ಯಂತಸಮಾ ॥
ಖ್ಯಾತಂಗಳವುಷ್ಣದಿನತಿ ।
ಶೀತದನುಪಶಮಿಕುಮಲ್ಲಿ ಮಧ್ಯಮದೊಂದುಂ ॥ 470

ಸೂತ್ರಂ ॥ 111 ॥

ಕಾಳಸ್ವಭಾವದೇಶಸ ।
ಮಾಳಕ್ಷಿತವಸ್ತುರೂಪವಿಪರೀತಮದಂ[10] ॥
ತಾಳೆಲೋಕವಿರುದ್ಧಂ ಗುಣಾ ।
ದೋ[11]ಳಿಗೆ ಮಂದಿರ್ಕ್ಕೆ ಮರಮೆ ಕವಿಕೌಶಲದಿಂ ॥ 471

---

1 ತಾತ್ಥ್ಯಂ. 2 ಸ್ವಾರ್ತ್ಥಕ. 3 ಭರ್ಮ್ಮ. 4 ಮಾಯರ್ಯ. 5 ನಿನಗೆಂತು. 6 ವೃತ್ತಾ. 7 ಮೂ.
8 ಬೆಱೆಯೆ. 9 ಮೆಱೆದಂ. 10 ದಿಂನಾ. 11 ಕಾಲಸದೊಳ್ ವಿಸುಗಿವಳ್ಕ್ಕ ಕವಿಕೌಶಲದಿಂ.

ಅನಿತರ್ಕ್ಕಂ ಲಕ್ಷ್ಯಂ॥

ವೃ॥ ವಿಕಚಾಂಭೋರುಹಷಂಡಮುನ್ಮದಮರಾಳಾನೀಕಮುತ್ಫುಲ್ಲಚಂ ।
ಪಕಮಾಕಂದಮಹೀಜಮುಜ್ಜ್ವಳವಿಯುದ್ಭ್ರಂಗಂ ಸ್ಫುಟತ್ಕೋಕಿಲ ॥
ಪ್ರಕಟಾರಾವಪರಂಪರಾಪರಿಗತಾಶಾಕುಂಜಮುಕ್ಷೀಬಕೇ ।
ಕದಂಬಂ ಜಗತೀಜನಕ್ಕೆ ಪಡೆದತ್ತಭ್ರಾಗಮುಂ ರಾಗಮುಂ ॥ 472

ಇದು ಕಾಲವಿರುದ್ಧಂ॥

ಕಂ॥ ಕೋಡುಳ್ಳ ತುರಂಗಂ ಬಂ ।
ಡಾ[1]ಡುವ ನವಕರ್ಣಿಕಾರಮತಿಮಧುರತೆಯೊಳ್ ॥
ಕೂಡಿದ ನಿಂಬಾರಾಮಂ ।
ನಾಡೊಳಗೊಳವೆಂದೊಡಿನ್ನದೇವರ್ಣ್ಣಿಪುದೋ ॥ 473

ಇದು ಸ್ವಭಾವವಿರುದ್ಧಂ॥

ಅ॥ ಕರ್ಪೂರಭೂರುಹಾರಾಮೋ ।
ತ್ಸರ್ಪದ್ಧೂಳೀ [ವಿ]ಧೂಸರಂ॥
ತೋರ್ಪುದಾತಿಥ್ಯಮಂ ಮಾಡಲ್।
ಬರ್ಪಂತೀ ಮಲಯಾನಿಲಂ ॥ 474

ಇದು ದೇಶವಿರುದ್ಧಂ॥

ಕಂ॥ ಪೇಱೊಂದದ್ಭುತರಸಮಂ ।
ಬೀಱುತ್ತುಮನೇಕವಿವಿಧಫಲಪರಿಣತಿಯಿಂ ॥
ದಾಱಿಂ ಋತುಗಳುಮೊಡನೆಯೆ ।
ತೋಱಿದುವು ತಪಃಪ್ರಭಾವದಿಂ ಮು[2]ನಿಪತಿಯಾ ॥ 475

ಇದು ಕವಿಕೌಶಲಂ॥

ಸೂತ್ರಂ ॥ 112 ॥

ನ್ಯಾಯಾಗಮನೃಪವಿದ್ಯಾ ।
ವ್ಯಾಯಕಲಾಕಾಮತಂತ್ರವಿಷಯವಿರೋಧ ॥
ಪ್ರಾಯಂ ಶಾಸ್ತ್ರವಿರುದ್ಧಂ ।
ಶ್ರೇಯಮದಂತೆಲ್ಲಿಯಾನುಮುಕ್ತಿಕ್ರಮದಿಂ ॥ 476

ಉದಾಹರಣೆ॥

ಕಂ॥ ಅವಿನಶ್ವರಗತಿ ಸಂ[3]ಸ್ಥಾ ।
ರವೆಂಬ ಸು[4]ಗತೋಕ್ತಿ ಸತ್ಯಮಂತಲ್ಲದೊಡಾ ॥
ನವನೀಲನೀರಜಾಕ್ಷಿಯ ।
ಸವಿಲಾಸಾಲೋಕಮಿನ್ನುಮಿರ್ಕ್ಕುಮೆ ಮನದೊಳ್ ॥ 477

1 ತೋಱಿದ, 2 ತನ್ಮುನಿಯಾ, 3 ಸಂಸಾರ, 4 ಸಂಗೋಕ್ತಿ.

ಕಂ॥ ಉಪನಯನಂಗೆಯ್ಯದೆಯುಂ।
ಸ್ವಪೂರ್ವ್ವವಾಸನೆಯ ಬಲದಿನಿಂತೀತಂ ವೇ॥
ದಪುರಾಣವೇದಿಯಾದಂ।
ವ್ಯಪೇಕ್ಷೆಗೆಯ್ಯುಗ್ಗಮೆ ವಿಶುದ್ಧಮಣಿ ಸಂ[1]ಸ್ಕೃತಿಯುಂ॥ 478

ಉೞಿದುವಕ್ಕರ್ಮೀತೆಱದಿನಱಿದುಕೊಳ್ವುದು॥

ಸೂತ್ರಂ॥ 113॥

ನಿ[2]ಯತಸ್ಥಾನಂ ಪದವಿಸೃ।
ತಿಯೊಳಾದ ವಿರಾಮಮಂಱಿಗೆ ಯತಿಯಕ್ಕುಮದ॥
ಕ್ಕರ್[3]ಯ ಥಾಗತಿ ಯತಿಭಂಗಂ।
ಪ್ರಯುಕ್ತಸಮಭರವಿಭಾಗದೊಳ್ ನಿ[4]ರ್ದ್ದೋಷಂ॥ 479

ಪ್ರಯೋಗಂ॥

ಕಂ॥ ಅತಿಮೃದುವನಿೞಿಸುಗುಂ ಮ।
ತ್ತತಿತೀವ್ರನನಣಮೆ ಜನಮದೆಳಸದದೆಂತುಂ॥
ಮತಿವಂತನಂ[5]ತಱಿಂದೀ।
ಕ್ಷಿತಿಯುಂ ಬ[6]ಸದಾಗಿ ಮಾೞ್ಕೆ ಮಧ್ಯಮಗತಿಯಿಂ॥ 480

ವೃ॥ ಇಂತೀಪೇೞ್ದ ನೃಪಗುಣವಿಭೇದಂಗಳಂ ತಾಳ್ದಿ ನಿಂದಾ।
ತಂ ತನ್ನೊಳ್ ತಾಳ್ದುಗುಮಖಿಳಲೋಕೈಕಸಾಮ್ರಾಜ್ಯಮುಂ ವಿ॥
ಭ್ರಾಂತೇಂ ಭೂವ್ಯಂ[7]ತರರಿಪುಗಳಂ ಗೆಲ್ದು ವಿಕ್ರಾಂತದಿಂ ಕ।
ಲ್ಪಾಂತಸ್ಥಾಯಿಪ್ರಕಟವಿಹಟತ್ಕೀರ್ತ್ತಿಗಂ ಕಾಂತನಕ್ಕುಂ॥ 481

ಸೂತ್ರಂ॥ 114॥

ಗುರುಲಘುರಚನೆಗೆ ನಿರ್ದ್ದಿ।
ಷ್ಟರೂಪಹೀನಾಧಿಕಾಕ್ಷರಂ ಛಂದದೊಳೊಂ॥
ದಿರೆ ಭಿನ್ನವೃತ್ತಮೆಂಬುದು।
ದುರುಕ್ತಮತ್ಯಂತದೋಷಮಕ್ಕುಂ ಕೃತಿಯೊಳ್॥ 482

ಲಕ್ಷ್ಯಂ॥

ಕಂ॥ ಜೀಮೂತಕೇತುಗಣ್ಣಂ।
ಗೆ ಮೇಘವಾಹನನದೆಂತು ಮುಂ ಬೆಸಕೆಯ್ದಂ॥
ನಿಮ್ಮಣ್ಣಂಗೆ ಮತಂಗಂ।
ಗಾಮಾಱಿಕ್ಕೆಯೆ ವಿನಯದಿಂದೆ ನೀಂ ಬೆಸಕೆಯ್ಯಿಂ॥ 483

---

1 ಸತ್ಕ್ರಿಯೆ. 2 ನಿಯಮ. 3 ಕ್ಕರ್ಯಥಾರ್ತ್ಥಗತಿಯಭಂಗಂ. 4 ನಿರ್ದುಷ್ಟಂ. 5 ರದಱಿನಿಂತೀ.
6 ವಶವಾಗಿ. 7 ವ್ಯಂತರ.

ವೃ ॥ ಪಣಿವುನೀ[1]ಯನಂ ಪ್ರಿಯಂನುಡಿದೆಂತುಂ।
ಮಾಣಿ ಮತ್ತವನ ಪಂಬಲನೆಂತುಂ ॥
ಕೇಣಕಾಱನನದೇಕೆಗ[2] ಕಾವ್ಯೆ।
ನಾಣಪುತ್ತ ನಗೆಯುಂ ನೀಂ ಬಗೆಯ್ಯ ॥ 484

ಸೂತ್ರಂ ॥ 115 ॥

ಮಿಗೆ ದಲ್ ವಲಂ ವೆಱಂ ಮ।
ತ್ತೆ ಗಡಂ ಗಳ ಕೆನ್ನ ಮೆಂಬನರ್ತ್ಥಕಪದಮುಂ ॥
ಸೊಗಯಿಸೆ ವಾ[3]ಕ್ಯಾಲಂಕೃತಿ।
ನೆಗೞ್ದೆಡೆಯೊಳ್ ಪೇೞ್ಗೆ ಪೇೞದಿರ್ಕ್ಕುೞದೆಡೆಯೊಳ್ ॥ 485

ಪ್ರಯೋಗಂ ॥

ವೃ ॥ ವಿರಹಿ ವ್ರಗಂ ದ[4]ಲಂಜಿಸುವವಂ ಮಧು ದಲ್ ಬಲೆಗಳ್ ಲತಾಳಿ ದಲ್।
ಕರಿಕು ಕನಲ್ದು ಕಾಯ್ದು ವಿರಹಾಗ್ನಿ ದಲೊಪ್ಪುವ ಕೆಯ್ಕೊಳಂ ದ[5]ಲಾ ॥
ಗುರಿ ಪವನಂ ದಲೆಂಬಿನಮನಂಗನ ಪೇಂಟೆಯ ಬಿಂ[6]ದದಂತೆ ಬಂ।
ದಿರೆ ಪೊಸಸುಗ್ಗಿ ಕೆಯ್ಗೞಿಯೆ ಕಣ್ಗೆಸೆದಿರ್ದ್ದುವು ನಂದನಾಳಿಗಳ್ ॥ 486

ಕಂ ॥ ಮಾವಿನ ಕೊನೆ ಮಾವಿನ ನನೆ।
ಮಾವಿನ ಪೂ ಮಾವಿನೆಳೆಯ ಮಿಡಿ ಮಾವಿನ ಕಾಯ್ ॥
ಮಾವಿನ ಪಣ್ಣೆಂದು ಜನಂ।
ಭಾವಿಸೆ ಸರ್ವಾಂಗಸುಂದರಂ ಮಾವೆ ವಲಂ ॥ 487

ವೃ ॥ ವಿಕ್ರಮವಹ್ನಿ ಮುನ್ನಳುರ್ದುಕೊಂ[7]ಡುದು ತನ್ಮನಿಯಂ ಗಡಶ್ವಮೇ।
ಧಕ್ರತು ಧೂ[8]ಮವಾದುದು ಗಡಂ ಬೞಿಯಂ ಶಿಖಿ ಧೂಮಯೋನಿಯೆಂ ॥
ಬೀಕ್ರಮಮೆಂತು ಬೞಿಮನೆ ವಿಕ್ರಮಯಜ್ಞವಿ[9]ಧಾನಮುಂ ಧರಾ।
ಚಕ್ರಮೆ ಮೆಚ್ಚಿ ಬಣ್ಣಿಸೆ ಜಸಂಬಡೆದಂ ಪೊಲಕೇಶಿವಲ್ಲಭಂ ॥ 488

ತೊಳಗೆ ಪೊನ್ನರಥಂ ರಥವಾಜಿಗ[10]ಳ್।
ಕಿಳಿಱೆ ವೀರರಸಂ ಕರೆಗಣ್ಮೆ ಕಂ ॥
ಟಳಿಸೆ ಮುನ್ನವಿರಗ್ಗಳನೊ[11]ಪ್ಪಿದಂ।
ಗಳ ಸರಿತ್ಸುತನಾಹವಲಂಪಟಂ ॥ 489

ಅಂಕುರದಿಂ ಪ್ರವಾಳಚಯದಿಂ ನವಕುಟ್ಮಲಶೋಭೆಯಿಂ ಪಡಂ।
ಗಂ ಕುಡುತಿರ್ಪ ಪುಷ್ಪರುಚಿಯಿಂ ವಿಳಸತ್ಫಳಸಂಕುಳಂಗಳಿಂ ॥
ಪಂಕರುಹಾಸನಂ ಬರೆದು ಬ[12]ಣ್ಣಿಸಿದಂತಿರೆ ನೋೞ್ಪೊಡೆತ್ತಲುಂ।
ತಾಂ ಕರವೊಪ್ಪಿತೋಱುವುದು ಬಂದ ಬಸಂತದೊ[13]ಳೊಂದು ಮಾಮರಂ ॥ 490

1 ನೀಱುನೆಂ. 2 ಗಱಿಕವ್ಯೆ. ಗಕೇನ್ಯೆ. 3 ಕಾವ್ಯಾ. 4 ದಲಾಟಿ (ಡ) ಸುಖವಂಮದನಂ. 5 ದಲಾನುರಿವನಲಂ.
6 ಬೀಱದಂದದಿಂ ಬರೆ. 7 ಕೊಂಡುದು. 8 ಧೂತ, ಮೂತು. 9 ವಿಧಾನ. 10 ಯೊಳ್. 11 ವೊಪ್ಪಿದಂ.
12 ಚಿತ್ರಿಸಿದಂತಿರೆ. 13 ದ ನಂದನಾಳಿಗಳಿ.

ಕಂ ॥ ಪಗಲೊಪ್ಪದು ಶಶಿ ನಿಶಿಯೊಳ್ ।
ಸೊಗಯಿಸದರವಿಂದವು ದಱಿನಂತೆರಡುಮನೆಂ ॥
ತು ಗಡ ಸಮನೆಂಬೆನಾಶಿಶು ।
ಮೃಗನಯನೆಯು ಪಗಲುಮಿರುಳುಮೊಪ್ಪುವ ಮೊಗವಂ ॥ 491

ವೃ ॥ ಕೀೞು ಪೌರುಷಮನಾತ್ಮಪುಣ್ಯದಿಂ ।
ಬೇೞೆ ಮಾಡದೆ[1]ಸಪೊಂ ವಿರೋಧಿಯಂ ॥
ಮಿಾ[2]ಱುಗುಂ ವೆಱಿಮೆಱಿಂಕೆಯೊಂದಱಿಂ ।
ಪಾಱಲಾರ್ಕ್ಕಮೆ ಪತತ್ರಿರಾಜನುಂ ॥ 492

ಕಂ ॥ ಆಕಥೆ ಮತ್ತೆಂತೆಂದೊಡೆ ।
ಭೀಕರಕರಿಮಕರನಿಕರಭಿನ್ನತರಂಗಾ ॥
ನೀಕಲವಣಾಂಬುರಾಶಿವೃ[3] ।
ತಾಕೃತಿಕನ್ಮನೀಯಮುಂಟು ಜಂಬೂದ್ವೀಪಂ ॥ 493

ವೃ ॥ ಬಿಚ್ಚತಮಿರ್ದ್ದ ಕಣ್ಣ ಪಸವೋಡುವಿನಂ ಸಲೆ ನೀನೆ ನೋಡ ಪೆ ।
ರ್ಮ್ಮಚ್ಚರನಿಕ್ಕಲೆನ್ನ ಭುಜದಂಡಮೆ ಸಾಲದೆ ಕೆನ್ನಮೆಲ್ಲಿಯುಂ ॥
ಮ[4]ಚ್ಚದೊನಿಲ್ಲ ನಿನ್ನಳವನಿನ್ನದಱಿಂ ಗಳ ನೀನೆಯಾ[5]ನಕ ।
ವ್ಯಚ್ಚಿತನಯ್ ತ್ರಿಶಕ್ತಿಯುತನಯ್ ವಿಜಿಗೀಷುವಯಸ್ತವೈರಿಯಯ್ ॥ 494

ಉೞಿದುವಕ್ಕಮಿಾತೆಱದಿಂ ನೋಡಿಕೊಳ್ವುದು ॥

ಇದು ಕಾವ್ಯಮಲವ್ಯಾವೃತ್ತಿಯೊಳ್ ಕಾವ್ಯವಾಕ್ಯಾರ್ಥದೋಷಾನು
ಕೀರ್ತ್ತನಪ್ರಕರಣಂ ದ್ವಿತೀಯಂ ॥

ಗೀತಿಕೆ ॥ ಈಪೇೞ್ದ ಮಾೞ್ಕೆಯಿಂ ದೋಷಾ ।
ಲೇಪಂ ಪೊರ್ದ್ದದಂತಿರೆ ಸನ್ನಿಬಂಧ ॥
ವ್ಯಾಪೃತನಕ್ಕೆ ಗುಣವದರ್ತ್ಥಂ ।
ವ್ಯಾಪಕಮಾಗೆ ಕವಿತ್ವತತ್ವದೊಳ್ ॥ 495

ವೃ ॥ ಸ[6]ಮುಚಿತಕೃತಿದೋಷದೂಷ್ಯಮಾರ್ಗ ।
ಕ್ರಮಪರಿಭಾವಿತಚಿತ್ತವೃತ್ತಿಯಪ್ಪೊಂ ॥
ಗಮಳಿನಕವಿತಾಗುಣೋದಯಶ್ರೀ ।
ಸಮನಿಸುಗುಂ ಸತತಾಭಿಯೋಗದಿಂದಂ ॥ 496

ಸಾರವಿಚಾರಬಂಧುರಮತಿಪ್ರಸರಂ ಪರಿಪಕ್ವಶಾಸ್ತ್ರಸಂ ।
ಸ್ಕಾರನುಪೇತಕೌತುಕರಸಂ ವಿದಿತಾಗಮಲೋಕವೃತ್ತನು ॥
ತ್ಸಾರಿತಮತ್ಸರಂ ಸುಜನವತ್ಸಲನೆಲ್ಲಿಯುಮಿಾತನೆಂದು ಕೆ ।
ಯ್ವಾರದೆ ಬಣ್ಣಿಕುಂ ವಿಬುಧಮಂಡಳಿ ಪಂಡಿತನಾಗವರ್ಮ್ಮನಂ॥ 497

ಇದು ಸಕಳಸುಕವಿಜನಮನಸ್ಸರೋಜನೀರಾಜಹಂಸಾಯಮಾನಾನೂನಕವಿತಾ
ಗುಣೋದಯಂ ಶ್ರೀನಾಗವರ್ಮ್ಮಪ್ರಣೀತಮಪ್ಪ ಕಾವ್ಯಾವಲೋಕನದೊಳ್
ಕಾವ್ಯಮಲವ್ಯಾವೃತ್ತಿಯೆಂಬುದು ದ್ವಿತೀಯಾಧಿಕರಣಂ॥

1 ದೆಸೆಪಂ. 2 ವಿಾಱಿಱುತುಂ. 3 ಕೃತಾಕೃತ, ವೃತಾಕೃತ. 4 ಮೆಚ್ಚದೊನಲ್ಲ. 5 ಯಾನೆಕಾ।ಬ್ಯಚ್ಯುತನಯ್. 6 ಸಮುದಿತ.

3. ಗುಣವಿವೇಕಾಧಿಕರಣಂ.

ಮಾರ್ಗ್ಗವಿಭಾಗದರ್ಶನ ಪ್ರಕರಣಂ.

ವೃ ॥ ಇದು ಸೌಂದರ್ಯ್ಯಗುಣಪ್ರಕಾಶಮಿದು ತಾನಗ್ರಾಮ್ಯತಾ[1]ಧಾನಮಿಂ ।
ತಿದು ಭಾಸ್ವತ್ಸರಭಾಗರಮ್ಯಮಿದು ಬಂ[2]ಧಾಶ್ಲೇಷವಿಚ್ಛಿತ್ತಿಗಾ ॥
ಸ್ಪದಮೆಂದಿಂ[3]ತುಚಿತಪ್ರಯೋಗವಿ[4]ಧಿಯಿಂ ಸ[5]ಯ್ತಪ್ಪಿನಂ ತಿರ್ದ್ದಿ ಪೇ ।
ೞ್ವದು ಪೂಮಾಲೆಯನಿಂಬಿನಿಂ ಸಮೆವವೋಲ್ ಸತ್ಕಾವ್ಯಮಂ ಕಬ್ಬಿಗಂ ॥ 498

ಸೂತ್ರಂ ॥ 116 ॥

ನಿರತಿಶಯಕಾವ್ಯಶೋಭಾ ।
ಕರಂಗಳಾಗಿರ್ಪ್ಪ ಧರ್ಮ್ಮಮವು ಗುಣಮಕ್ಕುಂ ॥
ಪರಮಪುರಾಣಕವೀಶ್ವರ ।
ನಿರೂಪಿತಂಗಳ್ ವಿಚಿತ್ರಮಾರ್ಗ್ಗಯುತಂಗಳ್ ॥ 499

ಸೂತ್ರಂ ॥ 117 ॥

ಸಮಸಂಶ್ಲಿಷ್ಟಾರ್ತ್ಥವ್ಯ ।
ಕ್ತಿ ಮಧುರಕಾಂತಪ್ರಸನ್ನಸುಕುಮಾರೋಜ ॥
ಸ್ಸಮಭಿಮತೋದಾರಾಹ್ವಯ ।
ಸಮಾಧಿಗಳ್ ಕೃತಿಗುಣಂಗಳೀರಯ್ದಕ್ಕುಂ ॥ 500

ಅದೆಂತೆನೆ ॥

ಸೂತ್ರಂ ॥ 118 ॥

ಸಮಮೆಂಬುದು ಬಂಧದೊಳವಿ ।
ಷಮಂ ಮೃದುಸ್ಫುಟವಿಮಿಶ್ರವಿ[6]ನ್ಯಾಸಪದ ॥
ಕ್ರಮದಿಂ ಮೂಱುಂ ತೆಱಂ ಬಂ ।
ಧಮುಂ ಯಥಾರ್ತ್ಥಾನುವೃತ್ತಿಯಿಂ ವರ್ತ್ತಿಸುಗುಂ ॥ 501

ಉದಾಹರಣೆ ॥

ಮೃದುಬಂಧಕ್ಕೆ ॥

ಕಂ ॥ ಶರದದೊಳೊನಲ್ದು ಬಿಡುತುಂ ।
ಧ[7]ರೇಂದ್ರಗಿರಿಕರಿಗಳುಡಿಯೆ ಪಾಯ್ದುವು ಕಾಯ್ಪಿಂ ॥
ಕರಟತಟಗಳಿತಮದಜಳ ।
ಪರಿಮಳಸಮವಿದಳದಳಿಕುಳಂ ನಗಕುಳಮಂ ॥ 502

---

1 ತಾದಾನ. 2 ಬಂಧಾಶ್ಲೇಷ. 3 ದೆಂದು. 4 ವಿಧಿಯಂ. 5 ಸಯ್ತಪ್ಪಿನಂ. 6 ವರ್ಣ್ಯಾಸದಂತ. 7 ದುಗುಗಿಚರ

ಸ್ಫುಟಬಂಧಕ್ಕೆ ॥

ಕಂ ॥ ಅಂಭೋನಿಧಿಗಂಭೀರಂ ।
ಶುಂಭದ್ಭುಜಗೇಂದ್ರಭೋಗನಿಭಭುಜಪರಿಘಂ ॥
ಜಂಭಾರಿವೈಭವಂ ವಿ ।
ಶ್ವಂಭರೆಗಧಿನಾಥನಶ್ವಕಂಠಂ ಖಚರಂ ॥ 503

ವಿಶ್ರಬಂಧಕ್ಕೆ ॥

ಕಂ ॥ ಹ[1]ಸ್ತಾವಚಯಾದಿನುರುಪು ।
ಷ್ವಸ್ತಬಕವುನುನ್ಮದಭ್ರಮದ್ಭ್ರಮರಪರಿ ॥
ತ್ರಸ್ತಮತಿ ಮೆಲ್ಲನೆಱಗಿ ಘ ।
ನಸ್ತನವತಿ ಕೊಯ್ದುಳಾಮ್ರಶಾಖೆಯೊಳೊರ್ವ್ವಳ್ ॥ 504

ಸೂತ್ರಂ ॥ 119 ॥

ಅಶಿಥಿಲಪದಚಯರಚನಾ ।
ತಿಶಯಂ ಸಂಶ್ಲಿಷ್ಟವೆಂಬುದಕ್ಕು[2] ನೇಯಂ ॥
ವಿಶದಾರ್ತ್ಥಂ ಶಬ್ದಾನ್ವಯ ।
ವ[3]ಶಮರ್ತ್ಥವ್ಯಕ್ತಿಯೆಂದು ಪೇೞಲ್ಪಡೆಗುಂ ॥ 505

ಉದಾಹರಣೆ ॥

ಸಂಶ್ಲಿಷ್ಟಕ್ಕೆ ॥

ಕಂ ॥ ಅದಿರದಿದಿರಿದಿರನೆಯ್ತಂ ।
ದೊದಱುತ್ತುಂ ಪೊಕ್ಕು ಪಟುಪವಿಪ್ರತಿಮ ಭುಜಂ ॥
ಕೆದಱಿ ಮೆಱೆದೋವದೆಚ್ಚಂ ।
ಕದನದೆ ವಿದ್ವಿಡ್ಬಳಪ್ರಧಾನರನಿಂದ್ರಂ ॥ 506

ಅರ್ತ್ಥವ್ಯಕ್ತಿಗೆ ॥

ಕಂ ॥ ಬರಂತೆ ಪರೆದ ನವಸಂ ।
ಧ್ಯಾರುಚಿಯಿಂದಪರದಿಗ್ವಿಭಾಗದೊಳಿನಿಸೊಂ ॥
ದಾರಕ್ತವಾಗಿ ನೇಱಿಲ ।
ದೋರೆಯನನುಕರಿಪುದಾದುದಾಗಸವಾಗಳ್ ॥ 507

ನೇಯಕ್ಕೆ ॥

ಕಂ ॥ ಆರಕ್ತವಾಗಿ ನೇಱಿಲ ।
ದೋರೆಯನನುಕರಿಪುದಾದುದಾಗಸಮನೆ ಸಂ ॥
ಧ್ಯಾರುಚಿಯಿನಕ್ಕುಮೆಂದವ ।
ಧಾರಿಸಿ ನೆಱೆ ಬಱಿದುಕೊಳ್ವುದಿ[4]ದು ನೇಯಾರ್ತ್ಥಂ ॥ 508

1 ಹಸ್ತಾವಶಿ(ನಿ)ಚಯಮುಂ. 2 ಕ್ಕುಮಮೇಯಂ. 3 ಮಸ. 4 ದದು.

ಸೂತ್ರಂ ॥ 120 ॥

ಅಗ್ರಾಮ್ಯವಚನವೃತ್ತಿ ಸ ।
ಮಗ್ರರಸಾಪೂರ್ಣ್ಣಮಪ್ಪುದದು ಮಧುರಂ ನಿ ॥
ರ್ವ್ಯಗ್ರಪ[1]ದವಿಸ್ಮೃತಿ ಪರಚಿ ।
ತ್ತಗ್ರಹಣಸಮರ್ತ್ಥಮಪ್ಪುದಂತದು ಕಾಂತಂ ॥ 509

ಉದಾಹರಣೆ ॥

ಮಧುರಕ್ಕೆ ॥

ಕಂ ॥ ಅಳಿಕುಳರುತಿಗಳಿನವನತ ।
ಫಳತರುಗಳಿನುಚಿತಕುಸುಮಗಂಧದಿನಬಳಾ ॥
ವಿಳಸನದಿಂದೀವುದು ಗಂ ।
ದಿ[2]ಳವಿಷಯಂ ಸಕಳವಿಷಯರಸರಸಿಕತೆಯಂ ॥ 510

ಕಾಂತಕ್ಕೆ ॥

ಕಂ ॥ ಅರಸಾಳ್ತನಮೆನ್ನದೆ ಕೇಳ್ ।
ಪರಮಾರ್ತ್ಥಮನೀಗಳೆನಗೆ ಸಾಮ್ರಾಜ್ಯಪದಂ ॥
ದೊರೆಕೊಂಡಂತಾದುದು ಪೋ ।
ಲ್ತಿರೆ ದೇವರ ಬರವೆ ದೇವದೇವರ ಬರವಂ ॥ 511

ಸೂತ್ರಂ ॥ 121 ॥

ಅತಿರೂಢಾರ್ತ್ಥಮಗೂಢಂ ।
ಪ್ರ[4]ತೀತಿಸುಭಗಂ ಪ್ರಸನ್ನಮೆನೆಪಡೆಗುಮಪಾ ॥
ಕೃತನಿಷ್ಠುರಾಕ್ಷರಂ ಲಾ ।
ಲಿತಲಲಿತಪದಪ್ರಕಾರಮದು ಸುಕುಮಾರಂ ॥ 512

ಅವರ್ಕ್ಕನುಕ್ರಮಪ್ರಯೋಗಂ ॥

ಕಂ ॥ ಮಡುಗಳೊಳಗಲರ್ದ ನೆ[5]ಯ್ದಲ ।
ಕಡುಗಂಪುಮನಿವಱ ಕಂ[6]ಪೆ ಗೆಲ್ದುವು ಸಾಸಿ ॥
ರ್ಮ್ಮಡಿಯೆನೆ ಪೊಂಬಣ್ಣದ ಕೆಂ ।
ಪಿಡಿದಿರೆ ಸೊಗಯಿಪುವು ಗಂಧಶಾಲಿವನಂಗಳ್ ॥ 513

ಮಣಿಭವನಂಗಳ ರುಚಿಗಳ್ ।
ಪೆಣೆದು ನಭೋಂಗಣದೊಳಮರಚಾಪವಿಳಾಸ ॥
ಕ್ಕೆಣೆಯಾಗಿರೆ ಬಹುವಿಧದಿಂ ।
ಕುಣಿವುವು ಕಾರ್ಗೆತ್ತು ಕೇಗಿ ಸೋಗೆನವಿಲ್ಗಳ್ ॥ 514

1 ಫದಸ್ಥಿತಿರಚಿತೋಃ । ಪಗ್ರಹಣ. 2 ಧಿಳ. 3 ಳೆವ್ಮ. 4 ಪ್ರತೀತ. 5 ನೆಯ್ದಿಲ. 6 ಕಂಪು.

ಸೂತ್ರಂ ॥ 122 ॥

ಪಿರಿದುಂ ಸಮಾಸಮಾಗಿರೆ ।
ವಿರಚಿಸುವುದು ತಾನದೋಜಮುಕ್ಕಂ ಲೋಕೋ ॥
ತ್ತರವರ್ಣ್ಣನಂ ವಿಶೇಷಣ ।
ಪರಪ್ರಕರ್ಷೋಕ್ತಿಯುಕ್ತಮಪ್ಪುದುದಾರಂ ॥ 515

ಉದಾಹರಣೆ ॥

ಓಜಕ್ಕೆ ॥

ಕಂ ॥ ಬಕಕುರರಪಕ್ಷವಿ[1]ಕ್ಷಿ ।
ಪ್ತಕಂಜಕಿಂಜಲ್ಕಪುಂಜಪಿಂಜರಿತಾಚ್ಛೋ ॥
ದಕಪರಿಪೂರ್ಣ್ಣತಟಾಕ ।
ಪ್ರಕರಸರೋನಿಕರರಂಜಿತಾಶಾವಲಯಂ ॥ 516

ಉದಾರಕ್ಕೆ ॥

ಕಂ ॥ ಬಹುಪೋ[2]ಷಣದಿಂ ಮಾವಿನ ।
ಸಹಕಾರದ ಸೊನೆಯು ಸೋನೆ ಬೆಳೆಯಿಸೆ ಬೆಳೆಗಂ ॥
ಮಹಿಯೆನೆ ಬಣ್ಣಿಸುವ ಪಿತಾ ।
ಮಹಂಗಮರಿದೆಗ್ಗ ಮೊಗ್ಗೆ ನಿನಗಮದೆನಗಂ ॥ 517

ಮತ್ತಮಲ್ಲಿ ಶ್ಲಾಘ್ಯವಿಶೇಷಣಕ್ಕೆ ॥

ಕಂ ॥ ಮನೆಮನೆದಪ್ಪದೆಯುಂ ಪಳು ।
ಕಿನ ಕೇಗ್ಗಳ್ ಪವಳದೆಸೆವ ಕಂಬಂ ಕಕ್ಕೇ ॥
ತನದ ತೊಲೆ ಪೊನ್ನ ಪೊಸಜಂ ।
ತೆ ನೀಲದಡಿಗಲ್ಗಳೆಂದೊಡೇವಣ್ಣಿಪುದೋ ॥ 518

ಸೂತ್ರಂ ॥ 123 ॥

ಪೆಱವಱ ಧರ್ಮ್ಮಂಗಳನೇ ।
ತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕ ॥
ಣ್ಡೆಱೆಯೆ ಚತುರೋಕ್ತಿ ಕೃತಿಯೊಳ್ ।
ನೆಱೆದಿರೆ ಪೇೞ್ವುದು ಸಮಾಧಿಯೆನೆ ಪೆಸರ್ವಡೆಗುಂ ॥ 519

ಉದಾಹರಣೆ ॥

ಕಂ ॥ ವಿನಿಮೀಲಿತನೀಲಾಂಬುಜ ।
ವನಮುನ್ಮೀಲಿತನವೀನಕಮಲವನಂ ತ ॥
ದ್ದಿನಮುಖದೊಳ್ ಮಧುಪಾಳಿಗೆ ।
ಜನಿಯಿಸಿದುವು ಪೞೆಯು ಸುಸಿಲ ಪೊಸ ಸುಸಿಲಿಂಪಂ ॥ 520

1 ೨ಕ್ಷಿ. 2 ಪೋಷಣದಿಂ, ವರ್ಷಣದಿಂ.

ಸೂತ್ರಂ ॥ 124 ॥

ಇವು ನಿಯತಂ ದಕ್ಷಿಣದೇ ।
ಶವರ್ತ್ತಿಕವಿರಾಜಮಾರ್ಗ್ಗದೊಳ್ ನೆಗೞ್ಗುಂ ಮ ॥
ತ್ತವಱ ವಿಪರ್ಯ್ಯಯವೃತ್ತಿಯಿಂ ।
ಬವರಿಸುಗುಮುದೀಚ್ಯಮಾರ್ಗ್ಗದೊಳ್ ಪ್ರಚುರತೆಯಿಂ ॥ 521

ಸೂತ್ರಂ ॥ 125 ॥

ವೈದರ್ಭ್ಭಗೌಡಮಾರ್ಗ್ಗವಿ ।
ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ ॥
ಲ್ವಾದರಿಪರ್ ಕೆಲಬರ್ ಸಂ ।
ವಾದದೊಳೆರಡುಂ ಸ[1]ಮರ್ತ್ಥಮಪ್ಪುದಱಿಂದಂ ॥ 522

ಇದು ಗುಣವಿವೇಕದೊಳ್ ಮಾರ್ಗ್ಗವಿಭಾಗದರ್ಶನಪ್ರಕರಣಂ ಪ್ರಥಮಂ ॥

ಶಬ್ದಾಲಂಕಾರನಿರ್ಣ್ಣಯಪ್ರಕರಣಂ.

ಸೂತ್ರಂ ॥ 126 ॥

ನಿಜದಿಂದಂ ಚೆಲ್ವಾಗೆ ವಿಬು ।
ಧಜನಪ್ರಿ[2]ಯೆಗ[3]ಖಿಳಲೋಕವಿನುತ ಪ್ರಮದಾ ॥
ಗ್ರಜೆಗೆ ಕೃತಿಸ[4]ತಿಗೆ ಶಬ್ದಾ ।
ರ್ತ್ಥಜಾತಮಂತೆರಡು ತೆಱದಲಂಕೃತಿಯಕ್ಕುಂ ॥ 523

ಸೂತ್ರಂ ॥ 127 ॥

ಅವಱೊಳ್ ಶಬ್ದಾಲಂಕಾ ।
ರವಿಭಾಗಂ ಯಮಕಮೆಸೆವನುಪ್ರಾಸಂ ಚಿ ॥
ತ್ರವಿಚಿತ್ರಭಿತ್ತಿ ವಕ್ರೋ ।
ಕ್ತಿವಿಶೇಷಮುಮೆನೆ ಚತುರ್ವ್ವಿಧಂ ತಾನಕ್ಕುಂ ॥ 524

---

1 ಸದರ್ತ್ಥ. 2 ಪ್ರಿತೆ. 3 ಗಭಿವಿನೂತಕೀರ್ತ್ತಿ. 4 ನಮಗೆ.

ಅವಱೊಳಗೆ ||

ಸೂತ್ರಂ || 128 ||

ಪದವರ್ಣ್ಣವ್ಯಾವೃತ್ತಿ ದ |
ಲ[1]ದು ಯಮಕಂ ವ್ಯವಹಿತಾ[2]ವ್ಯಪೇತಾತ್ಮಂ ಮ ||
ತ್ತದು ಪಾದದಾದಿಮಧ್ಯಾಂ |
ತದೊಳಕ್ಕುಮನೇಕಭೇದನಿಯತಸ್ಥಿತಿಯಿಂ || 525

ಉದಾಹರಣೆ ||

ವ್ಯವಹಿತಕ್ಕೆ ||

ಕಂ|| ಮಾಣಿಕದಂತೊಪ್ಪಿದನೀ |
ಮಾಣಿ ಕರಂ ಕ[3]ಱಿಯೆ ಚೆಲ್ವುವಡೆದೆಂಬಿನೆಗಂ ||
ಕ್ಷೋಣಿಯುನಳೆಯಲ್ ಮುನ್ನಂ |
ಕ್ಷೋ[4]ಣಿಮನಂ ವಿಷ್ಣು ತಾನೆ ವಾಮನನಾದಂ || 526

ತಿಂದುಕಪೀನಫಲಂಗಳ |
ನೊಂದೊಂದೆಡೆಗಳೊಳಲಂಪು ಪೋಪನ್ನೆವರಂ ||
ತಿಂದು ಕಪೀನಕುಳಂ ವ್ರತಿ |
ಯುಂದದಿನಿರ್ಪ್ಪುದು ನಿಯುಕ್ತವನ್ಯಾಶನದಿಂ || 527

ಫಲಸಾರಸನಮವಂತೆ |
ತ್ತಲುಮೊದವಿರೆ ಕುಳಿರ್ವ ಪುಱಿಲೊಳಿರ್ದೆಗೊಳ್ವೆನೆಗಂ ||
ಕಲರುತಿಯುಂ ಪಾಡಿದುದು |
ತ್ಫಲಸಾರಸನಂ ಪುಳಿಂದಲಲನಾನಿಕರಂ || 528

ಆಲೋಚಂ ಸಾಲದೆ ಶಿಶು |
ಪಾಲನನುಱದಿಕ್ಕಿ ಮಿಕ್ಕ ಭುವನಸ್ಥಿತಿಯುಂ ||
ಪಾಲಿಸು ನೀಂ ನಿನಗೆ ಜಗ |
ತ್ಪಾಲನವಿಜ್ಞಾನವಂ ಪೆಱರ್ ಪ್ರಕಟಪರೇ || 529

ಸರಭಸದೆ ಕಾಲಯ[5]ಮಸಾ |
ಲ್ವ[6]ರುಕ್ಮಿಬಾಣದ್ರುಮಾದಿಗಳ್ ವೆರಸಖಿಲಾ ||
ಸುರಚಕ್ರಂ ನಿನ್ನ ವಿಭಾ |
ಸುರಚಕ್ರದ ಬಾಯ್ಗೆ ಬಾರದಿರದು ಮುರಾರೀ || 530

ತಱಿಸಂದಿಸೆ ಕರಿಘಟೆಯುಂ |
ತು[7]ಱುಗಿರೆ ಪಾಯ್ದುವು ಶಿಲೀಮುಖಂ ಪುಷ್ಕರದೊಳ್ ||
[8]ಗಱಿ ಸಂದಿಸೆ ಮೊರೆದೊರ್ಮ್ಮೊದ |
ಲೆಱಗುವ ತೆಱದಿಂ ಶಿಲೀಮುಖಂ ಪುಷ್ಕರದೊಳ್ || 531

1 ಲದೆ. 2 ತವ್ಯ. 3 ಕಳೆಯೆ. 4 ಕ್ಷೂಣಮನಂ, ಕ್ಷೋಣಿವರಂ. 5 ಯಮನಂ. 6 ಸುರಚಿರಬಾಣ, 7 ಮುಱುಗಿರೆ. 8 ತಱಿ, ಕಱಿ.

ಕಂ ॥ ನೆಯ್ದಲೆಸಱವಱ ಪೋಲ್ವೆಯು ।
ನೆಯ್ದಲೆ ದಲ್ ಪಡೆದುವಿಲ್ಲ ಲೋಕವನಲೆಯು ॥
ಲ್ಕಯ್ದುಮಲರ್ಗಣೆಗಳಿರ್ಕ್ಕೆವು ।
ಕೆಯ್ದು ಮನೋಜಂಗೆನಿಪ್ಪವಾಕೆಯ ಕಣ್ಗಳ್ ॥ 532

ಮಲರೆ ತಮಮದೊಡ್ಡು ಪಂಕಜ ।
ಮಲರೆ ವಿನೀಲೋತ್ಪಲಾಳಿ ಮುಗಿಯೆ ಖಲರ್ ಸಂ ॥
ಚಲಿಸುತ್ತುಮುಗಿಯೆ ಜಗತೀ ।
ವಿಲೋಚನಂ ಮೂಡಿದಂ ವಿಲೋಚನನಾಗಳ್ ॥ 533

ಅಮಳ್ಗಳ್ ನ[1]ಯವಿಕ್ರಮಗುಣ ।
ದಮಳ್ಗಳ್ ನೃಪಶಾಸ್ತ್ರಶಸ್ತ್ರಪರಿಣತರ[2]ವರಂ ॥
ಸಮರದೊಳುದಗ್ರಶೌರ್ಯ್ಯಂ ।
ಸಮರ[3]ಸಸಂಪನ್ನನಾವನುಱದಾಂಪನ್ನಂ ॥ 534

ಮಂತಣಕಂ ಚದುರರ್ ಗಡ ।
ಮಂತಣಕಂ ನೆಗೞೆ ಬಂದರೆನಿಸಿರ್ದಂ ತಾಂ[4] ॥
ಮಂತಣಮುಸಿರದೆ ಕೆ[5]ಲರಾ ।
ಮಂತಣಮುಂಡಂತೆ ಪೆಱರ ನಯದೊಳೆ ತಣಿವರ್ ॥ 535

ಈಧರೆಯ ಪೆಂಡಿರುದ್ಧಪ ।
ಯೋಧರೆಯ ಮನೋಜರಾಗರಸಪೂರಿತಬಿಂ ॥
ಬಾಧರೆಯ ಕಂಬುಕಮ್ರಶಿ ।
ರೋಧರೆಯ ಬೆಡಂಗನಾರುಮೇನೆಯ್ದುವರೇ ॥ 536

ವೃ ॥ ಪನ್ನಗಕನ್ಯೆಯೊರ್ವ್ವಳುಪದೇಶಮನಿತ್ತಳೊ ನಾಗಬಂ[6]ಧಮಂ ।
ಪನ್ನಗಕನ್ಯೆಯೋ ಜಿತೆಯೊ ಮೆಯ್ಯೆರಡಿಲ್ಲೆನಿಪಪ್ಪುಗಳ್ಗ ತ ॥
ತ್ಪನ್ನಗಕನ್ಯೆಯಪ್ಪುಗ[7]ಳೆ ಮುಪ್ಪುರಿಗೂಡಿದುವೆಂಬ ಮಾತು ಮೆ ।
ಲ್ಪನ್ನಗಕನ್ಯೆಗ[8]ಳ್ಪುಗುಮಿವರ್ಕ್ಕೆವಜರ್ ನಿನಗಾರೊ ನಲ್ಲಳೇ ॥ 537

ಪಾದಾದಿಯಮಕಕ್ಕೆ ॥

ಕಂ ॥ ಉಪದಾತ್ತನುತೋನ್ನತಮಂ ।
ದ್ವಿಪಮದಪರಿಪೂರ್ಣ್ಣಗಿರಿಸರಿತ್ಸಂತತಿಯಂ ॥
ಉ[9]ಪದಾತ್ತನುತೋನ್ನತಮಂ ।
ತಪನಕರೋತ್ತಪಸತಪ್ತತಪನೋಪಲಮಂ ॥ 538

1 ನಯಗುಣವಿಕ್ರಮ. 2 ರಿವರುಂ. 3 ರದ. 4 ತಾ, ! ಮಂತಣ. 5 ಕೆಲರುಂ. 6 ಬಂಧದಾ.
7 ಗಳ. 8 ಪೆರ್ಚುಗು. 9 ದುಪ, ನುಪ,

ಮಧ್ಯಾಂತಯಮಕಕ್ಕೆ ॥

ಕಂ ॥ ನಾನಾಶಶಮೃಗಧ[1]ರಮಂ ।
ಸಾನುಜತರುಶಿಖರಲಗ್ನಶಶಮೃಗಧ[1]ರಮಂ ॥
ಪೀನಸರೋಜಾಲಯಮಂ ।
ಮಾನೇಚರಯುವತಿಜಿತಸರೋಜಾಲಯಮಂ ॥ 539

ಅಂತ್ಯಯಮಕಕ್ಕೆ ॥

ಶ್ಲೋ ॥ ಸಂದ ಸರ್ವ್ವಗ[2]ತಂ ಧರ್ಮ್ಮ ।
ನಂದನಾಧ್ವರತೋಷಿತಂ ॥
ನಿಂ[3]ದು ಯಾತ್ರೇಚ್ಛೆಯೊಳ್ ಧರ್ಮ್ಮ ।
ನಂದನಾಧ್ವರತೋಷಿತಂ ॥ 540

ಅವ್ಯಪೇತಕ್ಕೆ ॥

ವೃ ॥ ಸರಂ ಸರಂ ಕಂತುವ ಮನ್ಮಥಾಂಬುಜಾ ।
ಕರಂ ಕರಂ ನೋಡೆ ಮೊಗಂ ವಳಿತ್ರಯಾಂ ॥
ತರಂ ತರಂಗಂ ಸ್ಮರಸಿಂಧುಗಾಲತಾಂ ।
ಕುರಂ ಕುರಂಗಾಕ್ಷಿಯ ಕ[4]ಣ್ ಮನೋಜನಾ ॥ 541

ಕಂ ॥ ಸುರರಮಣೀರಮಣೀಯ ।
ಸ್ವರೂಪಮತಿತರಳತರಳವಿಲಸದ್ವಿದ್ಯುತ್ ॥
ಸ್ಫುರಿತಮೆನೆ ಪೋಲ್ತು ಕರಗಿದು ।
ದರಗಿದು ದಹನೋಪತಪ್ತಮೆನೆ ತತ್‌ಕ್ಷಣದೊಳ್ ॥ 542

ಶ್ಲೋ ॥ ನಿನ್ನವಾಕ್ಯಾರ್ತ್ಥಮೆಂಬೊಂದು ।
ರನ್ನಕಂ ಬೆಗಡಂಗಡಂ ॥
ತನ್ನುಕ್ತಿಯಾಗೆ ತದ್ವಿದ್ಯ[5] ।
ನನ್ನನಾದಂ ಬಲಂಬಲಂ ॥ 543

ವ್ಯಪೇತಾವ್ಯಪೇತಕ್ಕೆ ॥

ಕಂ ॥ ಸಬಳಿಕೆಯಿಂ ಪಾ[6]ಱಯನೊ ।
ಕ್ಕು ಬೇರನಂ[7]ತಾಕುಬೇರನಾಯಕನತಿವಿ ॥
ಕ್ಲಬಚಿತ್ತಂ ತೊಟ್ಟಗೆ ತಾ ।
ಗಿಬಾಗಿದಂ ತಾಗಿಬಾಗಿದಂ ನರನಡಿಯೊಳ್ ॥ 544

ವರ್ಣ್ಣಾವೃತ್ತಿಯಮಕಕ್ಕೆ ॥

ವೃ ॥ ಚಾರೂರೊರೂ[8] ಧ್ಧರೂರೂರುರುಭುಜಶಿಖರೋದ್ಭಾಸಮಾನಾವಲೋಕಂ ।
ಕ್ರೂರಾರಾರಾ[9]ತಿರಾ[10]ರಾಜಕಮುಪಡಿನುಡಿಯುತ್ತುಂ ಮುರಧ್ವಂಸಿಯೊಳ್ ಸ ॥
ದ್ಧಾರಾರಾರಾಜಿರಾರಾಜಿತಭುಜನೊಳವಷ್ಟಂಭದಿಂ ಚೆಲ್ವುಕೆಯ್ಮೆ ।
ಕ್ಕಾರಾರಾರಾಧ್ಯರಾರಾರವರವರವರ್ಗಂತೊಪ್ಪಿದಂ ನೀಲಕಂಠಂ ॥ 545

1 ಘರನುಂ. 2 ರತು. 3 ನಿಂದಯುದೃಕ್ರುಚ್ಛೆಯೊಳ್. 4 ಮೊಯ್. 5 ದ್ಯಾ. 6 ಕಾಳ. 7 ದಂತಾ.
8 ರುದ್ವರೋರೂ, 9 ರಾತ್ರಿ. 10 ರೇರೇಚಮುಪಡಿ, ವ್ಯಾಟಾನನಪಟು.

ಸೂತ್ರಂ ॥ 129 ॥

ಪರಿವೃತ್ತಂ ಸಂದಷ್ಟಂ।
ನಿರಂತರಾವಳಿ ಸಮುದ್ಗಮೆಂಬಿವು ಮೊದಲಾ ॥
ಗಿರೆ ಯಮಕಭೇದಮನಿತುಂ।
ಪರಿಭಾವಿಸೆ ತತ್ಪ್ರಪಂಚದೊಳ್ ಪೊಕ್ಕಿರ್ಕ್ಕುಂ ॥ 546

ಉದಾಹರಣೆ ॥

ಪರಿವೃತ್ತಕ್ಕೆ ॥

ವೃ ॥ ತಾರಾತಾರಾಮಳನಗುಳಿಕಾಹಾರನೀಹಾರನೀಕಾ।
ಕೋರುಸ್ಫೂರ್ಜತ್ಪ್ರವಿ[1]ತತಯಶೋರಂಜಿತಾಶೇಷಲೋಕಂ ॥
ಸಾರಾಸಾರಾದ್ಯನುಗತವಿಚಾರೋಚಿತಾತ್ಮೀಯಚಿತ್ತೋ।
ದಾರಪ್ರಜ್ಞಂ ನೆಗೞ್ದನವನೀಭಾಗದೊಳ್ ನಾಗವರ್ಮ್ಮಂ ॥ 547

ಸಂದಷ್ಟಕ್ಕೆ ॥

ವೃ ॥ ಓರೊರ್ವ್ವರ್ ನೆಣಸಿ ತಗುಳ್ದನೇಕವಾರಂ।
ವಾರಸ್ತ್ರೀಜನಮಿದಿರೊಳ್ ತುಳುಂಕೆ ನೀರಂ ॥
ನೀರಂಧ್ರಸ್ತನತಟದೊಳ್ ಕೃತೋಪಹಾರಂ।
ಹಾರಶ್ರೀಗೆಣೆಯೆನಿಸಿತ್ತು ವಾಷ್ಪಣೌಘಂ ॥ 548

ಆವಳಿಗೆ ॥

ಕಂ॥ ಶ್ರೀಯುಂ ಶ್ರೀಯುಂ ದ್ವಿ[2]ಷದವ।
ಸಾಯಕಸಾಯಕಪರಂಪರಂ ಲಲಿತಯುವ ॥
ತ್ಯಾಯತನತ್ಯಾಯತನಂ।
ಗೇಯೋದ್ಗಾಯತ್ಸಕಳಕಳಂ ಸಕಳಕಳಂ ॥ 549

ಸಮುದ್ಗಕ್ಕೆ ॥

ಶ್ಲೋ॥ ಹರಿದಾಂ[3]ತಂ ಬಲಂಬೆರ್ಚ್ಚೆ।
ಸುರಾಸುರಸಭಾಜನಂ ॥
ಹರಿದಾಂ[3]ತಂ ಬಲಂಬೆರ್ಚ್ಚೆ।
ಸುರಾಸುರಸಭಾಜನಂ ॥ 550

ಸೂತ್ರಂ ॥ 130 ॥

ಬವಕಾರಂಗಳ್ ಪಹವ।
ರ್ಣ್ಣವೆರಡುಮವಿಭೇದದಿಂದೆ ಸಲ್ಗುಂ ಸಂಯೋ ॥
ಗವಿಶಿಷ್ಟಮುಂ ಸ್ವ[4]ರೂಪಮು।
ಮವಿಕಲ್ಪದೊಳೊಂದಿ ನೆ[5]ಗಱ್ಗುಮವು ದುಷ್ಕರದೊಳ್ ॥ 551

1 ಕಲಿತ, 2 ದ್ವಿಷದವ. 3 ದಾಂತಬಲಂ. 4 ಸ್ವರೂಪಸ್ವವಿಕಲ್ಪ. 5 ನೆಗೞ್ದಿವವು.

* ಲಕ್ಷ್ಯಂ ॥

ಕಂ ॥ ನವಲ[1]ಕ್ಕಂ ಕಟಕದೊಳ್ ।
ನ್ನವಲ[1]ಕ್ಕಂ ನಿ[2]ಜವೆ ಪಿ[3]ರಿದು ವಿಬುಧನಿಕಾಯ ॥
ಕ್ಕ[4]ವಳಂಬನವುಪ್ಪ . ।
ಕ್ಕವಳಂ ಬಚನೈಕಸಾರವೆಂಬೀ ನುಡಿಯಂ ॥ 552

ಪಿಂಗಿದ.ದಿಲ್ಲಿನ್ನುಂ ಮನ ।
ದಿಂ ಗೋವರ ಗಡಣದೊಳ್ ದನಂಗಾಹಿತನಂ ॥
ನೀಂಗಳದೆತ್ತಱಿವಿರ್ ಬ ।
ರ್ಮ್ಮಾಂಗಂ ಬಗೆದಱಿವುದರಿದನಂಗಾಹಿತನಂ ॥ 553

ಆ ಗಿರಿಯ ನಿತಂಬಂ ಶೋ ।
ಭಾಗುಣಮಂ ತಳೆದುದಪ್ಸರಃಕುಲಲಲಿತಂ ॥
ಮೇಗಣ ಶಿಖರಾಗ್ರಮು[5]ಮಿಂ ।
ಬಾಗಿ ಮನಕ್ಕೆ ಸೆವುದಪ್ಸರಃಕುಲಲಲಿತಂ ॥ 554

ಸೂತ್ರಂ ॥ 131 ॥

ಸದೃಶಾಕ್ಷರವಿನ್ಯಾಸಂ ।
ಪದದೊಳ್ ಪಾದಂಗಳೊಳ್ ಪೊದಱ್ದಿಸೆದಿರೆ ಪೇ ॥
ೞ್ವದನುಪ್ರಾಸಂ ನಿಯಮದಿ ।
ನದನಾದ್ಯಂತಂ ವಿಭಾಷೆಯಿಂ ವಿರಚಿಸುವರ್ ॥ 555

ಪ್ರಯೋಗಂ ॥

ಕಂ ॥ ಚಚ್ಚ್ರಲ್ ಶಶಿಶಿಶುವಂ ಕಱಿ ।
ಗಚ್ಚ್ರಲ್ ಘನಘಟೆಯನುಚ್ಚ್ರಲವೆರದ್ರುಮಮಂ ॥
ಸಾಚ್ಚ್ರಲಿನನೆಂಬ ಸೊಡರನೊ ।
ಡಚ್ಚ್ರದುವೆನೆ ನೀಳ್ದುವಿ[6]ದಱ ಶಿಖರಕರಂಗಳ್ ॥ 556

ವೃ ॥ ಸೋಡಂಬಾಡಂ ಕರಿಯ ಮುಗಿಲಂ ದಂತಿಗಳ್ಗೆತ್ತು ಮಿಂಚಂ ।
ನೋಡಲ್ ನೀಡುಂ ಪೊಳೆವ ನಿಶಿತಾಸ್ತ್ರಾಳಿಗೆತ್ತೆತ್ತಮೆ[7]ತ್ತಂ ॥
ಕಾಡುಂ ಕೋಡುಂ ಹಯಮಯಮೆಗೆತ್ತುದ್ಘಗೇ[8]ಹಂಗಳೊಳ್ ಸಂ ।
ವ್ರೀಡಾಪೀಡಂ ವಿರಹಿಜನಮಂದಳ್ಕಿ ಬೆಳ್ಕುತ್ತುದೆತ್ತಂ ॥ 557

ಕೆಳರೆ ವಿರಹಿವೃಂದಂ ಪುಷ್ಪಿತಾಶೋಕದಿಂದಂ ।
ತ[9]ಳರೆ ಕುಸುಮಜಾಳಂ ಬಾಳಚೂತಪ್ರವಾಳಂ ॥
ಪೊಳೆಯೆ ಪುೞಿಲ ತಣ್ಪಂ ನೊಳ್ದಿ ತೞ್ಕೈಸಿ ಬಿಣ್ಪಂ ।
ಬಳೆಯೆ ಮದನದಾಹಂ ಬೀಸುಗುಂ ಗಂಧವಾಹಂ ॥ 558

---

* ಲಕ್ಷ್ಯಂ ಎಂಬುದಕ್ಕೆ ಹಿಂದೆ 'ಈ ಕಾರಾರ್ತ್ಥವ್ಯಾವೃತ್ತಿಗ್ರಹಣಮದರ್ಕ್ಕೆಂ' ಎಂದೂ 'ಈ ಕಾರಿಕಾರ್ತ್ಥತ್ವವ್ಯಾವೃತ್ತಿಗ್ರಹಣಮದರ್ಕ್ಕೆ' ಎಂದೂ ಪ್ರತಿಗಳಲ್ಲಿ ಇದೆ. 1 ಲಕ್ಷ್ಯಂ. 2 ಜನಮೆ. 3 ಹರಿದು. 4 ಕ್ಕವಳಮ್ಯಮನಕ್ಕೆ ವಳಂಬವೞ, ಕ್ಕವಳಂಬನಮುಪ್ಪದರಿತ್ತವಳಂವೞ. 5 ಮನಿಂ. 6 ವದಱಿ. 7 ಲಿತ್ತಂ. 8 ವಾಹಂಗಳಂ. 9 ಳಳಲಿ.

ವೃ॥ ಖಗತ[1]ತಿ ಸಾರೆ ಶಾ[2]ಕಿನಿಯರಾರೆ ನಿಶಾಚರಕೋಟಿ ಪಾರೆ ಬ।
ಳ್ಳುಗಳೆಡೆಯಾಡೆ ಭೂತಗಣಮಾಡೆ ಮರುಳ್ವಡೆ ಪಾಡೆ ಸಾಹಸಂ॥
ನೆಗಳ್ದ ಮುಕುಂದನಸ್ತ್ರರಿಪುವೃಂದನ[3]ಗುರ್ವ್ವಿಸೆ ಕೊಂದನಾಜಿಗ।
ೞ್ತಗನೆನೆ ಚಕ್ರವರ್ತ್ತಿಯನಸಿಂದಿತಕೀರ್ತ್ತಿಯನಿಂದ್ರಮೂರ್ತ್ತಿಯಂ॥ 559

ಸೂತ್ರಂ॥ 132॥

ಬೆರಸಿರೆ ಶ[4]ಷಸಹವರ್ಣ್ಣಂ।
ಸರೇಫಸಂಯೋಗಮೊಂದಿ ಕೂಡಿದ[5] ವರ್ಗ್ಗ॥
ಕ್ಷರಮಲ್ಲಿಗಲ್ಲಿಗೆಡೆಗೊಂ।
ಡಿರೆ ಪ[6]ರುಷಾನಾಮವೃತ್ತಿಂ ವರ್ತ್ತಿಕುಮದಱೊಳ್॥ 560

ಲಕ್ಷ್ಯಂ॥

ಕಂ॥ ಶಿಖಿಬರ್ಹಂ ಸರ್ಷಪಮಾ।
ಜಖುರಂ ರಾಮತಮಹೀಂದ್ರನಿರ್ಮ್ಮೋಕಂ ಶ್ವೇ॥
ತಖರಾಂಗಲೋಮಮಿವು ದು।
ರ್ಮ್ಮಖದುಷ್ಟಗ್ರಹವಿನಾಶ[7]ನಂ ಕಟುಧೂಪಂ॥ 561

ಸೂತ್ರಂ॥ 133॥

ತಂತೆಮ್ಮ ವರ್ಗ್ಗದಂತ್ಯದೊ।
ಳಂತಾವರ್ಗ್ಗಂಗಳಮಳ್ಗಳಾಗಿರೆ ಮೇಣ॥
ತ್ಯಂತ[8]ಸ್ವರೂಪಸಂಯೋ।
ಗಾಂತರಮನುದೋರ್ದವೆ ಮಧುರೆಯೆಂಬುದ[9]ದಕ್ಕುಂ॥ 562

ಉದಾಹರಣೆ॥

ಕಂ॥ ಬಸಗೆಮರುಳ್ಗೊಂಡಾಡುವ।
ವಸುಧಾಧಿಪನಂತಪುರದ ಕಾಂತೆಯರ ಸಮು॥
ಲ್ಲಸಿತಪದಕಮಲದೊಳ್ ರಂ।
ಜಿಸಿದು[10]ದು ಸಿಂಜಾನಮಂಜುಮಂಜೀರರವಂ॥ 563

ಉಪನಾಗರಿಕೆಯೆಂದೊಡಮಿದುವೆ॥

ಸೂತ್ರಂ॥ 134॥

ಅವಿಶೇಷವರ್ಣ್ಣರಚನಾ।
ವಿವಿಕ್ತಗತಿ ಮುಕ್ತಭೂರಿಸಂಯೋಗಂ ಸೌ॥
ಷ್ಠವಗುಣಸಮನ್ವಿತಂ ಲಲಿ।
ತವೃತ್ತಿಯಿಂ ಲ[11]ಲಿತೆಯೆಂಬ ವೃತ್ತಿಯುದಕ್ಕುಂ॥ 564

1 ರುತಿ. 2 ಡಾಕಿನಿ. 3 ಮಗುರ್ವಿಸೆ. 4 ಶಷವರ್ಣ್ಣಂಗಳ್. 5 ಯುವರ್ಗ್ಗ. 6 ಪುರುಷಾ. 7 ಕಕಂ. 8 ತುಸರೇಫ. 9 ದುಮಕ್ಕುಂ. 10 ದುದೊ. 11 ಲಲಿತವೃತ್ತಿಯೆಂಬುದದಕ್ಕುಂ.

ಪ್ರಯೋಗಂ ||

ಕಂ || ಮದನನೃಪಾದೇಶದಿನ |
ಲ್ಲದೆ ಬಿರಯಿಗಳಂತೆ ಪೋ ಪುಗಲ್ ಪುಗಲೆಂಬಂ ||
ತೊದವಿದುದು ಬನದೊಳೆತ್ತಂ |
ಮದಕಳಕಳಕಂಠಕಳಕಳಪ್ರಧ್ವಾನಂ || 565

ಗ್ರಾಮ್ಯೆಯೆಂಬುದುಮಿದುವೆ ||

ಸೂತ್ರಂ || 135 ||

ಸ್ಥಾ[1]ನಂ ಕ್ರಿಯೆಯೆಂಬಿವಱೊಳ |
ನೂನಸಮಾನಾಕ್ಷರಾದಿಪದಸಾನ್ನಿಧ್ಯಂ ||
ತಾನಕ್ಕುಂ ಮಾಧುರ್ಯ್ಯ |
ಧೀನಮನುಪ್ರಾಸಮೆಂದು ಪೇೞ್ವರ್ ಕೆಲಬರ್ || 566

ಲಕ್ಷ್ಯಂ ||

ಕಂ || ಎಳಲತೆಯ ಜೊಂಪದೊ[2]ಳ್ ತ |
ಳ್ತಿಳಸಿ ತಗುಳ್ದಿರ್ಪ್ಪ ವಿರಹಕಾತರದಿಂ ಕ ||
ಣ್ಗೊಳಿಸುಗುಮಾಪುರವರಮಂ |
ಬಳಸಿದ ನಂದನವನಂಗಳೆನಿತೊಳವನಿತುಂ || 567

ಸೂತ್ರಂ || 136 ||

ಏನಾನುಮನೊಂದಂ ಸಂ |
ಸ್ಥಾನದಿನನುಕರಿಸುವಂತು ಭಂಗ್ಯಂತರದಿಂ ||
ಪೀನಮೊಡಂಬಡೆ ವಿರಚಿಸೆ |
ನಾನಾವಿಚ್ಛಿತ್ತಿ ಚಿತ್ರಮೆನಿಕುಂ ಪೆಸರಿಂ || 568

ಸೂತ್ರಂ || 137 ||

* ಶರಶೂಲಚಾಪಚಕ್ರಾ |
ಸಿರೂಪಮಿಭರಥತುರಂಗಪದಗತಪಾಠಂ ||
ಮುರಜಂ ಗೋಮೂತ್ರಿಕೆ ಪು |
ಷ್ಕರಮರ್ದ್ಧಭ್ರಮಣಸರ್ವ್ವತೋಭದ್ರಂಗಳ್ || 569

1 ಸ್ಥಾನಕ್ರಿಯೆ. 2 ದೊಳಗು | ಳ್ಳಿಳಸಿ. * ಈ ಬಂಧಗಳಿಗೆ ಉದಾಹರಣವಾಗಿ ಕೊಟ್ಟಿರುವ ಪದ್ಯಗಳಲ್ಲಿ ಹಲವು ನಮಗೆ ದೊರೆತಿರುವ ನ್ಯಾಸಗಳಿಗೆ ಹೊಂದಿಕೆಯಾಗಿಲ್ಲ. ನ್ಯಾಸಗಳಲ್ಲಿಯೂ ಮತಭೇದವಿರಬಹುದೆಂದು ತೋರುತ್ತದೆ.

ಸೂತ್ರಂ ॥ 138 ॥

ಅಕ್ಷರಬಿಂದುಚ್ಯುತಕಂ[1]।
ದ್ವ್ಯಕ್ಷರಿಯೇಕಾಕ್ಷರಂ ನಿರೋಷ್ಠ್ಯಮತಾಲ ॥
ವ್ಯಾಕ್ಷರಮೆನೆ ನಿಜನಾಮ ।
ಸದೃಕ್ಷಂ ಲಕ್ಷಣಮುದಾಗೆ ನೆಗೞ್ಗುಂ ಪಲವುಂ ॥ 570

ಅವರ್ಕ್ಕನುಕ್ರಮಃಪ್ರಯೋಗಂ ॥

ಶರಂ ॥

ಶ್ಲೋ॥ ಸುಂದರಾಕಾರಸಂಪನ್ನ ।
ನೆಂದುಮೀನೃಪನಂದನಂ ॥
ನಂದನಂ ಬುಧಕೀರಾಳಿ ।
ವೃಂದಕ್ಕೆ ಸಕಲತುರ್ತ್ತಕಂ ॥ 571

ಶೂಲಂ ॥

ಶ್ಲೋ॥ ವೀರಶ್ರೀಕಾಂತೆಯುಂ ತಾ[2]ಳೆ ।
ಚರಾಚರಜನಸ್ತುತಾ ॥
ತಾರತಾತಾರತಾರೇಶ ।
ಶ[3]ರೇತಾರಾಜಿತಾಜಿರಾ ॥ 572

ಚಾಪಂ ॥

ಕಂ ॥ ಸಂಸಾರವಿಷಮವಾರಿಧಿ ।
ಸಂಸರ್ಪ್ಪಣದುಃಖವೀಚಿಯೊ[ಂದು]ಲ್ಲಾಸಂ ॥
ಸಂಸಕ್ತಮಾಗದಂತು ಜಿ ।
ನಂ ಸುವ್ರತನಾ[4]ಮನೆಮಗೆ ಕರುಣಿಸುಗಿ[5]ನಿಸಂ ॥ 573

ಚಕ್ರಂ ॥

ಶ್ಲೋ॥ ತನ್ನಸಂತತಿ ಮುನ್ನೀತಂ ।
ತ[6]ನ್ನೀತಂ ಮುನಿಸನ್ನುತಂ ॥
ತನ್ನನುಕಿರ್ನ್ನೊಳಿನ್ನ್ಮಾತಂ ।
ತನ್ನೊಳಿಂದಿನಿಸ[7]ನ್ನತಂ ॥ 574

ಖಡ್ಗಂ ॥

ಶ್ಲೋ॥ ಕಂಸಾಸುರಹರಂ ದೈತ್ಯ ।
ಧ್ವಂಸಿ ಬಾಣಮದಾಪಹಂ ॥
ಹಂಸಾಸನಸಮಾರಬ್ಧ ।
ಶಂಸನಂ ನರಕಾಂತಕಂ ॥ 575

---

1 ಸಂ । ಧ್ಯಕ್ಷರನೇಕಾಕ್ಷರಂ. 2 ನಾಳೆ. 3 ಶರೀರಾಜಿತರಾಜಿತಾ, ಶರತಾರಾಜರಾಜಿತಾ. 4 ನಾಥ. 5 ಗೆಸಸುಂ, 6 ಮುನ್ನೀಶಂ, 7 ಸನ್ನುತಂ.

ಶ್ಲೋ॥ ಕಂಜನಾಭಂ ಸುರದ್ರೋ[1]ಹಿ ।
ಭಂಜನಂ ಲೋಕಪಾಲಕಂ ॥
ಕಂಜಾಕ್ಷಂ ಕಂಟಕಾಕಂಪಂ ।
ಮುಂಜಕೇಶಿ ಧರಾಧರಂ ॥ 576

ಗಜರಥತುರಂಗಪದಗತಪಾಠಂಗಳ್ಗಂ ಲಕ್ಷ್ಯಮಂ ನೋಡಿಕೊಳ್ವುದು ॥

ಮುರಜಂ॥

ಶ್ಲೋ॥ ಅಜಾತಶಂಖಂ ತಾನಾಪ್ತ ।
ನಜಂಗಮನಸೂಯನಂ ॥
ಗಜಾಂಕುಶಂ ಗತಾಪ್ರಾಪ್ತ ।
ವಿಜಯಂ ಮಧುಸೂದನಂ ॥ 577

ಮುರಜಂ ಅರ್ಧಪ್ರಸ್ತಾರದಿಂ ಗೋಮೂತ್ರಿಕೆಯಕ್ಕುಂ॥

ಗೋಮೂತ್ರಿಕೆ ॥

ಕಂ॥ ಉರುತರಸಿತಕೀರ್ತಿಗುಣಾ ।
ಕರಂ ಪದಾನತವಿರೋಧಿವರ್ಗಂ ನೆಗಳ್ದಂ॥
ಸುರುಚಿರನುತಮೂರ್ತಿ ಘೃಣಾ ।
ಪರಂ ಸದಾಹಿತಕರೋಕ್ತಿ ದುರ್ಗಂ ಜಗದೊಳ್ ॥ 578

ಪದ್ಮಂ॥

ಶ್ಲೋ॥ ಮಂ[2]ದರಾಗಂ ಗುಣೋದ್ದಾಮಂ ।
ವಂದಿತಂ ಸ[3]ದಯಾದಮಂ ॥
ಮಂದರಾದ್ರಿನಿಭಂ ಭೀಮಂ ।
ಮಂ[4]ದಿಯೊಳ್ ಪೇೞ್ಗುಮಾಱುಮಂ ॥ 579

ಅರ್ಧಭ್ರಮಣಂ॥

ಶ್ಲೋ॥ ಶ್ರೀರಾಮಾಧಾಮನಾಮಂ ತಾ[5] ।
ರಾರಾರಾಃಸಮಾಸಮಂ ॥
ಮಾರಾರಿ ನಿನ್ನೊಳ್ ಸಮಾನಾ ।
ಧಾರಾ ನಿ[6]ನ್ನೂತನೊಳ್ ಸಮಂ ॥ 580

* ಸರ್ವತೋಭದ್ರಕಂ ಲಕ್ಷ್ಯಮನಱಿದುಕೊಳ್ವುದು ॥

---

1 ದ್ರೋಹ. 2 ಮಂದಾರಾಗಂ, ಮಂದಾರಾಂಗಂ, ಮಂದಾರಗಂ. 3 ಸ್ಕಂದಯಾರಮಂ, ಸ್ಕಂದಯಾಪರಂ, ಸಂದರಾದಮಂ. 4 ಮಂದೆ. 5 ತಾಂ. 6 ನಿನ್ನೋತ. * ಇದಕ್ಕೆ ಹಿಂದೆ—ಕುಸುಮಮನೋಹರಂ । ಕುಸುಮಮನೋಹರಂ । ಕುಸುಮಮನೋಹರಂ । ಕುಸುಮಮನೋಹರಂ ॥—ಎಂದು ಎರಡು ಪ್ರತಿಗಳಲ್ಲಿ ಬರೆದಿದೆ.

ಅಕ್ಷರಚ್ಯುತಕಂ ॥

ಕಂ ॥ ಕುಲಜನಭಿಮಾನಿ ತಕ್ಕಂ ।
ಚಲಮುೞಿವಂ ನೆಗೞನಾತನಿಂತಿದನೆಂತುಂ ॥
ಜಲಜಾಯತಾಕ್ಷಿ ಕೆಲನುಂ ।
ನೆಲನುಂ ನಗುವಂತು ಪೊ[1]ಲ್ಲಕೆಯ್ಯುಮೆ ಚೋರಂ ॥ 581

ಬಿಂದುಚ್ಯುತಕಂ ॥

ಶ್ಲೋ ॥ ಇಂದು ನೋಡಿದು ಬೇಱಿಂದ ।
ಮೆಂದಿನಂದಮುದಲ್ತಣಂ ॥
ಮಂದಮಂದಂ ಕರಸ್ಪರ್ಶಂ ।
ತಂದಪ್ಪುದುಪತಾಪಮಂ ॥ 582

ದ್ವ್ಯಕ್ಷರಿ ॥

ಶ್ಲೋ ॥ ನಿಂದಾನಂದದದೊಂದೂನಂ ।
ನಿಂದಂದೇನಿಂದಿನಂದದಿಂ ॥
ನಂದನಂದನ ನಿನ್ನಿಂದಂ ।
ನಂ[2]ದನುಂ ದನುನಂದನಂ ॥ 583

ಏಕಾಕ್ಷರಂ ॥

ಶ್ಲೋ ॥ ನಿನ್ನಿನೇನಿನ್ನನಾನನ್ನ ।
ನಿನ್ನನೆನ್ನನನೂನನಂ ॥
ನುನ್ನನ್ನೈನನ್ನನ್ನೈನೇನೇ ।
ನೆ[3]ನ್ನಿನ್ನಂನಿನ್ನೆನಾನುನಂ ॥ 584

*ನಿರೋಷ್ಠ್ಯಂ ॥

ಕಂ ॥ ನೆಗೞ್ದಿರೆ ಯು[4]ತಿಸ್ಥಿತಿ ಚಿತ್ತದಿ ।
ನಗಲೆ ಕರಂ ನಿಜದೆ ತನ್ನ ತ[5]ರಳತೆ ಕೆಲದಿಂ ॥
ದಗಲದೆ ನಾಳೀಜಂಘಂ ।
ನಗಿಸಿತ್ತಾನಗದ ನಗದ ಋಷಿಸಂ[6]ಹತಿಯಂ ॥ 585

ಅತಾಲವ್ಯಂ ॥

ಶ್ಲೋ ॥ ರೂಪುಂ ಸೊಬಗುಮುಣ್ಮುಂ ನಾ ।
ಣ್ಣುಮಾಪ್ಪುಂ ಪ್ರಭುತ್ವಮುಂ ॥
[7]ಕೋಪಮುಂ ಮಾಱ್ಪುದುಂ ತನ್ನೊಳ್ ।
ಭೂಪಂ ತಾಂ ಕೊಲ್ಗುಮಾತನಂ ॥ 586

---

1 ಪೊೞ್ಗೆಯುೞ್ಗೆ ಚೋರಂ. 2 ನಂದನಂ, ನ ದನೆಂ. 3 ನೇನಿನ್ನಂ. *ಇದಕ್ಕೆ ಹಿಂದೆ ಒಂದುಪ್ರತಿಯಲ್ಲಿ ಮಾತ್ರ) " ನೀನಾನುನಿನ್ನನಾನೆಂ । ನಾನಿಂನನ್ನಿನ್ನ ನಿನ್ನನಾನಾನೂನುಂ ॥ ನೂನಂನನ್ನೆನನೋನ್ನೈ । ನೀನೇನ್ನೈನಾನುನೀನೂನೀನೇನೋನ್ನೈ " ಎಂಬ ಕಂದಪದ್ಯವು ದೊರೆಯುತ್ತದೆ. 4 ಯುತಿ 5 ಸರಳತೆ. 6 ಸಂತತಿ. 7 ಕೋಪಮುಂ ಮಾಱ್ಪುದುಂ.

ಸೂತ್ರಂ ॥ 139 ॥

ಚ್ಯುತದತ್ತಾಕ್ಷರಮುಂ ಗೋ ।
ಪಿತಕ್ರಿಯಾಕಾರಕಂ ನಿಗೂಢಚತುರ್ಥಂ ॥
ಪ್ರತಿನಿಯತಗತಪ್ರತ್ಯಾ ।
ಗತಂ ದಲೆಂದಿಂತು ಪೆಱವುಮಕ್ಕುಂ ಚಿತ್ರಂ ॥ 587

ಪ್ರಯೋಗಂ ॥

ಚ್ಯುತದತ್ತಾಕ್ಷರಂ ॥

ಶ್ಲೋ ॥ ಸೀತಾರಾಮಸಮೀಪಸ್ಥಂ ।
ಧೌತೀ[1]ಲಸಿತಪ್ರಭಂ ॥
ವೀತತ್ರಾಸಂ ಮನಂಗೊಳ್ಗುಂ ।
ಪ್ರೀತಿಯಿಂದೊಂದಿ ಲ[2]ಕ್ಷ್ಮಣಂ ॥ 588

ಕ್ರಿಯಾಕಾರಕಗೋಪಂಗಳ್ ॥

ಕಂ ॥ ಪರಿವರ್ಜಿತದೋಷನನಾ ।
ದರದಿಂ ದೇವಾದಿದೇವನೆಂದಿ[3]ರದರೆಬರ್ ॥
ದುರಘಾವಿಲಿಪ್ತರಂ ದೇ ।
ವರೆಂದು ಬಗೆ ಪೆದಱೆ ದೆಸೆಗೆ ದಿಙ್ಮೂಢತೆಯಿಂ ॥ 589

ಶ್ಲೋ ॥ ಏನನೇನಂ ಮಹಾಘೋರಂ ।
ನಾನಾಜನ್ಮಾಂತರಂಗಳೊಳ್ ॥
ತಾನಾಗಿನದು ಸಂಸಾರಿ ।
ಗಾನಿರ್ವಾಣಪದಂಬರಂ ॥ 590

ಗೂಢಚತುರ್ಥಂ ॥

ಶ್ಲೋ ॥ ಆತನಲ್ಲದನಂ ಮೆಚ್ಚೆಂ ।
ಮಾತೇಂ ತಾಂ ಮಾರನಾದೊಡಂ ॥
ಕೇತನಂ ರತಿರಾಗಕ್ಕೆ ।
ಕೇತನಂ ತಾರ ನಲ್ಲನಂ ॥ 591

ಗತಪ್ರತ್ಯಾಗತಂ ॥

ಶ್ಲೋ ॥ *ತಾರವೀವೀರತಾಸಾರ ।
ನೀರಸಾಕಾರನಾರಕಾ ॥
ತಾರನಾಸಾರತಾಕಾರ ।
ಕಾರತಾತಾರಕಾ ·· ॥ 592

---

1 ಶೀಲಂ ಶಿತ, 2 ಲಕ್ಷ್ಮಣಂ, 3 ದಿಂದರೆಬರ್, * ಈ ಶ್ಲೋಕದಲ್ಲಿ ತಪ್ಪು ಬಿದ್ದಿರುವಹಾಗೆ ತೋರುತ್ತದೆ.

ಸೂತ್ರಂ ‖ 140 ‖

ಸುಕವಿಪ್ರಕರಕ್ಕೆ ವಿನೋ।
ದಕೇಳಿಗುಪಯೋಗಹೇತುಗಳ್ ಪ್ರಚ್ಛನ್ನ ‖
ಪ್ರಕಟಾರ್ಥಂಗಳನೇಕ।
ಪ್ರಕಾರದಿಂದೊಂದಿ ವರ್ತಿಕುಂ ಪೇಳಿಕೆಗಳ್ ‖ 593

ಸೂತ್ರಂ ‖ 141 ‖

ನುಸುಳೊನ್ನಡಿ ಭಾ[1]ವೆ ಮನ।
ಕ್ಕೆಸೆವಸ್ಪಷ್ಟಾರ್ಥವುಮಿವು ನಾಮಾಂತರಿತಂ ‖
ಕು[2]ಸುರಿಯು ನುಡಿಯೆಂಬಿವು ಭಾ।
ವಿಸೆ ಪೇಳಿಕೆಗಳೊಳ್ ಪೇಳ್ವ ಭೇದಮನಕ್ಕುಂ ‖ 594

ಲಕ್ಷ್ಯಂ ‖

ನುಸುಳ್ಗೆ ‖

ಕಂ ‖ ತಿರಿವುದು ಶೃಕಂಗೊಳ್ಳದು।
ಮೊರೆವುದು ಮಱಿದುಂಬಿಯಲ್ತು ಕ[3]ತ್ತರಿಗಾಳಂ ‖
ಬೆ[4]ರಸಿ ತ[5]ನುಗೊಂದಿ ದೊರೆಕೊಂ।
ಡಿರೆಯುಂ ಕೆಸಱಿಂಕಮಲ್ಲಿದಾವುದೊ ಪೇೞಿಂ ‖ 595

ಒನ್ನಡಿಗೆ ‖

ಕಂ ‖ ಒಂ[6]ದು ಗಱಿಗೆಯೊಳ್ ಸಂಪುಟ ‖
ದಂದದೆ ಮಡಿದಿರ್ಪ್ಪರಹಿತರೆರೆದ ನರಕ್ಕೋರ್ ‖
ಡೊಂದಱೊಳ್ ಮೆಱೆದು ಗಣಪತಿ।
ಯುಂದದಿನೊಸೆದಿರ್ಪ್ಪರಿದಿರ್ಗೆ ವಂ[7]ದಿಂದರನಾ ‖ 596

ಭಾವೆಗೆ ‖

ಶ್ಲೋ ‖ ಈನವೀನಸ[8]ತಾಂಭೋಜಾ।
ನೂನಪೀತಾವತಂಸಕಂ ‖
ತಾನದೇವುದೊ ಕ[9]ಣ್ಣಾರ್ಂತ।
ವ್ಯಾನತಾಯುತಲೋಚನೇ ‖ 597

ಅಸ್ಪಷ್ಟಾರ್ಥಕ್ಕೆ ‖

ವೃ ‖ ದಂಡಿತಾರಾತಿಭೂಭೃ।
ತ್ಕಾಂಡಂ ಮೆಚ್ಚಿದಂ ಕ[10]ರಂ ‖
ಗಾಂಡೀವಧ[11]ನ್ವಂ ಮುಂದೆ।
ಕಂಡಂ ಭಯಾಕರವಂ ‖ 598

1 ಭಾವೈಮನ. 2 ಕುಸುರೆ. 3 ಕತ್ತರಿಘಾಯಂ. 4 ಬೆರಸು. 5 ತನಗೊಂದಿ, ತಮಗೊಂದಿ. 6 ಒಂದೆ. 7 ನಂದಿಂದಿರನೊಳ್. 8 ರಸಾಂಭೋಜಾ. 9 ಕಣ್ಣಾರ್ಸ। ದ್ಯಾನತಾ. 10 ನರಂ. 11 ಧನ್ವನಂ, ಧನ್ವಂತ, ಧನ್ವತಂ, ಧನ್ವಂತಾ.

ಉಱುವಿಂಗೆ ॥

ಕಂ ॥ ಉಮೆಗೆ ಮಹೀಜೆಗೆ ಸು[1]ಮನೋ ।
ರಮಣಿ[ರ್ಮಣಿ] ನಚ್ಚಿನಾತಿಳೋತ್ತಮೆಗೊಲ್ವಂ ॥
ಸಮನೆನಿಸುವ ಮಂದಾಕಿನಿ ।
ಯಮುನಾನದಿಸಿಂಧುಸಂಕರಂ ಕಣ್ಗೆಸೆಗುಂ ॥ 599

ನಾಮಾಂತರಿತಕ್ಕೆ ॥

ಕಂ ॥ ಮೊದಲೊಳೆ ವಿಕಾರಿ ನಾಕಾ ।
ರದರ್ಶನೀಯಂ ವಿರಾಮದೊಳ್ ಸಾಯಕಮಂ ॥
ತದು ತಾಂ ವಿನಿಂದ್ಯಮಲ್ತಾ ।
ದಿದೇವಪುತ್ರಂ ಸದಾನವಾರಿಪ್ರಮುಖಂ ॥ 600

ಕು[2]ಸುರಿ ಮೊದಲಾದ ಪ್ರಶ್ನೋತ್ತರಪ್ರಕಾರಂಗಳ್ಗಮಿಲ್ಲಿ ಪ್ರಯೋಗಮಂ ಕಂಡುಕೊಳ್ವುದು॥

ಸೂತ್ರಂ ॥ 142 ॥

ನು[3]ಡಿದುದದೆ ಪದವಿ[4]ಭಂಗತೆ ।
ಗೊಡಂಬಡಂ ಪಡೆಯೆ ಮಗುೞ್ದುಮರ್ತ್ಥಾಂತರದೊಳ್ ॥
ತೊಡರ್ದುರ್ಕೆ ನಿಲೆ ನುಡಿವ ನುಡಿ ಜೆ।
ಲ್ವೊಡರಿಪ ವಕ್ರೋಕ್ತಿ ನಿಯತಕಾಕುಶ್ಲೇಷಂ ॥ 601

ಪ್ರಯೋಗಂ ॥

ಕಂ ॥ ಮು[5]ತ್ತಯ್ಯ ಚದುರಿದೇನೆನೆ ।
ಮುತ್ತಲ್ಲದುದುಂಟೆ ವಸ್ತು ಪೆಱತೆನೆ ಸತಿ ನೀ[6] ॥
ಮಿತ್ತಿರಿಮೆನೆ ಕರಮೊಳ್ಳಿ ।
ತ್ತಿತ್ತಾಗಡೆ ನಿಮ್ಮೊಳಿರ್ಪ್ಪವೆನೆ ವೃದ್ಧವಿಟಂ ॥ 602

ಮುನ್ನಿನ ಕಡನಂ ನೀಂ ಕುಡು ।
ಮುನ್ನಿಲ್ಲದ ಕಡನನೆಂತು ಪಿಡಿಯೆಂದೀವೆಂ ॥
ನಿ[7]ನ್ನಿಪಿಡಿಯೆನೆ ಕುಡುಕಡ ।
ನೆನ್ನಂ ಪಿಡಿಯುಳ್ಳೊಡಾನೆಯಿಾಯೆನೆ ಕೆನ್ನಂ ॥ 603

ಕಾಕುವಕ್ರೋಕ್ತಿಗೆ॥

ಕಂ ॥ ದಾರುಣಮಂ ಶರಶಲ್ಯಮ ।
ನೋರಂತಿರೆ ಪುಣ್ಣೊಳು[8]ಡಿದು ಬಿಡದುಳ್ಕುವು[9]ದಂ॥
ಸ್ಯೆರಿಸುವರುಮೊಳರೆ ಕೆಲರ್ ।
ಸೈರಿಸುವರುಮೊಳರೆ ಖಳರ ಕಟುಕೋಕ್ತಿಗಳಂ ॥ 604

ಇದು ಗುಣವಿವೇಕದೊಳ್ ಶಬ್ದಾಲಂಕಾರನಿರ್ಣ್ಣಯಪ್ರಕರಣಂ
ದ್ವಿತೀಯಂ.

---

1 ಮಣಿಯೆಗೆ । ರಮಣಿನಚ್ಚಿನಾ. 2 ಹೆಚ್ಚ್ಕಂ ॥ ಕುಸುರಿ. 3 ನುಡಿದುದೆನೆ, ನುಡಿದುದನೆ. 4 ಪಿಭಂಗದಿ।ನೊಡಂಬಡಂ.
5 ಮುತ್ತ್ಯ್ಕದೇವುದು ಚದುರೆಗೆ. 6 ಕೂ ॥ ತ್ತಿರ್ತಿರಿಯೆನೆ. 7 ನಿನಿಂಪಡಿ. 8 ಳಿಡಿದು. 9 ವುದುಂ.

ಅರ್ತ್ಥಾಲಂಕಾರಪ್ರಕರಣಂ.

ಸೂತ್ರಂ ॥ 143 ॥

ಪ್ರವರಾರ್ತ್ಥಾಲಂಕಾರಂ ।
ಅರ್ತ್ಥಾಲಂಕಾರ ವಿವಿಧವಿಕಲ್ಪಪ್ರಪಂಚಿತಂ ಕ್ರಮದಿಂ ವಾ ॥
ಭಾಗಂಗಳ್. ಸ್ತವಮುಪಮೆಯತಿಶಯಂ ಶ್ಲೇ[1] ।
ಷವೆಂದು ನಾಲ್ಕುಂ ಪ್ರಕಾರದಿಂ ನೆಱೆದಿರ್ಕ್ಕುಂ ॥ 605

ಮತ್ತಮಲ್ಲಿ ॥

ಸೂತ್ರಂ ॥ 144 ॥

ವಸ್ತುಸ್ವಭಾವಕಥನಂ ।
ವಾಸ್ತವಮುಪಮಾದ್ಯಶೇಷವಕ್ರೋಕ್ತಿವಿಪ ॥
ವಾಸ್ತವಂ. ರ್ಯ್ಯಸ್ತಂ ಸಮಸ್ತಲೋಕಮ ।
ನಸ್ತೋಭನಕಾರಿ ಚಾರುತರಪುರುಷಾರ್ತ್ಥಂ ॥ 606

ಸೂತ್ರಂ ॥ 145 ॥

ವೃ ॥ ಜಾತಿಸಹೋಕ್ತಿಭಾವಪರಿವೃತ್ತಿಯಥಾಕ್ರಮಪರ್ಯ್ಯಾಯಾವಳೀ ।
ವಾಸ್ತವ ಹೇತುಸಮುಚ್ಚಯಾನುಮಿತಿಸೂಕ್ಷ್ಮಲವವ್ಯತಿರೇಕದೀಪಕಾ ॥
ಭೇದಂಗಳ್. ಖ್ಯಾತಿಸಮಾಹಿತಾವೃತಿಪರಸ್ಪರಸಾರನಿಮೀಲನಂಗಳಂ ।
ದೀ[2]ತೆಱದಿಂವಮೊಂ[3]ದಿ ನೆಗಳ್ಗುಂ ನೆ[4]ಱೆ ವಾಸ್ತವಭೇದವೃತ್ತಿಗ[5]ಳ್ ॥ 607

ಸೂತ್ರಂ ॥ 146 ॥

ಜಾತಿಯೆನಿಕುಂ ಸ್ವಭಾವಾ ।
ಜಾತಿ. ಖ್ಯಾತಿ ಯಥಾವಸ್ಥಿತಾರ್ತ್ಥವಿಷಯಾರ್ತ್ಥಕೃತೋ ॥
ದ್ಯೋತನಮವೈಪರೀತ್ಯಂ ।
ಜಾತಿದ್ರವ್ಯಕ್ರಿಯಾಗುಣಪ್ರತಿಬ[6]ದ್ಧಂ ॥ 608

ಲಕ್ಷ್ಯಂ ॥

ಜಾತಿಸ್ವಭಾವಾಖ್ಯಾನಕ್ಕೆ ॥

ವೃ ॥ ಸೊಗಯಿಸಿ ತೋರ್ಪ್ಪ ಸೋಗೆ ಕೊರಲೊಳ್ ಪೊಗರ್ವಟ್ಟೆಸೆದಿರ್ಪ್ಪ ಕರ್ಪ್ಪು ಕೆ ।
ಯ್ಮೆಗೆ ಕಡೆಗಣ್ಗಳೊಳ್ ಪೊಳೆವ ಪಳ್ಪು ಶಿಖಾಗ್ರದೊಳೊಂದಿದೊಳ್ಪು ಮ॥
ಲ್ಪೊಗೆದಿರೆ ಕೇಗುವಿಂಚರದ ನುಣ್ಪು ಮನಂಗೊಳೆ ಚೆಲ್ವನಾಳ್ದುದೀ ।
ನಗವನರಾಜಿಯೊಳ್ ಸುೞಿಯುತಿರ್ಪ್ಪ ವಿಚಿತ್ರಶಿಖಂಡಿಮಂಡಲಂ ॥ 609

1 ಶ್ಲಿ । ಷ್ಟ. 2 ಬೀಕಱಿ. 3 ಮಿಂತು. 4 ಸಲೆ. 5 ಯೊಳ್. 6 ಬಂಧಂ.

ದ್ರವ್ಯಸ್ವಭಾವಾಖ್ಯಾನಕ್ಕೆ ॥

ಕಂ॥ ಕಱೆ ಕೊರಲೊಳ್ ಕಣ್ ನೊಸಲೊಳ್ ।
ಪೆಱೆ ಮಕುಟದೊಳಹಿವಿಭೂಷಣಾ[1]ವಳಿ ತೋಳೊಳ್ ॥
ನೆಱೆದಿರೆ ಕರಮೆಸೆದಂ ಪಲ ।
ತೆಱದ ಮರುಳ್ವಡೆಯ ನಡುವುಮಾಪತಿರುದ್ರಂ ॥ 610

ಕ್ರಿಯಾಸ್ವಭಾವಾಖ್ಯಾನಕ್ಕೆ ॥

ವೃ॥ ವಳಿಗಳಱಿಯೆ ಬಿಂಕಂಪೆತ್ತ ವೃತ್ತಸ್ತನಂ ಕ ।
ಣ್ಗೊಳಿಸೆ ತೊಳಗೆ ಬಾಹಾಮೂಲಮೂರುದ್ವಯಂ ಸಂ॥
ಚಳಿಸೆ ನಿಜಪದಾಂಗುಷ್ಠಾಗ್ರದಿಂ ನಿಂದು ಕಣ್ಗಳ್ ।
ಪೊಳೆಯೆ ಮಿಳಿರ್ವ ಕೊಂಬಂ ನಿಳ್ಕಿ ಪೂಗೊಯ್ದಳೊರ್ವಳ್ ॥ 611

ಗುಣಸ್ವಭಾವಾಖ್ಯಾನಕ್ಕೆ ॥

ಕಂ ॥ ಮನದೊಳ್ ಮುದಮಂ ಕೋಮಳ ।
ತನುವಿನೊಳ್[2]ತ್ಯಂತರೋಮಹರ್ಷಣಮಂ ಕ ॥
ಣ್ಗಿನಿಸಿನಿಸು[3]ಮೀಳನಮಂ ।
ಜನಿಯಿಸುತುಂ ಪ್ರಿ[4]ಯೆಯಸೊಂಕು ಪಡೆದುದಲಂಪಂ ॥ 612

ಸೂತ್ರಂ ॥ 147 ॥

ಸಮಕಾಲಮಪ್ಪುವೆರಡ ।
ಸಹೋಕ್ತಿ. ರ್ತ್ಥಮನೊಡನೆಯೆ ಪೇ[5]ೞ್ವುದದು ಸಹೋಕ್ತಿ ವಿತರ್ಕ್ಕ ॥
ಭಾವಂ. ಕ್ರಮದಿಂದರ್ತ್ಥಾಂತರಮಂ ।
ಸಮನಿಸುವೊಂದುಕ್ತಿ ಭಾವಮೆನೆ ಪೆಸರ್ವಡೆಗುಂ ॥ 613

ಲಕ್ಷ್ಯಂ॥

ಸಹೋಕ್ತಿಗೆ ॥

ಕಂ ॥ ಅಲರ್ದುವೊಡನೊಡನೆ ಕುವಲಯ ।
ಕುಲಮುಂ ಕುಲಟಾಮುಖಂಗಳುಂ ಮುಗಿದುವು ನಿ॥
ಶ್ಚಲಯೋಗನಿರತಸಂಧ್ಯಾಂ ।
ಜಲಿಯುಂ ಸರಸಿರುಹವನಮುಮೊಡನೊಡನಾಗಳ್ ॥ 614

ಬಿರಯಿಗಳ ಸುಯ್ಗಳೊಡನೆಯೆ ।
ಪಿರಿಯವು ದೆವಸಂಗಳಾದುವವಱವಱ ಪರಿ ॥
ಸ್ಫುರಿತಂಗಳೊಡನೆ ಕುಂದಿದು ।
ವಿರುಳ್ಗಳುಂ ಮುಂ[6]ಚಿ ಬಂದ ಜಳದಾಗಮದೊಳ್ ॥ 615

---

1 ಗಂ ನಳಿತೋಳೊಳ್. 2 ಳಂತಂತೆ. 3 ಸುನ್ಮೀಳನಮಂ. 4 ಪ್ರಿಯನ. 5 ಪೇೞ್ವುದದು. 6 ಮುಂಚೆ.

ಭಾವಕ್ಕೆ ॥

ವೃ ॥ ಪಡುವಳ್ ಕೀೞಲೊಳೆಮ್ಮ ತೊೞ್ತು ಪಡುವಳ್ ಮುತ್ತಬ್ಬೆಯಾಕೋಣೆಯೊಳ್ ।
ಪಡುವಂ ಶಕ್ತಿವಿಹೀನನಂಧಬಧಿರಂ ಕೇಳಜ್ಜನೀಬಾಗಿಲೊಳ್ ॥
ಪಡುವೆಂ ಬಾ[1]ಲೆಯೆನೊರ್ವ್ವಳಿಲ್ಲಿ ಮನೆಯಾಣ್ಮಂ ಪೋದನಿಂದೂರ್ಗೆ ನೀಂ ।
ಪಡಲೆಂದೆಂತೆಡೆವೇಡುವಯ್ ಪಥಿಕ ಮತ್ತೀಪೊೞ್ತಱೊಳ್ ಗಾಂ[2]ಪನೇ ॥ 616

ಸೂತ್ರಂ ॥ 148 ॥

ಬಂದಂ ಕೊಟ್ಟೊಂದಂ ಕೊ ।
ಪರಿವೃತ್ತಿ. ಳ್ವಂ[3]ದಂ ಪರಿವೃತ್ತಿಯೆಂಬುದಕ್ಕುಂ ತರದಿಂ ॥
ಯಥಾಕ್ರಮಂ. ದೊಂದಿರೆ ನಿರ್ದ್ದೇಶಸ್ಥಿತಿ ।
ಯಿಂದಂ ಪೇೞ್ವುದು ಯಥಾಕ್ರಮಮಂ ಮುನಿಮತದಿಂ ॥ 617

ಲಕ್ಷ್ಯಂ ॥

ಪರಿವೃತ್ತಿಗೆ ॥

ಕಂ ॥ ಬಿಳಿಯಲರ್ಗಣ್ಗಳ ಬೆಳ್ಪಂ ।
ಲಲನಾಜನದಧರಮು[4]ಣಿಗೆ ಕೊಟ್ಟದಱ ಪುದುಂ ॥
ಗೊಳಿಸಿದ ಕೆಂಪಂ ನೀರ್ವ್ವೇ ।
ಕುಳಿಯೊಳ್ ಮಾಱಾಡಿ ಕೊಂಡ ತೆಱದಿಂ ತೋರ್ಕ್ಕುಂ ॥ 618

ಯಥಾಕ್ರಮಕ್ಕೆ ॥

ವೃ ॥ ಇದು ನಿ[5]ನ್ನಟ್ಟಿಸಿದಿಕ್ಷುಚಾಪಮಿದು ನಿನ್ನೀಲೋಕಮಂ ಕೆಯ್ಗೆ ಮಾ ।
ಡಿದ ಪುಷ್ಪಾಸ್ತ್ರಮಿದಲ್ತೆ ನಿನ್ನ ವಿಜಯಪ್ರಾರಂಭದೊಳ್ ತೋರ್ಕ್ಕೆಗೆ ॥
ತ್ತಿದ ಚೈ[6]ತ್ರಧ್ವಜಮೆಂದು ತೋರ್ಪ್ಪ ತೆಱದಿಂ ಭ್ರೂಲಾಸ್ಯಮಂ ನೀಳ್ದಪಾಂ ।
ಗದ ಬೆಳ್ದಿಂಗಳನೆಡ್ಡಮಪ್ಪ ಕಬರೀವಿಸ್ತಾರಮಂ ತೋಱಿದಳ್ ॥ 619

* ಅವಿಹಿತವೇ[7]ಗಮೇಱೆ ಯುಜಮಂ ವ್ರಣಮಕ್ಷತಕಾಯಮೆತ್ತಿ ಕ ।
ಟ್ಟುವ ಮದಮುಣ್ಮಿ ಸೋರ್ವ್ವ ಸೊನೆ ಬೀೞ್ವ ಗಜಧ್ವಜಮಂಬರಕ್ಕೆ ನಿ ॥
ಳ್ಕುವ ಜಯಕೇತು ಸಂದೆಯದ ದಂದುಗಮಂ ಕಿ[8]ಡಿಸಿತ್ತು ಮುಂದಣೋ ।
ಡುವ ರಿಪುದಂತಿಗಂ ಪೆಱಗಣಟ್ಟುವ ಚ[9]ಟ್ಟರ ಮೇರುದಂತಿಗಂ ॥ 620

ಇಲ್ಲಿ ಕೆಲರ್ ವ್ಯುತ್ಕ್ರಮಗಣನೆಯಿಂದೆ ನಿಂದಿತಕ್ರಮಮೆಂದು ಪೇೞ್ವರ್ ॥

ಸೂತ್ರಂ ॥ 149 ॥

ನುಡಿಯದೆ ಮನದರ್ತ್ಥಮನದು ।
ಪರ್ಯ್ಯಾಯಂ. ನು[10]ಡಿದಂತಿರೆ ನು[10]ಡಿದ ನುಡಿಯೆ ಪರ್ಯ್ಯಾಯಂ ಮ ॥
ಆವಳಿ. ತ್ತಡಕಿಲ್ಗೊಳೆ ಪಲವುಮನೊಂ ।
ದೆಡೆಯೊಳ್ ಸಮಗೊಳಿಸಿ ಪೇೞ್ವುದಾವಳಿ ಪೆಸರಿಂ ॥ 621

---

1 ಬಾಲಕಿಯೊರ್ವ್ವ. 2 ಗಾಂಪಿನಿಂ. 3 ಳ್ವಂದದು. 4 ರುಚಿಗೆ. 5 ನೀನ. 6 ವಿಜಾನ. * ಈ ಪದ್ಯಕ್ಕೆ ಹಿಂದೆ "ಎರಡುಱ್ರರೊಳಂ ಬಹುಳಸಬಂಧಸಮುದಿತಕ್ಕೆ, ಎರಡಱ್ರರೊಳ್ ಬಹುಳನಿಕ್ತಯಕಬ್ಬಮದಕ್ಕೆ ಲಕ್ಷ್ಯಂ" ಎಂದು ಕೆಲವು ಪ್ರತಿಗಳಲ್ಲಿ ಇದೆ. 7 ಮೇಳ, ಶೀತ. 8 ಬಿಡಿಸಿತ್ತು. 9 ರಟ್ಟದ. 10 ನುಡಿವ.

ಲಕ್ಷ್ಯಂ ||

ಪರ್ಯ್ಯಾಯಕ್ಕೆ ||

ಕಂ || ಬನದೊಳಗೆ ನೋ[1]ಡಿ ಪೊಸವೂ[2] ।
ವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ ||
ನಿನಿತೊಂದು ಪೇ[3]ಗಮಂ ನಿ ।
ನ್ನಿನಿಯನ ಪಕ್ಕದೊಳೆರೆಂದು ಸಖಿ ತೊಲಗುವುದುಂ || 622

ಆವಳಿಗೆ ||

ಕೊಳಗಳ್ ದಳಿತಾಬ್ಜಂಗಳ್ ।
ದಳಿತಾಬ್ಜಂಗಳ್ ಸಮೃದ್ಧಮಧುಗಳ್ ಮಧುಗಳ್ ||
ಚಳದಳಿಕುಳಾಕುಳಂಗಳ್ ।
ವಿಳಸದಳಿಪ್ರ[4]ಕರಮಧುರವಿರುತಿಯೆ ಬನದೊಳ್ || 623

ಆವಳ್ಯಪೋಹಕ್ಕೆ ||

ಕಂ || ಕಳರುತಿಯಿಲ್ಲದ ಮಧುಪಾ ।
ವಳಿ ಮಧುಕರನಿಕರವಿಲ್ಲದಂಬುರುಹವನಂ ||
ಜಳರುಹಮಿಲ್ಲದ ತಿಳಿಗೊಳ ।
ನಲರ್ದ ಸರಃಪ್ರ[5]ಸರವಿಲ್ಲದೂರಿಲ್ಲದಱೊಳ್ || 624

ಸೂತ್ರಂ || 150 ||

ಹೇತುಸಮುದಾಖ್ಯಾನಂ ಸಹ ।
ಹೇತು. ಹೇತುಕಮದು ಹೇತುವೆಂಬಲಂಕೃತಿಯಕ್ಕುಂ ||
ಸಮುಚ್ಚಯಂ. ಮಾತೇಂ ಬಹುಸಂಕಥನಂ ।
ಜಾತಿದ್ರವ್ಯಾದಿಕಂ ಸಮುಚ್ಚಯಮ[6]ಕ್ಕುಂ || 625

ಲಕ್ಷ್ಯಂ ||

ಜ್ಞಾಪಕಹೇತುಗೆ ||

ವೃ || ತಿವಳಿಯೊಳ್ ಮಿಡುಕಾಱದ ಮಣ್ಣಿಂದಿಕ್ಕಿದ ಲಂಡದ ಬೆಂಕೆಯಿಂ ।
ಕವಿವ ಕಿೞ್ಮದದೊಳ್ಪೊನಲೊಳ್ ಸುಯ್ಯಾಱದ ಪೆ[7]ನ್ನೊರೆಯಿಂ ತಗು ||
ಳ್ದವಿಹತಾಂಬುವ ಬಲ್ಪೊನಲಿಂದಿಪ್ಪಾಱದ ಬಟ್ಟೆಯೊಳೊಕ್ಕ ಪ ।
ಲ್ಲವನಿಕಾಯದಿನಂದಱಿದಂ ಕಾಡಾನೆಗಳಾಗಡೆ ಪೋದುದಂ || 626

ಕಾರಕಹೇತುಗೆ ||

ವೃ || ಪಂದಿಯಿಂ ಕೆದಱಿದು[8]ತ್ಪಳಮುಂ ವನದಂತಿಯಿಂ ।
ನೊಂದು ಸೂಸಿದ ಸರೋಜಮುಮೊಯ್ಯನೆ ನೀರಣಿಲ್ ||
ಬಂದು ಪೋದ ಮೃಗದಗ್ರಖುರಚ್ಯುತವಾರಿಯಿಂ ।
ನಾಂದೆರಱ್ತಿಡಿಯುಮಿಂಬು ತದಗ್ರಿಮಭಾಗದೊಳ್ || 627

1 ಪೋಗಿ. 2 ವೂ । ವಿನ. 3 ಬೇಗದಿಂ. 4 ಪ್ರತತಿ. 5 ಪ್ರಕರ. 6 ಮೆನಿಕುಂ. 7 ಪೊನ್ನೊರ. 8 ದುಪ್ಪಳ.

ಪರಂಪರಿತಹೇತುಗೆ ॥

ವೃ॥ ವಿನಯಮನಿತ್ತುದಿಂದ್ರಿಯಜಯಂ ವಿನಯಂ ಗುಣಸಂಪದಂಗಳಂ ।
ಜನಿಯಿಸಿದತ್ತು ಸದ್ಗುಣಗಣಂ ಪಡೆದತ್ತು ಜನಾನುರಾಗಮಂ ॥
ಜನದನುರಾಗಮಾಗಿಸಿದುದಾವಗಮಿ[1]ದ್ಧವಿಶುದ್ಧಕೀರ್ತಿಯಂ ।
ತನಗೆನೆ ರಾಜ್ಯಲಕ್ಷ್ಮಿಯನನುಷ್ಠಿಸಿದಂ ನಯದಿಂ ಯುಧಿಷ್ಠಿರಂ ॥ 628

ಅಭಾವಹೇತುಗೆ ॥

ಕಂ॥ ಅವಿನಯದಿನನಿಂದ್ರಿಯಜಯ ।
ಗರ್ಗವಿಜಯದಿ[2]ನಬುಧವಿಶಿಷ್ಟಸಂಭಾವನೆಯಿಂ ॥
ವಿವಿಧವ್ಯಸನಂಗಳ್ ಸಂ ।
ಭವಿಸುಗುಮಾರ್ಗ್ಗಂ ವಿಶಿಷ್ಟವಿದ್ವಿಷ್ಟಂಗಳ್ ॥ 629

ಸಮುಚ್ಚಯಕ್ಕೆ ॥

ವೃ॥ ನೃಪನ ದಯೆಯುಂ ನಚ್ಚುಂ ತನ್ನಣ್ಮುಮೊ[3]ರ್ಪ್ಪುದುಮಾಂತ ಭೂ ।
ಮಿಪನ ಮನದೊಂದುರ್ಕ್ಕಂ ಸೊರ್ಕ್ಕಂ ಬಿಗುರ್ತ್ತಿರಲುಂ ನಿಜ ॥
ದ್ವಿಪಹಯರಥಾಸೀಕಾನೇಕಪ್ರಧಾನರ ಸಾವುಮಾ ।
ತಪನತನಯಂಗಾಗಳ್ ಕಾಯ್ಪಂ ನಿಮಿರ್ಚ್ಚಿದುದಾಜಿಯೊಳ್ ॥ 630

ಕಂ॥ ಕೃತಮಣಿವಿಭೂಷಣಂಗಳ ।
ನತಿಶಯಿಸಿದುವವರ ಕೊರಲೊಳಂ ತೋಳೊಳಮು[4] ॥
ತ್ಥಿತಮಾಗಿ ಭೂಷಣಂಗಳ್ ।
ನಿತಂಬಮಂಡಳದೊಳಂ ಕುಚಾಭೋಗದೊಳಂ ॥ 631

ವೃ॥ ಕೊಡೆ ಗುಡಿ ತೋರಣಂ ದ[5]ಧಿ ಮಧುದ್ರವಮುಚ್ಚಗಱುಂಕೆ ಲಾ[6]ಜೆ ಸಂ।
ಗ[7]ಡಮಾಲರಕ್ಷತಂ ಬೞಿಯ ಸಾಸವೆ ಪೊಂಗೊಡನಷ್ಟಶೋಭೆ ಕ ॥
ನ್ನಡಿ ಕಡೆ ವರ್ಧಮಾನಪ[8]ಟಹಂ ತಿಱೆ ಮಂಗಳಗೀತನಾದಮೆ ।
ಲ್ಲೆಡೆಗ[9]ಳೊಳಲ್ಲಿಗಲ್ಲಿಗಧಿಕಂ ಪಡೆದತ್ತು ಜನಾನುರಾಗಮಂ ॥ 632
ಆಟಂ ಬಾಜನೆ ಗಾಡಿಗಳ್ ಪಸವನಂ ಬೆಳ್ದಿಂಗಳೊಳ್ವಾತು ಕೊಂ ।
ಡಾಟಂ ಕತ್ತುರಿ ಕಪ್ಪುರಂ ನಗೆ ತೆಗಟ್ ಪಾಟಂ ಬಿಯಂ ಜವ್ವನಂ ॥
ನೋಟಂ ತಂಬುಲಮಿಂಪು ಕಂಪು ವಿಭವಂ ಮೆಯ್ಮೆೞವೆಂ[10]ದಿಂತಿವಂ ।
ಪೇಟಕ್ಕಾಗರಮೆಂಬನ್ನ ಸುಸಿಲೇಂ ಪೇ[11]ೞ್ವಾಗದೊಳ್ ತೀರದೇ ॥ 633

ಸೂತ್ರಂ ॥ 151 ॥

ಸಾಧನಮಂ ಸಾಧ್ಯಕ್ಕವಿ ।
ಅನುಮಿತಿ. ರೋಧಿಯನಱಿದೂಹೆಗೆಯ್ವುದನುಮಿತಿಯೆನಿಕುಂ ॥
ಸೂಕ್ಷ್ಮಂ. ಸಾಧುಸಮಾಧಿವರೇಂಗಿತ ।
ಬೋಧಂ ನಿ[12]ರ್ವ್ಯಾದಮಪ್ಪುದಂತದು ಸೂಕ್ಷ್ಮಂ ॥ 634

1 ಮಿಂತು. 2 ದಿಂಬುಧಪಿತಶ್ಯ. 3 ಮಾರ್ಪ್ಪದು, ಮಾಳ್ಪದು. 4 ಮು । ವೃತ. 5 ಧನ. 6 ಪತ್ತಿ.
7 ಗಣಿಯುಲ, ಗಾವಾಲ. 8 ಪಟಹಾಂಚೆ. 9 ಯೊಳಗಲ್ಲಿ. 10 ವೆಂಬಿಂತಿವಂ. 11 ಪೇಳ್ವಾಗ. 12 ನಿಬ್ಬಾರ್ಥ.

ಲಕ್ಷ್ಯಂ ||

ಅನುಮಿತಿಗೆ ||

ವೃ || ಎಳಮಿಂಚಿಲ್ಲಕ್ಕು ಮಾಖಂಡಲಲಲಿತಧನುರ್ದ್ದಂಡಮಿಲ್ಲಕ್ಕು ಮಭ್ರಾ |
ವಳಿಯಿಲ್ಲಕ್ಕುಂ ಕದಂಬಾನಿಲನ[1] ಸುಳಿವದಿಲ್ಲಕ್ಕು ಮುದ್ಯನ್ಮಯೂರೀ ||
ಕುಳಲೀಲಾತಾಂಡವಾಡಂಬರವಿಳಸನಮಿಲ್ಲಕ್ಕು ಮಿಂ[2]ತಾಮಹೀಮಂ |
ಡಳದತ್ತಲ್ ನಲ್ಲನಂತಲ್ಲದೊಡೆ ತಡೆದದೇಕಿರ್ಪ್ಪನಿಂದಲ್ತೆ ಬರ್ಪ್ಪಂ || 635

ಅದಲ್ಲದೆಯುಂ ||

ಕಂ || ಬೆಸೆದಿರೆ ನಿನ್ನೊಳ್ಪಳ ಕಾ |
ಲ್ಗಸವಸದಿಂದೆಱಗಿ ತಿಳಿಪಿದಯ್ ನಿರ್ವ್ಯಾಜಂ ||
ನೊಸಲೊಳ್ ನಿಸದಮಲಕ್ತಕ |
ರಸತಿಲಕಮು[3]ದಿಲ್ಲದಂದದೇಕಿಂತಕ್ಕುಂ || 636

ಸೂಕ್ಷ್ಮಕ್ಕೆ ||

ಕಂ || ಪಗಳ್ ನಮುಗಕ್ಕುಂ ಸಂ |
ಯೋಗಮೆನಲ್ ಬಗೆವ ನಲ್ಲನಂ ಕುಱಿತು ಮನೋ ||
ರಾಗದಿನೊಡರಿಸಿದಳ್ ಚೆ |
ಲ್ವಾಗಿರೆ ಪೆಱಳೊರ್ವ್ವಳಬ್ಜದಳಮುಕುಳನಮಂ || 637

ಅಂತುಮಲ್ಲದೆಯುಂ ||

ಕಂ || ವಿನಯೋಪಚಾರವಚನಮು |
ಮನುಕೂಲಾಚರಣಮುಂ ವಿಭಿಸ್ರಾಸನಮುಂ ||
ಮನದೊಳಗೆ ಪುದಿದು ಪೊಣ್ಮಿದ |
ಮುನಿಸಂ ಕನ್ನಡಿಪುವಾ[4]ಗೆ ಬಗೆವೆಂ ಪ್ರಿಯೆಯೊಳ್ || 638

ಸೂತ್ರಂ || 152 ||

ಗುಣಮನೆ ತಪ್ಪದು ದೋಷದ |
ಲೇಶಂ ಅಥವಾ ಗಣನೆಗೆ ದೋಷಮುಮನಿನಿಸು ಗುಣಗಣನೆಗೆ ತಂ ||
ಲವಂ. ದೋಣರ್ವುದು ಲೇಶಂ ವಿಬುಧಾ |
ಗ್ರಣಿಗಳ್ ಕೆಲಬರ್ ನಿಗೂಹನಂ[5] ಲವಮೆಂಬರ್ || 639

ಲಕ್ಷ್ಯಂ ||

ಕಂ || ಬಡನಿರ್ದ್ದಗಲ್ಕೆಯಾದೊಂ |
ದೆಡೆಯೊಳ್ ದುಃಖಮನಸಹ್ಯಮಂ ಮಾಱ್ಪುದಱಿಂ ||
ಸುಡು ಸುಡು ಸಜ್ಜನರಪ್ಪವ |
ರೊಡಗೂಟಮನ[6]ಕ್ಕ ಖಳರ ಕೂಟಮೆ ಸುಖದಂ || 640

1 ನೆಸಗುವು. 2 ಮಿಂತಾ. 3 ಮುದಲ್ಲ. 4 ವಾಗಿ. 5 ಮಂ. 6 ನಕ್ಕೆ.

ನಿಗೂಹನಕ್ಕೆ ||

ವೃ || ಪರಿವಿಡಿಗೆಯ್ಯೆ ನೊಂದಿಗಿಳಿ ತಂದೆಯು ತಾಯು ಸಮೀಪದೊಳ್ ತನೂ ।
ದರಿಯ ರತೋಪಯುಕ್ತಗುತಿಯುಂ ವಿನತಾನನೆ ನಾಣ್ಚಿ ಕೋಳ[1]. ||
ಳುತ್ತುಳುಕಿಶುನತ್ತ್ರನಪ್ರಹತಕಂಕಣಝುಂಕೃತಹಸ್ತತೂರ್ಯ್ಯನಿ ।
ರ್ಭರರವದಿಂದದಂ ಮಱಸಿದಳ್ ಗಡ ಮುಗ್ಧೆಯುದೇಂ ವಿದಗ್ಧೆಯೋ || 641

ಸೂತ್ರಂ || 153 ||

ವ್ಯತಿರೇಕಮುಭಯಸಾಮ್ಯ ।
ವ್ಯತಿರೇಕಂ. ಪ್ರತೀತಿಯುಂ ತೋಱಿ ಭೇದಮಂ ಮಾಱ್ಪುದು ಸಂ ||
ದೀಪಕಂ. ಗ[2]ತಿಯಿಂದಂ ಮಧ್ಯಾಂತ ।
ಸ್ಥಿತಮಾಗಿ ಬೆಳಪ್ಪುದಱಿಗೆ ದೀಪಕಮಕ್ಕುಂ || 642

ಲಕ್ಷ್ಯಂ ||

ವ್ಯತಿರೇಕಕ್ಕೆ ||

ಕಂ || ಗಂಭೀರಮುಮಳಲಕ್ಷ್ಮೀ ।
ಸಂಭವಪದಮಧಿಕಸತ್ವಮಾಗಿಯುಮೆಯ್ದ ||
ಲ್ತಂಭೋಧಿ ನೆಱೆದುದಿ[3]ಲ್ಲವ ।
ನಂ ಭಾಸುರನಿಶಿತಮತಿಯನತಿಕಲುಷಜಡಂ || 643

ವೃ || ವಸುಧೆಗೆ ಸಂದಹೀನರಿಪುವರ್ಗಮನೋಡಿಸಿ ಚಕ್ರಿ ಮೆಚ್ಚೆ ಬ ।
ಣ್ಣಿಸೆ ಪತಿಭಕ್ತಿಯುಂ ಮೆಱೆದು ಮಂತ್ರಪದಕ್ಕಧಿನಾಥನಾಗಿ ಪೆಂ ||
ಪೆಸೆವಿನಮಾರೊಳಂ ವಿಮುಖವೃತ್ತಿಯೊಳೊಂದದ ಪಕ್ಷಪಾತದಿಂ ।
ದೆಸಗದ ವೈನತೇಯನಿವನೆಂಬುದು ಸಾಹಸವೈನತೇಯನಂ || 644

ಕಂ || ವಾರಿಜಗಂಧಿ ವಿಭಾತಸ ।
ಮೀರಂ ನಿಜಸುರಭಿ ನಿನ್ನ ಸು[4]ಯ್ಯಿದಱೊಳದಂ ||
ತೋರಗೆಯಕ್ಕುಮೆ ಪರಗುಣ ।
ಹಾರಿಗೆ ನಿಜಗುಣಮು[5]ದೇಕೆ ಸಮನಿಸಿವಪುದೋ || 645

ಕಾರಕದೀಪಕಕ್ಕೆ ||

ಕಂ || ನವಜಳದಾಗಮಮಿಂತೀ ।
ಭುವನಜನಕ್ಕೆಲ್ಲಮೆಯ್ಗೆ ಮಾಡಿದುದಧಿಕೋ ||
ತ್ಸವಮಂ ಮತ್ತಂತದೆ ತಾಂ ।
ಪ್ರವಾಸಿಗಳ್ಗೆ ದರ್ಯೊಳೊದವಿಸಿತ್ತದವಱಿಲಂ || 646

1 ಕಾಮುಕ || ಕ್ಷರ, ತೋಳಕ || ಕ್ಷದ. 2 ಗತಿಯಾದಿಮಧ್ಯಮಂತ. 3 ದಿಲ್ಲಿವ. 4 ಸುಯ್ಯಲಬ್ಬಿತೀಳಗಂ.
5 ನೆಅಳ್ಕೆ, ದೊಳಂತೆ.

ಕಂ ॥ ಓಸರಿಸಿದ ಜವನಿಕೆಯೊಡ ।
ನೋಸರಿಸಿದನಿಸಲೆ ಕಂತು ಕು[1]ಸುಮಾಂಜಲಿಯುಂ ॥
ಸೂಸಿದ ಪದದೊಳ್ ಸಭೆಗಂ ।
ಸೂಸಿದನೊ[2]ಡನೊಡನೆ ನನೆಯ ಮೊನೆಯಂಬುಗಳಂ ॥ 647

ಆವರಿಸಿತ್ತೊ ನಭೋಂತ ।
ರ್ಭ್ಯಾವಿವರಮನಮರ್ದಿನೆಸಕಮೆನೆ ಬಿಱಯಿಗಳೋ ॥
ವೋವಿದು ಮದನನ ಸೋದನ ।
ದೀವಿಗೆಯೆನೆ ತೊಳಗಿ ಬೆಳಗಿದಂ ತುಹಿನಕರಂ ॥ 648

ಕ್ರಿಯಾದೀಪಕಕ್ಕೆ ॥

ಕಂ ॥ ಸೊಗಯಿಸಿದುದು ಕಾಗ್ರ್ಗಲದ ।
ಪುಗಿಲೊಳ್ ಜಲಜಲನೆ ಪರಿಯುತಿರ್ಪ್ಪೆಳ್ವೊನಲುಂ ॥
ಮುಗಿಲ ಪೊರೆವೊರೆಗಳೊಳ್ ಪೊಳೆ ।
ದೊಗೆವ ಚಳಚ್ಚಟುಳತರತಟದ್ವಿಳಸನಮುಂ ॥ 649

ಧರೆಯಂ ಮೆಟ್ಟದೆ ಮೆಟ್ಟುವ ।
ಸುರಲಲನಾನೃತ್ಯಮಿತ್ತಲಭವನ ಸಭೆಯೊಳ್ ॥
ಕರಮೆಸೆದುದು ವಾ[3]ರಸ್ತ್ರೀ ।
ಪರಿನರ್ತ್ತನಮತ್ತಲಾಮಹೀಶನ ಸಭೆಯೊಳ್ ॥ 650

ಕುಳಿರ್ವೆಲರುಮಾಲಿನೀರುಂ ।
ತಳಿರ್ವಾಸುಂ ಚಂದ್ರಕಾಂತಮುಂ ಚಂದನಮುಂ ॥
ಕೊಳನುಂ ನಂದನವನಮುಂ ।
ಕ[4]ಳೆಯುವೆ ಬೇಸಗೆಯೊಳೆ[5]ನ್ನ ಬೇಟದ ಸೂಡಂ ॥ 651

ಸೂತ್ರಂ ॥ 154 ॥

ಸಮನಿಸಿ ಬಿದಿವಸದಿಂದಂ ।
ಸಮಾಹಿತಂ. ಸಮಾಹಿತಂ ಬರ್ಪ್ಪೊಡದು ಸಮಾಹಿತಮೆನಿಕುಂ ॥
ಆವೃತ್ತಿ. ಸ[6]ಮಗೊಂಡತ್ರ್ಥಪದಾವೃ ।
ತ್ತಿ ಮತ್ತದಾವೃತ್ತಿಯೆಂಬ ಪೆಸರಂ ಪಡೆಗುಂ ॥ 652

ಲಕ್ಷ್ಯಂ ॥
ಸಮಾಹಿತಕ್ಕೆ ॥

ಕಂ ॥ ಕಡುಗಟ್ಟಲೆಯೊಳ್ ಪ್ರಿಯನಿ ।
ರ್ದ್ದಡೆಗಾ[7]ಗಿಯೆ ಪೋಗಲೆಂದು ಮನೆಯಂ ಪೊಱಮ ॥
ಟ್ಟಡಿಯಿಡಲಱಿಯದೆ ಮಱುಗುವ ।
ಮಡದಿಗೆ ಬಗೆ ತೀರೆ ಮಿಂಚು ಮಿಂಚಿದುದಾಗಳ್ ॥ 653

1 ಪುಷ್ಪಾಂ. 2 ನೊವೆರ್ಕ್ಕದಲೆ. 3 ದೇವ. 4 ಕಳೆಯುವು. 5 ಳಿನಗ. 6 ಸಮಕೊಂಡ. 7 ಗಾಗಿರ.

ಕಂ॥ ಮುಳಿದಿರೆ ನಿಜವಲ್ಲಭೆಯುಂ।
ತಿಳಿಪಲ್ ಕಾಲ್ಗೆಱಗಲಿನಿಯುನಿರ್ಪ್ಪವಸರದೊಳ್॥
ಜಳಧರನಿನದಂ ನೆ[1]ಗೆದುದು।
ತಳವುಳಗು[2]ತ್ತಾಕೆ ತಾನೆ ಬಿಗಿಯುಪ್ಪುವಿನಂ॥ 654

ಆವೃತ್ತಿಗೆ॥

ವೃ॥ ಅಲದುರ್ಗಾವು ಕುಟಜಂಗಳ್ ಪೂತುವಿಂಬಪ್ಪಿನಂ ಕಂ[3]।
ದಲಿ ಕುಸುಮಿಸಿದತ್ತುದ್ದಾಮನೀಪಾವನೀಜಾ॥
ವಲಿ ಬಿರಿದುವೆ ಜಾತೀಯೂಥಿಕಾಕೇತಕೀಸಂ।
ಕುಲಮುವಿರಲಗಂಧಾವೋದಿತಾಶಾಂತರಾಲಂ॥ 655

ಕಂ॥ ಪಡೆಗುಂ ಮಹಿಮೋನ್ನತಿಯುಂ।
ಪಡೆಗುಂ ಸ[4]ನ್ಮಾರ್ಗ್ಗದೆಸಕಮಂ ಗುಣದೊಳ್ಪಂ॥
ಪಡೆಗುಂ ನಿರ್ಮ್ಮಳಯಶಮಂ।
ಪಡೆಗುಂ ಪಡೆಗುಂ ವಿಭುತ್ವಮಂ ಬುಧಸಂಗಂ॥ 656

ವೃ॥ ಕಲಿ ಪಾರ್ತ್ಥಂ ಪಾರ್ತ್ಥನಿಂದಂ ಕಲಿ ರವಿತನಯಂ ಪಾರ್ತ್ಥನಿಂ ಕರ್ಣ್ಣನಿಂದಂ।
ಕಲಿ ಭೀಮಂ ಪಾರ್ತ್ಥನಿಂ ಕರ್ಣ್ಣನಿನನಿಲಜನಿಂ ರಾಘವಾಧೀಶಭೃತ್ಯಂ॥
ಕಲಿ ಶಕ್ರಾಪತ್ಯನಿಂ ಕರ್ಣ್ಣನಿನನಿಲಜನಿಂದಂಜನಾಪುತ್ರನಿಂದಂ।
ಕಲಿ ಧಾತ್ರೀಚಕ್ರದೊಳ್ ವಿಕ್ರಮಗುಣನಿಳಯಂ ವೀರಮಾರ್ತ್ತಾಂಡದೇವಂ॥ 657

ಸೂತ್ರಂ ॥155॥

ಇತರೇತರಕಾರಕಸಂ।
ಪರಸ್ಪರಂ. ಪ್ರತಿಪತ್ತಿ ಪರಸ್ಪರಂ ಸಮೂಹದೊಳೆಸೆವೊಂ॥
ಸಾರಂ. ದತಿಶಯಗುಣದಿಂ ನಿದ್ಧಾ೯।
ರಿತಮಪ್ಪುದು ಸಾರಮೆಂಬ ಸದಲಂಕಾರಂ॥ 658

ಲಕ್ಷ್ಯಂ॥

ಪರಸ್ಪರಕ್ಕೆ॥

ಕಂ॥ ಸರಿಗೆಗೆ ಕೊರಲ್ ಕೊರಲ್ಗಂ।
ಸರಿಗೆಯು[5]ಲಂಕರಿಸೆ ಸರಿಗೆ ವಂದುದು ಮುಯ್ಮ್॥
ಟ್ಟಿರಡಱ ಪಡಂಗುವೆಂಬಂ।
ತಿರೆ ಕರವೊ[6]ಪ್ಪಿದುದು ಕೊರಲಗೇಂದ್ರಾತ್ಮಜೆಯಾ॥ 659

1 ನೆಗಳ್ದುದು. 2 ಗಾಡಾಳ್, ಗಾಗಾಳ್. 3 ಕಂಟಲಿ, ಕಂಡಲಿ. 4 ಸನ್ಮಾನ. 5 ವಲಂಸೇಗೆ. 6 ವೊಪ್ಪುವುದು.

ಸಾರಕ್ಕೆ ||

ಕಂ|| ಸಾರಂ ಸಂಸಾರದೊಳಬ |
ಲಾರತ್ನಂ ಸಾರಮಲ್ಲಿ ಜವ್ವನಮದಜೊಳ್ ||
ಸಾರಂ ಮಧುರಾಕಾರಂ |
ಸಾರಂ ಮತ್ತಂತದ[1]ಕ್ಕು ಮನುಕೂಲರಸಂ || 660

ಸೂತ್ರಂ || 156 ||

ಪ್ರಕೃತಿಯಿನಲ್ಲದೊಡಾಗಂ |
ತುಕಹೇತುವಿನಿಂ ಪ್ರಕೋಪರಾಗಾದಿಮನೋ ||
ನಿಮೀಳನಂ. ವಿಕೃತಿಯನುಪಲಕ್ಷಿಸಿ ತಿಳಿ |
ಯೆ ಕಾ[2]ಣದಿರಲದು ನಿಮೀಳನಂ ಪೆಸರಿಂದಂ || 661

ಲಕ್ಷ್ಯಂ ||

ಕಂ || ಸರಳತರಧವಳಸುಸ್ನಿ |
ಗ್ಧರೂಪಮಾನ್ಯ[3]ಪನ ದೃಷ್ಟಿ ಸಾಜದೊಳದಱಿಂ ||
ದೊರೆಕೊಂಡುದೊಂದು ಚೇತೋ |
ನುರಾಗಮಱಿಯಲ್ಕೆ ಬಪ್ಪುದಲ್ತಣಮಾರ್ಗ್ಗಂ || 662

ಮದಿರಾಮದಭರಪಾಟಲ |
ವದನೆಯ ಮನದೊಳ್ ಪೊದಱ್ದ ಕೋಪಂ ತಾನಂ ||
ತದು ಲಕ್ಷಿಸಲ್ಕೆ ಬಂದಿ |
ದ್ದುದಿಲ್ಲ ಕೃತದೋಷನಾ[4]ಗಿಯುಂ ಕಾಮುಕನಿಂ || 663

ಇವು ವಾಸ್ತವಭೇದಂಗಳ್ ||

ಸೂತ್ರಂ || 157 ||

ಏನಾನುಮೊಂದು ತೆಱದಿಂ |
ನಾನಾವಿಧವಸ್ತುರೂಪದೊಳ್ ಸಾದೃಶ್ಯಂ ||
ಔಪಮ್ಯಂ. ತಾನೆನಿಸಿ ತೋರ್ಪ್ಪುದದು ಬುಧ |
ಮಾನಿತಮೌಪಮ್ಯಮೆಂಬಲಂಕೃತಿಯಕ್ಕುಂ || 664

ಸೂತ್ರಂ || 158 ||

ವೃ || ಉಪಮಾನಪ್ರತಿವಸ್ತುರೂಪಕಸಮಾಸೋಕ್ತಿಕ್ರಮಾಕ್ಷೇಪಸಾ |
ಉಪಮಾ ಮ್ಯಪರಾಖ್ಯಾನನಿದರ್ಶನೋತ್ತರಸಸಂದೇಹಭ್ರಮಾಪಹ್ನುತಿ ||
ಭೇದಂಗಳ್. ವ್ಯಪದೇಶಸ್ಮರಣಪ್ರತೀಪಸಮಯೋಗಾಪ್ರಸ್ತುತಸ್ತೋತ್ರಮೆಂ|
ದುಪಮಾಭೇದಮಿವಕ್ಕುಮಂತೆ ದೊರೆವೆತ್ತರ್ಥಾಂತರನ್ಯಾಸಮುಂ|| 665

1 ದಕ್ಕೆಯುನು, ದಕ್ಕಮನು. 2 ಕಾಣಲಾದುದು. 3 ನೃಪರ. 4 ಮಾಗಿ.

ಅವಱೊಳಗೆ ॥

ಸೂತ್ರಂ ॥ 159 ॥

ಉಪಮೇಯಮುಂ ಗುಣಲೇಶದಿ ।
ನುಪಮಾನಕ್ಕೆಣೆಗೆ ವರ್ಪೊಡುಪಮೆಯೆನಿಕ್ಕುಂ ॥
ಉಪಮೆ. ವ್ಯ[1]ಪವರ್ಗವಿಷಯರೂಪ ।
ಪ್ರ[2]ಪಂಚಿತಮನೇಕಭೇದಮದು ತಾನಕ್ಕುಂ ॥ 666

ಲಕ್ಷ್ಯಂ ॥

ಧರ್ಮೋಪಮೆಗೆ ॥

ಕಂ ॥ ಜಲನಿಧಿವೋಲ್ ಗಂಭೀರಂ ।
ಬಲವೈರಿಯವೋಲ್ ಸಮಗ್ರವಿಭವಸನಾಥಂ ॥
ಕುಲಗಿರಿವೋಲ್ ನಿಷ್ಕಂಪಂ ।
ಬಲಿಯಂತೆವೊಲಧಿಕದಾನಿ ದಾನವಿನೋದಂ ॥ 667

ಹೇತೂಪಮೆಗೆ ॥

ಕಂ ॥ ಪರಿವೃತ್ತತೆಯಿಂ ನುಣ್ಪಿಂ ।
ಕ[3]ರಕಾಂಡಪ್ರತಿಮಚಾರುಗೌರಚ್ಛವಿಯಿಂ ॥
ಪರಿಪಕ್ವತಾಳಫಳದೊಳ್ ।
ದೊರೆಯೆನಿಸುಗುಮವಳ ಘನಪಯೋಧರಯುಗಳಂ ॥ 668

ವಸ್ತೂಪಮೆಗೆ ॥

ಕಂ ॥ ಅಳಿಕುಳದಂತಳಕಚಯಂ ।
ದಳಿತಾಂಬುಜದಂತೆ ನಗೆಮೊಗಂ ಲಲಿತಾಂಗಂ ॥
ವಿಳಸದ್ಲತೆಯಂತೆ ತಳಮುಂ ।
ತಳಿರಂತೆ ಜಡಂಗುವೆತ್ತು ತೋರ್ಕುಂ ಸತಿಯಾ ॥ 669

ಶ್ಲೇಷೋಪಮೆಗೆ ॥

ಕಂ ॥ ಸಮವೃ[4]ತ್ತಸಂಧಿಲಕ್ಷಣ ।
ಸಮನ್ವಿತಂ ಜಾತ್ಯಲಂಕೃತಿಭ್ರಾಜಿತಮು ॥
ತ್ತಮಕಾವ್ಯಬಂಧದಂ[5]ತಾ ।
ದಮಿತಾರಿಗೆ ಸಾಜವೊಪ್ಪುಗುಂ ಕಿ[6]ಱುದೊಡೆಗಳ್ ॥ 670

ಅನ್ಯೋನ್ಯೋಪಮೆಗೆ ॥

ವೃ ॥ ತಳಮುಂ ಕೆಂದಳಿರುಂ ಕುಚದ್ವಿತಯಮುಂ ಪೂಗೊಂಚಲುಂ ತೋಳ್ಗಳುಂ ।
ಸೆಳೆಗೊಂಬುಂ ಕುರುಳೋಳಿಯುಂ ಚಳದಳಿವ್ರಾತಂಗಳುಂ ಕೋಮಳಾಂ ॥
ಗುಳಿಯುಂ ತತ್ಕಳಿಕಾವಳೀರುಚಿಯುಮಂತೊಂದೊಂದಱೊಳ್ ಪೋಲ್ವೆಯಾ ।
ಗೆ ಲತಾಕೋಮಳೆ ಸಾದ್ರ್ರಶೋಕಲತೆಯುಂ ಪೂಗೊಯ್ದಳಂ[7]ತೞ್ತಿಯಿಂ ॥ 671

---

1 ವ್ಯಪವರ್ಗ. 2 ಪ್ರಪಂಚಿತಂ ತಾನನೇಕಭೇದವೆನಿಕ್ಕುಂ. 3 ಕರಕಂಥಾ, ಸ್ಮರಕಾಂಡ. 4 ವೃತ್ತಿ. 5 ರದಂ.
6 ಕುಱಿದೆಡೆಯೊಳ್. 7 ಳಂದ.

ವಿಪರ್ಯಾಸೋಪಮೆಗೆ ॥

ವೃ ॥ ಮೊಗಮಂ ತಾವರೆ ಕಣ್ಣನುತ್ಪಲದಳಂ ಧಮ್ಮಿಲ್ಲಮಂ ಸೋಗೆ ಸೆ ।
ೞ್ಳುಗುರಂ ಕೇದಗೆ ಪುರ್ಬ್ಬನಂಗಜನ ಬಿಲ್ ದಂತಾಳಿಯಂ ಮುತ್ತು ಕೆ ॥
ಯ್ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿನಿಸ್ಸಾರವ ।
ಸ್ತುಗ[1]ಳೊಳ್ ಪೋ[2]ಲಿಸರಂತದೇಂ ಮರುಳರೋ ರೂಪಂ ವಿಚಿತ್ರಾಂಗಿಯಾ 672

ಬಹೂಪಮೆಗೆ ॥

ಕಂ ॥ ಶರದಂಬುದಮಂ ಗಂಗಾ ।
ತರಂಗಮಂ ಸಿಂಧುವಾರಕುಸುಮಶ್ರೀಯಂ ॥
ಹರಹಾಸವಿಳಾಸಮನನು ।
ಕರಿಸುವುದತಿವಿಶದಕೀರ್ತ್ತಿ ತೋಳ್ಗೊಪ್ಪುವನಾ ॥ 673

ಮಾಲೋಪಮೆಗೆ ॥

ವೃ ॥ ಎಂತು ಬಸಂತಮುದರ್ಕ್ಕ ತೆಂಬೆಲರೆಂತದ ।
ಕ್ಕೆಂತು ತಳಿರ್ ತಳಿರ್ಗ್ಗೆಂತಲರ್ ಕುಸುಮೋತ್ಕರ ॥
ಕ್ಕೆಂತಳಿ ಮ[3]ತ್ತ ಮದಾಳಿಗೆಂತು ನಿನಾದಮಂ ।
ತಂತೆ ತರಂತರಮೊಪ್ಪಿ ತೋಱಿದಳಗ್ಗಳಂ ॥ 674

ಕಲ್ಪಿತೋಪಮೆಗೆ ॥

ವೃ ॥ ಮೃಗಮದಕಲ್ಪಿತಪತ್ರಭಂಗರಮ್ಯಂ ।
ನಗೆಮೊಗಮುಜ್ವಳಕಾಂತಿ ನಾಡೆ ಸಾಮ್ಯಂ ॥
ಸೊಗಯಿಸುಗುಂ ಮೃಗಲಾಂಛನಾಭಿರಾಮಂ ।
ಮೃಗಧರಬಿಂಬಮಿದೆಂಬಿನಂ ನಿಕಾಮಂ ॥ 675

ವಾಕ್ಯೋಪಮೆಗೆ ॥

ಕಂ ॥ ಪರಮನೊಳಗೊಳಗದೊಂದಂ ।
ಪರಿಜ[4]ಪನಂಗೆಯ್ಯೆ ನೆಗೞ್ದ ಸೂ[5]ಕ್ತ್ಯವ್ಯಕ್ತಾ ॥
ಕ್ಷರದಿಂ ನಿಗೂಢತರನಿ ।
ರ್ಜ್ಝರರವಗುಂಜದ್ಗುಹಾಳಿಕಳಕ್ಕೆಣೆಯಾದಂ ॥ 676

ಪ್ರತ್ಯಯೋಪಮೆಗೆ ॥

ಕಂ ॥ ಜಲಜಾಯಮಾನಮುಱಗರ್ಣ ।
ಪುಲಿನಂಮನ್ಯಂ ನಿತಂಬಮಳಿದೇಶೀಯಂ ॥
ಚಲದಳಕಪ್ರತತಿ ಮೃಣಾ ।
ಳಲತಾಕಲ್ಪಂಗಳಾಲ[6]ತಾಂಗಿಯ ತೋಳ್ಗಳ್ ॥ 677

1 ಗಳಂ. 2 ಪೋಲಿಸುವಂತ-ದೇಂ, ಪೋಲಿಸುವಂತದೇ. 3 ಮತ್ತ. 4 ಜಪಮಂ. 5 ಸೂಕ್ತ್ಯವ್ಯಕ್ತಾ
6 ನತಾಂಗಿಯ.

ಸಮಾಸೋಪಮೆಗೆ ||

ವೃ || ಕಮಲನಯನಂ ಕಂಬುಗ್ರೀವಂ ಘನಸ್ತನಮಂಡಳಂ |
ಭ್ರಮರರುಚಿಮತ್ಕೇಶಂ ಬಿಂಬಾಧರಂ ನಳಿತೋಳ್ ಬೆಡಂ ||
ಗ[1]ಮರ್ದುದು ಮೊಗಂ ರಂಭಾಸ್ತಂಭೋರು ತೆಳ್ವಸಿಜುಪ್ಪೆ ವಿ[2] |
ಭ್ರಮದ ಕಣಿಯಂ ಪೋಲ್ತರ ನಿಲ್ತಲ್ಲಿ ಬೇಡಿತಿಯರ್ ಕೆಲರ್ || 678

ಸೂತ್ರಂ || 160 ||

ಲಿಂಗವಚೋವಿಹಿತವಿಭೇ |
ಉಪಮಾ ದಂಗಳ್ ನ್ಯೂನಾಧಿಕಂಗ[3]ಳುಂ ಸದೃಶತೆಯಿಂ ||
ದೋಷಂಗಳ್. ಸಂ ಗತಮಲ್ಲದುವುಂ ದೋ |
ಷಂಗಳವುಪಮೆಗೆ ಯಥಾಽನೋದ್ವೇಜನದಿಂ[5] || 679

ಲಕ್ಷ್ಯಂ ||

ಲಿಂಗವಚನಭೇದಂಗಳ್ಗೆ ||

ಕಂ || ನಿರವದ್ಯಂ ಗಳಿತದುರಿತಂ |
ಪರಿಪೂತಂ ಜಗದೊಳಿಂತಿವಂ ಗಂಗೆಯವೋಲ್ ||
ಸುರುಚಿರತೇಜಂ ಭಾಸುರ |
ತರಸ್ವರಂ ಶಿಖಿಶಿಖಾಕಲಾಪಂಗಳವೋಲ್ || 680

ಹೀನೋಪಮೆಗೆ ||

ಕಂ || ಎರಲೆಯ ಪಿಂಡುಗಳಂ ದೆಸೆ |
ವರಿವರಿವಿನಮಳಜಿ ತಗುಳ್ವ ನಾಯಂತೆ ರಣಾ ||
ಜಿರದೊಳಿದಿಚ್ಚಿಗದ ಬಲವ |
ದ್ವಿರೋಧಿಸೈನಿಕಮನಾನೃಪಂ ಬೆಂಕೊಂಡಂ || 681

ಅಧಿಕೋಪಮೆಗೆ ||

ಕಂ || ಮುಂ ಬಿಟ್ಟು ಪರೆದ ಕತ್ತಲೆ |
ಯಂ ಬೆದಱಿ ತೆರಳ್ಚಿ ಪೊಳಪ ಪೊಳಗಿಂದೆಸೆದಿ ||
ಪ್ಪರ್ಗಂಬುಜಸಖನಂತಿರೆ ಮಿಾ |
ನಂಬುಱು ಬೆಳಗಿದಪುದಖಿಳಗಗನಾಂತರಮಂ || 682

ಅಸಾದೃಶ್ಯಕ್ಕೆ ||

*ವೃ || ದಾನಾಂಬುಚುಂಬಿತಕಪೋಲತಲಂ ಮದೇಭಂ |
ತಾನೊಪ್ಪುವಂತೆ ಸೊಗಯಿಪ್ಪುದು ನೋಡೆ ಪೀನಂ ||
ನಾನಾರುಚಿಪ್ರಚುರಚಾಪಕಳಾಪಕಾಂತಂ |
ಸಾನುಪ್ರದೇಶದೊಳುಪಾಗತಮಿಾಮಯೂರಂ || 683

1 ಗಮರ್ದುರ್ದಿಡಿ, ಗಮರ್ದುರ್ಚಿ, ಗಮರ್ದನಗಿ. 2 ವಿ | ಭ್ರಮಧರಣಿಯಂ. 3 ಗಳವು. 4 ಸಂಗತಮುಮಲ್ಲದುವು. 5 ದೊಳ್. * ಈ ಪದ್ಯವು ಒಂದು ಪ್ರತಿಯಲ್ಲಿಮಾತ್ರ ಇದೆ.

* ಕಂ॥ ಲತೆಯೊಳ್ ನಳಿತೋಳ್ ಪಲ್ಲವ ।
ತತಿಗಳೊಳಧರಂ ಕಱುಂಕೆಯೊಳ್ ಮೆಯ್ವಣ್ಣಂ ॥
ವಿತತಾಂಶುವಪ್ಪ ಹಿಮದೀ ।
ಧಿತಿಯೊಳ್ ಮೊಗಮುಪಮೆವೆತ್ತು[1] ತೊಳಗುವುದವಳಾ ॥ 684

ಸೂತ್ರಂ ॥ 161 ॥

ಪ್ರತಿವಸ್ತೂಪಮೆ ಸಾಮ್ಯ ।
ಪ್ರತಿವಸ್ತೂಪಮೆ ಪ್ರತೀತಿಯಿಂದಂ ಸಮಾನವಸ್ತುನ್ಯಸನಂ ॥
ರೂಪಕಂ. ಪ್ರತಿಪಾದಿಸುವುದಭೇದಾ ।
ತ್ಮತೆಯಿಂದುಪಮೆಯನದಱ್ತೆ ರೂಪಕಮಕ್ಕುಂ[2] ॥ 685

ಲಕ್ಷ್ಯಂ ॥
ಪ್ರತಿವಸ್ತೂಪಮೆಗೆ ॥

ಕಂ ॥ ನಿನ್ನನ್ನನೊರ್ವನುಂ[3] ಸಂ ।
ಪನ್ನಗುಣಂ ಪುಟ್ಟಲರಿಯನಿನ್ನುಂ ಮುನ್ನುಂ[4] ॥
ಸನ್ನುತನಮೇರುಭೂರುಹ ।
ದನ್ನವು ಪೆಱತಾವ[5] ಮರನುಮೇಂ ಪುಟ್ಟುಗುಮೇ ॥ 686

ಅಸಮಸ್ತರೂಪಕಕ್ಕೆ ॥

ವೃ॥ ನೆಲೆಮೊಲೆ ಪೊನ್ನ ಸೋನ್ನಲಿಗೆಯಾಗೆ[6] ಮೊಗಂ ಸರಸೀಜಮಾಗೆ ಕ ।
ಣ್ಮಲರಲರಾಗೆ ಕೆಂದಳಮೆ ಕೆಂದಳಿರಾಗೆ ಕನತ್ಕಪೋಳಮು ॥
ಜ್ವಲಮುಕುರಂಗಳಾಗೆ ದರಹಾಸಮೆ ಸೂಸುವ ಲಾಜೆಯಾಗೆ ಕೋ ।
ಮಲಲಲಿತಾಂಗಿಯರ್ ನೆರೆದು ನೋಡಿದರಂದಿದಿರ್ಗೊಳ್ವ ಮಾಟ್ಕೆಯಿಂ ॥ 687

ಸಮಸ್ತರೂಪಕಕ್ಕೆ ॥

ವೃ॥ ವದನಾಬ್ಜಂ ಕರಪಲ್ಲವೋಪನಿಹಿತಂ[7] ಬಾಷ್ಪಾಂಬುವಿಪ್ಲಾವಿತಂ[8] ।
ವಿದಳನ್ನೇತ್ರವಿನೀಲನೀರರುಹಮುಷ್ಣೋಚ್ಛ್ವಾಸದಿಂದಂ ಕಱಂ ॥
ಗಿದ ವೃತ್ತಾಧರವಿದ್ರುಮಪ್ರತತಿ ಚಿಂತಾಂಭೋಧಿಮಗ್ನಂ ಕರಂ ।
ಕುದಿಯುತ್ತಿರ್ಪ್ಪುದದೆ ಸೂಚಿಕುಂ ವಿರಹದುಃಖಾಕ್ರಾಂತಿಯುಂ ಕಾಂತೆಯೊಳ್ ॥ 688

ವಿಭಕ್ತರೂಪಕಕ್ಕೆ ॥

ವೃ ॥ ಅಂಬುಜಸೂತ್ರಮೆಂಬ ಪೆಣೆದಾವಣೆಯಂ[9] ಪಱಿದಾವಲೆಂಬ ಬಾ ।
ಳ್ಗಿಂಬಮನೊತ್ತಿ ಕಿಱ್ತು ಲತೆಯೆಂಬ ತುರಂಗಮಮುಮಂ ಪೊರಳ್ಚಿ ಧಾ ॥
ತ್ರಾಂಬುತರಂಗಮೆಂಬ ಪರಿಕಾಱನನಟ್ಟೆ ಮದಾಳಿಯೆಂಬ ಗುಂ[10] ।
ಡಂ ಬೞಿಯಟ್ಟೆ ಸೋಗುವುದು[11] ಸಮೀರಣವಾರಣಮಾಪ್ರದೇಶದೊಳ್ ॥ 689

---

* ಈ ಪದ್ಯಕ್ಕೆ ಹಿಂದೆ ಒಂದು ಪ್ರತಿಯುಳ್ಳಿ "ಅಲ್ಲಿಯೂನುದ್ವಯಕ್ಕೆ" ಎಂದಿದೆ. 1 ಗತ್ಯತೇಂಲ್ದುವುವಿವಳಾ. 2 ಭೇದಂ. 3 ನಿನ್ನಪೊಲಿನೊನ್ವರ್ಗಂ. 4 ಮುನ್ನಂ. 5 ತಾದ. 6 ಸೊನ್ನರಿಗ, ಸಂನತಿಗೆ. 7 ವಿಹಿತಂ. 8 ಲಿಪ್ತಾವಿಲಂ. 9 ಪೆಗದಾಣಗೆಯುಂ. 10 ನಾ । ಡಂ. 11 ಪಾಯ್ವುದು.

ಸಾವಯವರೂಪಕಕ್ಕೆ ॥

ಕಂ ॥ ಪರಿಲುಳಿತಘರ್ಮಜಲಮಂ ।
ಜರಿ ವಿಕಲದ್ಭ್ರೂಪ[1]ತಾಕವಾತಿತರಳತರ ॥
ಸ್ಫುರಿತಾಧರಪಲ್ಲವಮುವ ।
ಳ ರೋಷವಮಂ ವಕ್ತ್ರಮಿದೆ ವಲಂ ಕನ್ನಡಿಕುಂ ॥ 690

ನಿರವಯವರೂಪಕಕ್ಕೆ ॥

ಕಂ ॥ ಆರಕ್ತಕಪೋಲಂ ಮದಿ ।
ರಾರಸಕೃತಸುರಭಿ ಘೂರ್ಣಿತೇಕ್ಷಣಮುದ್ಯ ॥
ದ್ಭ್ರೂರಮ್ಯಲಾಸ್ಯಮಾಸ್ಯಂ ।
ಭೋರುಹವಿಾಸುದತಿಗಿಂತಿದೇನೊಪ್ಪಿದುದೋ ॥ 691

ಸಕಲರೂಪಕಕ್ಕೆ ॥

ವೃ ॥ ವಾರಿಜಂ ವದನಂ ಬೃಹತ್ಪುಲಿನಂ ನಿತಂಬತಲಂ ಚಲ ।
ಚ್ಚಾರುಲೋಚನಕಾಂತಿ ಬಾಳೆಗಳೋಳಿ ಹಾರವೆ ಫೇನವಿ ॥
ಸ್ತಾರಮಂಚಿತಕುಂಚಿತಾಳಕಮುನ್ಮದಾಳಿಗಳಾಗೆ ಶೃಂ ।
ಗಾರನೀವನನೀ(ಪ್ರ)ವಾಪಮಿದೊಂದೆ[2] ದಲ್ ಪೊಸತೆಂಬನಂ ॥ 692

ಪೇತುರೂಪಕಕ್ಕೆ ॥

ಕಂ ॥ ಮೃಗರಾಜಂ ವಿಕ್ರಮದಿಂ ।
ಖಗರಾಜಂ ಸ್ವಾಮಿಭಕ್ತಿಯಿಂ ನಗರಾಜಂ ॥
ಮಿಗಿಲಾದ ಪೆಂಪಿನಿಂ ಪ ।
ನ್ನಗರಾಜಂ ಧೈರ್ಯಗುಣದಿನಾಹವಸಿಂಹಂ ॥ 693

ರೂಪಕರೂಪಕಕ್ಕೆ ॥

ಕಂ ॥ ತ[3]ರುಣಿಯ ಮುಖೇಂದುಕಮಲಾ ।
ಕರನೊಳ್ ದೃಗ್ಭೃಂಗಳಕಾಂ[4]ತನೀಳಾಬ್ಜಮಳಂ ॥
ಕರಿಸೆ ವಿಟರಾಜಭೃಂಗಂ ।
ಬ[5]ರೆ ಪೀಠ್ರ್ವೃತ್ತಸ್ತನಚಂದ್ರಿಕಾವಾಪಿಮಳಮಂ ॥ 694

ಮಾಲಾರೂಪಕಕ್ಕೆ ॥

ವೃ ॥ ಸಂಸಾರಕ್ಕೇಕಸಾರಂ ಬಿಡಿಯ ಕುಲಧನಂ ಲೋಕದಾಲೋಕವಾಧಾ ।
ರಂ ಸಮ್ಯಂಗಕ್ಷಿಗಳ್ಗಾತ್ಮವಮರ್ಗವೃತಂ ಕಾಮಸಾಮ್ರಾಜ್ಯಸರ್ವ ।
ಸ್ವಂ ಸಾಂ[6]ದರ್ಯಕ್ಕೆ ಗೇಹಂ ಮಹಿತಳತಿಳಕಂ ಜಾಣ ಮೆಯ್ ನಾಣ ಜೀವಂ ।
ಮಾಂಸಾಸೀ ನಿನ್ನ[7]ಚಿಂತಪ್ಪಳೆಯಳನಿ ಬಿಯಲ್ಕೆಂತು ನೀನೆತ್ತಿಕೊಂ[8]ಡಮ್ ॥ 695

1 ಲಿಕಾ. 2 ನಾಲ್. 3 ತರುಣೀಮುಖೇಂದು. 4 ತಾಂತಿ. 5 ಪರಿ. 6 ಸಾಂದರ್ಯಕಗೇಹಂ. 7 ಚಿಪ್ಪಿಯಳಿಂತು, ನಲ್ಲಿಯನ್ನೆಂತು, 8 ಕೊಂಡಿರ್.

ವಿಶೇಷಗುಣರೂಪಕಕ್ಕೆ ||

ವೃ || ಜಗದಾಲೋಕನದರ್ಪ್ಪಣಂ ಪ್ರಥಮದಿಕ್ಕಾಂತಾನನಂ ಕಂತುರಾ |
ಜಗಜೋದ್ದೀಪನಪಿಂಡಮಂಬರಸರಸ್ಯ[1]ತ್ತಂಸಪದ್ಮಂ ವಿಯೋ ||
ಗಗಣಾಕೂತಕುರಂಗಪೋತಭಯಕೃ[2]ತ್ಕಂಠೀರವಂ ಚೆಲ್ವುವೆ |
ತ್ತೊತ್ತಗೆದತ್ತಂಬುಧಿವೀಚಿನರ್ತ್ತನನಟಂ ಬಿಂಬಂ ಸುಧಾಸೂತಿಯಾ || 696

ಸೂತ್ರಂ || 162 ||

ಉಪಮಾನಕಥನಮೊಂದಱಿ |
ಸಮಾಸೋಕ್ತಿ. ನುಪಮೇಯಮನ ಱಿವುದದು ಸಮಾಸೋಕ್ತಿ ನಿಷೇ ||
ಆಕ್ಷೇಪಂ. ಧಪರಂ ತಾನೆಂಬಂತಾ |
ಗೆ ಕೇೞ್ವುದಾಕ್ಷೇಪಮಕ್ಕುಮದು ಬಹುರೂಪಂ || 697

ಲಕ್ಷ್ಯಂ ||

ಸಮಾಸೋಕ್ತಿಗೆ ||

ಕಂ || ಫಳತರುಗಳ್ ಪಲವುಂ ಬನ |
ದೊಳಗೆ ಸು[4]ರೋವ್ವೀರುಹಪ್ರಕಾಶಂಗಳ್ ತಾ |
ಮೊಳವಾದೊಡಮೆಂತುಂ ಬಗೆ |
ಗೊಳಿಸಿದಪುದಿದೊಂದೆ ನೂತಚೂತಕುಜಾತಂ || 698

ಆಕ್ಷೇಪಕ್ಕೆ ||

ಕಂ || ಬಡನಮೃತಂ ಜನಿಯಿಸೆ ಪಾ |
ಲ್ಗಡಲೊಳ್ ವಿಧು ಪುಟ್ಟದಂ ಕಳಾಮಯನೆಂಬೀ ||
ನುಡಿ ಪುಸಿ ಜಡಾತ್ಮಕಂ ವಿಷ |
ದೊಡನೆ ವಿಷಾಕರದೊಳೊಗೆದನೆಂ[5]ಬುದೆ ತಥ್ಯಂ || 699

ಅಂತುಮಲ್ಲದೆಯುಂ ||

ಕಂ || ಪೊಗೞಲ್ಕಾ ನೃಪನಂ ನಾ |
ಲಗೆಯೊಂದಱಿಮನುಜರಿಕ್ಕೆ ನೆಱೆಯುವನೆಣಂ ವಾ ||
ಸುಗಿಯುಂ ಪವನಾಧ್ವಮನಾ |
ನಗಮಾನಂ ವ್ಯಾಪದಿಂದಮಳೆಯಲ್ ನೆಱೆವಂ || 700

ಸೂತ್ರಂ || 163 ||

ಪೊಸಯಿಸುವರ್ತ್ಥಂ ಕ್ರಿ[6]ಯೆಯಿಂ |
ಸಾಮ್ಯಂ. ಪ್ರಸಿದ್ಧವಸ್ತುವಿನ ದೊರಗೆ ವರೆ ಸಾಮ್ಯಂ ಮ ||
ಪರಾಖ್ಯಾನಂ. ತ ಸಮಾನವಿಶೇಷಣಗುಣ |
ಲೆಸಿತಂ ಸಮವೃತ್ತಮಪ್ಪುದು ಪರಾಖ್ಯಾನಂ || 701

1 ಸ್ಯುತ್ತುಂಗಹಂಸಂ. 2 ಥ್ಯ. 3 ನಕ್ಷ್ರೇತಿ. 4 ಸುರಂಜಸಿರುಹಪ್ರಕಾಶಂಗಳ್. 5 ನೆಂಬ. 6 ಕ್ರಿಯುಯುಂ, ಕ್ರಿಯೆಯಂ.

ಲಕ್ಷ್ಯಂ ॥

ಸಾವ್ಯಕ್ಕೆ ॥

ಕಂ ॥ ಸಕಲಾರ್ತ್ಥಿಮನೋರಥದಾ ।
ಯಕಂ ಮಹೋದಾತ್ತಮೂರ್ತ್ತಿ ಸಾಂದ್ರಚ್ಛಾಯಂ ॥
ಸು[1]ಕರಾಭಿಗಮಂ ನರಪಾ ।
ಲಕನಿರೆ ಕಲ್ಪವನೀಜಮೇಗೆಯ್ದಪುದೋ ॥ 702

ಪರಿಖ್ಯಾನಕ್ಕೆ ॥

ಕಂ ॥ ವಿಕಚಸರಸೀರುಹಂ ಕೋ ।
ಕಕುಳವ್ಯಾಭಾಸಿ ಪೂಗೊಳಂ ತಾನಿರೆಯುಂ ॥
ಬಕನಿಕರಲುಳಿತಕಲುಷೋ ।
ದಕವಿರಳದೊಳಂಚೆ ಪೆಂಚೆಯೊಳ್ ವಸಿಯಿಕುಮೇ ॥ 703

ಸೂತ್ರಂ ॥ 164 ॥

ಎಂತುಟು ಮುನ್ನಂ ಪೇೞ್ದ ।
ದೃಷ್ಟಾಂತಂ. ತ್ಥಾಂತರವಂತುಟನೆ ಬೞಿಕೆ ತೋಱುವುದದು ದೃ ॥
ಉತ್ತರಂ. ಷ್ಟಾಂತಂ ಪ್ರಶ್ನಾರ್ತ್ಥದೊಳೋ ।
ರಂತನುಗುಣಮಾಗೆ ಪೇೞ್ವುದುತ್ತರಮೆನಿಕುಂ ॥ 704

ಲಕ್ಷ್ಯಂ ॥

ದೃಷ್ಟಾಂತಕ್ಕೆ ॥

ಕಂ ॥ ಭವದಾಲೋಕನದಿಂದಾ ।
ಯ್ತ್ತುವಳ್ಗೆ ಪಿರಿದುಂ ಮನೋವಿ[2]ಕಾಸಮದೀಗಳ್ ॥
ಕುವಲಯಬಂಧುವಿನಾಲೋ ।
ಕ[3]ವೆ ಮಾಡುವುದಲ್ತೆ ಕುಮುದವನವಿಕಸನಮಂ ॥ 705

ವೃ ॥ ಪತಿಯಿಂ ಪಿಂಬಡಿನೊಳ್ ಪತಿವ್ರತೆಗೆ ಪೇೞೊಂದುಂಟೆ ಕೃತ್ಯಂ ವಿರಾ ।
ಗ[4]ತೆಯುಂ ಮೋಹ್ ತದನುಪ್ರಯಾಣವಿ[5]ಧಿಯುಂ ತಾವಲ್ಲದೆಂದಿಂತಿದಂ ॥
ಕ್ಷಿತಿಗೆಲ್ಲಂ ತಿಳಿಪಾಗೆ ತೋರ್ಪ್ಪ ತೆಱದಿಂ ರಾಗೋದಯಂ ಪಿಂಗೆ ಸ[6] ।
ಗತೆ ಸಂಧ್ಯಾಂಗನೆ ಪೋದಳ[7]ದೊಲವಿನಿಂ ಪೆನ್ನೊಳ್ ದಿನಾಧೀಶನಾ ॥ 706

ಉತ್ತರಕ್ಕೆ ॥

ವೃ ॥ ಮಾರಣಮೆನಿಪ್ಪುದಾವುದು ದರಿದ್ರತೆ ಪತ್ತಿದ ಕುತ್ತಮಾವುದಂ ।
ತರಿಸದೆ ನಿಂದ ಚಿಂತೆ ಸುಖಮಾವುದು ಪುತ್ರಮುಖಾವಲೋಕನಂ ॥
ನರಕದ ದುಃಖಮಾವುದವಿನೀತಕಲತ್ರಮುದಾತ್ತಮಪ್ಪಲಂ ।
ಕರಣಮದಾವುದಗ್ಗ[8]ಳಿಕೆವೆತ್ತ ಗು[9]ಣಂಗಳೆ ಭೂತಳಾಗ್ರದೊಳ್ ॥ 707

---

1 ಸುಕರಾಜಿಗವಂ. 2 ವಿಕಾರವಂದಾಗಳ್. 3 ಕವಲ್ತ್ವಾಡುವುದು. 4 ಗತಿಯಿಂ. 5 ವಿಧಿಯಿಂ ತಾನಾವವೆಂ.
6 ಸಂ। ಗತಿ, 7 ಳೊಂದೊಲವಿನಿಂ, 8 ಬಟ್ಟೆಯಾವು. 9 ಗುಣಂ ಸುಜನೈಕಬಾಂಧವಾ.

ಸೂತ್ರಂ ॥ 165 ॥

ಸಂಶಯಂ. ಭ್ರಮಂ. ಅಪಹ್ನುತಿ.

ಮಾತೇನೊ ಸಂಶಯಂ ಸಂ[1] ।
ಶ್ರೀತಿಪರಂ ಚಿತ್ತಮೋಹನಂ ಭ್ರಮಮಕ್ಕುಂ ॥
ಭೂತಾರ್ಥಾಪಹ್ನವಸಂ[2] ।
ಭೂತಮದನ್ಯಾರ್ಥದೃಷ್ಟ್ಯಪಹ್ನುತಿನಾಮಂ ॥ 708

ಲಕ್ಷ್ಯಂ ॥

ಸಂಶಯಕ್ಕೆ ॥

ವೃ ॥ ಅಳಿಗಳೊ ನೀಳ್ದ ಕರ್ಬೊಗೆಯೊ ಕೆಂದಳಿರೋಳಿಯೊ ಸುತ್ತುಗೊಂಡು ತ ।
ಳ್ತಳುರ್ವುರಿಮಾಲೆಯೋ ಸರಸಪಕ್ವಫಲಂಗಳೊ ವಿಸ್ಫುಲಿಂಗಸಂ ॥
ಕುಳಮೊ ಮನಕ್ಕೆ ಸಂದೆಯಮಗುಂದಲೆಯಾಗಿರೆ ನೋಡಿನೋಡಿ ಕಾ ।
ಟಿಸುವುದೆನ್ನಮೆಯ್ ಕೆಳದಿ ಪೇ[3]ೞದು ಮಾಮರನೋ ದವಾಗ್ನಿಯೋ ॥ 709

ಭ್ರಮಕ್ಕೆ ॥

ಕಂ ॥ ಮಣಿಭವನಂಗಳ ರುಚಿಗಳ್ ।
ಪೆಣೆದು ನಭೋಂಗಣದೊಳಿಂ[4]ದ್ರಚಾಪವಿಳಾಸ ॥
ಕ್ಕೆಣೆಯಾಗಿರೆ ಬಹುವಿಧದಿಂ ।
ಕುಣಿವುವು ಕಾರ್ಗ್ಗೆತ್ತು ಕೇಗಿ ಸೋಗೆನವಿಲ್ಗಳ್ ॥ 710

ವೃ ॥ ಕವಿವ ಕುಬೇರಧೂಪದ ಕವಿಲ್ವೊಗೆಯುಂ ನವಮೇಘಮಾಲಿಕಾ ।
ನಿವಹಮನೆಗೆತ್ತು ತೋರ್ಪ್ಪ ಮಣಿದೀಧಿತಿಯುಂ ಕುಡುಮಿಂ[5]ಚೆಗೆತ್ತು ಪೊ ॥
ಣ್ಮುವ ಪಟಹಪ್ರಣಾದಮನೆ ಮೇಘನಿನಾದಮನೆಗೆತ್ತು ಕಾಲತಾಂ ।
ಡವಮನೊಡರ್ಚ್ಚುಗುಂ ಶಿಖಿಕುಳಂ ಕನಕಾಯುತಕೂಟಕೋಟಿಯೊಳ್ ॥ 711

ಅಪಹ್ನುತಿಗೆ ॥

ಕಂ ॥ ಉನ್ಮದಮಧುಕರಕುಳರವ ।
ಮ[6]ನ್ಮಥದುರ್ಘುಂಕಾರನಿನದಮಲ್ತಿದು ಪೀನಂ ॥
ಮನ್ಮಥಚಾಪವಿಮುಕ್ತೋ ।
ದ್ಯನ್ಮಾರ್ಗ್ಗಣಝೇಂಕೃತಿಸ್ವನಂ ತಾನಕ್ಕುಂ ॥ 712

---

1 ಸಂ । ಭೀತಿ, ಸಂ । ಭೀತಿ. 2. ಸಂ । ಪೂತ, ಸಂ । ಭೂತ. 3 ಕೆಳೆದು. 4 ಳಮುರಚಾಪ. 5 ಮಿಂಚಿ
6 ವನ್ಮಥ.

ಸೂತ್ರಂ ॥ 166 ॥

ಉ[1]ಪಮೇಯಮನ್ಯಗ್ಭಾವ್ಯೋ ।

ವ್ಯಪದೇಶಂ. ಪ[2]ಪನ್ನ ಮುಪಮಾನಮಾಗೆ ಮುಖ್ಯಮವಕ್ತ್ಯಂ ॥

ಸ್ಮರಣಂ. ವ್ಯಪದೇಶಂ ಮಂ[3] ಪೋದುದ ।

ನಪೂರ್ವ್ವಮಂ ಕಂಡು ನೆನೆವುದದು ತಾಂ ಸ್ಮರಣಂ ॥ 713

ಲಕ್ಷ್ಯಂ ॥

ವ್ಯಪದೇಶಕ್ಕೆ ॥

ಕಂ ॥ ಕುಚಯುಗಳಚ್ಛಲದಿಂದೊಂ ।
ದಿ ಚಕ್ರವಾಕದ್ವಯಂ ಭುಜವ್ಯಾಜಲತಾ ॥
ರುಚಿಗಳೊಳಿರ್ದ್ದಪ್ಪುವು ನಾ ।
ಡೆ ಚೆಲ್ವುವೆತ್ತಾಸ್ಯಮಿಷಸರಃಪರಿಸರದೊಳ್ ॥ 714

ಸ್ಮರಣಕ್ಕೆ ॥

ಕಂ ॥ ಮನಕಂ ಪಕ್ಕಲ್ಲದೆ ನೆ[3]ಲ ।
ನಿನಿಸೂನುಂ ಮೆಚ್ಚೆ ಕಣ್ಣಿನಂ ನೋಡಿ ನರಂ ॥
ನೆನೆದಂ ತನ್ನೊಳ್ ತಾಗಿದ ।
ಪಿನಾಕಪಾಣಿಯ ಕಿರಾತತನುಸಾಪ್ತವಮಂ ॥ 715

ವೃ ॥ ವಿಶಾಳಮಳಿನೋಗ್ರತುಂಗಗಿರಿಕುಂಜಸಂಜಾತಮ ।
ಪ್ಪಶೋಕವನದಲ್ಲಿ ಧಾತುಜಳನಿರ್ಝ್ಝರಂ ಪಾಯೆ ಮಾಣ ॥
ಸಶೋಣಿತನುಯುಂಪೊಲಾಗಿ ಕಿಮದಂತರಂ ತೋಱೆ ಕಂ ।
ಡ ಶಾರ್ಙ್ಗಿ ನೆನೆಗಂ ಹಿರಣ್ಯಕನದೊಂದುಬಿಬ್ಬಂದವಮಂ ॥ 716

ಸೂತ್ರಂ ॥ 167 ॥

ಅ[4]ನುಕಂಪೆಯುಕ್ಕೆ ಮೇಣ್ ಕು ।

ಪ್ರತೀಪಂ ತ್ಸನಮುಪಮೇಯಮಸ್ಥಿತಂ ಪ್ರತೀಪಂ ಗೆಡೆಗೊಂ ॥

ಸಮಯೋಗಂ ಡ[5]ನುಗತಮಾಗಿರೆ ಗುಣದೋ ।

ಷನಿರೂಪಣದಿಂ ವಿಭಾಗಮದು ಸಮಯೋಗಂ ॥ 717

ಲಕ್ಷ್ಯಂ ॥

ಪ್ರತೀಪಕ್ಕೆ ॥

ಕಂ ॥ ಅಮಲಿನಮಾಗಿಯುಮಿಾನಿ ।
ನ್ನ ಮೊಗಂ ಮೃಗಲಕ್ಷ್ಮನೆಣೆಗೆ ವಂದಪುದಿನಿಸಂ ॥
ಕಮಲಾಯತಾಕ್ಷಿ ಕಜ್ಜಲ ।
ಮಿಮಿಶ್ರಿತಾಶ್ರುದಬಿಂದುಮಲಿನಕಪೋಲಂ ॥ 718

1 ಉಪಮಾನನನ್ಯಪ್ರಾಪ್ತೀ. 2 ದ್ಯುಪನ್ನ. 3 ನಲೆಗಿರಿಸಿನಂವೆಚ್ಚ. 4 ಅನುಕಂಪಮುಕ್ಕೆ. 5 ಡನುಮಾತ.

ಕಂ॥ ಅಸಿತೋತ್ಪಳದಳಶೋಭೆಯು ।
ನೆ[1]ಸೆಯೆ ಕಟಾಕ್ಷದೊಳೆ ತ[2]ಳೆದ ಮದದಿಂದಾಲೋ ॥
ಕಿಸದಿರು ಮುಯ್ಯಂ ಮಾನಿಸಿ ।
ದೆಸೆದೆಸೆಗಳೊಳೊಳವು ಕುವಲಯಾಕರಮೆಸಿತುಂ ॥ 719

ಸಮಯೋಗಕ್ಕೆ ॥

ಕಂ॥ ಮೃಗನಯನೆಯುರೊಲವುಂ ಬ ।
ಳ್ಳಿಗೊಂಡು ತಳ್ತಡರೆ ಪೊಳೆದು ಮಿಂಚುವ ಮಿಂಚುಂ ॥
ಬಗೆವಾಗಳ್ ನಿಲ್ಲವದೊಂ ।
ದು ಗಱಿಗೆಯುಂ ಘನನಿಬದ್ಧಮೆನೆ ಸಂದಿರ್ದ್ದಂ ॥ 720

ಸೂತ್ರಂ ॥ 168 ॥

ಬಗೆದಿರ್ದ್ದ ಪೇೞದೊಂದಂ ।
ಅಪ್ರಸ್ತುತಪ್ರಶಂಸೆ. ಪೊಗೞ್ವಂದಪ್ರಸ್ತುತಪ್ರಶಂಸೆಯೆನಿಕ್ಕುಂ ॥
ಅರ್ಥಾಂತರನ್ಯಾಸಂ. ನೆಗೞ್ದ ನುಡಿವುದನೆ ಸಾಧಿಸಿ ।
ನಿಗದಿಪ್ಪುದರ್ಥಾಂತರ[illegible] ಪ್ರಸಂಗನ್ಯಾಸಂ ॥ 721

ಲಕ್ಷ್ಯಂ ॥

ಅಪ್ರಸ್ತುತಪ್ರಶಂಸೆಗೆ ॥

ವೃ॥ ಮೃದುಹರಿತಪ್ರವಾಳನವಶಾಡ್ವಲರಾಜಿಯನಾಯ್ದು ಮೇದು ತ ।
ಣ್ಪೊವಪಿದ ನಿರ್ಝರಾಂಬುಗಳನೊಯ್ಯನೆ ಪೀರ್ದ್ದು ನಿಜಾಂತರಂಗದೊಳ್ ॥
ಪುದಿದನುರಾಗದಿಂದಳಸಿ ಪುಲ್ಲೆಗಳಾರೊಳಮೆಂದು ದೈನ್ಯಮಿ ।
ಲ್ಲದೆ ಸುಖಮಿರ್ಪ್ಪುವೀವನನಿಕುಂಜವಿಭಾಗದೊಳೇಣಸಂಕುಳಂ ॥ 722

ಅರ್ಥಾಂತರನ್ಯಾಸಕ್ಕೆ ॥

ವೃ॥ ಜಗದೊಳಗುಳ್ಳ ನದೀಪ್ರವಾಹಜಲಂಗಳೊ[3]ಟ್ಕುಡಿದಾವಗಂ ।
ಪುಗೆಯುಮೊತ್ತದು ಮೇರೆಯಂ ಬಡಬಾನಳಂ ಬಿಡದಾಗಳುಂ ॥
ತಗುಳೆ ಪೀರೆಯುಮಂತದೆಳ್ಳಸಿತಪ್ಪೊಡಂ ತವದಂತೆವೋಲ್ ।
ಬಗೆದು ನೋಡೆ ಮಹಾತ್ಮರಪ್ಪವರೇಕರೂಪರದೆಲ್ಲಿಯುಂ ॥ 723

ಕಂ॥ ರೂಪರ್ದ್ಧನಾರಿಯಾಯ್ತು ವಿ ।
ರೂಪಾಕ್ಷಂಗೆಂತು ಶಾಂತರೌದ್ರಾತ್ಮಕಮಾ ॥
ರೂಪು ನಿನಗಾದುದಂ[4]ತೆ ಮ ।
ಹಾಪುರುಷರ ಚರಿತಮಪರತಂತ್ರಮಚಿಂತ್ಯಂ ॥ 724

ಇವು ಉಪಮಾಭೇದಂಗಳ್ ॥

1 ನೆಸಿವ, 2 ತಳೆದು, 3 ಕೊಳ್ಳವಿ, 4 ದೆಂತು.

ಸೂತ್ರಂ ॥ 169 ॥

ನಾಡಾಡಿಗಱಿವಿನಂ ಕೆ ।
ಯ್ಗೂಡಿದ ವಸ್ತುಪವರ್ಣ್ಣನಂ ವಿಸ್ಮಯಮಂ ॥
ಅತಿಶಯಂ. ಮಾಡುವೊಡತಿಶಯಮಕ್ಕುಂ ।
ನಾಡೆಯುಮಿದಱಿಂದಮಾವುದುಂ ಬಗೆಗೊಳಿಕುಂ ॥ 725

ಸೂತ್ರಂ ॥ 170 ॥

ವಿರೋಧಮುತ್ಪ್ರೇಕ್ಷೆ ವಿಭಾವನಾಹ್ವಯಂ ।
ಅತಿಶಯ ತಿರೋಹಿತಂ ಪೂರ್ವ್ವಮಹೇತು ತದ್ಗುಣಂ ॥
ಭೇದಂಗಳ್. ಪರಸ್ಪರಾಸಂಗತಿಕಂ ವಿ[1]ಶೇಷಮುಂ ।
ನಿರೂಪ್ಯಮಾಣಾತಿಶಯಪ್ರಭೇದಮುಂ ॥ 726

ಅಲ್ಲಿ॥

ಸೂತ್ರಂ ॥ 171 ॥

ಅನ್ಯೋನ್ಯವಿರುದ್ಧಪದಾ ।
ವಿರೋಧಂ. ರ್ತ್ಥನ್ಯಾಸಮೆ ತಾಂ ವಿರೋಧಮವಿವಕ್ಷಿತಸಾ ॥
ಉತ್ಪ್ರೇಕ್ಷೆ. ಮಾನ್ಯಮೆ ತದ್ಗುಣಯೋಗದಿ ।
ನನ್ಯತ್ವಾರೋಪಮಪ್ಪುದುತ್ಪ್ರೇಕ್ಷೆ ವಲಂ ॥ 727

ಲಕ್ಷ್ಯಂ॥

ವಿರೋಧಕ್ಕೆ ॥

ಕಂ॥ ಮರದುಱುಗಲ ಕೆಚ್ಚಲೆಯುಂ ।
ಪರಿಕಲಿಸಿ ಪೊದಟ್ದ ಶೋಣಮಣಿದೀಧಿತಿಯುಂ ॥
ನೆರೆದಿರ್ದ್ದುವೊಂದನೊಂದೊ ।
ತ್ತರಿಸಲ್ ನೆಱೆ ನೆಱೆಯವೀಮಹೀಧರತಟದೊಳ್ ॥ 728

ಘನಜಘನಂ ತನುತನು ನಿ ।
ಮ್ನನಾಭಿ ತುಂಗಸ್ತನಂ ವಿನೀಲಿಮಕೇಶಂ ॥
ಕನದರುಣದ[2]ಶನವಸನಂ ।
ಮಾ[3]ನದೊಳ್ ಭಾವಿಸೆ ವಿರುದ್ಧಮಿವಳಾಕಾರಂ ॥ 729

---

1 ವಿಶೇಷ್ಯಮುಂ, ವಿಶೇಷ್ಯಮುಂ. 2 ಶಂಕ. 3 ಮನಕ್ಕೆ.

ವೃ ॥ ದಶರಥನಾಗಿಯುಂ ದಶಸಹಸ್ರರಥಂ ರವಿವಂಶನಾಗಿಯುಂ ।
ಶಶಧರಕೀರ್ತ್ತಿರೂಪನಿನನಾಗಿಯುಮಸ್ತಮಯಾಪವರ್ಜ್ಜಿತ ಕ ॥
ರ್ಕ್ಕಶಬಲನಾಗಿಯುಂ ಮೃದುವಪುಃಪ್ರಸರಂ ಮತಿತೀವ್ರನಾಗಿಯುಂ ।
ಪ್ರಶಮಿತಚಿತ್ತನೆಂತುಮವಿರುದ್ಧಗುಣಂ ಗುಣವಜ್ಜನಸ್ತುತಂ ॥ 730

ಅತಿಸೂಕ್ಷ್ಮೇಕ್ಷಣನೆಂತುಮಂಧನಸತೀಸೌಂದರ್ಯ್ಯದೊಳ್ ಸ[1]ತ್ಕ್ರಮಾ ।
ನ್ವಿತನೆಂತುಂ ಪೆಳವಂ ಮಹಾಜಿಮುಖದೊಳ್ ನಿ[2]ರ್ಣ್ನೀತಸವ್ಯಗ್ರಹು ॥
ಶ್ರುತನೆಂತುಂ ಬಧಿರಂ ಕರಂ ಪರಪರೀವಾದಂಗಳೊಳ್ ನೋಡಿಪ್ಪೊಡ ।
ದ್ಭುತಮಾಶ್ಚರ್ಯ್ಯಮಭೂತಪೂರ್ವ್ವಮೆಸಕಂ ಶ್ರೀಗಂಡಮಾರ್ತ್ತಂಡನಾ ॥ 731

ಉತ್ಪ್ರೇಕ್ಷೆಗೆ ॥

ವೃ ॥ ಇರದೆ ನಿತಂಬಮೆಂಬಹಿನಿವಾಸದಿ[3]ನೀಕೆಯ ರೋಮರಾಜಿಯಿಂ ।
ಬುರಗನಳುರ್ಕ್ಕೆಯಿಂ ಮೊಗಮನೊಪ್ಪುವ ಚಂದ್ರನೆಗೆತ್ತು ಕೋಪದಿಂ ॥
ಬರೆ ಬರಲೀಯದತ್ತ ಮೊಲೆಗಳ್ ತಡೆದಿರ್ದ್ದಪುವೆಂದು ಪರ್ಚ್ಚಿವಂ ।
ತಿರೆ ಕಿವಿಯೊಳ್ ಪೆಡಂಗಿಡಿದು ತೋರ್ಕ್ಕುಮಪಾಂಗದ ನೋಟಮಾಕೆಯಾ ॥ 732

ಕಂ ॥ ಎಳೆಯಳ ಮೊಗದ ನೆಲಲ್ ತ ।
ವ್ಮೊಳಗಿರೆ ಸಂತಸದೆ ಬೇಗಿದಂತಿರ್ದ್ದ ಕುಚಂ ॥
ಗಳ ಮಱೆಯೊಳ್ ಕಾಣದೆ ಮೊಗ ।
ದಳವಂ ನಡು ನೆನೆದು ಬಡಬಡಾದಂತಿರ್ಕ್ಕುಂ ॥ 733

ವಾಸರಪತಿ ಬಿಸುಗದಿರಿಂ ।
ಪೇಸದೆ ತವೆ ಪೀರ್ಗ್ಗುಮೆಂಬ ಮಱುಕದಿನಂಭೋ ॥
ಜಾಸನನಂಬುಜವನಮಂ ।
ಬಾಸಣಿಸಿದನೆನಿಪುವೆಸೆವ ತಾವರೆಯೆಲೆಗಳ್ ॥ 734

ನೀಲಿಯ ರ[4]ಸದೊಳ್ ಕರಡಿಯ ।
ತೋಲಂ ತೊ[5]ಯ್ದುಟ್ಟಿ ಮಸಿಯೊಳದಱೊಳ್ ಪುದಿದ ॥
ತ್ರೈಲೋಕಮುಕ್ಕು ಮೆನಿಸಿ ।
ತ್ತಾಲೋಕವಿರೋಧಿ ಬಹಳತಮಸಂತಮಸಂ ॥ 735

ಸೂತ್ರಂ ॥ 172 ॥

ಕ್ರಿಯೆಯುಂ ಪ್ರತಿಷೇಧಂಗೆಯೆ ।
ವಿಭಾವನೆ. ನಿಯುತಫ[6]ಳವ್ಯಕ್ತಿಯುದು ವಿಭಾವನೆಯೇಕಾ ॥
ತಿರೋಹಿತಂ. ಶ್ರಯಮನದೊಂದಂ ಗುಣದತಿ ।
ಶಯಂ ತಿರೋಹಿಸೆ ತಿರೋಹಿತಂ ತಾನಕ್ಕುಂ ॥ 736

1 ವಿಶ್ರಮಾ. 2 ನಿರ್ನ್ನಿಕ್ತ. 3 ದೊಳೀಕೆಯ. 4 ರಸದಿಂ. 5 ತೊಯ್ದುಟ್ಟಿ. 6 ಪದವ್ಯಕ್ತಿಯುದ.

ಲಕ್ಷ್ಯಂ ॥

ವಿಭಾವನೆಗೆ ॥

ವೃ ॥ ಸಮುಱದೆ ಕೊಂಕಿ ನೀಳ್ದಸಿಯ ಪ್ರರ್ವ್ವಗಳೆಚ್ಚದೆ ನಾಡೆಯುಂ ಬೆಡಂ ।
ಗಮರ್ದಸಿತಾಕ್ಷಿಯುಗ್ಮಮಡಿಯುಡದೆ ಕೆಂಪೆಸೆದಿರ್ದ್ದ ಕೆಂದಳಂ ॥
ಭ್ರಮರಕುಳಪ್ರಭಾ[1]ಸಿ ಕುಟಿಲಾಲಕಮೊತ್ತದೆಯುಂ ನಿಸರ್ಗ್ಗದಿಂ ।
ತಮಗೆನೆ ಗಾಡಿ ಕೆಯ್ಗ ಱಯೆ ಬರ್ಪ್ಪ ಲತಾಂಗಿಯರಾದವೊಪ್ಪಿದರ್ ॥ 737

ಕಂ ॥ ಆ[2]ಕುಪಿತಕಲುಷಿ ಜಲಮುಮಾ ।
ನಕಪ್ರಮತ್ತಂ ಶಿಖಂಡಿಸಂತಾನಮುಹೇ ॥
ತುಕಸುರಭಿ ನೀಪವಿಪಿನಂ ।
ಸಕಳಮಹೀತಳದೊಳಾದುದಂದೊರ್ವ್ವಗದಲೊಳ್ ॥ 738

ತಿರೋಹಿತಕ್ಕೆ ॥

ಕಂ ॥ ಇನಿಯನ ವಿಯೋಗದಿಂದಾ ।
ದ ನಿನ್ನ ಬಡತನಮುನಱಯಲಾಗದದಿ[3]ನಿಸುಂ ॥
ಘನತರಚಂದ್ರಕಲಾಭಿಷ ।
ವನಿಕಾಕಸ್ವತನುಕಾಂತಿಯಿಂ ತರಲಾಕ್ಷೀ ॥ 739

ಕಾಲಿಂದಿಯಸಿ[4]ತಜಲದೊಳ ।
ಗೋಲಾಡುವ ಕೃಷ್ಣನಂ ಸವರ್ಣ್ಣತೆಯಿಂ ಗೋ ॥
ಪಾಲಕುಮಾರರ್ ನೋಡಿಯು ।
ಮಾಲೋಲಮನಸ್ಕರಱಯದಾ[5]ಕುಲಮುತ್ತರ್ ॥ 740

ಸೂತ್ರಂ ॥ 173 ॥

ಜನಿಯಿಸೆ ಮುನ್ನಂ ಜನ್ಯಂ ।
ಪೂರ್ವ್ವಂ. ಜನಕದಿನದು ಪೂರ್ವ್ವಮೆಂಬುದಕ್ಕುಂ ಮತ್ತಂ ॥
ಅಹೇತುಕಂ. ಸ್ವನಿಮಿತ್ತದೊಳಂ ಕಾರ್ಯ್ಯಂ ।
ಜನಿಯಿಸದಿರ್ಪ್ಪರವಹೇತುಕಂ ಪೆಸರಕ್ಕುಂ ॥ 741

ಲಕ್ಷ್ಯಂ ॥

ಪೂರ್ವ್ವಕ್ಕೆ ॥

ಕಂ ॥ ಸಂದಿಸೆ ಗಱ ಸಂದಿಸೆ ರಘು ।
ನಂದನನೆಡೆಗಿಱದು ಕವಿವ ಕಣೆಯಿಂ ಮುನ್ನಂ ॥
ಬಂದುದು ನೆಲಕ್ಕೆ ರಿಪುಭಟವ ।
ವೃಂದಂ ಬಱಕೆಯುಂ ನಿಶಾತವಿಶಿಖಪ್ರ[6]ಸರಂ ॥ 742

1 ಹಾಸಿ, 2 ಅಕುಟಿಲಕಲುಷ, ಅಕುಟಿತ. 3 ದಿನಸುಂ. 4 ನಡುನೀರೊಳ್. 5 ರಾಕುಲ. 6 ಪ್ರಕರಂ.

ಕಂ ॥ ಸ್ಮರನ ಶರಂಗಳಿವೆನೆ ತರ ।
ತರದಿಂ ಪೊರೆನೆಗೆದು ಮೆಲ್ಲಮೆಲ್ಲನೆ ಬಱಿಯಂ ॥
ಬಿರಿದುವು ಮಲ್ಲಿಗೆ ಮು[1]ನ್ನಮೆ ।
ಬಿರಿದುವು ಬಿಬ್ಬರನೆ ಬಿರಯಿಜನದಳ್ಳೆರ್ದೆಗಳ್ ॥ 743

ಅಹೇತುಕಕ್ಕೆ ॥

ಕಂ ॥ ಪೆತ್ತುಂ ತೆಳ್ಪಱಯದ ನಡು ।
ಮುತ್ತುಂ ಬೀಱದ ಪಯೋಧರಂ ಮುನಿದುಂ ಚೆ ॥
ಲ್ವೊತ್ತರಿಪ ನಗೆಮೊಗಂ ಮೆ ।
ಯ್ವೆತ್ತಿರೆ ಕರಮೊಪ್ಪಿದಪ್ಪರಲ್ಲಿಯ ಪೆಂಡಿರ್ ॥ 744

ಸಕಲುಷವಿಕೃತಾಶಯರೊಳ ।
ಮಕೋಪನಂ ಕುಟಿಲವೃತ್ತರೊಳಮತಿಋಜು ದೂ ॥
ಷಕರೊಳಮರೂಕ್ಷವಚನಂ ।
ಸಕಲಮಹೀವಳಯತಿಳಕನೀಬುಧತಿಳಕಂ ॥ 745

ಸೂತ್ರಂ ॥ 174 ॥

ತದ್ಗುಣಂ. ಅತಿಬಹಲಸ್ಥಿತಿಯಿಂ ಸಂ ।
ಗತಗುಣಮವಿಭೇದಿಯಾಗೆ ತದ್ಗುಣಮೆನಿಕುಂ ॥
ಪರಸ್ಪರಾ ಸಂಗತಿಕಂ. ಕೃತಕಾರ್ಯ್ಯಕಾರಣಂ ವಿ ।
ಪ್ರತಿಷಿದ್ಧಮದೆನೆ ಪರಸ್ಪರಾಸಂಗತಿಕಂ ॥ 746

ಲಕ್ಷ್ಯಂ ॥

ತದ್ಗುಣಕ್ಕೆ ॥

ಕಂ ॥ ಯಮುನಾಪಗೆ ಸುರನದಿಯಂ ।
ಕಮಳೋದರನಿಂದುಮೌಲಿಯಂ ನೀಲನಗಂ ॥
ಹಿಮಗಿರಿಯಂ ಪೋಲ್ತಿರ್ಪ್ಪನ ।
ಮಮಲಯಶೋರುಚಿ ಪೊದಱ್ದಿದಿಳೆಗಿಂದ[2]ರನಾ ॥ 747

ಇದು ಕಿಱಿದಿದು ಪಿರಿದಿದು ಕುಱು ।
ಯಿದು ತೆಮರಿದು ಬಕ್ಕಬಯಲಿದಾಶ್ರಯಮಿದು ಗೆಂ ॥
ಟಿದು ಸಾರೆಯೆಂಬ ನಿರ್ಣ್ಣಯ ।
ಮಪಾದುದಿಲ್ಲೊದವಿ ಪುದಿದ ಮಬ್ಬಿನೊಳಾಗ್ರಂ ॥ 748

---

1 ಮುನ್ನಂ. 2 ದಿರನಾ.

ಪರಸ್ಪರಾಸಂಗತಿಕಕ್ಕೆ ॥

ಕಂ ॥ ಹಿಮಕುಮುದಕುಂದಶಶಿಧವ ।
ಲಮೆನಿಪ ನಿಜಕೀರ್ತ್ತಿಯೆಸಕದಿಂದಮಿಳಾಲೋ ॥
ಕಮನೆಯ್ದೆ ರಕ್ತಮಪ್ಪಂ ।
ತು ಮಾಡಿದಂ ಕೃಷ್ಣನಿಂತಿದೇನಚ್ಚರಿಯೋ ॥ 749

ಸೂತ್ರಂ ॥ 175 ॥

ಒದವಿದ ಸಾಮಗ್ರಿಯೊಳೇ ।
ಕದೇಶವೈಕಲ್ಯಮಾ[1]ಗೆಯುಂ ಮತ್ತಂ ತ ॥
ವಿಶೇಷೋಕ್ತಿ. ತ್ಸದೃಶಫಲಸಿದ್ಧಿಯಂ ತೋ ।
ರ್ಪ್ಪದದು ವಿಶೇಷೋಕ್ತಿಯೆಂಬಲಂಕೃತಿಯಕ್ಕುಂ ॥ 750

ಲಕ್ಷ್ಯಂ ॥

ಕಂ ॥ ರಥವೊಂ[2]ದೆಗಾಲಿಯದು ಸಾ ।
ರಥಿಯಪ್ಪೊಡೆ ಪೞವನಸಮಮಶ್ವಮವೇಂತುಂ ॥
ಪ್ರಥಿತಪ್ರತಾಪದಿಂದಂ ।
ಮಥಿತಪ್ರತಿಪಕ್ಷನು[3]ದಯಿಯಾದಂ ದಿನಪಂ ॥ 751

ವೃ ॥ ಧನುವುಂ ಕಬ್ಬಿನ ಬಿಲ್ ಗಡಂ ಗೊ[4]ಣೆಯುಮುಂ ನೀರೇಜಸೂತ್ರಂ ಗಡಂ ।
ನನೆಗಳ್ ಬಾಣಚಯಂ ಗಡಂತತನು ತಾಂ ಮತ್ತಂ ಮನಂನೊಂ[5]ದು ನಿ ॥
ರ್ಬ್ಬನಿಪಂತಾರ್ದ್ದಿಸುತಿರ್ಪ್ಪನುರ್ಚ್ಚಿದರ್ದೆಯೊಳ್ ಪು[6]ಷ್ಪೈತ್ತರೆಂದಿಂತಿದಿ ।
ಲ್ಲಿನಿಸುಂ ಮನ್ಮಥಶಸ್ತ್ರಕಲ್ಪಮಿದು ದಲ್ ಪೇೞೊಂದು ಶಿಕ್ಷಾಕ್ರಮಂ ॥ 752

ಇವು ಅತಿಶಯಭೇದಂಗಳ್ ॥

ಸೂತ್ರಂ ॥ 176 ॥

ಎರಡರ್ತ್ಥಮೊಂದೆ ಶಬ್ದಾಂ ।
ಅರ್ತ್ಥಶ್ಲೇಷಂ. ತರದೊಳ್ ನೆಗೞ್ವಂತು ಪೇ[7]ೞ್ವುದರ್ತ್ಥಶ್ಲೇಷಂ ॥
ಶಬ್ದಶ್ಲೇಷಂ. ದೊರೆಕೊಳೆ ಶಬ್ದಾವಯವದೊ ।
ಳೆರಡಭಿಮತಶಬ್ದಮಱಗೆ ಶಬ್ದಶ್ಲೇಷಂ ॥ 753

---

1 ಮಾಗಿಯುಂ. 2 ವೊಂದು. 3 ನುದಯುವಾದಂ. 4 ಗೊನೆ, ಗೊಳೆ. 5 ವೊಂದುನಿ ॥ ಬ್ಬಿರನಿ.
6 ಪುಷ್ಪೈತ್ತದೆಂದಿಂತಿವೆ । ಲ್ಲಿನಸುಂ. 7 ಪೇೞಿಸ್ವುದರ್ತ್ಥ.

ಸೂತ್ರಂ ॥ 177 ॥

ವೃ॥ ತತ್ವಂ ವ್ಯಾಜಸ್ತುತಿಯುಮಯುವ[1]ಸ್ಥಂ ವಿ[2]ರೋಧಾವಭಾಸಾ।
ಶ್ಲೇಷ ರ್ತ್ಥತ್ವಂ ಮಿಕ್ಕಿರ್ದ್ದಧಿಕಮುವಿಶೇಷಾತ್ಮಕಂ ವ[3]ಸ್ತ್ವಸಂಭಾ ॥
ಭೇದಂಗಳ್. ವ್ಯತ್ವಂ ವಕ್ರೋಕ್ತ್ಯನುಗತಮುಮೆಂದಿಂತು ತಾತ್ಪರ್ಯ್ಯದಿಂದಂ।
ತತ್ವಜ್ಞರ್ ವಿಸ್ತರಿಸೆ ನೆಗೞ್ಗುಂ ಶ್ಲೇಷಭಾ[4]ಗಪ್ರಭೇದಂ ॥ 754

ಅಲ್ಲಿ ॥

ಸೂತ್ರಂ ॥ 178 ॥

ಬ[5]ಗೆಗೆ ಪೆಱಱತರ್ತ್ಥವೊಂದಂ ।
ತತ್ವಂ. ನೆಗೞ್ತುಂ ನೆಗೞ್ವ ತತ್ವವರ್ಣ್ಣನೆ ತತ್ವಂ ॥
ವ್ಯಾಜಸ್ತುತಿ. ತಗುಳೆ ಪೞಿವಂ[6]ತೆ ಕೆಯ್ಯಿಂಗೆ ।
ಪೊಗೞ್ವುದು ತಾಂ ವ್ಯಾಜಸಂಸ್ತವಾಖ್ಯಮೆನಿಕ್ಕುಂ ॥ 755

ಲಕ್ಷ್ಯಂ ॥

ತತ್ವಕ್ಕೆ ॥

ವೃ ॥ ವರಗೋಮೇದಕವಿಸ್ಫುರದ್ವ[7]ಸನನುವೃತ್ತಪದ್ಮರಾಗೋಲ್ಲಸ ।
ಚ್ಚರಣಂ ನೀಲರು[8]ಚಿಪ್ರವಾಲಸಿತನೀಷಲ್ಲೋಹಿತಾಕ್ಷಂ ಮನೋ ॥
ಹರಮುಕ್ತಾಮಯುವಜ್ರಸಂಹನನನೇಮಾತೀಮಹಾತ್ಮಂ ನೃಪೇ ।
ಶ್ವರರತ್ನಂ ವಿಲಸತ್ಸುವರ್ಣ್ಣದೊರೆವೆತ್ತಿರ್ಕ್ಕುಂ ಭವತ್ಸಂಗದಿಂ ॥ 756

ವ್ಯಾಜಸ್ತುತಿಗೆ ॥

ಕಂ ॥ ವಾತಿ ಪರವೆಣ್ಗೆ ಶರಣಾ ।
ಯಾ[9]ತಂಗಸುರಂ ಬಿ[10]ಯುಕ್ಕೆ ಗುಪ್ತಂ ರಿಪು ಸಂ ॥
ಘಾತಕ್ಕೆ ಪರಾಕ್ರಮನೆ[11]ನೆ ।
ಭೂತಲಮೇನೆಂದು ಕೇಶಿಯುಂ ಬಣ್ಣಿಪುದೋ ॥ 757

ಜೋಡಿ ಕರಮು[12]ಡಿಯುಳಾರೊಡ ।
ಗೂಡಿಯುಮುವರ್ಗ್ಗಲ್ಲಳೆನಿಪ ವಸುಧಾಂಗನೆಯುಂ ॥
ಕೋಡೊಳೆ ತಳೆದುಂ ಸೊಬಗಿನ ।
ಗಾಡಿಗೆ ಮು[13]ಯ್ಯಾಂತ ಸೊಬಗಿದಾವು[14]ದು ಗಜೆಗಾ ॥ 758

---

1 ವಿಶ್ವಂ. 2 ವಿರುದ್ಧಾ. 3 ವಸ್ತುಸಂಭಾ. 4 ಭೇದ. 5 ಬಗೆಪೆಱಱತುವುತ್ಥವೊಂದುಂ. 6 ವನಿತೆ. 7 ದ್ವಕನ. 8 ಮಣಿ. 9 ಜಾತಕ್ಕಸುರಂ. 10 ವೃಯುಕ್ಕೆ. 11 ಪೌನೆ. 12 ನುಡಿಯೊಳಾ. 13 ಮುಯ್ಯಾಂತ. 14 ಪುದೊ.

ಸೂತ್ರಂ || 179 ||

ಅವಯವವಮುಖದಿಂ ಸಮುದಾ |
ಅವಯವಂ. ಯವಿಶೇಷಣಮನ್ಯವಸ್ತುಗಮಕಮ[1]ದಾದಂ ||
ವಿರೋಧಾಭಾಸಂ. ದವಯವಮವಿರುದ್ಧಂ ನೋ |
ಡೆ ವಿರುದ್ಧಸ್ಥಿತಿಯೊಳಿರೆ ವಿರುದ್ಧಾಭಾಸಂ || 759

ಲಕ್ಷ್ಯಂ ||

ಅವಯವಕ್ಕೆ ||

ಕಂ || ಬಳಭದ್ರಂ ಭುಜದೊಳುರ |
ಸ್ಥಳದೊಳ್ ಪೃಥು ವಿತತಯಶದೊಳರ್ಜುನನೀತಂ ||
ಕಳಿಕಾಲದೊಳಂ ತನ್ನೊಳ್ |
ತಳೆದಿರ್ದಂ ಪೂರ್ವಭೂಮಿಪಾಲಸ್ಥಿತಿಯಂ || 760

ವಿರೋಧಾಭಾಸಕ್ಕೆ ||

ಕಂ || ಅನುಗತಕರ್ಣಂ ಕೃಷ್ಣಾ |
ರ್ಜುನಾನುರಕ್ತಂ ವಿಲೋಚನಂ ದೋರ್ದಂಡಂ |
ಘನದೃಢಬಲಂ ಪ್ರಲಂಬಂ |
ತನಗೆನೆ ಪಿರಿದುಂ ವಿರುದ್ಧಮೀನೃಪನಂದಂ || 761

ಸೂತ್ರಂ || 180 ||

ಆರಬ್ಧಕ್ಕಧಿಕಮಸಾ |
ಅಧಿಕಂ. ಧಾರಣಗುಣಮಧಿಕಮೆಂಬುದಕ್ಕುಂ ಸದೃಶಾ ||
ಅವಿಶೇಷಂ. ಕಾರವಿಶೇಷಣಮರ್ಥಮು |
ದಾರಂ ಬೇಱೊಂದು ತೋರ್ಪೊಡವಿಶೇಷಾಖ್ಯಂ || 762

ಲಕ್ಷ್ಯಂ ||

ಅಧಿಕಕ್ಕೆ ||

ಕಂ || ಅಂಗುಳಿಯೊಳಡಸಿದ ವಿಷಮುಂ |
ಭಂಗುರತರವಿಷಮದೃಷ್ಟಿಯುಂ ವ್ಯಾಳಸಮಾ ||
ಸಂಗಮುಮಮರ್ದಿರೆ ಮದನಹ |
ರಂಗೆಱೆಯೆನಿಪುದಱಿನೆಮಗೆ ಖಳ[illegible]ವಂದ್ಯರ್ || 763

---

1 ದೊಳಮದಂ.

ಅವಿಶೇಷಕ್ಕೆ ॥

ಕಂ॥ ಗುರುಪರಿಣಾಹಂಗಳ್ ಪೀ।
ವರಂಗಳುನ್ನತಿಯುತಂಗಳುರ್ವ್ವರೆಗೆ ಮನೋ॥
ಹರಕುಚಮಂಡಳದಂತಿರೆ।
ಕರಮೆಸೆವುವು ವಿಮಳದರ್ದ್ದುರಾದ್ರಿಗಳೆರಡುಂ॥ 764

ಸೂತ್ರಂ ॥ 181 ॥

ಪೆಸರೊಳಸಂಭವಮೆನಿಸುಗು।
ಅಸಂಭವಂ. ಮಸಂಭವಂ ತದ್ವಿಶೇಷಣಂ ಪೃಥಗರ್ತ್ಥಂ॥
ವಕ್ರೋಕ್ತಿ. ಪೊಸಯಿಸೆ ಭಿನ್ನರಸಂ ಸು।
ಪ್ರಸಿದ್ಧವಾಚ್ಯದೊಳದಲ್ತೆ ವಕ್ರೋಕ್ತಿ ಕರಂ॥ 765

ಲಕ್ಷ್ಯಂ॥

ಅಸಂಭವಕ್ಕೆ ॥

ಕಂ॥ ಅವ್ಯಪಚ್ಛೇದನನತಿಧವ।
ಳವರ್ಣ್ಣನುತ್ಸ್ವರಿತಾರಿ ಬೇಱೊರ್ವ್ವಂ ದಾ॥
ನವಮಥನನೀತನೆನಿಸಿದ।
ನವನಿಗೆ ಪುರುಷೋತ್ತಮಾನುಭಾವಂ ಕೃಷ್ಣಂ॥ 766

ವಕ್ರೋಕ್ತಿಗೆ॥

ಕಂ॥ ವೀರರಸಪ್ರ[1]ದಚಾರಣ।
ಮಾರಣಸಂಪ್ರಾಪ್ತಕೌಶಲಂ ಭಾವಿಸೆ ರಂ॥
ಭೋರು ನರೇಂದ್ರತೆಯುಂ ವಿ।
ಸ್ತಾರಿಸಿದಪನಂಗನಂಗಸಿದ್ಧಿಯೊಳೀತಂ॥ 767

ಸೂತ್ರಂ ॥ 182 ॥

ಪದವರ್ಣ್ಣವಿಭಕ್ತಿವಿಭಾ।
ಗದಿಂ ದ್ವಿಧಾರೂಪಮಿಷ್ಟಮ[2]ಕ್ಲಿಷ್ಟಂ ಶ॥
ಭಂಗಶ್ಲೇಷಂ. ಬ್ದದೊಳಾಗಿ ತೋ[3]ಱುವಂದಂ।
ತದು ಭಂಗಶ್ಲೇಷಮೆಂದು ಪೇೞಲ್ಪಡೆಗುಂ॥ 768

ಲಕ್ಷ್ಯಂ॥

ಕಂ॥ ಸ್ವಗತಾನಲಸನ್ಮಣಿರ।
ಶ್ಮಿಗಾಢಮಗಣಿತಜ[4]ಲದ್ವಿಪಾವಳಿ ಕಡಲಂ॥
ಮಿಗೆ ಮಱದಮರಗಜೇಂದ್ರಂ।
ಸೊಗಯಿಸುವು[5]ದು ದಾನವಾರಿಲೇಖಾನುಗತಂ॥ 769

1 ಪ್ರವಿದಾರಣ. 2 ಮಾಶ್ಲಿಷ್ಟಂ. 3 ತೋಱ್ಪಕೆಱೆನಂ. 4 ಜಗದ್ವಿ. 5 ಗುಂ.

ಸೂತ್ರಂ ॥ 183 ॥

ಯೋಗಂ ಪಲವುಮಲಂಕೃತಿ ।
ಗಾಗಿರೆ ಸಂಶ್ಲೇಷಮೆಂಬುದನ್ವರ್ತ್ಥಗತಂ ॥
ಸಂಶ್ಲೇಷಂ. ಯೋಗಮುಮಂಗಾಂಗಿಪ್ರವಿ ।
ಭಾಗಂ ಸಮಕಕ್ಷಮೆಂದೆರಟ್ತುಅನಕ್ಕುಂ ॥ 770

ಲಕ್ಷ್ಯಂ ॥

ವೃ ॥ ಸ್ವಭಾವಗಂಭೀರನಲಂಘ್ಯವೈಭವಂ ।
ಪ್ರಭೂತರತ್ನಂ ನೃಪನಂಬುರಾಶಿವೋಲ್ ॥
ವಿಭೀಷಣಗ್ರಾಹಮುವ್ಯಪ್ಯಮರ್ಣ್ಣವಂ ।
ಪ್ರಭೂತಸಾರಂ ಸುಖಸೇವ್ಯನೀನೃಪಂ ॥ 771

ಸೂತ್ರಂ ॥ 184 ॥

ಪ್ರೇಯಂ ಪ್ರಿಯತರವಚನಾ ।
ಪ್ರೇಯಂ. ಖ್ಯೇಯಮುಮಹಂಕಾರಗರಿಮಮೂರ್ಜ್ಜಸ್ವಿ ಶುಭ ॥
ಊರ್ಜ್ಜಸ್ವಿ. ಆಶಿ. ಪ್ರಾ[1]ಯಾರ್ತ್ಥಶಂಸಾಭಿ ।
ಪ್ರಾಯಮುಮಲಂಕಾರಮಾಶಿಯೆಂಬರ್ ಕೆಲಬರ್ ॥ 772

ಲಕ್ಷ್ಯಂ ॥

ಪ್ರೇಯಕ್ಕೆ ॥

ಕಂ ॥ ನೆಲನನವಯವದೆ ತಳರದೆ ।
ನಿಲೆ ತಾಳ್ದಿದ ಮೆಯ್ಗುಮೆಲ್ಲಮಾನಲ್ಕಿರದಾ ॥
ಯ್ತುಲಘುಪ್ರಸಾದದಿಂ ನೀ ।
ನೊಲಿದೆಟ್ತುರೆ ಮ[2]ನೆಗೆ ಮನದೊಳಾದನುರಾಗಂ ॥ 773

ಊರ್ಜ್ಜಸ್ವಿಗೆ ॥

ಕಂ ॥ ಕೆ[3]ಳದೀ ಬಿಲ್ಲುಮನಂಬುಮ ।
ನಳೀಕಭಟವಿಕಟವೇಷಮಂ ಬಿಸುಟೀಗಳ್ ॥
ಮುಳಿಯಿಸದೆನ್ನಂ ಮುಗುಱ್ದಿಂ ।
ಬಳೆದೊಟ್ಟೊಡೆ ಗೆಲ್ವೆಯಂಬುದೊಟ್ಟೊಡೆ ಗೆ[4]ಲ್ಲಯ್ ॥ 774

ಆಶಿಗೆ ॥

ಕಂ ॥ ನೆಲೆಗೊಳ್ಗೆ ನಿಜಭುಜಾಸಿಯೊ ।
ಳೊಲಿದು ಜಯಾಂಗನೆ ವಿರೋಧಿವಂಶಾವಳಿಯಂ ॥
ನೆಲೆಗಿಡಿಸಿ ನಿನ್ನತೇಜೋ ।
ಜ್ವಲನಂ ತಳ್ತುಱ್ಬಿಕೊಳ್ಗೆ ವಿಕ್ರಮತುಂಗಾ ॥ 775

1 ಪ್ರಿಯಾರ್ತ್ಥಶಂಸಾಭಿ. 2 ಮನಕೆ. 3 ಕಳಲದೆ. 4 ಗೆಲ್ವಯುಂ.

ಸೂತ್ರಂ ॥ 185 ॥

ಭಾವಿಕಂ.

ಭಾವಿಕವೆಂದರೆಬರ್ ಕವಿ ।
ಭಾವಗತಾರ್ತ್ಥಮ[1]ನೆ ತಾಮಲಂಕೃತಿಗ[2]ಳೊಳು ॥
ದ್ಭಾವಿಸಿ ಪೇಳ್ವರ್ ಶಕ್ತಿಸ ।
ಮಾವಿರ್ಭೂತಪ್ರಬಂಧವಿಷಯಮದಕ್ಕುಂ ॥ 776

ಸೂತ್ರಂ ॥ 186 ॥

ಸ್ಥಾನೋಪವರ್ಣ್ಣನಂ ಶ ।
ಬ್ದಾನಾಕುಳಭಾವಮದ್ಭುತಾರ್ತ್ಥತ್ವಂ ಸ್ವಾ ॥
ಧೀನರಸವೃತ್ತಿ ಸಂಬಂ ।
ಧಾನುಗಮಂ ಭಾವಿಕಕ್ಕೆ ಭಾವಮಿವಕ್ಕುಂ ॥ 777

ಇದು ಗುಣವಿವೇಕದೊಳ್ ಅರ್ತ್ಥಾಲಂಕಾರಪ್ರಕರಣಂ
ತೃತೀಯಂ.

ಗೀತಿಕೆ॥ ಈತೆಱದಿಂದರ್ತ್ಥಾಲಂಕೃತಿ ।
ಯೋ[3]ತು ವಿಭೇದಮನಾದಮೆಲ್ಲಮಂ ॥
ನೂತನಮಾರ್ಗ್ಗಮೆಸೆಯೆ ಪೇ[4]ೞ್ದಂ ।
ಖ್ಯಾತಯಶಂ ಕವಿತಾಗುಣೋದಯಂ ॥ 778

ವೃ॥ ಶ್ರುತದೇವೀಮುಕರಂದಕಲ್ಪಲಪನಂ ಸಾಕ್ಷ್ರೀನಿವಾಸಾಂಬುಜಾ ।
ಯಿ[5]ತವಕ್ತ್ರಂ ರಸಭಾವಭಾಸುರಸಮುದ್ಯದ್ಭಾರತೀನರ್ತ್ತನೋ ॥
ಚಿತರಂಗಪ್ರತಿಮಾನನಂ ಪ್ರವಿಲಸದ್ವಾಕ್ಸುಂದರೀಕುಂಕುಮಾಂ ।
ಕಿತಕೇಳೀಭವನಾಜಿರೋಪಮಮುಖಂ ಭೂಭಾಗದೊಳ್ ನಾಕಿಗಂ ॥ 779

ಇದು ಸಕಲಸುಕವಿಜನಮನಸ್ಸರೋಜಿನೀರಾಜಹಂಸಾ
ಯಮಾನಾನೂನಕವಿತಾಗುಣೋದಯಂ ಶ್ರೀನಾ
ಗವರ್ಮ್ಮವಿರಚಿತಮಪ್ಪ ಕಾವ್ಯಾವಲೋ
ಕನದೊಳ್ ಗುಣವಿವೇಕವೆಂಬುದು
ತೃತೀಯಾಧಿಕರಣಂ.

---

1 ಪೆನೆ. 2 ಯೊಳಗು. 3 ಯೂಂತೆಪೇದವಿಚ್ಛೇದಮನಾಸುವೆಲ್ಲಮಂ, ಯಂತೆಪಾತವಿಭೇದಮನಾದವನೆಲ್ಲಂ.
4 ಪೇೞ್ವೆಂ. 5 ಯುತ.

4. ರೀತಿಕ್ರಮರಸನಿರೂಪಣಾಧಿಕರಣಂ.

ರೀತಿಪ್ರಕರಣಂ.

ಸೂತ್ರಂ ॥ 187 ॥

ವೃ॥ ರೀತಿ ವಿನೂತವಸ್ತುಕೃತಿಗೊಪ್ಪುವ ಮೆಯ್ ರಸಭಾವವೃತ್ತಿನಿ ।
ರ್ಣೀತಿಯೆ ಜೀವಮನ್ತದಱನನ್ವಿತನ[1]ಪ್ಪ ಕವೀಶ್ವರಂ ಬುಧ ॥
ವ್ರಾತವನೊಲ್ದು ಬೆ[2]ಚ್ಚಱಿಸಿ ನಚ್ಚುವಳಂಕೃತಿ ಕೂಡದಿರ್ದ್ದೊಡಂ।
ರೀತಿಯೊಳೊಂ[3]ದೆ ಪೇೞ್ವುದು ರಸಂಬಿಡೆ ಬಂಧುರಕಾವ್ಯಬಂಧಮಂ॥ 780

ಸೂತ್ರಂ ॥ 188 ॥

ರೀತಿ.

ಪದರಚನಾತಿಶಯಂ ರೀ ।
ತಿ ದಲಮವುಂ ನಿಯತವರ್ಣ್ಣಗುಂಫನಗುಣದೊಂ ॥
ದೊ[4]ದವಿಂ ಮೂದೆಱನಕ್ಕುಂ ।
ವಿದರ್ಭ್ಭಪಾಂಚಾಲಗೌಡವಿಷಯನಿಬದ್ಧಂ ॥ 781

ಸೂತ್ರಂ ॥ 189 ॥

ವೈದರ್ಭ್ಭರೀತಿ.

ಅಸಮಸ್ತಪದನ್ಯಾಸಂ ।
ಪ್ರಸಾದಮಾಧುರ್ಯ್ಯಗುಣಸಮಗ್ರಮುದಾರಂ ॥
ರಸಭಾವಭಾವಿತೋಕ್ತಿ ।
ಪ್ರಸರಂ ವೈದರ್ಭ್ಭರೀತಿಯೆನೆ ಪೆಸರ್ವಡೆಗುಂ ॥ 782

ಲಕ್ಷ್ಯಂ॥

ವೃ॥ ಮನಮೊಲ್ದಾತನ ಗಾಡಿಯುಂ ದರವುರಂಗಂಡಾಕೆಗಳ್ ಪೂವಿನಂ।
ಬಿನ ಕೋಳ್ಗಂ ಕುರುಳ್ಗಳಿಸೀರ್ಗ್ಗಮಲರ್ವಾಸಿಂಗಂ ಕುಳಿಕ್ಕೊರ್ಗ್ಗೞ್ವಿನಂ ॥
ದನಕಂ ಚಂದನಕಂ ಪಸುರ್ಪ್ಪಸೆವ ಬಾಳ್ಪಕ್ಕಮೊಂದೊಂದೆ ತ ।
ಣ್ಣನಿಯೊಳ್ ಕೋಡಿಸುತಿರ್ಪ್ಪ ಬಣ್ಣಿಗೆಗಂ ಪಕ್ಕಾಗದೇಂ ಪೋಪರೇ ॥ 783

ಸೂತ್ರಂ ॥ 190 ॥

ಪಾಂಚಾಲರೀತಿ.

ದ್ವಿತ್ರಿಪದರಚಿತವೃತ್ತಿ ವಿ ।
ಚಿತ್ರಪ್ರಸವ್ಯಾದ್ಯಲಂಕ್ರಿಯಾಸಮುಪೇತಂ ॥
ಶ್ರೋತ್ರಸುಖಲಲಿತಮೃದುಪದ ।
ಪಾತ್ರಂ ಪಾಂಚಾಲರೀತಿಯೆ[5]ನೆ ಪೆಸರ್ವಡೆಗುಂ ॥ 784

1 ನಪ್ಪ 2 ಬೆಚ್ಚಱಿಸಿ, 3 ಳೊಂದಿ, 4 ದೊದವಿದ, 5 ಯೆಂಬುದದಕ್ಕುಂ.

ಲಕ್ಷ್ಯಂ॥

ವೃ॥ ಇನಿಯನ ಕೆಂದಳಂ ತಳವನೊಯ್ಯನೆ ಸೋಂಕೆ ಪೊದೞ್ದ ನಾಣ ಪೆಂ।
ಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬೆ।
ಚ್ಚನೆ ಬಸಿಯುತ್ತುಮಿಂದುಕರಸಂಕುಳವೊಯ್ಯನವುಂಕಿ ಸೋಂಕೆ ಸೊಂ।
ಕಿನೊಳೊಱೆವಿಂದುಕಾಂತಮಣಿಪುತ್ರಿಕೆಯಂದದಿನಾ[1]ದವೊಪ್ಪಿದಳ್॥ 785

ಸೂತ್ರಂ ॥ 191 ॥

ಗೌಡರೀತಿ.

ಅತಿದೀರ್ಘಸಮಾಸಾಂಚಿತ।
ಗತಿ ಶಬ್ದಾಡಂಬರಾನುವಿದ್ಧಂ ಕ್ರೋ[2]ಧಾ॥
ದ್ಧತರೌದ್ರವೀರರಸಸಂ।
ಗತಮಂತದು ಗೌಡರೀತಿ ಪ[3]ರುಷಪ್ರಾಯಂ॥ 786

ಲಕ್ಷ್ಯಂ॥

ವೃ॥ ವಂ[4]ಗಾಂಗಾಂಧ್ರಕಳಿಂಗಕೊಂಗವಿ[5]ಸರತ್ಪಾದಾತಪಾಠೀನಮು।
ದ್ರಂಗತ್ತುಂಗತುರಂಗಭಂಗುರತರಂಗಾಕೀರ್ಣವಮುಚ್ಛೃಂಖಳೋ॥
ತ್ತುಂಗೋನ್ಮತ್ತಮತಂಗಜಪ್ರಕರಮಾದಸ್ಸಂಕುಳಂ ಕೂಡೆ ನೋ।
ಳ್ಪಂಗಂದದ್ಭುತಮಾಗಿ ತೋಱಿ ಮಸಗಿತ್ತುರ್ವೀಶಸೈನ್ಯಾರ್ಣವಂ॥ 787

ಸೂತ್ರಂ ॥ 192 ॥

ಕಾರುಣ್ಯಂ ಹಾಸ್ಯಂ ಶೃಂ।
ಗಾರಮಿವಿನಿತಱೊಳ್[6]ಮಕ್ಕೆ ವೈದರ್ಭ ಮನೋ॥
ಹಾರಿಪ್ರಳಯಾದ್ಭುತರಸ।
ವೀ[7]ರರಸಂಗಳ್ಗೆ ಪೇೞ್ಗೆ ಪಾಂಚಾಳಿಕೆಯಂ॥ 788

ಸೂತ್ರಂ ॥ 193 ॥

ಎಸೆಗುಂ ರೌದ್ರಭಯಾನಕ।
ರಸಬೀಭತ್ಸೋಕ್ತಿ ಗೌಡರೀತಿಯಿನದಱೊಳ್॥
ಪೊಸಯಿಸುಗುಂ ಮೇಣ್ ನಿಸದಂ।
ರಸವತ್ವಮತಿಪ್ರತೀತಿ ವೃ[8]ತ್ತ್ಯಾಶ್ರಯದಿಂ॥ 789

1 ನೊಪ್ಪಿತೋಱಿದಳ್. 2 ಕ್ರೋಧೋದ್ಧತ. 3 ಪರುಷ 4 ವಂಗೀಸಂಗಕಳಿಂಗ. 5 ಪಿಳಸ.
6 ಳಮಕ್ಕೆ ವೈದರ್ಭಮನೋ. 7 ವೀರಾಖ್ಯಂಗಳ್ಗೆ. 8 ವೃತ್ಯಾ.

ಸೂತ್ರಂ ॥ 194 ॥

ಅರೆಬರ್ ದೀರ್ಘಸಮಾಸಂ ।
ಬೆರಸಿರೆ ಶೃಂಗಾರರಸಮುಮಂ ಪೇೞ್ವರ್ ಬಿ ॥
ತ್ತರಿಸುವರಸಮಾಸಪದಂ ।
ತರಂಗಳೊಳಗುಚಿತಮಾಗಿ ರೌದ್ರಾದಿಯುಮಂ ॥ 790

ಲಕ್ಷ್ಯಂ ॥
ಶೃಂಗಾರರಸಕ್ಕೆ ॥

ವೃ ॥ ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ ।
ರವಝುಂಕಾರಿತಚಾರುವಾಮಚರಣಾಘಾತಂ ಚಳದ್ಭ್ರೂಲತಾ ॥
ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧರಂ ಚಕ್ರಗಿ ।
ತ್ತುವಲಂಪಂ ಪ್ರಣಯಪ್ರಕೋಪಸುರತಪ್ರಾರಂಭದೊಳ್ ಕಾಂತೆಯಾ ॥ 791

ರೌದ್ರಾದಿಗೆ ॥

ಇರದೆಂಟುಂ ದಿಗ್ಗಜಂಗಳ್ ನೆರೆದಿರದಿದಿರೊಳ್ ತಾಗೆಯುಂ ಮಂದರಕ್ಷ್ಮಾ ।
ಧರದೊಳ್ ಕೆಯ್ಗೂಡಿ ಗೋತ್ರಾದ್ರಿಗಳೆ ಗಜಘಟಾರೂಪದಿಂ ತಾಗೆಯುಂ ಮ ॥
ತ್ಕರಿ ತಾಂಗಲ್ ತಾನೆ ಸಾಲ್ಗುಂ ಘಟಾಬಂಧಮೇಂ ಭಂಡಮೆಂಬೊಂ ।
ದು ರಣೋತ್ಸಾಹಂ ಮನಕ್ಕುಬ್ಬರಿಸಿರೆ ಸಮರೋದ್ಯೋಗಮಂ ತಾಳ್ದಿ ನಿಂದಂ ॥ 792

ಇದು ರೀತಿಕ್ರಮರಸನಿರೂಪಣದೊಳ್ ರೀತಿಪ್ರಕರಣಂ ಪ್ರಥಮಂ ॥

ರ ಸ ಪ್ರ ಕ ರ ಣ ಂ.

ಸೂತ್ರಂ ॥ 195 ॥

ಶೃಂಗಾರಾದಿಗಳಪ್ಪ ರ ।
ಸಂಗಳ್ ವರ್ತಿಸುಗುಮಂ[1] ತವೆಂಟೆ ವಲಂ ಕಾ ॥
ವ್ಯಾಂಗಕ್ಕೆ ಸತ್ಕ್ರಿಯಾರೂ ।
ಪಂಗಳ್ ರತ್ಯಾದಿಭಾವಸಂಪನ್ನಂಗಳ್ ॥ 793

ಸೂತ್ರಂ ॥ 196 ॥

ಸ್ಥಾಯಿಭಾವಂ.

ರತಿ ಪರಿಹಾಸಂ ಶೋಕಂ ।
ಧೃತಮುತ್ಸಾಹಂ ಭಯಂ ಪ್ರಕೋಪಂ ವಿಜುಗು ॥
ಪ್ಸತೆ ವಿಸ್ಮಯಾಶಯುತ್ತಂ ।
ಪ್ರತಿನಿಯತಸ್ಥಾಯಿಭಾವಮಿವು ತಾಮಳ್ಕುಂ ॥ 794

---

1 ಮೆತ್ತವೆಂಟುವಲು.

ಸೂತ್ರಂ ॥ 197 ॥

ವೃ॥ ಮತಿನಿರ್ವ್ವೇದಾವಹಿತ್ಥಶ್ರಮಮದಜಡತಾಗ್ಲಾನಿಚಿಂತೋಗ್ರತೇರ್ಷ್ಯಾ ।
ಸಂಚಾರಿ ಧೃತಿನಿದ್ರಾವೇ[1]ಗಶಂಕಾತ್ರಸನಚಪಲತಾಲಸ್ಯಸು[2]ಪ್ತಾವಬೋಧ ॥
ಭಾವಂ. ಸ್ಮೃತಿಗರ್ವ್ವಾಮರ್ಷದೈನ್ಯೋತ್ಸುಕರತಿಮದಪಸ್ಮಾರಲಜ್ಜಾವಿಷಾದ ।
ಸ್ಥಿತಿಚಿತ್ತಭ್ರಂಶವೋಹಾಮಯುವ್ಯತಿಗಳಿವಿಂತೆಯ್ದೆ ಸಂಚಾರಿಭಾವಂ ॥ 795

ಸೂತ್ರಂ ॥ 198 ॥

ಸ್ವೇದಂ ವೈವರ್ಣ್ಯಂ ಸ್ವರ ।
ಭೇದಂ ರೋಮಾಂಚನಂ ಪ್ರಕಂಪನಮಶ್ರು ॥
ಸಾತ್ವಿಕಭಾವಂ. ದ್ಭೇದಂ ಸ್ತಂಭಂ ಲಯಮುಮೆಂ ।
ದಾದುವಿವೆಂಟುಂ ರಸಕ್ಕೆ ಸಾತ್ವಿಕಭಾವಂ ॥ 796

ಸೂತ್ರಂ ॥ 199 ॥

ಭಾವಂ ಬಹಿರರ್ತ್ಥಸಮು ।
ದ್ಭಾವಿತಮನುಭವಭವಂ ವಿಭಾವಂ ರಸಸ ॥
ದ್ಭಾವವಿಹಿಶಾಭಿನಯಮನು ।
ಭಾವಂ ಸಂಚಾರಿಭಾವಮನವಸ್ಥಿ[3]ತಿಕಂ ॥ 797

ಸೂತ್ರಂ ॥ 200 ॥

ಭಾವಂ ವಿಭಾವಮೆಸೆವನು ।
ಭಾವಂ ಸಂಚಾರಿಭಾವಮೊಂದಿಂತಿವಱಿಂ ॥
ದಾವಿಷ್ಕೃತಮಕ್ಕುಂ ರಸ ।
ಮಾವುದುಮೊಂದಱಿಗೆ ಭರತಶಾಸ್ತ್ರಕ್ರಮದಿಂ ॥ 798

ಸೂತ್ರಂ ॥ 201 ॥

ಸ್ತ್ರೀಪುಂಸರತಿಸಮುತ್ಥ ।
ವ್ಯಾಪಾರಂ ತಾನದಲ್ತೆ ಶೃಂಗಾರಂ ಮೇ ॥
ಶೃಂಗಾರಂ. ಳಾಪದಿನಗಲ್ಕೆಯಿಂ ಸುನಿ ।
ರೂಪಿತಸಂಭೋಗವಿಪ್ರಲಂಭಸಮಾಖ್ಯಂ ॥ 799

1 ವೇಶ, 2 ಸುಪ್ತೋವಬೋಧ, ಸುಪ್ತೋಹಬೋಧ. 3 ಸ್ಥಿತ.

ಲಕ್ಷ್ಯಂ॥

ಸಂಭೋಗಶೃಂಗಾರಕ್ಕೆ ॥

ವೃ॥ ಪದೆಯಿಸೆ ಸೋಂಕಿ ಸಂ[1]ಕೆ ಗಿಡೆ ಮೇಳಿಸಿ ಮೆಯ್ವಿಡೆ ತಳ್ತು ತೋಳ ತ।
ಳ್ಪಿದಿರ್ಗೊಳೆ ಮೆಲ್ಲನಪ್ಪಿ ಮೊಗಮಿ[2]ತ್ತಿರೆ ಚುಂಬಿಸಿ ಸೋಲ್ತು ನಾಣನೊ॥
ಕ್ಕುದನಱಿದಿಕ್ಕೆಕಾತ್ತ್ರನದ ಲಲ್ಲಿಗಳಂ ನುಡಿದಂತಲಂಪಿನು।
ಬ್ಬಿದಿಗವುನಾಲತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್॥ 800

ಇದು ಮು[3]ಗ್ಧಸವಾಗಮಂ॥

ವೃ॥ ಬಗೆಯೊಳ್ ಪೊಣ್ಮುವಲಂಪು ಕಾ[4]ತರತೆಯುಂ ತಂದೀಯೆ ಮೆಯ್ಮೆಯ್ಗೆ ಸಂ।
ದುಗಳೇನಪ್ಪೊಡಮಿಲ್ಲದಂತವರ್ವಿನಂ ತಳ್ತಪ್ಪಿ ಬಾಯ್ಗೂಟದೊಳ್॥
ಮಿಗೆ ಪೀರ್ವ್ವಂತೆ ಮ[5]ನೋಜರಾಗರಸಮಂ ಮೆಯ್ವೆರ್ಚ್ಚೆ ಕಾದಲ್ಮೆ ಕೆ।
ಯ್ಮಿಗುವನ್ನಂ ನೆರೆದರ್ ಮ[6]ನಂ ತಣಿವಿನಂ ನಾನಾರತಪ್ರಾ[7]ಢಿಯಿಂ॥ 801

ಇದು ಮಧ್ಯಸಮಾಗಮಂ॥

ವೃ॥ ಕುಟಿಲಾನೀಲಾಳಕಂಗಳ್ ನಿಮಿರ್ದಿರೆ ಪೆಳರ್ವಾಯ್ಮೆನಾಡೆಯುಂ ಬೀಗೆ ರೋ[8]ಷೋ।
ತ್ಕಟದೇಹಂ ರಾಗದಿಂ ಪಿಳ್ಳನೆ ಪೆಱಿದವೊಲಿಂಬಾಗೆ ನೀಳ್ದಾ[9]ಳವಾಳಂ॥
ವಿಟವೃತ್ತಂ ಮೆಯ್ಯೊಳಿತ್ತಂ ಪಸರಿಸಿರೆ ವಿಟಂ ಬೀಸೆ ನಿಂದಿರ್ದ್ದಳೂರ್ವ್ವಳ್।
ಸ್ಫುಟಿತೋರೋಮಧ್ಯೆ ಭಿನ್ನಾವಟುತಟವಿಹಟದ್ಗ್ರಂಥಿನಿರ್ಗ್ರಂಥದಿಂದಂ॥ 802

ಇದು ಪ್ರೌಢಸಮಾಗಮಂ॥

ವೃ॥ ಕಡೆಗಣ್ಣಿಂ ಕಡೆಗೋಡಿಪ್ರೋಗೆ ಪಿರಿದುಂ ಚಲ್ಲಂ ಕುಚದ್ವಂದ್ವದಿ।
ಟ್ಟೆಡೆಯಿಂ ಸ್ವೇದಜಲಂ ತುಳುಂಕೆ ಜಘನಾಂತರ್ದ್ದೇಶದಿಂದಾವಗಂ॥
ಬಿಡದುಣ್ಮುತ್ತಿರೆ ಮನ್ಮಥದ್ರವಮನಂಗಾವೇಶದಿಂ ಕಾಲ್ತಡಂ।
ಬಡೆ ಬಂದಾಟಿಸಿ ನೋಡಿದಳ್ ಪದಪಿನಿಂ ಶ್ರೀ[10]ವಿಪ್ರಮಾರ್ತ್ತಂಡನಂ॥ 803

ಇದು ಅಭಿಲಾಷೆ॥

ವೃ॥ ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮಜಲಂಗಳಾ।
ಪಾಂಗು ಗಂಗೆಯ ಶೀಕರಮೆಂಬಂತಾಗಿರೆ ಕಂಡುಮೆ ಶಂಭುಮಂ॥
ಗಂಗೆ ದಲ್ ಬಿಗಿದಪ್ಪಿದಳೆಂ[11]ದಾಶಂಕೆಗೆ ಭೋಂಕನೆ ಮೋದೆ ಮು।
ದ್ದಿಂಗೊಱಲ್ದುಮರ್ದಪ್ಪಿದನೀಶಂ ನಲ್ಲಳನಲ್ಲಿ ರತಾಂತದೊಳ್॥ 804

ಇದು ಈರ್ಷ್ಯೆ॥

ವಿಪ್ರಲಂಭಶೃಂಗಾರಕ್ಕೆ॥

ವೃ॥ ಪದವೆತ್ತಿರ್ಪ್ಪರ ಜೀವಮೊಂದೊಡಲೆ ಬೇ[12]ಱೆಂಬಂತುಟಂ ಮಾಡಿದಂ।
ಮದನಂಗಾವುದು ದೋಷಮುಂ[13]ತೆ ನುಡಿಯಲ್ಕೇಂ ಬಕ್ಕರ್ಮೋ ಪಾಪಮಂ॥
ಬಿದಿಯೆಂಬಾಱಡಿಗ[14]ಳ್ಸಿಂದಮುಱಿವಾಯ್ತುರ್ವ್ವಿಗರ್ಗ್ಗಮಿನ್ನೊರ್ಮ್ಮೆ ದೈ।
ವದನೆತ್ತಾನುಮದಿಂದುಬಿಂಬಮುಖಿಯಂ ಕಾಣ್ಬೊಂದು ಸಯ್ಪುಕ್ಕುಮೋ॥ 805
ಇದು ಪೂರ್ವ್ವಾನುರಾಗಂ॥

---

1 ಸಂಕಿಸದೆ. 2 ಮಿತ್ತದೆ, ಮಿತ್ತರೆ, ಮಿತ್ತಿದೆ. 3 ಮುಗ್ಧ. 4 ಕಾತರಿಕೆ. 5 ಮನೋಜರಾಜಸುಖಮುಂ, ಮನೋನುರಾಗರಸಮಂ. 6 ಮನಃಪ್ರಿಯತಮರ್. 7 ಕ್ರೀಡೆಯಿಂ. 8 ರಾಗೋ. 9 ನೀರಾಳ. 10 ಕ್ರೀಕ್ಷ್ಯ. 11 ಳೆಂಬಾ. 12 ಬೇಱುರಿಪ್ಪಂತುಟಂ. 13 ಮುಂಟೆ. 14 ಗಳ್ಕ.

ವೃ ॥ ಅಱಿಯದೆ ಗೆಯ್ದಿನಬ್ಜಮುಖಿ ನೀನಿದನೊರ್ಮೆಗೆ ಸೈರಿಸೆಂದು ಕಾ ।
ಲ್ಗೆಱಗಿರೆಯುಂ ಪ್ರಿಯಂ ಸುಡುಸುಡೇಂ ಗಡ ಸೈರಿಪುದೆಂದು ಕೋಪದಿಂ ॥
ಪಱಿಪಡೆ ಪೋಗೆ ನೂಂಕಿ ಕಳೆದಂದಿನ ದುಷ್ಕೃತಮೆನ್ನ ನಾವಗಂ ।
ಮಱುಗಿಸಿ ಮುಚ್ಚಿ ಸುಟ್ಟಪುವು ನೋಡಿರೆ ಶೀತಮರೀಚಿಮಾಲೆಗಳ್ ॥ 806

ಇದು ಮಾನಾಖ್ಯಂ ॥

ವೃ ॥ ಇನಿಯನಗಲ್ದು ಪೋಗಿ ಪರದೇಶದೊಳಿರ್ದ್ದಪನಾನುಮಿಲ್ಲಿ ಮಾ ।
ವಿನ ತಳಿರ್ವಾಸಿನೊಳ್ ಪೊರಳುತಿರ್ದ್ದಪೆನಾಗಳುಮಂತೆ ನೀಮುಮ ॥
ನ್ನನೆ ನಡೆ ನೋಡುತುಂ ನಭದೊಳಿರ್ದ್ದಪಯುಪ್ಪುದಱಿಂದೆ ನಿನ್ನನಾ ।
ನ[1]ನುವಿಪೆನೆನ್ನ ಮೆಯ್ ಬಡವೊ ನಲ್ಲನ ಮೆಯ್ ಬಡವೋ ನಿಶಾಕರಾ ॥ 807

ಇದು ಪ್ರವಾಸಂ ॥

ವೃ ॥ ವ್ರತಕೆಂ[2]ತಾಯಿತ್ತಾಗಳಿಂತೀತನು ತನು ಲತೆಯಿಾಮಾಗಿಯೊಳ್ದೀಹಿಮಾನೀ ।
ಪತನಕ್ಕೆಂತಾ[3]ರ್ತ್ತ ಮೆಯ್ಯಂ ವನಜವದನೆ ಕೇಳ್ ಗ್ರೀಷ್ಮದೊಳ್ ಸಿಚ್ಚಮೆತ್ತಂ ॥
ಸತಿ ತ[4]ಟ್ಟುತ್ತಿರ್ಪ್ಪ ಕಾಯ್ಪಿಂದುರಿವ ಬಿಸಿಲೊಳಾಮೇಘವಿಸ್ಫೂರ್ಜ್ಜಿತಾರ್ಣ್ಣಃ ।
ಪ[5]ತಧಾರಾಭೀಕರಾಡಂಬರಜಳಸಮಯಂ ಬಂದೊಡೆಂತಳ್ಕದಿರ್ಪ್ಪಯ್ ॥ 808

ಇದು ಕರುಣಾತ್ಮ~~ಕವಿಪ್ರಲಂಭಂ~~ ॥

ಸೂತ್ರಂ ॥ 202 ॥

ವಿಕೃತಾಂಗವೇಷಭಾಷಾ ।
ಹಾಸ್ಯಂ. ಪ್ರಕಾರಕೃತಹಾಸಹೇತುಕಂ ಹಾಸ್ಯಮತಿ ॥
ಕರುಣಂ. ಪ್ರಕಟತರಶೋಕಭಾವ ।
ಪ್ರಕೃತಿಪರಂ ಕರುಣಮಾರ್ತ್ತಜನತಾವಿಷಯಂ ॥ 809

ಲಕ್ಷ್ಯಂ ॥

ಹಾಸ್ಯಕ್ಕೆ ॥

ವೃ ॥ ಶ್ರೀ ತ[6]ನ್ನಂದಿನ ರೂಪೆ ಕೌಸ್ತುಭದೊಳಚ್ಚೊತ್ತಿರ್ದ್ದಪೋಲ್ ತೋಱೆ ಕಂ[7] ।
ಡೇತಕ್ಕೀಕೆ ಮದೀಯವಾಸಗೃಹಮಂ ತಾಂ[8] ಪೊಕ್ಕಳೆಂದೇವದಿಂ ॥
ದಾತಾ[9]ಮ್ರಾಕ್ಷಿಯನೀಕ್ಷಿಸುತ್ತುಮಿರೆ ತನ್ಮುಗ್ಧತ್ವಮಂ ಕಂಡು ಸಂ ।
ಜಾತಾಂತಃಸ್ಮಿತನಾದ ಕೃಷ್ಣನೆಮಗೀಗಾನಂದಸಂದೋಹಮಂ ॥ 810

ಇದು ಉತ್ತಮಪಾತ್ರಂ ॥

ವೃ ॥ ಸೊಗಯಿಪ್ಪೊಳ್ದೊಡೆ ನೋಯೆ ನೇ[10]ತ್ರದೆಱೆವೋಲ್ ನೀಳ್ದಿರ್ದ್ದ ಬಾರಂತೆ ತೋ[11] ।
ರ್ಪ್ಪಗಿಯುಂ ಪುಣ್ಮಯಮಾಗಿ ಮಾಡಿ ಬಿದಿ ಮುಂ ಜಂಘಾಪ್ರಮಾಣಕ್ಕೆ ನೂ ॥
ಲ್ದೆಗೆದಂತಿರ್ಪ್ಪ ನಖವ್ರಣಾವಳಿಗಳಂ ನಲ್ಲಂಗೆ ಕಣ್ಗೆತ್ತುತುಂ ।
ನಗುತುಂ ಸಾ[12]ರ್ದ್ದ ಸವಂಗವುಂ ಕಳೆಯಿಸುತ್ತಿರ್ಪ್ಪಾಕೆ ಕಣ್ಗೊಪ್ಪಿದಳ್ ॥ 811

ಇದು ಮಧ್ಯಮಪಾತ್ರಂ ॥

---

1 ನನುವಿಪೆ. 2 ಕೇನಾ. 3 ತಾರ್ತ್ಥ, ತಾರ್ದ್ದ. 4 ತಟ್ಟಂತಿರ್ಪ್ಪ. 5 ಪತದಷ್ಟಾರಾಭೀರೂಜಳದಸಮಯಂ.
6 ತನ್ನಂದದರೂಪು. 7 ದೇ ! ಅರೇ. 8 ಪೊಕ್ಕದ್ದ. 9 ತಾಮ್ರಾಕ್ಷಿನಿರೀಕ್ಷಿಸುತ್ತುಮಿರ. 10 ಸೂತ್ರ.
11 ತೀ. 12 ತೋಱುಸವಾಗಮುಕ್ಕಳ.

ವೃ ॥ ಪ್ಲವಂಗಮುಕುಳಂಗಳಲ್ಲಿ ಕಿಸುಗಲ್ಲ ಶೃಂಗಂಗಳಂ।
ದವಾಗ್ನಿ ಶಿಖೆಗೆತ್ತು ಬೆರ್ಚ್ಚಿ ಮದದಂತಿಯುಂ ನಿರ್ಝರ॥
ಪ್ರವಾಹನಗಮೆಂದೆಗೆ[1]ತ್ತದಱ ಬೆಂಗೆ ವಂದಾಗಳಾ।
ದವಸ್ಥೆ ತ[2]ಱಸಿಲ್ವಿನಂ ನಗಿಕುಮಪ್ಸರೋಬೃಂದಮುಂ॥ 812

ಕಂ ॥ ಕುಳ್ಳಿರ್ದ್ದ ಕು[3]ಳಿರ್ವ ಮೆಳೆಯೊಳ್।
ಪಳ್ಳದ ಕೇದಗೆಗೆ ಪಾಯ್ದು ಪತ್ತಿದ ಕೆಯ್ಯಂ॥
ಮುಳ್ಳುರ್ಚ್ಚೆ ತೆಱೆದು ಪಲ್ಲಂ।
ಘೊ[4]ಳ್ಳನೆ ನಗಿಸಿದುದು ಕಟಕಮುಂ ಮರ್ಕ್ಕಟಕಂ॥ 813

ಇದು ಜಘನ್ಯಪಾತ್ರಂ॥

ಕರುಣಕ್ಕೆ ॥

ವೃ ॥ ಬಗೆಗೀಗಳ್ ನಿಶ್ಚಯಂ ಪುಟ್ಟಿದುದಱಿದೆನಿದಂ ಪನ್ನಗಂ ಶಂಖಚೂಳಂ।
ಮಗನಿಂತೀವೃದ್ಧೆಗೀತಂ ತಡೆಪರದೊಡಗೊಂಡುಮ್ಮುವಂ ಕಿಂಕರಂ ಪ॥
ನ್ನಗರಾಜಂಗೀತನಂ ವಾಸುಗಿ ಗರುಡನ ತೀಂಗೊಡ್ಡಿದಂ ತಪ್ಪದಾಹಾ।
ವಿಗಳದ್ಬಾಷ್ಪಾಂಬುದೀನಾನನೆ ಜನನಿ ಮಗಂ ಪೋಗೆ ಪುಯ್ಯಲ್ವಿದಪ್ಪಳ್॥ 814

ಅಂತಲ್ಲದೆಯುಂ॥

ವೃ ॥ ಆಱಲನೆರ್ದೆಯೊಳ್ ತಿಣ್ಣಂ ತಱಿಸ್ಕೈಸಿ ಪುತ್ರವಿಮೋಹದಿಂ।
ದೆಱವಿ ತನುವಂ ಹಾಹಾ ಹಾವತ್ಸಯೆಂದಮರ್ದಪ್ಪಿಕೊಂ॥
ಡೞುತುಮೞುತುಂ ನಟ್ಟಿರ್ದ್ದಂಬಂ ಮುನೀಶನಿಳೇಶನಿಂ।
ಕಿಱಿಸೆ ಸರಲಿಂ ಮುನ್ನಂ ತದ್ದ್ವಾರದಿಂದಸು ಪೋಪುದುಂ॥ 815

ಸೂತ್ರಂ ॥ 203 ॥

ವೀರರಸಂ ಬವರಿಸುಗುಮು।
ವೀರಂ. ದಾರೋತ್ಸಾಹಪ್ರವೃತ್ತಿ ಕಾರಣಕಾರ್ಯ್ಯಂ॥
ರೌದ್ರಂ. ದಾರುಣರೋಷಾವೇಶ ವಿ।
ಕಾರಭವಂ ರೌದ್ರಮೆಂಬ ರಸಮದು ನೆಗೞ್ಗುಂ॥ 816

ಲಕ್ಷ್ಯಂ॥

ವೀರಕ್ಕೆ ॥

ವೃ ॥ ತ್ರಿದಶೇಂದ್ರಾಜ್ಞಾರ್ಜಿತ ಶೌರ್ಯ್ಯದರ್ಪ್ಪಂ ಕಿಱಿದೆ ಪೋಯ್ದಾಭೀಳದಿಕ್ಪಾಲರೊ।
ತ್ತಿದ ಸೈನ್ಯೋದ್ಧತಿ ಪೆತ್ತ ದರ್ಪ್ಪಂ ಕಿಱಿದೆ ಕೇಳ್ ನಿರ್ಮ್ಮೂಲನಮಾಯ್ತಿನ್ನು ಮೊ॥
ರ್ಪ್ಪಂ ದಲೆನ್ನೊಳ್ ಸಮಸಪ್ಪವಂ ಪೊಣರೆ ಕೀಟ್ಬಂದೊಪ್ಪುಗುಂ ಪೆ[6]ಂಗಿಯೋ।
ಮುದುಮರ್ದ್ದ್ಗ ಸಿನಗೆಂತು ಕೇಳ್ಸೆಸ[7]ತುಳಶ್ರೀಚಂದ್ರಹಾಸಾಸಿಯುಂ॥ 817

1 ಪುಷ್ಕಲಉ. 2 ತಱಸಿಲ್ವಿನಂ. 3 ಕೆಸುರೆಯೊಳ್ಕುಳು । ಪಳ್ಳದ. 4 ಕೊಳ್ಳನೆನಗಿಸಿತ್ತು. 5 ಪ್ರವತ್ತಿ.
6 ಬೆಂಗಿಯುಂ, ಲೆಂಗಿಯುಂ. 7 ನಮಳ.

ಅಂತುಮಲ್ಲದೆಯುಂ ॥

ವೃ ॥ ಕ್ಷಿತಿಯೊಳರಾತಿಭೂಪತಿಗಳಂ ತವೆ ಕೊಂದು ಸಮಂತು ವಿಪ್ರಸಂ ।
ತತಿಗಖಿಳಾವನೀತಳಮನಿತ್ತು ನೆಗೞ್ದಿದನಲ್ತೆ ವಿಕ್ರಮೋ ॥
ನ್ನತಿಯೊಡನೊಂದು ದಾನಗುಣದುನ್ನತಿಯಂ ಭುವನಕ್ಕೆ ಭಸ್ಮಸಾ ।
ತ್ಕೃತರಿಪು ಪಾತ್ರಸಾತ್ಕೃತಜಗದ್ವಲಯಂ ಜಮದಗ್ನಿನಂದನಂ ॥ 818

ರೌದ್ರಕ್ಕೆ ॥

ವೃ ॥ ಕುಡಿವೆಂ ದುಶ್ಶಾಸನೋರಸ್ಥಳಮನಗಲೆ ಪೋೞ್ದುದ್ರ್ಭ ಕ[1]ನ್ನೆತ್ತರಂ ಪೊ ।
ಕ್ಕುಡಿವೆಂ ಪಿಂಗಾಕ್ಷನೂರುದ್ವಯಮನುರುಗದಾಘಾತದಿಂ ನುಚ್ಚುನೂಱು ॥
ಗೊಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ ನಂಬು ನಂಬೆನ್ನ ಕಣ್ಣಿಂ ।
ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ ॥ 819

ಕಂ ॥ ಅಱುಪಿದುದು ರೌದ್ರರಸಮಂ ।
ಕಿ[2]ಱುಪಿದ ಕುಡುವುರ್ವ ಕರ್ಚಿದೌಡುರ್ಚಿದ ಬಾ ॥
ಳೆಱಿಯಲನುಗೆಯ್ದ ಕೆಯ್ ಬೆ ।
ಳ್ಕುಱೆ ಪೆರ್ಚುನೆ ಬಿಟ್ಟ ಕಣ್ ಹಯಾರೋಹಕರಾ ॥ 820

ಸೂತ್ರಂ ॥ 204 ॥

ಭಯಹೇತುಸಮುದ್ಭೂತಂ ।
ಭಯಾನಕಂ. ಭಯಾನಕಂ ಕೃತಜುಗುಪ್ಸನಂ ಬೀಭತ್ಸಂ ॥
ಬೀಭತ್ಸಂ. ನಿಯತಂ ವಿಸ್ಮಯಭಾ[4]ವಾ ।
ಅದ್ಭುತಂ. ಶ್ರಯಮದ್ಭುತರಸಮೆನಿಪ್ಪ[5] ಪೆಸರಂ ಪಡೆಗುಂ ॥ 821

ಲಕ್ಷ್ಯಂ ॥

ಭಯಾನಕಕ್ಕೆ ॥

ವೃ ॥ ಮಕರಂ ಬಾಯ್ದೆಱೆದಂದದಿಂ ತೆ[6]ಱೆದ ಬಾಯ್ ಪೇ[7]ಱಿರ್ದ ಕೂರ್ದಾಡೆ ನೆ ।
ಕ್ಕ ಕದಂಪೆತ್ತಿದ ಪುರ್ವು ಪತ್ತಿದ ಬಸಿಱ್ ಪೋತಂದ ಕಣ್ ಮೇಘಘೋ ॥
ಷ[8]ಕಠೋರಧ್ವನಿ ನೀಳ್ದ ಕೇಸುರಿವೊಲಿ[9]ರ್ಪ್ಪಾಭೀಳಕೇಶಾಳಿ ಸ[10] ।
ರ್ಪಕನದ್ಭೂಷಣಭೀಷಣಂ ಭಯದಮಾಯ್ತಾರಾಕ್ಷಸೀರೂಪಕಂ ॥ 822

ವೃ ॥ ಸೋರ್ಮುಡಿ ಸೋ[11]ರ್ದ್ದ ಪೀದಲೆಯ ಪ[12]ಚ್ಚೆಳಮಂ ನಿಜಮಾರ್ಗ್ಗಮಂ ಬಿಸು ।
ಟ್ಟೊರ್ಮೆಯೆ ಕೞ್ತೆ ಚಮ್ಮಟಿಗೆ ಮುಟ್ಟಿದವೋಲ್ ನಸುಬೆರ್ಚಿ ತಾನದ ॥
ಕ್ಕಿರ್ಮಡಿ ಬೆರ್ಚಿ ಪೆರ್ಚಿ ನಡುಕಂ ಪೆಱಗೇಱಿದಳೊರ್ವಳೋಸನಂ ।
ಪೆರ್ಮೊಲೆ ಪೆಣ್ಣನರ್ಚಿದಪುದೆಂಬಿನಮುಪ್ಪಿದಳಾ[13]ದಮೊಪ್ಪಿದಳ್ ॥ 823

---

1 ಕನ್ನೆತ್ತರಂ. 2 ತಿಱುಪಿದ. 3 ಬೆಚ್ಚನೆ. 4 ಭಾರಾ. 5 ಪ್ರವಕ್ಕಾಂ ಪೆಸರಿಂ. 6 ತೆಗೆದ. 7 ಪೇಱಿರ್ದ. 8 ಷಕಘೋರ. 9 ಲಪ್ಪಾ. 10 ಸ । ಪ್ರಕಟಮಣಿಭೂಷಣಂ. 11 ಜೋಲ್ದ. 12 ಪಚ್ಚೆವು. 13 ಳಾಗ ಳಾತ್ರದಿಂ.

ಕಂ॥ ಬೆರಲಂ ಕಚ್ಚುರ್ವ ಪುತ್ತ್ರಂ ।
ಪರಿದೇಱುವ ಕೆಯ್ಯುದ್ದಿಕ್ಕಿ ಪೊಡಮಡುವ ಭಯ ॥
ಜ್ವರದಿಂ ನಡುಗುವ ಭೀರುಗ ।
ಳೆರೆಬರ್ ಕನ್ನಡಿಸಿದರ್ ಭಯಾನಕರಸಮಂ ॥ 824

ಬೀಭತ್ಸಕ್ಕೆ ॥

ವೃ॥ ನೆತ್ತರಂ ಕುಡಿದು ಸೀನೆಣದೊ[1]ಳ್ಪಡಿಖಂಡಮಂ ।
ಪತ್ತೆ ತೊ[2]ಯ್ದು ನೆಣದೊಟ್ಟದ ಪಾರೆಯುಮಾರೆಯುಂ ॥
ತುತ್ತಿ ನುಂಗಿ ಮಿ[3]ದುಳಂ ತಣಿವಿಂ ಪುಳಿದೇಗುದೇ ।
ಗುತ್ತುಮಿರ್ಪ್ಪುವ[4]ದಱೊಳ್ ರಜನೀಚರಕೋಟಿಗಳ್ ॥ 825

ಅದ್ಭುತಕ್ಕೆ ॥

ವೃ॥ ಪಯ-ವುಲಿಗಳ್ ಮೊಲೆಯೂಡಿದುವಾ ಹರಿಣಂಗಳಂ .... ।
ನಮುದೊಳೆ ನೋಡಿದುವಾನೆಗಳಂ ಹರಿಗಳ್ ನಿಜೋಜ್ವಲಕೇಸರಾ ॥
ಳಿಯನ[5]ಗಿಯುತ್ತಿರೆಯುಂ ಕುಟಿಲಾಹಿಗಳುಂ ನವಿಲ್ಗಳನೆತ್ತಮಾ ।
ಶ್ರಯಿಸಿದುವಿಂತಿನಿತದ್ಭುತಮಾಯ್ತು ತಪೋಮಹತ್ವದಿನಾಕೆಯಾ ॥ 826

ಕಂ॥ ತನಗಿಲ್ಲದ ಭಯಮಂ ತೈ ।
ಲನಾಂತ ರಿಪುನೃಪರ್ಗೆ ಕುಡುವನವರ್ಗಿಲ್ಲದುದಂ ॥
ವಿನುತಜ[6]ಯಶ್ಲಾಘ್ಯಯಶೋ ।
ಧನಮಂ ತಾನೀಱ್ದು ಕೊಳ್ವನೇನಚ್ಚರಿಯೋ ॥ 827

ಸೂತ್ರಂ ॥ 205 ॥

ಸಮಭಾವಪ್ರಭವಂ ಶಾಂ ।
ತಮಕ್ಕುಮಂತಾಸಮತ್ವಮುಂ ವರ್ತ್ತಿಸುಗುಂ ॥
ಶಾಂತಂ. ಸಮನಿಸಿ ಸ[7]ಮ್ಯಗ್ಜ್ಞಾನಂ ।
ತಮಮಂ ರಾಗಮುಮನಲೆದು ತೊಲಗಿಸೆ ಮನದಿಂ ॥ 828

ಲಕ್ಷ್ಯಂ॥

ವೃ॥ ಬಗೆಯಂ ತಾರದೆ ತಾಪಸಾಶ್ರಮಪದಕ್ಕಜ್ಞಾನದಿಂ ಮೂರ್ಖರೇ ।
ಕೆ ಗಡಂ ಮಾಣ್ಬರೊ ಮುಪ್ಪಿಱಲ್ ಬಡತನಂ ರೋಗಂ ವಿಯೋಗಂಗಳಿ[8] ॥
ನ್ನೆಗಮಿಕ್ಕಿ ದೊರ್ದ್ದಿಪಲು ಬಿಸುಟ್ಟು ಪೆ[9]ಱಿದಂ ಕೆಯ್ಕೊಂಡು ಸಂಸಾರದೊಳ್ ।
ಮ[10]ಗಟ್ಟಿಂ ಪುಟ್ಟುವರೆಂಬ ಗಾಂಪಿದೆ ಮಲಂ ಧೀ[11]ರಂಗೆ ಲಜ್ಜಾಕರಂ ॥ 829

1 ದೊಪ್ಪ್ರದ. 2 ಕೊಯ್ಯುನಗೆದೊಟ್ಟದ, ತೊಲ್ಯ. 3 ಮಿದುಳಿ. 4 ವಱೊಳ್. 5 ನುಗಿ. 6 ನಯ. 7 ದಿವ್ಯಜ್ಞಾನಂ. 8 ಳಂನೆಗಮಿಕ್ಕಿದೊರ್ದ್ದದ (ಲಂ). 9 ಪೆಱಿದಿಂ, ಪೆಱಿರಿಂ, ಪಸಮಂ. 10 ತನುಳ್ಳಂ. 11 ವೀರಂಗೆ.

ವೃ॥ ಧರೆಯೊಳ್ ಧರ್ಮ್ಮಪಥಕ್ರಮಂಗಳೆಸೆಗುಂ ಮತ್ಕೀರ್ತ್ತನಂಗಳ್ ಜಯೋ।
ದ್ಧುರಮುಂ[1]ಟರ್ತ್ಥಫಲೋಪಮಾನಮೆಮಗೀಹಸ್ತ್ಯಶ್ವತಂತ್ರಂ ಕುಳಾ॥
ಭ[2]ರಣಂ ಕಾಮಫಲೋಪಮಂ ಬಳೆದಪಂ ಮನ್ನಂದನಂ ಸಾಲ್ವುದಿ[3]।
ನ್ನಿರವೇಂ ಮೋಕ್ಷಮಹಾಮಹೀರುಹಫಲೈಕಾ[4]ಸ್ವಾದಮಂ ನೋಡುವೆಂ॥ 830

ಸೂತ್ರಂ ॥ 206 ॥

ಕರುಣಾರಸಕ್ಕೆ ಮಿಗೆ ಹಾ।
ಸ್ಯರಸಂ ಶೃಂಗಾರರಸಕೆ ಬೀಭತ್ಸಂ ರೌ॥
ದ್ರರ[5]ಸಕ್ಕಮದ್ಭುತಂ ವೀ।
ರರಸಕ್ಕೆ ಭಯಾನಕಂ ನಿ[6]ರೋಧಕಮಕ್ಕುಂ॥ 831

ಲಕ್ಷ್ಯಂ॥

ಕಂ॥ ಕರಜಕ್ಷತಗಳಿತಾ[7]ಸ್ತ್ರ।
ನುರಕ್ತಕರ್ದ್ದಮಿತವಿಗ್ರಹಂ ಸು[8]ವ್ರಣಿತಾ॥
ಧರಜಾತಿಪೂತಿಗಂಧಂ।
ತರುಣೀಮುಖಮೆನಗೆ ಪಡೆದುದೊದವಿದಲಂಪಂ॥ 832

ಸೂತ್ರಂ ॥ 207 ॥

ಎರಡುಂ ವಿರುದ್ಧರಸಮೊಡ।
ಮೆರಸಿರೆ ತದಮಾಂತರಸ್ಥಮೊಂದನ್ಯರಸಂ॥
ಪರಿಪುಷ್ಟಮಾಗೆಯುಂ ವ್ಯತಿ।
ಕರಣಾಂ ಮೋಣ ತಾಮಮಾಗೆಯುಂ ನಿರ್ದ್ದೋಷಂ॥ 833

ಲಕ್ಷ್ಯಂ॥

ವೃ॥ ಅರುಣಜಳಾವಲಿ[9]ಪ್ತ ಪೊಸಗುಂಕುಮದಂತಿರೆ ಕರ್ಣ್ಣಲಗ್ನತೋ।
ಮರಮುಮವತಂಸದಂತಿರೆ ನವವ್ರಣರಾಜಿ ವಿಭೂಷಣಾಳಿಯಂ॥
ತಿರೆ ಮಿದುಳುಣ್ಮೆ ಪುಷ್ಪಕೃತಶೇಖರದಂತಿರೆ ಕೋಡು ಪೋದರ।
ಚ್ಚರಸೆಯರಣ್ಮಿ ಬಿದ್ದ ಭಟರಂ ಕೊನೆಮಿಾಸೆಯ ಚೆನ್ನ ಪೊಂಗರಂ॥ 834

ಭಯದಿಂ ಕಚ್ಚಿರ್ದು[10]ದೊಂದು ಪುಲ್ ಮುಗಿದ ಕೆಯ್ ಬಿಟ್ಟಿರ್ದ್ದ ಕೇಶಂಗಳಂ।
ನಯನಾಂಭಃಪ್ಲವಮೋಡುವಲ್ಲಿ ಪಿರಿದುಂ ಕಾರುಣ್ಯಮಂ ಮಾಡೆ ವೈ॥
ರಿಯನಾಗಳ್ ನಗುವಂತಿರಿರ್ದ್ದುದು ಕನತ್ಖಡ್ಗಂ ವಿನಿರ್ಭಿನ್ನಕುಂ।
ಭಯುಗೋದ್ಯದ್ದ್ವಿಪಮೌಕ್ತಿಕಾಳಿಕಳಿತಂ ಶ್ರೀವಿಪ್ರಮಾರ್ತ್ತಂಡನಾ॥ 835

1 ಮುಂಟಾರ್ತ್ಥ. 2 ಚರ ಂ. 3 ದೆ!ನ್ನಿರವಿಂ, ದಿ!ನ್ನದವೆಂ, ದ!ನ್ನಿರದಂ. 4 ಕಾಪಾರವ.ಂ, ಕಾಸ್ವಾದನಂ.
5 ರಸೋತ್ಕಟಗದ್ಭುತಂ. 6 ವಿರೋಧಿಗಳಕ್ಕುಂ. 7 ತಸ್ತ್ರ, ತಸ್ರೂವರಕ್ತ. 8 ಸವ್ರಣಿತಾ. 9 ಲಿಪ್ತನವಕರ್ದ್ದಮ,
ಲಿಪ್ತನರ. 10 ದದೊಂದು.

ಸೂತ್ರಂ ॥ 208 ॥

ವೀರಂ ಗೌರಂ ರೌದ್ರಮ |
ದಾರಕ್ತಂ ಪೀತಮದ್ಭುತಂ ಶ್ಯಾ[1]ಮಂ ಶೃಂ ||
ಗಾರಂ ಶ್ವೇತಂ ಹಾಸ್ಯಂ |
ಕಾರುಣ್ಯಂ ಧೂಮ್ರಮಸಿತಮುೞಿದುವವೆರಡುಂ || 836

ಸೂತ್ರಂ ॥ 209 ॥

ವೃತ್ತಿಭೇದಂಗಳ್.

ಭಾರತಿಯ ಕೊಂಕು ಸತ್ವೋ |
ದಾರತೆ ಸರಸಾರ್ತ್ಥಮು[2]ದ್ಧತಸ್ಥಿತಿಯಿವಱಿಂ ||
ಭಾರತಿ ಸಾತ್ವತಿ ಕೈಶಿಕಿ |
ಯಾರಭಟಿಯೆನಿಪ್ಪ ವೃತ್ತಿಗಳ್ ನಾಲ್ಕಕ್ಕುಂ || 837

ಸೂತ್ರಂ ॥ 210 ॥

ವಿದ್ವಜ್ಜನಹೃದಯಂಗಮ |
ಸ[3]ದ್ವಕ್ರೋಕ್ತಿಪ್ರಕಾಶಮದ್ಭುತಹಾಸ್ಯೋ ||
ದ್ಯ[4]ದ್ವಸ್ತುವೃತ್ತಿ ಸಲೆ ರಸ |
ವದ್ವಚನದೊಳೆಸೆಯೆ ಪೇೞ್ಗೆ ಭಾರತಿಯಿಂದಂ || 838

ಸೂತ್ರಂ ॥ 211 ॥

ಬಾಗಂ ಬೀರಂ ಸೊಬಗಂ |
ಬೀಗುಣಮುಂ ಶಾಂತವೃತ್ತಿಯುಂ ಸಾಹಸದು ||
ದ್ಯೋಗಮುಮತಿಲಲಿತಸದಾ |
ಭೋ[5]ಗದೊಳಂಬಾಗೆ ರಂಜಿಕುಂ ಸಾತ್ವತಿಯೊಳ್ || 839

ಸೂತ್ರಂ ॥ 212 ॥

ನಗರಾದಿವರ್ಣ್ಣನಂ ನೃ |
ತ್ಯಗೀತವಾದ್ಯಪ್ರಯೋಗಮುಬ್ಳಾವಿಷಯೋ ||
ಪಗಮುವ್ಯವಹೃತಿಯೆಂಬಿವು |
ನೆಗೞ್ಗುಂ ಮೃದುಮಧುರರಚನೆಯಿಂ ಕೈಶಿಕಿಯೊಳ್ || 840

1 ಶಾಂತಂ, 2 ಮುದ್ಧುರ. 3 ಸದ್ವಕ್ರೋಕ್ತ್ಯ, ಸದ್ವಿರೋಕ್ತ್ಯ. 4 ಸದ್ವಸ್ತು, 5 ಭಾಗ.

ಸೂತ್ರಂ ॥ 213 ॥

ಕ್ರೂರಾಸ್ತ್ರಪಾತಚಿತ್ರಮು ।
ಹಾರಣಮಾಹೇಂದ್ರಜಾಲರೌದ್ರಾದಿರಸಂ ॥
ಚಾರುತರಸ್ಫುಟಬಂಧದೊ ।
ಳಾರಭಟೀವೃತ್ತಿಯಿಂದಭಿವ್ಯಂಜಿಸುಗುಂ ॥ 841

ಇದು ರೀತಿಕ್ರಮರಸನಿರೂಪಣದೊಳ್ ರಸಪ್ರಕರಣಂ ದ್ವಿತೀಯಂ ॥

ಗೀತಿಕೆ॥ *ರೀತಿಯುಂ ರಸವಿಭಾಗಮುಮಂ ವಿ ।
ಖ್ಯಾತಿಯನಾಂತ ವೃತ್ತಿಗಳಂ ಪ್ರಾ ॥
ತೀತಿಕಮಾಗೆ ತಿಳಿಯೆ ಪೇಳ್ದನಿಂತೀ ।
ಭೂತಳದೊಳ್ ಸಲೆ ನಾಗವರ್ಮ್ಮಂ ॥ 842

ವೃ ॥ ಧರೆಯೆಂತಂತೆ ರಸಾಶ್ರಯಂ ಜಲಧಿಯೆಂತಂತಾ[1]ತ್ತಗಾಂಭೀರ್ಯ್ಯಮಂ ।
ಬರಮೆಂತಂತೆ ಸದಾವೃತಂ ದೆಸೆಗಳೆಂತಂತೂರ್ಜ್ಜಿತಂ ಸಂದ ಮಂ ॥
ದರಮೆಂತಂತೆ ಸುವರ್ಣ್ಣಭಾಸಿ ಶ[2]ಶಿಯೆಂತಂತುಜ್ವಳೋದ್ಯತ್ಕಳಾ ।
ಸ್ಫುರಿತಂ ಭಾವಿಸೆ ನಾಗವರ್ಮ್ಮರಚಿತೋದಾತ್ತಪ್ರಬಂಧಾನ್ವಯಂ ॥ 843

ಗದ್ಯ ॥ ಇದು ಸಕಳಸುಕವಿಜನಮನಸ್ಸರೋಜಿನೀರಾಜಹಂಸಾಯ
ಮಾನಾನೂನಕವಿತಾಗುಣೋದಯಂ ಶ್ರೀ ನಾಗವರ್ಮ್ಮ
ವಿರಚಿತಮಪ್ಪ ಕಾವ್ಯಾವಲೋಕನದೊಳ್
ರೀತಿಕ್ರಮರಸನಿರೂಪಣಮೆಂಬುದು
ಚತುರ್ತ್ಥಾಧಿಕರಣಂ.

---

* ಈ ಪದ್ಯವು ಮೂರು ಪ್ರತಿಗಳಲ್ಲಿ ಈರೀತಿಯಾಗಿಯೇ ದೊರೆಯುತ್ತದೆ. ಒಂದು ಪ್ರತಿಯಲ್ಲಿ ನಾಕ್ಕೆಳಗೆ ಬರೆದಿರುವಂತೆ ಭೇದರೂಪವಾಗಿ ದೊರೆಯುತ್ತದೆ :—

ರೀತಿರಸಭಾಗಮುಮಂ ವಿ । ಖ್ಯಾತಿಯನಾಂತಮುಳ ವೃತ್ತಿವೃತ್ತಂಗಳುಮಂ ॥
ಪ್ರಾತಿಕಮಾಗಿರೆ ಪೇಳ್ದಂ । ಭೂತಳದೊಳ್ ಗೆಸೆಯೆ ನಾಗವರ್ಮ್ಮಕವೀಂದ್ರಂ ॥

1 ತ್ರಾಪ್ತ. 2 ರವಿ.

5. ಕವಿಸಮಯಾಧಿಕರಣಂ.

ಸೂತ್ರಂ || 214 ||

ಆವುದಶೇಷಲೋಕವಿಷಯಸ್ಥಿತಿಯುಳ್ಳಖಿಳಾಗಮಾರ್ತ್ಥಮುಂ।
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀ[1]ತಮಾಗಿ ನಿ ||
ಷ್ಕೇವಳಮಾ[2]ದ ರೂಢಿವಶದಿಂ ಸಲೆ ಸಲ್ವುದಿ[3]ದಲ್ತೆ ಶಿಷ್ಟಸಂ।
ಭಾವಿತಮಪ್ಪ ಕಾವ್ಯಸಮಯಂ ಭುವನತ್ರಯಮಸ್ತುಗೋಚರಂ|| 844

ಸೂತ್ರಂ || 215 ||

ಆತತಸತ್ಕವಿಸಮಯಂ।
ಜಾತಿದ್ರವ್ಯಕ್ರಿಯಾಗುಣಾಶ್ರಯಮಸದಾ ||
ಖ್ಯಾತಿ ಸದಕೀರ್ತ್ತನಂ ನಿ ।
ರ್ಣ್ಣೀತಂ ನಿಯಮಾರ್ತ್ಥವೈಕ್ಯಮೆನೆ ನಾಲ್ಕು ತೆಱಂ || 845

ಅಸದಾಖ್ಯಾತಿಪ್ರಕರಣಂ.

ಸೂತ್ರಂ || 216 ||

ಸಲಿಲಾಶ್ರಯಮಾತ್ರದೊಳಂ ।
ಕಲಹಂಸಪ್ರಭೃತಿ ನದಿಗಳೊಳ್ ಕಮಲಸಿತೋ ||
ತ್ಪಲಕುವಲಯಾದಿ ಶೈಲಾ ।
ವಲಿಯೊಳ್ ರ[4]ತ್ನಾದಿಯುಂ ಪ್ರಯೋಗಿಸೆಪ[5]ಡೆಗುಂ || 846

ಲಕ್ಷ್ಯಂ||

ಜಲಾಶ್ರಯಮಾತ್ರದೊಳ್ ಹಂಸಾದಿಗಳ್ಗೆ ||

ವೃ || ಜಕ್ಕವಕ್ಕಿಗಳಿಂ ಕಳಹಂಸೆಯಿಂ।
ಮಿ[6]ಕ್ಕ ಸಾರಸದಿಂ ಕುರರಂಗಳಿಂ||
ಮೊಕ್ಕಳಂ ಸೊಗಯಿಪ್ಪುದು ನೋ[7]ಡ ನೋ।
ಟಕ್ಕೆ ಚೆಲ್ವೆಸೆದಿಲ್ಲಿಯ ಪೂಗೊಳಂ|| 847

---

1 ನೀತ. 2 ವಾಗಿ. 3 ದದಲ್ತೆ. 4 ರತ್ನಾಳಿಯುಂ, ರತ್ನಾದಿಕಂ. 5 ಪಡುಗುಂ. 6 ಕುಂಕುರಂಗಳಿಂದೆಸೆವಸಾರಸಂಗಳಿಂ. 7 ನಾಡೆ.

ನದಿಯೊಳ್ ಕಮಲಾದಿಗಳ್ಗೆ ॥

ವೃ ॥ ಸರಯೂನದ್ಯರವಿಂದಮಂದಮಕರಂದಸ್ಯಂದಿ ಗಂಗಾಂಬುಶೀ ।
ಕರಸಂಸಂಗಿ ಲತಾಭಿರಾಮಲಲನಾಲಾ[1]ಸ್ಯೈಕಶೈಲೂಷನ ॥
ದ್ರಿರುಹಕ್ರೋಡನಿಪಾತಿ ಮಾ[2]ಲ್ಯವದನುಪ್ರಸ್ಥೋತ್ಥಿತಂ ಯಾಮುನೋ ॥
ದರಕುಂಜಸ್ಥಿತಿ ಮೆಲ್ಲನಲ್ಲಿ ಸುೞಿಗುಂ ಬಂದೊಂದು ಮಂದಾನಿಳಂ ॥ 848

ಕಂ ॥ ಕುವಲಯವನರುಚಿಯಿಂ ಜಾ ।
ಹ್ನವಿಯ ಜಳಂ ಕರಮೆ ಕೞ್ಗೆ ತೋಱಿದುದಂತಾ ॥
ಪ್ಲವಗಧ್ವಜಂಗೆ ಯಮುನಾ ।
ಪ್ರವಾಹಸಂಭೇದಮಾದ ತೆಱದಿಂದಾಗಳ್ ॥ 849

ಶೈಲದೊಳ್ ರತ್ನಾದಿಗಳ್ಗೆ ॥

ವೃ ॥ ಕಳಧೌತೋಚ್ಚಶಿಲೋದ್ಗತಾಂಶುವಿಲಸತ್ಪಾದಂ ಸ್ಫುಟಸ್ಫಾಟಿಕೋ ।
ಪಳಧಾ[3]ನೋಜ್ವಳಮಧ್ಯಮಂಬುರುಹರಾಗೋದಗ್ರಪಾಷಾಣಭಾ ॥
ವಳಯೋದ್ಭಾಸಿನಿಜೋಪಕಂಠಮ[4]ಸಿತಚ್ಛಾಯಾಂತರತ್ನಪ್ರಭಾ ।
ವಿಳಮೂರ್ಧ್ವಂ ನಡೆ ನೋಡೆ ಪೋಲ್ತುದು ನಗಾಧೀಶಂ ಖಗಾಧೀಶನಂ ॥ 850

ಕಂ ॥ ಮರಕತದ ಕಲ್ಲ ಕ[5]ವಿಗಳೊ ।
ಳ್[6]ರಡಱಿಯದೆ ಕೂರ್ತ್ತು ಧೂರ್ತ್ತಸುರಮಿಥುನಂಗಳ್ ॥
ನೆರೆದಳಸುಗಲಿಸೆ ಗಿಳಿಯುಂ ।
ಪುರುಳಿಯುಮುಳಸುವುವು ದೇವಭಾಷೆಗಳಳಸಂ ॥ 851

ಅಂತಲ್ಲದೆಯುಂ ಧನದನ ।
ಗಂ ತನಗಟ್ಟಿದೊಡೆ ರಾಯಭಾರಿತನೆರಿ ಬಂ ॥
ದಂತಿಪ್ಪುರ್ವಿದಱ ಕುಂಜೋ ।
ಪಾಂತದ ತ[7]ಱತಱಿಸಿ ಪೋಳ್ವ ಕು[8]ಳಿಶಾಶ್ಮಂಗಳ್ ॥ 852

ಇದು ಜಾತಿ ॥

ಸೂತ್ರಂ ॥ 217 ॥

ತಮದೊಡನ್ತು ಮುಷ್ಟಿಸಂಗ್ರಾ ।
ಹ್ಯಮಭೇದ್ಯಂ ಸೂಜಿಗಪ್ಪೊಡಂ ತಾನೆನೆಯುಂ ॥
ಕುಮುದಪ್ರಿಯಾತಪಂ ನಾ ।
ವ್ಯಮಂಜಳಿಗ್ರಾಹ್ಯಮೆನೆಯುಮಿಷ್ಟಮಿವಕ್ಕಂ ॥ 853

1 ಲಾಸೆ ಋಷಿಪ, ಳಸ್ವೈಕ. 2 ಪಾಳವವಧೂ. 3 ದಲ್ಪೋಜ್ವಳ. 4 ಮಹಿತ. 5 ಕಣಿ. 6 ಳಿರಡಿಲ್ಲದೆ ಕೂಡಿ ಕೂತ್ತು. 7 ತಳದಳಿಸಿ. 8 ಕುಳಿಶಾಸ್ತ್ರಂಗಳ್.

ಲಕ್ಷ್ಯಂ ॥

ತಮಕ್ಕೆ ॥

ವೃ ॥ ಪೊದೆದ ಮದವನ್ಮಾತಂಗೇಂದ್ರಾಜಿನಾಂಬರಮಂ ನಿಮಿ ।
ಚ್ಚಿರ್ದಪನಭವಂ ತಾನೆಂಬಂತಾಗೆ ಪೆರ್ಚಿರ್ದಗುರ್ವಿನೊಳ್ ॥
ಪುದಿದೊದವಿನಿಂ ಸೂಚೀನಿರ್ಭೇದ್ಯಮಪ್ಪಿನಮೆಯ್ದೆ ಪ ।
ರ್ವಿದುದದಳಂ ಮುಷ್ಟಿಗ್ರಾಹ್ಯಂ ತಮಂ ಭುವನಾಂತಮಂ ॥ 854

ಚಂದ್ರಾತಪಕ್ಕೆ ॥

ವೃ ॥ ಪೆ[1]ಲಗಸೆದೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದಿದಳ್ ।
ಚ್ಚಲನೆ[2]ಳದೋಂಟದೊಳ್ ಪರಿಯಿಸಲ್ ಪಱುಗೋಲ್ಗಳನಿಕ್ಕಿ ಪಾಯಿಸಲ್ ॥
ನೆಲೆಯಿನಿಸೆಂದು ನೋಡಲೊಳಪೊಕ್ಕು ದುಡುಂಮಿಱುದಾಡಲೀಸಲ ।
ಲ್ಗಲಿಸಿದಲಂಪಿನಿಂ ಬ[3]ಗೆದುದಂದು ಜನಂ ಘನಚಂದ್ರಿಕಾಂಬುವಂ॥ 855

ಇದು ದ್ರವ್ಯಂ ॥

ಸೂತ್ರಂ ॥ 218 ॥

ಇರುಳೊಳ್ ಚಕ್ರಾಹ್ವ[4]ಯಮಯುಗ ।
ವಿರಹಾರ್ತ್ತಿ ಚಕೋರಚಂದ್ರಿಕಾಪಾನಮುಮಿಂ ॥
ತೆರಡುಂ ಕ್ರಿಯಾತ್ಮಕಂಗಳ್ ।
ವಿರಚಿಸೆಪ[5]ಡೆಗುಂ ಪ್ರಯೋಗಗತಿಲಕ್ಷ್ಯಂಗಳ್ ॥ 856

ಲಕ್ಷ್ಯಂ ॥

ಪ್ರಥಮಕ್ಕೆ ॥

ವೃ ॥ ನೆರೆವನ್ನಂ ರವಿ ನಿಲ್ಲದ[6]ಸ್ತಗಿರಿಯಂ ಸಾರ್ದಂ ಪ್ರಿಯಂ ಪೋಗಲಾ ।
ತುರನಾಗಿರ್ದನೆನುತ್ತುಮತ್ತಿನನನಿ[7]ತ್ತಾತ್ಮೇಶನಂ ನೋಡಿ ಕೋ ॥
ಪರಸಾವೇ[8]ಶಮನೊಂದು ಶೋಕರಸಮಂ ಮತ್ತೊಂದು ಕಣ್ ಕೆಯ್ಕೊಳು ।
ತ್ತಿರೆ ಕೆ[9]ಯ್ಕೊಂಡುದು ಚಕ್ರವಾಕವಧು ಕಣ್ಗೆತ್ತಂ ನದೀಲೀಲೆಯಂ[10] ॥ 857

ಬಿಸರುಹಸಖನಸ್ತಾದ್ರೀಂದ್ರಮಂ ಪೊರ್ದೆ ಪೋದಯ್ ।
ಬಿಸುಟನಿಯನೆ ನೀನುಂ ನಿನ್ನ ಪೆಂಪೆನ್ನೊಳಿನ್ನೀ ॥
ಯುಸುವುಮಿರದೆ ಪೋಗಲ್ಕಿರ್ದುದೆಂದಿಂತೊನಲ್ದಂ ।
ಕುಸುಮಶರಶಲಾಕಾಕೀಲಿತಾಂಗಂ ರಥಾಂಗಂ ॥ 858

1 ಜಲಗಸೆ ತೀವಿ, ಬೆಲಸಗ. 2 ನೆಳ, ನೆಲ. 3 ಗೆಳಸಿದರ್ ಘನಚಂದ್ರಿಕೆಯಂ ಲತಾಂಗಿಯರ್. 4 ಹ್ವದ್ವಯ. ಪತುಗುಂ. 6 ನಸ್ತ. 7 ನಿಂತಾ. 8 ವೇಗಮದೊಂದು. 9 ಕೆಯ್ಕೊಂಡುದುಚಕ್ರವಾಕವದು. 10 ಯಿಂ.

ಕಂ॥ ಸರಸಿಜಷಂಡವ ತೆರೆಗಳ್ ।
ತೆರಳ್ವಿನಂ ಕಮಳಪತ್ರಚಯಮೆನಿತನಿತುಂ ॥
ಕೊರಗುವಿನಂ ಬಿಸುಸುಯ್ದೀಂ ।
ಬಿರಯಿಸಿದುವೊ ಚಕ್ರವಾಕಮಿಥುನಮವಿರುಳೊಳ್ ॥ 859

ದ್ವಿತೀಯಕ್ಕೆ ॥

ವೃ॥ ಮನಮನೊ[1]ನಲ್ದುವಂ ಕಿರಣಜಾಲದಿನಂತವು ಪೋಗೆ ಮುಂ[2]ದಾಗೆ ।
ಟ್ಟನಿತಮೊಳಟ್ಟಿ ಡಂಗಿದ[3]ಪನಂತದಱಿಂದೆರೆದಪ್ಪೆನೇಣಲಾಂ ॥
ಛನನ ಕರಂಗಳುಳ್ಳನಿತುಮಂ ತವೆ ಪೀರೆನುತುಂ ಚಕೋರಲೋ ।
ಚನೆ ಪಿರಿದ[4]ಪ್ಪ ನಲ್ಮೆವೆರಸಳ್ಕಱೊಳಂದೆರೆದಳ್ ಚಕೋರಮಂ ॥ 860

ಇದು ಕ್ರಿಯೆ ॥

ಸೂತ್ರಂ ॥ 219 ॥

ಹಸಿತಯಶಃಪ್ರ[5]ಭೃತಿಯೊಳು ।
ಲ್ಲಸಿತಂ ಸಿತಭಾವಮಯಶದೊಳ್ ಪಾಪದೊಳಂ[6] ॥
ತಸಿತರುಚಿ ಕೋಪರಾಗ ।
ಪ್ರಸರದೊಳಾರಕ್ತವರ್ಣ್ಣಮ[7]ಭಿವರ್ಣ್ಣಿಸುಗುಂ ॥ 861

ಲಕ್ಷ್ಯಂ ॥

ಹಸಿತಯಶಃಪ್ರಭೃತಿಗೆ ॥

ಕಂ॥ ಬೆಳಪ ಮುಖಚಂದ್ರನೊಳ್ ತಳ ।
ತಳಿಸುತ್ತುಂ ತೊಳಗಿ ಪೊ[8]ಳೆವ ಬೆಳ್ದಿಂಗ[9]ಳದೊಂ ॥
ದಳವನಳವಡಿಸಿ ಕರಮು ।
ಜ್ಜಳಿಪ ಮುಗುಳ್ನಗೆ ಬೆಡಂಗು ನೃಪನಂದನೆಯಾ ॥ 862

ವೃ॥ ಹರಹಾಸದ್ಯುತಿಯುಂ ನಿರಾಕರಿಸಿ ಗಂಗಾಸಿಂಧುಕಲ್ಲೋಲಶೀ ।
ಕರಮಂ ನಿಂದಿಸಿ ಸಿಂಧುವಾರಕುಸುಮಶ್ರೀಯುಂ ಪ[10]ಳಂಚಾಡಿ ಭಾ ॥
ಸುರಚಂದ್ರಾಂಶುವಿ[11]ಕಾಸಮಂ ತೆಗಟ್ಟಿ ಮುಕ್ತಾಹಾರವಿಸ್ತಾರಡಂ ।
ಬರಮಂ ಮಿಕ್ಕು ಬೆಳಪ್ಪುದುಜ್ವಳಯಶಂ ಶ್ರೀಗಂಡಮಾರ್ತ್ತಂಡನಾ ॥ 863

ಕಂ॥ ನಂದನನೊಸಗೆಯುಮಾಮ[12]ಕ ।
ರಂದಕನೆಳಸಿರದೆ ಬಿ[13]ಟ್ಟು ಪೋದೊಂದಱಿಲುಂ ॥
ಕುಂದದೊಡನ[14]ಲೆಯೆ ಸತಿ ಕಾ ।
ಳಿಂದಿಯು ಸುರನದಿಯು ಕೂಡಲಂ ಪೋಲ್ತಿರ್ದ್ದಳ್ ॥ 864

---

1 ನೊಱಿಲ್ದುವಂ. 2 ಮುಟ್ಟ. 3 ಸವನಂತ, ಸನುವಂತ. 4 ದೊಂದುಸಲ್ಗೆ. 5 ಪ್ರಸರ. 6 ಳ । ತೃಸಿತ. 7 ಮದುವರ್ಣ್ಣೇರಯಂ, ಮದುವರ್ಣ್ಣರಯಶಂ, ಮದುವಿರ್ಣ್ಣೇರತಂ. 8 ಬೆಳಪ. 9 ಗಳಗೊಂ. 10 ಪಳಂಚಲವಿಭಾ. 11 ವಿಳಾಸ. 12 ಮರ ! ಕಂದಕ. 13 ಬಿಸುಟುಪೋದೊಡೆಯುಱಿಲುಂ. 14 ಮಳೆಯೆ.

ಅಯಶಃಪಾಪಂಗಳ್ಗೆ ॥

ಕಂ ॥ ವಿಳಸದಮೃತಾಂಶುಮಂಡಲ ।
ದೊ[1]ಳೆ ಕಱೆಯೆಂತಂತೆ ನೆಗೞೆ ದುರ್ಯ್ಯಶದಿಂದಂ ॥
ಖಳನಾನೃಪಾತ್ಮಜಂ ನಿ ।
ರ್ಮ್ಮಳನಿಜವಂಶಕ್ಕೆ ಮಾಡಿದಂ ಮಳಿನತೆಯುಂ ॥ 865

ದೊರೆಕೊಂ[2]ಡ ಪಾಪಲೇಶ್ಯಾ ।
ಪಟಾನುಮೆ ಕೃ[3]ಷ್ಣವರ್ಣ್ನಮಂ ಪುಟ್ಟಿಸಿದಂ ॥
ತಿರೆ ~~ಕಡುಸಲಿಪಾರವಂದಿರ~~ ।
ಪ[4]ರುಷಸ್ವರಪ[4]ರುಷನಯನಪ[5]ರುಷಶರೀರರ್ ॥ 866

ಕೋಪರಾಗಂಗಳ್ಗೆ ॥

ಕಂ ॥ ಅವತಂಸಾಶೋಕನ[6]ವ ।
ಪ್ರವಾಲರುಚಿ ಮುಳಿಸೆ ರೂಪುಗೊಂಡವೊ[7]ಲೆರಡುಂ ॥
ಕಿವಿಗಳೊಳವಾ[8]ಯುಮಂ ಪ ।
ರ್ವ್ವಿದವ ಕೆ[9]ಲ್ಪಿಯು ತೆಜದಿನೆಸೆದುದಾಸ್ಥಾಯಿಕೆಯೊಳ್ ॥ 867

ಕುಂಕುಮದ ಕ[10]ಡಮನೀರಂ ।
ಛೋಂಕೆನೆ ಮೇಲೊತ್ತೆ ನೃ[11]ಪತಿ ಮೆಯ್ಯೊಂ ರಾಗಂ ॥
ತಾಂ ಕರಮೆ ತೀವಿ ಪೊಱಗೆ ತು ।
ಳುಂಕುವವೋಲ್ ತೋಱೆ ನೀಱೆ ಕಣ್ಗೆಸೆದಿರ್ದ್ದಳ್ ॥ 868

ಇದು ಗುಣಂ ॥

ಇದು ಕವಿಸಮಯದೊಳ್ ಅಸದಾಖ್ಯಾತಿಪ್ರಕರಣಂ ಪ್ರಥಮಂ ॥

ಪದಕೀರ್ತ್ತನಪ್ರಕರಣಂ.

ಸೂತ್ರಂ ॥ 220 ॥

ಅಸುಕೆಯ ಕುಜದೊಳ್ ಫಳವಂ ।
ವಸಂತದೊಳ್ ಜಾತಿಕುಸುಮಮಂ ಚಂದನದೊಳ್ ॥
ಕುಸುಮಫಲಮೆಂಬಿವಂ ಬ[12] ।
ಣ್ಣಿಸದಿರ್ಪ್ಪುದು ತಾನುಮಲ್ಲಿ ಸಂಭವಿಸುವೊಡಂ ॥ 869

1 ದೊಳಗಣಿಂ ಕಱುತೆ ಪುಟ್ಟಿತೆ. 2 ಕೊಂಡು ಪಾಪಲೇಶ್ಯಾ. 3 ಪಾಪರೂಪವುಂ. 4 ಪುರುಷ. 5 ಪಕ್ಷ, ಪುರುಷ. 6 ವನಂ. 7 ಪನೆದುಂ. 8 ಪಾಸಮುಂ. 9 ಕಲ್ಪಿಪ. 10 ಕಡಕು. 11 ನೃಪನ. 12 ಪ.

ಲಕ್ಷ್ಯಂ ||

ಕಂ || ಕುಸುಮಕಿಸಲಯಮೆ ಲೋಕ |
ಕ್ಕೆ ಸೆವೃತ್ತಂಸಾವತಂಸಮೆನೆ ಸಾಲದೆ ಸಂ ||
ದಸುಕೆಗೆ ನಿಸ್ಸಾರಫಲ |
ಪ್ರಸೂತಿ ಮತ್ತಂತದಾದೊಡೇನಾಗದೊಡೇಂ || 870

ಎನಿತು ಸುಮನಸ್ಸಮುನ್ನತಿ |
ತನಗಾದೊಡಮಭಿವಿನೂತಜಾತಿವಿಕಾಸ ||
ಕ್ಕೆ ನಿತೆಡೆಗುಡದುದಱಿಂ ಕುಲ |
ಜನದ ವಿಭೂತಿಯನೆ ಸುರಭಿಸಮಯಂ ಪೋಲ್ಕುಂ || 871

ಬಿದಿವಸದೆ ಕುಸುಮಫಲವಿ |
ಲ್ಲದಿರ್ದ್ದೊಡಂ ತನ್ನದೊಂದು ಮೆಯ್ಯಿಂದಂ ಲೋ ||
ಕ[1]ದ ಸೇದೆಯೆಲ್ಲಮಂ ಕಿಡಿ |
ಸಿದಪುದು ಚಂದನಮೆ ಮಲ್ಯಜನ್ಮಂ ಕುಜದೊಳ್ || 872
ಇದು ಜಾತಿ ||

ಸೂತ್ರಂ || 221 ||

ಸಿತಪಕ್ಷದೊಳುಳಿಯೆಡಮಂ |
ಧತಮಸಮಂ ಕೃಷ್ಣಪಕ್ಷದೊಳ್ ಚಂದ್ರಿಕೆಯಂ ||
ಕೃತಮತಿಗಳ್ ಕವಿಮಾರ್ಗ್ಗ |
ಶ್ರಿತಗತಿಗಳ್ ಪೇಳದಿರ್ಕ್ಕದೆಂ[2]ತುಂ ಕೃತಿಯೊಳ್ || 873

ಲಕ್ಷ್ಯಂ ||

ಕಂ || ಇಡಿದಿರೆ ಗುಹಾಂಧಕಾರಂ |
ಪೊಡರ್ವೆಸೆದಿರೆ ಚಂದ್ರಕಾಂತರುಚಿ ನಗದೋರೊಂ ||
ದೆಡೆಗಳ್ ಪೋಲ್ತಪ್ಪವದೊಂ |
ದೆಡೆಯೊಳ್ ನೆಲಸಿರ್ದ್ದ ಕಾಳಮಂ ಜೊನ್ನಮುಮಂ || 874
ಇದು ದ್ರವ್ಯಂ ||

ಸೂತ್ರಂ || 222 ||

ದಿವಸದೊಳಸಿತಾಬ್ಜವಿಕಾ |
ಸವುಮಂ ಶೇಫಾಳಿಕಾಶ್ರುಬಿಂದುಪರಿಭ್ರಂ ||
ಶವುಮಂ ಪೇಳಲ್ಕಾಗದು |
ಸವಾಯಂ ಸಮನಿಸಿರ್ಪ್ಪೊಡಂ ಸತ್ಕೃತಿಯೊಳ್ || 875

1 ಕಡೆಗಾದ ಸ್ರೆದೆಯುಂ. 2 ದೆಂದುಂ.

ಲಕ್ಷ್ಯಂ ॥

ವೃ ॥ ಪಗಲ್ ರತಾರಂಭದೊಳೆದ್ದಿರುಳ್ ಕನ ।
ಲ್ವಗಲ್ವ ಚಕ್ರಾಹ್ವಯಯುಗಂಗಳಕ್ಕಿಬಿಂ ॥
ಮೊಗಕ್ಕೆ ತರ್ಪಂತೆ[ಲ]ರಲ್ ತಗುಳ್ದುವೆ ।
ಲ್ಲಿಗಂ ರಜಂ ಪೊಣ್ಮೆ ಮಹೋತ್ಪಳಾದಿಗಳ್ ॥ 876

ಕಂ ॥ ಸಸಿಯೆಱ್ತ್ತರಮಂ ಕಂ[1]ಡೊಂ ।
ದೊಸಗೆ ಮನಕ್ಕಧಿಕವಾಗೆ ಶೇಫಾಳಿಕೆ ಸಂ ॥
ತಸದಿಂದಿಕ್ಕಿದ ಬಾಷ್ಪ ।
ಪ್ರಸರಮನಿಱಿಸಿದುವು ನಿ[2]ಶೆಯೊಳಲ್ಲೊಕ್ಕಲರ್ಗಳ್* ॥ 877

ಇದು ಕ್ರಿಯೆ ॥

ಸೂತ್ರಂ ॥ 223 ॥

ತತದಶನದ್ಯುತಿಯೊಳರ ।
ಕ್ತತೆಯನೆ ವಿಕಸತ್ಪ್ರಿಯಂಗುಸು[3]ಮನಸದೊಳಪೀ ॥
ತತೆಯನೆ ಪಂಕಜಮುಕುಳ ।
ಪ್ರತತಿಯೊಳ್[4]ಹರಿತ್ತ್ವವೃತ್ತಿಯನೆ ಪೇೞ್ಗೆ ಬುಧರ್ ॥ 878

ಲಕ್ಷ್ಯಂ ॥

ದಶನಾರಕ್ತತೆಗೆ ॥

ವೃ ॥ ತೊಳಪ ದಂತಮರೀಚಿಸಂತತಿ ಪರ್ವಿ ಬಳ್ವಳನೀಳ್ದು ಗೊಂ ।
ದಳಿಸಿ ಬಾಳಮೃಗಾಂಕದೀಧಿತಿಜಾಳಮಂಜರಿಗಳ್ ಜಗ ॥
ದ್ವಳಯಮಂ ಪೆಳಪಂತೆ ಬಂದು ಸಭಾಂತರಾಳಮನೆಲ್ಲಮಂ ।
ಪೆಳಗೆ ಭೂವಳಯಾಧಿಪಂ ನುಡಿಗುಂ ಸ್ವಚಿತ್ತಗತಾರ್ತ್ಥಮಂ ॥ 879

ಕಂ ॥ ಕುಂದದಳಧವಳನೃಪದಶ ।
ನೇಂದುಜ್ಯೋತ್ಸ್ನಾಮೃತಾಚ್ಛಜಲಪರಿಷೇಕಂ ॥
ಮಾಂದಿಸುವಂತಾದುದು ನೃಪ ।
ನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ ॥ 880

---

1 ಕಂಡೊಗೆ. 2 ನಿಶಿ. * ಈ ಪದ್ಯಪಾದವೊಂದು ಪ್ರತಿಯಲ್ಲಿ ಮಾತ್ರ ಕೆಳಗೆ ಬರೆದಿರುವ ಸೂತ್ರವು ಸೇರಿಯುತ್ತದೆ;—
ಆನೆ ಬಿದಿರ್ ಪಂದಿ ಮುಗಿಲ್ । ಮೀನಂಬುಧಿ ಪಾವು ಶಂಖಮೆಂಬೀಯೆಂಟುಂ ॥
ಸ್ಥಾನಂಗಳಲ್ಲಿ ಪುಟ್ಟುಗು । ಮೇನಚ್ಚರಿ ತಿಳಿದು ನೋಡೆ ಮೌಕ್ತಿಕರತ್ನಂ ॥
ಇದು ಪದಕೀರ್ತನ ಪ್ರಕರಣಕ್ಕೆ ಸಂಬಂಧಿಸುವುದಿಲ್ಲವಾದುದರಿಂದ ಇಲ್ಲಿ ಬರೆದಿದೆ. 3 ಕುಸುಮದೊಳತಿಪೀ. 4 ಳಹರಿಯುವೃತ್ತಿ ಪೇಳ್ಗೆ ಬುಧಕ್ಕರ್ಗಳ್, ಳೀಹರಿತ.

ಪ್ರಿಯಂಗುಕುಸುಮಾಪೀತತ್ವಕ್ಕೆ ॥

ಕಂ ॥ ಇವಳೀಪ್ರಿಯಂಗುಕುಸುಮ ।
ಚ್ಛವಿಲಸಿತಶ್ಯಾಮಕುಚತಟಾಂತದೊಳೊಪ್ಪಿ ॥
ರ್ಪ್ಪ್ಪವು ತಾರಹಾರರುಚಿ ನೀ ।
ಳವೇದಿಕಾಂತರದೊಳೆಸೆವ ಪೂವಲಿಗಳವೋಲ್ ॥ 881

ಪದ್ಮಕುಟ್ಮಳಾಹರಿತತ್ವಕ್ಕೆ ॥

ವೃ ॥ ತೆರೆಯ ಪೊಯ್ಲೊಳೆ ತೆರಳ್ದು ಬರ್ಪ್ಪ ವಿ।
ಸ್ಫುರಿತಶಂಖನಿವಹಂ ಪಯೋಧಿಯೊಳ್ ॥
ಕರಮೆ ಚೆಲ್ವೆಸೆದು ಕಣ್ಗೆ ತೋರ್ಕ್ಕುಮಂ ।
ಬುರುಹಕುಟ್ಮಳಕುಳಂಗಳಂತೆವೋಲ್ ॥ 882
ಇದು ಗುಣಂ ॥

ಇದು ಕವಿಸಮಯದೊಳ್ ಪದಕೀರ್ತ್ತನಪ್ರಕರಣಂ ದ್ವಿತೀಯಂ ॥

ನಿಯಮಾರ್ತ್ಥಪ್ರಕರಣಂ.

ಸೂತ್ರಂ ॥ 224 ॥

ಜಳಧಿಯೊಳ್ ತಿಮಿತಿಮಿಂಗಿಳ ।
ಗಿಳಮಕರಪ್ರಕರಶಂಖಸಂಭವಮಕ್ಕುಂ ॥
ಮಳಯರಹಿತತಾಮ್ರಪರ್ಣ್ಣೀ ।
ಜಳದೊಳ್ ಶುಕ್ತಿಜಮಣಿಪ್ರಕಾಂಡಪ್ರಭವಂ ॥ 883

ಲಕ್ಷ್ಯಂ ॥

ತಿಮಿತಿಮಿಂಗಿಳಾದಿಗಳ್ಗೆ ॥

ವೃ ॥ ಮಿಳಿರ್ವರುಣಧ್ವಜಂಗಳ ನೆಱಲ್ಗಳನೊಂದೆರೆಗೆತ್ತು ವಾರ್ದ್ಧಿಯೊಳ್ ।
ಪೊಳೆವೆಳವಾಳೆಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ ॥
ಗಳೆ ತಿಮಿಯಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ ।
ಗಿಳಗಿಳಮನಾತಿಮಿಂಗಿಳಗಿಳಂ ತವೆ ನುಂಗಿದುದೊಂದು ತಾಣದೊಳ್ ॥ 884

ಕರಿಮಕರಂಗಳುಚ್ಚಳಿತಭಂಗುರತುಂಗತರಂಗಮಾಲೆಯಂ ।
ಕರಿರದನಾಗ್ರದಿಂದಿಱಿಯೆ ಮುತ್ತುಗಳಂತಿರೆ ಸೂಸಿ ಪಾಯ್ವ ಶೀ ॥
ಕರದೊಳೆ ನಾಂದು ಸೇರುಗೊಳುತುಂ ಸುೞಿದೂದುವ ಗಾಳಿ ಬರ್ಪ್ಪ ದೇ
ಶರ ವರಕಾಂತೆಯರ್ಕ್ಕಳ ಪರಿಶ್ರಮಮಂ ಕಳೆದತ್ತು ವಾರ್ದ್ಧಿಯೊಳ್ ॥ 885

ವೃ ॥ ನೊರೆಯಿವಲ್ಲವು ತಳ್ತ ಶಂಖದ ಬಳ್ಳಿಗಳ್ ಬಡಬಾನಲಂ ।
ಕುರವಿವಲ್ಲವು ರತ್ನದೀಧಿತಿಗಳ್ ತರಂಗವಿವಲ್ಲವು ॥
ದ್ವೀಪಕುಳಾಚಳಪಙ್ಕ್ತಿಗಳ್ ಜಳಶೀಕರಂಗಳಿವಲ್ಲವಾ ।
ಪರದ ಮುತ್ತುಗಳೆಂಬ ಶಂಕೆಯನಾಗಿಕುಂ ಮಕರಾಕರಂ ॥ 886

ತಾಮ್ರಪರ್ಣಿಯೊಳ್ ಶುಕ್ತಿಜಕ್ಕೆ ॥

ಕಂ ॥ ಜಿನರಾಜಶಿಶುಗೆ ಧರೆಯೊಳ್ ।
ಜನಿಯಿಸಲಂತಾನರೇಂದ್ರಪ[1]ತ್ನಿಯ ದೊರೆ ನೂ ॥
ತನಶುಕ್ತಿಜಕ್ಕೆ ತಾಯ್ವನೆ ।
ಯೆನಿಸಲ್ ದೊರೆ ತಾಮ್ರಪರ್ಣಿ ತಾನೊಂದೆ ವಲಂ ॥ 887

ಇದು ಜಾತಿ ॥

ಸೂತ್ರಂ ॥ 225 ॥

ಹಿಮವದಗೇಂದ್ರಮೆ ಭೂರ್ಜ್ಜ ।
ದ್ರುಮರಾಜಿಗೆ ಜನ್ಮಭೂಮಿ ಮಲಯಾದ್ರಿಯೆ ಬಂ ॥
ಹಿಮವಚ್ಚಂದನಮಹಿರುಹ ।
ಸಮಿತಿಗೆ ಕುಲಗೇಹಮಿತರದೊಳ್ ಪುಟ್ಟುವೊಡಂ ॥ 888

ಲಕ್ಷ್ಯಂ ॥

ಪ್ರಥಮಕ್ಕೆ ॥

ಕಂ ॥ ಪೆರಸುಲಿವ ಹಿಮವದವನೀ ।
ಧರಮೆಂಬುರಗಾಧಿಪತಿಯ ನಿರ್ಮ್ಮೋಕದೊಳೇಂ ॥
ದೊರೆಯಾದುವೊ ವಿ[2]ದ್ರುತಜ ।
ಜ್ಝರಭೂರ್ಜ್ಜದ್ರುಮವನಂಗಳಿಂದಚಳಂಗಳ್ ॥ 889

ದ್ವಿತೀಯಕ್ಕೆ ॥

ವೃ ॥ ಇದು ಮಳಯಾಚಳಂ ಮಳಯಜಂ ಮಳಯಾನಿಳನೆಂದು ಪೇಳ್ವುವೆ ।
ತ್ತುದು ಸಿರಿಕಂಡಮುಂ ಪ[3]ಡೆದು ತೀಡುವ ಗಾಳಿಯುಮಿಲ್ಲಿ ಪುಟ್ಟಿ ಪೋ ॥
ಗದು ಪೊಸ ಸುಗ್ಗಿ ಮೂಗುವಪದಲ್ಲಿಯು ಕೋಗಿಲೆ ಬಂದ ಮಾವು ಬೀ ।
ಯದು ಕಾಮವಸಂತನಾಜ್ಞೆ ತವದಲ್ಲಿಯುಮಿಲ್ಲಿಯ ನಂದನಂಗಳೊಳ್ ॥ 890

ಇದು ವೃತ್ತಂ ॥

---

1 ಪತಿಯೀ. 2 ವಿದ್ರುಮ. 3 ಪಡೆದು.

ಸೂತ್ರಂ ॥ 226 ॥

ಸುರಭಿಸಮಯದೊಳ್ ಕೋಕಿಳ ।
ವಿ[1]ರುತಿನಿಬಂಧನಮನಬ್ದಕಾಲದೊಳ್ ಮದೋ ॥
ದ್ಧುರಕೇಕಿಪ್ರಮಧುರಕೇಕಾ ।
ವಿರುತಿಯನಭಿಯುಕ್ತರಱಿದು ಪೇೞ್ವುದು ಕೃತಿಯೊಳ್ ॥ 891

ಲಕ್ಷ್ಯಂ ॥

ಕಂ ॥ ಸುಗ್ಗಿಯ ಪುಗಿಲೊಳ್ ಮುಂಕೊಂ ।
ಡುಗ್ಗಿಯನು[2]ಜ್ಜ್ವಿಸಿದಂತೆ ಮೋನಮನುೞಿವೇಂ ॥
ಬಗ್ಗಿಸಿದುವೊ ಕೋಗಿಲೆಗಳ್ ।
ಮೊಗ್ಗಪ್ಪ ವಿಯೋಗಿಯಂ ಪು[3]ಗಲ್ ಪುಗಲೆನುತಂ ॥ 892

ಘನಸಮಯದೊಳುದ್ಧುರ ಶಿಖಾ ।
ಸನದೊಳ್ ಶೈಳೇಯಸುರಭಿತಳದೊಳ್ ಗೋವ ॥
ರ್ದ್ಧನಕಂದರದೊಳ್ ಶಿಖಿನ ।
~~ತನನಂ ನೀರಂ ನೋಡೆ ಲಲಿತಕೇಕಾನ್ವಿತಮಂ ॥~~ 893
ಇದು ಕ್ರಿಯೆ ॥

ಸೂತ್ರಂ ॥ 227 ॥

ಅವಿಶೇಷದಿನುದ್ಗಮದೊಳ್ ।
ಧವಳತೆ ಮಾಣಿಕ್ಯನಿಕರದೊಳ್ ಶೋಣತೆ ಮೇ ॥
ಘವಿತಾನದೊಳ್ ವಿನೀಳತೆ ।
ವಿವಿಕ್ತವರ್ಣವ್ಯವಸ್ಥೆಯಿಂದೊಂದಿರ್ಕ್ಕುಂ ॥ 894

ಲಕ್ಷ್ಯಂ ॥

ಪುಷ್ಪಶೌಕ್ಲ್ಯಕ್ಕೆ ॥

ವೃ ॥ ತಳಿರ ಮೇಗಣಲರೋಳಿಗಳೋ ಪೊಸಮುತ್ತುಗಳ್ ।
ತೊಳಪುವೋ [4]ಪವಳದಂಕುರದೊಳ್ ಪುದಿದಿ[5]ಂತು ತ ॥
ನ್ಮೊಳೆ ವಿಚಾರಿಸಿ ಜನಂ ಕರಮೊಪ್ಪುವುದಾಯ್ತು ಪ ।
ಲ್ಲಗಳ ಮುಗುಳ್ನಗೆಯ ಬಾಯ ಬೆಡಂಗು ಲತಾಂಗಿಯಾ ॥ 895

1 ವಿರುತ. 2 ನ ಜ್ಜವಿಸದಂತೆ, ನುಜ್ಜ್ರೈಸಿದಂತೆ. 3 ಪುಗಿಲ್ ಪುಗಿಲೆನುತಂ. 4 ವಾಪವಳ. 5 ದೆಂತು.

ಮಾಣಿಕ್ಯಶೋಣತ್ವಕ್ಕೆ ॥

ವೃ ॥ ತುಂಗವಿಚಿತ್ರಕೂಟನಿವಹಂಗಳೊಳೊಪ್ಪುವ ರತ್ನದಂಶುಜಾ ।
ಳಂಗ[1]ಳ ಕೆಂಪು ತಳ್ತು ನಿಲೆ ಚೆ[2]ಚ್ಚರದಿಂ ಗಿರಿಗಳ್ಗಧೀಶ್ವರಂ ॥
ತಾಂ ಗಡಮೆಂದು ಮೇರುನಗದೊಳ್ ಪೊಣರ್ದೆಕ್ಕತುಳಕ್ಕೆ ವಂದು ನಾ ।
ರಂಗದ ತೊಂಗಲೇಱುಸಿದ ಮಾಟ್ಕೆಯೊಳಿರ್ದ್ದುದು ವಿಂಧ್ಯಪರ್ವ್ವತಂ ॥ 896

ಮೇಘಕೃಷ್ಣತ್ವಕ್ಕೆ ॥

ಕಂ ॥ ಈಪುರುಷೋತ್ತಮನವ[3]ನೀ ।
ಳೋತ್ಪಳಸ[4]ಚ್ಛಾಯಕಾಯದೊಳ್ ಪೆಣೆದು ಘನ ॥
ವ್ಯಾಪಿತಗಭೀರರುಚಿಗನು ।
ರೂಪಂ ತಾನಕ್ಕೆ ನಿನ್ನ ತನು ತನುಮಧ್ಯೇ ॥ 897

ಇದು ಗುಣಂ ॥

ಇದು ಕವಿಸಮಯದೊಳ್ ನಿಯಮಾರ್ತ್ಥಪ್ರಕರಣಂ ತೃತೀಯಂ ॥

ಐಕ್ಯಪ್ರಕರಣಂ.

ಸೂತ್ರಂ ॥ 228 ॥

ದಾನವದೈತ್ಯಾಸುರಸಂ ।
ತಾನಕ್ಕಂ ನಾಗಸರ್ಪ್ಪಸಂ[5]ಹತಿಗಳ್ಗಂ ॥
ತಾನೇಕತ್ವಂ ಸಮಯಾ ।
ಧೀನಮದಕ್ಕುಂ ರಸಾತಳಪ್ರತಿಬದ್ಧಂ ॥ 898

ಲಕ್ಷ್ಯಂ ॥

ವೃ ॥ ದನುಜರನಾಮುರಾರಿ ಗೆಲೆ ಕಾದುವ ಕಾಲದೊಳಾನದೇಕೆ ಪು[6] ।
ಟ್ಟೆನೊ ಗಡಮುಂದು ಪುಟ್ಟದೊಡೆ ದೈತ್ಯಕುಳಕ್ಕೆ ಕಳಂಕಮಾಗಲೀ ॥
ವೆನೆ ದನುಜಾರಿಯೆಂಬ ಬಿ[7]ರುದಂ ಸಲಲೀವೆನೆ ಕಾದಿ ಪೋಗಲೀ ।
ವೆನೆ ತಲೆದೋಱಲೀವೆನೆ ಮುಕುಂದನನೆಂದೊ[8]ಳೆವಂ ಖ[9]ಳಾಸುರಂ ॥ 899

ಸರ್ಪ್ಪನಾಗಂಗಳ್ಗೆ ॥

ವೃ ॥ ಫಣಿರಾಜಂ ಬಾರಿಯಿಟ್ಟಟ್ಟದೊಡನುದಿನದಿಂ ಬರ್ಪ್ಪ ಸರ್ಪ್ಪಂಗಳಂ ಬ ।
ಲ್ಕಣಿ ತಾರ್ಕ್ಷ್ಯಂ ಭಕ್ಷಿಸುತ್ತುಂ ಮಳಯಗಿರಿಯೊಳಿರ್ಪ್ಪಂ ಬಲಂ ಕೇಳರೇ ನೀ ॥
ನೋಣರಿರ್ ಮತ್ತಮ್ಮ ಮಾತಂ ಗರುಡನಖಮುಖೋತ್ಪಾತದಿಂ ನಾಗಚೂಡಾ ।
ಮಣಿಗಳ್ ಬಂದಲ್ಲಿ ಸಿಕ್ಕಂ ಸಿಡಿವುವಱುವೆನೇಕಿಂತು ವಿಭ್ರಾಂತರ[10]ಪ್ಪಿರ್ ॥ 900

---

1 ಗಳೊ. 2 ಮುಚ್ಚರದಿಂ, ಚೆಚ್ಚರದಿಂ. 3 ಪಿನೀ. 4 ಸುಚ್ಛಾಯ. 5 ಸಂತತಿ. 6 ಪುಟ್ಟನೆ, ಪುಟ್ಟಿನೆ.
7 ಪೆಸರಂ. 8 ದಲೆವಂ. 9 ಬಳಾಸುರಂ. 10 ರಪ್ಪರ್.

ಸೂತ್ರಂ ॥ 229 ॥

ಶಶಧರಲಕ್ಷ್ಮದೊಳಕ್ಯಂ ।
ಶಶಹರಿಣಂಗಳ್ಗನನ್ಯಭಾವಂ ಸುಮನೋ ॥
ವಿಶಿಖಧ್ವಜಾಂಕದೊಳ್ ನಿ ।
ರ್ವಿಶೇಷದಿಂ ಮತ್ಸ್ಯಮಕರಯುಗಳಕ್ಕೈಕ್ಯಂ ॥ 901

ಲಕ್ಷ್ಯಂ ॥

ಶಶಹರಿಣಂಗಳ್ಗೆ ॥

ವೃ ॥ ಉದಯಗಿರೀಂದ್ರರುಂದ್ರತಟದಿಂದೊಗೆತಂ[1]ದ ಶಶಾಂಕನೆಂಬ ಸೊಂ[2] ।
ಕದ ಮೃಗವೈರಿ ಕೂಡೆ ಪರಿದಬ್ಬಿಸಿ ಪಬ್ಬಿದ ದು[3]ಸ್ತಮಸ್ತಮೋ ॥
ನ್ಮದಕರಿಯೂಥಮಂ ಪೆಳಱೆ ಪೋೞೆ ಪಿಸುಳ್ದ ತದುತ್ತಮಾಂಗದಿಂ ।
ಕೆದಱಿದ ಮೌಕ್ತಿಕಾವಳಿವೊಲಾದುವು ಮೂ[4]ಡಣ ತಾರಕಾಳಿಗಳ್ ॥ 902

ಕಂ ॥ ಕೊಳನಂ ಗಗನಂ ನೀರ್ವೂ ।
ಗಳನುಡುತತಿ ನೀರನಚ್ಚವೆಳ್ದಿಂಗಳ ಶೆ ॥
ಳ್ಪೞಿಸೆ ಹರಿಣಾಂಕಮಂಡಳ ।
ಮಿೞಿಸಿದುದಳಿ ಪಾಯ್ದ ಬಿಳಿಯ ತಾವರೆಯಲರಂ ॥ 903

ಮತ್ಸ್ಯಮಕರಂಗಳ್ಗೆ ॥

ವೃ ॥ ಚಿತ್ತಜನಿಕ್ಷುಚಾಪದಳವಂ ಮಿಗೆ ಕೊಂಕಿದ ಪುರ್ವ್ವ ಕಣ್ಣ ಬೆ ।
ಳ್ಪೆತ್ತಮನಂಗರಾಜನರಲಂಬಿನ ಲೀಲೆಯನಾಳೆ ಕಾಮನಾ ॥
ರ್ದ್ದೆತ್ತಿದ ಮೀನಕೇತನಮನೊತ್ತರಿಸುತ್ತಿರೆ ಕೇಶಹಸ್ತಮು ।
ನ್ಮತ್ತಮರಾಳಗಾಮಿನಿ ಪೆಱಳ್ ರತಿಯಂ ಗೆಲೆವಂದು ನೋಡಿದಳ್ ॥ 904

ಧನು ಕಾಮಂಗಿಕ್ಷುದಂಡಂ ಪೞಯಿಗೆ ಮಕರಂ ಬಾಣಸಂಘಾತಮು[5]ಚ್ಚಂ ।
ನನೆಯೆಂಬೀಚಿಹ್ನಮಿಲ್ಲೆಂಬಿನಿತೆ ಮನಸಿಜಾಕಾರಮಾ[6]ಕಾರಮೇಂ ಜಾ ॥
ಣನೊ ಧಾತ್ರಂ ರೂಪನಿಷ್ಪಾದನವಿಧಿಯೊಳಿವಂ ಮುನ್ನಮೇಂ ನೋಂಪಿಯಂ ನೋಂ ।
ತನೊ ಪೇೞೆಂಬಂತೆ ಬಂದಂ ಸುಕವಿಜನಮನೋಮಾನಸೋತ್ತಂಸಹಂಸಂ ॥ 905
ಇದು ಜಾತಿ ॥

ಸೂತ್ರಂ ॥ 230 ॥

ಕ್ಷಾರಕ್ಷೀರಾಂಬುಧಿಗಂ ।
ಕ್ಷೀರೋದಭವಾತ್ರಿಜೇಂದುಗಳ್ಗಂ ಮು[7]ರಜಿ ॥
ನ್ನಾರಾಯಣರ್ಗಂ ಸಿರಿಗಂ ।
ಶ್ರೀರಾಮೆಗಮತನುಗಂ[8] ಭವಾರಿಗಮೈಕ್ಯಂ ॥ 906

1 ದಂದೆ. 2 ನಾ । ಕದ. 3 ದುಸ್ಸಮೋಸ್ತಮೋ. 4 ಮೂಡುವ. 5 ದುಚ್ಚಂ. 6 ಮಾಗಿದ್ದನೇಂ. 7 ಮುರರಿಪು, ಮುರಾರಿ. 8 ಕಂಬರಾರಿಗೆ.

ಕ್ಷಾರಕ್ಷೀರಾಂಬುಧಿಗಳ್ಗೆ ॥

ವೃ ॥ ಇದಱೊಳ್ ಗರ್ಭಂಗಳಂ ಕಟ್ಟುವುವಿನಕಿರಣಶ್ರೇಣಿಗಳ್ ಪಂಚರತ್ನ ।
ಕ್ಕಿದು ದಲ್ ತಾನಾಕರಂ ನೀರ್ ತನಗೆ ಸವಿದೆಯಾದಗ್ನಿಯಂ ತಾಳ್ದಿ ಪೆರ್ಚಿರ್ ॥
ದ್ದಿರ್ದುದು ಚಂದ್ರಂ ಪುಟ್ಟಿದಂ ಮತ್ತಿದಱೊಳ್ ಸುರರುತ್ಪತ್ತಿ ಕೇಳಿಲ್ಲಿ ಶ[1]ಕ್ರಂ ।
ಗವಿರ್ದೆಯ್ತಂದದ್ರಿಗಳ್ಗಾಶ್ರಯಮಿದಱೊಳದಭ್ರಾಭ್ರವೃಂದಂಗಳಿರ್ಕ್ಕುಂ ॥ 907

ಮೇರು ಕಲಂಕೆಯುಂ ಕದಡಿತೋ ಬಡಬಾನಳನಱ್ಪೆ ಕಾಯ್ದುದೋ ।
ಮಾರುತಿ ಕಟ್ಟಿ ಮೇಣ್ ಪಱಿದುದೋ ಗಿರಿಗಳ್ ಬರ್ದೆ ವಜ್ರಿಗಳ್ಕಿತೋ ॥
ಸಾರಸಮಸ್ತವ[2]ಸ್ತುಗಳನಾರ್ಕೊಳೆ ತಪ್ಪಿಹೊ ಮತ್ತಮಂತೆ ಗಂ ।
ಭೀರತೆ ಸಂದುದೆಂದು ಹರಿ ಮೆಚ್ಚೆ ಕರಂ ಪೊಗೞ್ದಂ ಸಮುದ್ರಮಂ ॥ 908

ಕ್ಷೀರೋದಭವಾತ್ರಿಜೇಂದುಗಳ್ಗೆ ॥

ಕಂ ॥ ಅತ್ರಿಯ ಪಿರಿಯ ಮಗಂ ಭುವ ।
ನತ್ರಯಸಂಸ್ತುತ್ಯಕೀರ್ತಿ ಸೋಮಂ ಸಕಲ ॥
ಕ್ಷತ್ರಕುಲಪೂಜ್ಯನಮಲಚ ।
ರಿತ್ರಂ ಪೋದ್ದಾಮಸೋಮವಂಶಲಲಾಮಂ ॥ 909

ವೃ ॥ ಪಾರಾವಾರಂ ತುಹಿನಕಿರಣಂ ಕುಂದೆ ಕುಂದಿತ್ತು ಮತ್ತಂ ।
ತೋ[3]ರೊಂದೋರೊಂದಮೃತಕಳೆಯುಂ ಪೆರ್ಚೆ ಪೆರ್ಚಲ್ ತಗುಳ್ದ ॥
ತ್ತಾರುಂ ಮಕ್ಕಳ್ಗೆಱಗುವನಿತಂ ಬಂಧುಗಳ್ಗೇಯುರೊಳ್ ಪೊ ।
ಕ್ಕಾರಯ್ವಾಗಳ್ ತನಯಜನಿತಸ್ನೇಹಮಾರ್ಗ್ಗಂ ಬಲಸ್ಥಂ ॥ 910

ನಾರಾಯಣಮುರಾರಿಗಳ್ಗೆ ॥

ವೃ ॥ ಉರದೊಳ್ ಕೌಸ್ತುಭರತ್ನಮುಂ ಕಮಳೆಯುಂ ಶ್ರೀವತ್ಸಮುಂ ತೋಳ್ಗಳೊಳ್ ।
ಕ[4]ರವಾಳ್ ಬಿಲ್ ಗದೆ ಚಕ್ರಮುಳ್ಳಿಯೆ ಮಲಂಗಿರ್ಪ್ಪಳ್ ಜಯಶ್ರೀ ನಿಜೋ ॥
ದರದೊಳ್ ನೀರಜಗರ್ಭನುಂ ತ್ರಿಜಗಮುಂ ಪೊಕ್ಕಿರ್ಪ್ಪುವೆಂದಂದಹೀ ।
ಶ್ವರತಲ್ಪಂ ಯ[5]ದುವಂಶನಲ್ಲದೆ ಪೆಱಂ ಪೆಂಪಿಂಗೆ ಮು[6]ಯ್ವಾಂಪನೇ ॥ 911

ಶ್ರೀರಾಮಾವಿಭೂತಿಗಳ್ಗೆ ॥

ವೃ ॥ ಅಮೃತಪಯೋಧಿಮಂಥನದೆ ಪುಟ್ಟಿದ ಪದ್ಮವನಾಂತರಾಳದೊಳ್ ।
ರಮಿಯಿಪ ಪದ್ಮನಾಭನುರದೊಳ್ ನೆಲಸಿರ್ಪ್ಪ ಮಹಾನುಭಾ[7]ವೆಯಿಂ ॥
ಕಮಳೆಯೆನಿಸ್ನೆಗಂ ಕುರುಮಹೀಪತಿಯೊಳ್ ನೆಲಸಿರ್ದ್ದಸೀಗಳು ।
ತ್ತಮಪುರುಷೋತ್ತಮಂ ಬೆ[8]ಸಸೆ ಪಾಂಡವರೊಳ್ ನೆ[9]ಲಸಲ್ಕೆ ಪೋದಪೆಂ ॥ 912

1 ಸಂಬ । ಕ್ಕದಿರ್ದೆಳ್ಳದಗ್ನಿ. 2 ವಸ್ತುಗಳೆಂ ಕೊಳೆ. 3 ತೋರಂದೋರಂದಮೃತ. 4 ಕರವಾಳುಂ ಗದೆ, ಕರವಾಲಂ ಗದೆ. 5 ಪಿತಿಚಿಹ್ನ. 6 ಮುಯ್ವಾಂಪನೇ. 7 ಭಾವೆಯಿಂ. 8 ಬೆರಸು, ಬೆರಸಿ. 9 ನೆರೆಯಲ್ಕೆ.

ಮನೋಜಶಂಕರಾರಿಗಳ್ಗೆ ॥

ವೃ ॥ ಸುರಭಿಶ[1]ರಂಗಳಂ ನಯನದೊಳ್ ಕುಡುಪುರ್ವಿನೊಳಿಕ್ಷುಚಾಪಮಂ ।
ಪರಿಚಿತಮೀನಕೇತನಮನಾವಗಮೊಪ್ಪುವ ಕೇಶಹಸ್ತದೊಳ್ ॥
ನಿರವಿಸಿ ಬಯ್ಸುತ್ತ ಮೆಯ್ಗರೆದು ಶೂಲಧರಂಗೆ[2]ಗಿದಿರ್ಪನಲ್ಲಿ ಪೆಂ ।
ಡಿರ ಮಱೆಯೊಳ್ ಮನೋಜನೆನೆ ಚೆಲ್ವೆಸೆವರ್ ಕಡುಗಾಡಿಕಾರ್ತಿಯರ್ ॥ 913

ಇದು ದ್ರವ್ಯಂ ॥

ಸೂತ್ರಂ ॥ 231 ॥

ಮುಕುಳನನಿಮೀಳನಂಗಳ್ ।
ವಿಕಾಸಹಾಸಪ್ರಬೋಧನೋನ್ಮೇಷಂಗಳ್ ॥
ಪ್ರಕಟಿಸುಗುಮೈಕ್ಯಮಂ ನಿ ।
ರ್ವಿಕಲ್ಪದಿಂ ಗೌಣಮುಖ್ಯವೃತ್ತಿಕೃತಂಗಳ್ ॥ 914

ಲಕ್ಷ್ಯಂ ॥

ಮುಕುಳನನಿಮೀಳನಂಗಳ್ಗೆ ॥

ಕಂ ॥ ಮುಕುಳಿತವಿಳೋಚನಂ ಕಂ ।
ಟಕಿತಾಂಗಂ ಸ್ವೇದಬಿಂದುದಂತುರಿತಮುಖಂ ॥
ಪ್ರಕಟಶ್ವಸಿತೋತ್ಕಂಪಂ ।
ನಿಕಾಮುಕಮನೀಯಮಾದುದಿಂತು ರತಾಂತಂ ॥ 915

ವಿನಿಮೀಳನ್ನೀಳಾಂಬುಜ ।
ವನಮಿಷದ್ವಿಕಸದರುಣಸರಸಿರುಹವನಂ ॥
ದಿನಮುಖಮಳಿಸಂತತಿಗೇಂ ।
ಜನಿಯಿಸಿದುದೊ ಭಿನ್ನರುಚಿಗಳಂ ಪರಿಮಳದೊಳ್ ॥ 916

ವಿಕಾಸಹಾಸಂಗಳ್ಗೆ ॥

ವೃ ॥ ಪೊಸವಿಸಿಲೊಳ್ ಮುಗುಳ್ಗಳ್ ಸಡಿಲ್ದುಸಿರ್ವಂತೆಸ ।
ಲ್ಮಸಗಿ ಮುಗುಳ್ನಗೆನಕ್ಕು ತೋಱೆ ಮದಾಳಿಗಳ್ ॥
ನುಸುಳೆ ತೊವತ್ತಿರೆ ಕಂಪಲಚ್ಚ್ವವನಂಬುಜ ।
ಪ್ರಸರಮನಾಳೆ ಪಳಪ್ಪನೀಗೆ ವರಂಗಳಂ ॥ 917

---

1 ಶಯಂ. 2 ಗಿದಿರ್ಪಸ್ತ್ವ.

ಅದಲ್ಲದೆಯುಂ ॥

ವೃ ॥ ನಗೆಯುಂ ಬಲ್ಮುಗುಳ್ಗಳ್ಗೆ ಕಂಪನಳಿಗಳ್ಗಾನಂದಮಂ ಕೋಕಿಳಾ ।
ಳಿಗೆ ಸೊರ್ಕ್ಕಂ ಗಿಳಿಗಳ್ಗೆ ಬೀರಸಿರಿಯಂ ಕಾಮಂಗೆ ಬೆರ್ಚ್ಚಂ ವಿಯೋ ॥
ಗಿಗೆ ಪೆರ್ಚ್ಚಂ ಪ್ರಿಯರ್ಗೆಯ್ದೆ ಮಾಡಿ ವಿ[1]ದಳತ್ಪುಷ್ಪಾಳಿ ತೆಂಗಾಳಿ ತೀ ।
ಡುಗುಮುಳ್ಳಾಡೆ ಸಮಸ್ತದಂಪತಿರ[2]ತಿಕ್ರೀಡಾಪರಿಶ್ರಾಂತಿಗಳ್ ॥ 918

ಕಂ ॥ ಅಲರ್ದ ಮೊಗಂ ಕಿಱಿದಾದುದು ।
ನೆಲಸಿದುದೞಲೆರ್ದೆಯೊಳಪ್ಪುಕಣಿಸಿದ್ದರ್ವು ಚಾ ॥
ಪಲನಯನಕುವಲಯಂ ಸು ।
ಯ್ಯೆಲರಾದಂ ಬಿಸಿಯುಮಾದುವಾಸತಿಗಾಗಳ್ ॥ 919

ತೃ[3]ಷ್ಣಾಭಿಲಾಷಂಗಳ್ಗೆ ॥

ಕಂ ॥ ದೂ[4]ರಾವತೀರ್ಣ್ಣಪಂ[5]ಪಾ ।
ವಾರಿಯುನಿ[6]ದನಱಿತು ಕ[7]ಱಿತು ತಳವೆಯ್ದುವಿನಂ ॥
ನೀರಡಸಿ ನೀ[8]ರಜಾನನೆ ।
ಪೀರಲ್ ಬಗೆದಪ್ಪುವೆನ್ನ ಕಣ್ಣುಂ ಮನಮುಂ ॥ 920

ಇದು ಕ್ರಿಯೆ ॥

ಸೂತ್ರಂ ॥ 232 ॥

ಹರಿತಾಸಿತನೀಳಶ್ಯಾ ।
ಮರೋಚಿಗಂ ಪೀತರಕ್ತವರ್ಣ್ಣಂಗಳ್ಗಂ ॥
ದೊರೆಕೊಳ್ಗುಂ ಗೌರಶ್ವೇ ।
ತರುಚಿಗಮಿತರೇತರಾಶ್ರಯಂ ವ[9]ರ್ಣ್ಣೈಕ್ಯಂ ॥ 921

ಲಕ್ಷ್ಯಂ ॥

ಕೃಷ್ಣಹರಿತಂಗಳ್ಗೆ ॥

ವೃ ॥ ಮರಕತತ್ವಿಷಮಾಯಮುನಾಜಳಂ ।
ಸ್ಫುರದುರುಸ್ಫಟಿಕೋಪಳಕಾಂತಿಯೊಳ್ ॥
ಬೆ[10]ರಸಿ ಗಂಗೆಯ ವಾರಿಯೊಳೊಪ್ಪುಗುಂ ।
ಹರಿಹರದ್ವಯಸಂಗಮದಂದದಿಂ ॥ 922

1 ವಿಗಳ. 2 ಕುಳಕ್ಕಂ ಕಾಂತಿಗಳ್ ಕಾಂತಿಗಳ್. 3 ಕೃಷ್ಣಾಭಿಲಾಷಾದಿಗಳ್ಗೆ. 4 ದೂರವತೀರಂ. 5 ಗಂಗಾ.
6 ನೀರಱಿತು, ನಿದನಱ್ರಿತು. 7 ಕಱಿತು, ಕುಱಿತು. 8 ನೀರಜಾಕ್ಷಿ, ನೀರಜಾಕ್ಷಿಯು. 9 ತಾನಕ್ಯಂ.
10 ಪೊರಸಿ,

ನೀಲಶ್ಯಾಮಂಗಳ್ಗೆ ॥

ವೃ ॥ ಪದಧೂಳಿಕ್ಷೋಭದಿಂ ದಿಗ್ಯುವತಿವದನಮಂ ಶ್ಯಾಮಳಂಮಾಡಿ ಮಾಣ್ದಿ ।
ರ್ದ್ದದೆ ಕೋಪೋದ್ಭಿನ್ನಗಂಡಸ್ಥಳಕರಟಘಟಾವ್ಯೂಹನೀಲಾಂಬುದಾಟೋ ॥
ಪ[1]ದಿನತ್ಯುಗ್ರಾಸ್ತ್ರಶಸ್ತ್ರಪ್ರಕರಕಿರಣಸಂಘಾತತೀವ್ರಾತಪೋದ್ಯೋ ।
ತದಿನರ್ದ್ಧಶ್ಯಾಮಳಂಮಾಡಿದುದು ದಿ[2]ವಮುಮಂ ಕೂಡೆ ರಾಜೇಂದ್ರಸೈನ್ಯಂ ॥ 923

ಪೀತರಕ್ತಂಗಳ್ಗೆ ॥

ವೃ ॥ ಪ್ರವಿರಾಜತ್ಕಳಧೌತಪಿಂಗರುಚಿಶುದ್ಧಂ[3]ಷ್ಟ್ರಾಗ್ರದಿಂದಿಕ್ಕಿ ದಾ[4] ।
ನವರಂ ಧಾತ್ರಿಗೆ ರಾಗಮಾಗೆ ನೆಗೞ್ದಾದಿಕ್ರೋಡನಾಕಾರದಿಂ ॥
ತವೆ ಬೆಂಕೊಂಡು ತಮಸ್ತಮಪ್ರಕರಮಂ ಬಾಳಪ್ರವಾಳಾಂಕುರ ।
ಚ್ಛವಿಯಿಂ ಚಂದ್ರನುದಂಶುಲೇಖೆಯಿನದೊಂದಾ[5]ನಂದಮಂ ಮಾಡಿದಂ ॥ 924

ಅಂತುಮಲ್ಲದೆಯುಂ ॥

ವೃ ॥ ವಿದಳತ್ಕಿಂಶುಕಕಿಂಕಿರಾತಸುಮನಃಕಾಶ್ಮೀರಸಂಧ್ಯೋದ್ಗತಾಂ ।
ಬುದಪೀ[6]ತಾಂಬರನಿಂದ್ರನೀಲವಿ[7]ಲಸನ್ನೀಲಾತಸೀನೀಲನೀ ॥
ರದನೀಲಾಂಬುಜವರ್ಣ್ಣನರ್ಣ್ಣವಯುಶಂ ಕೃಷ್ಣಂ ಧರಾದೇವಿಗೊ ।
ಪ್ಪಿದನಂತಜ್ಜ್ವಲದೌರ್ವ್ವವಹ್ನಿಲವಣಾಂಭೋರಾಶಿಲೀಲಾವಹಂ ॥ 925

ಗೌರಶ್ವೇತಂಗಳ್ಗೆ ॥

ಕಂ ॥ ಹಿಮವದ್ಗಿರಿಕ[8]ಟಕದಿನೊಗೆ ।
ದಮರಸರಿತ್ಸ್ರೋತಮೆಂಬ ಮಾತಂ ಪಡೆದೇಂ ॥
ಹಿಮಗೌರಹಾರಮೆಸೆದುದೊ ।
ಹಿಮಶೈಲಶಿ[9]ಖಾವಿಶಾಲವಕ್ಷಸ್ಸ್ಥಲದೊಳ್ ॥ 926

ಸೂತ್ರಂ ॥ 233 ॥

ನಯನಾದಿವಿವಿಧವರ್ಣ್ಣಾ ।
ಶ್ರಯಂಗಳೊಳ್ ಬೇಱೆವೇಱೆ ಬೇಱೊಂದನೆ ನಿ ॥
ರ್ಣ್ಣಯಮಪ್ಪ ವರ್ಣ್ಣಮಂ ಸಮ ।
ದಯದಿಂದಂ ಪೇೞ್ಗೆ ಮೋಣ ಯಥಾಸಂಭವಮಂ ॥ 927

ಲಕ್ಷ್ಯಂ ॥

ಕಂ ॥ ಎವೆಯಿಕ್ಕದೆ ಪದಪಿಂ ನೋ ।
ಡುವ ಪುರಲಲನೆಯರ ಬಿಳಿಯ ಕಣ್ಗಳ ಬೆಳಗಿಂ ॥
ಧವಳಿಸಿದಂತೆವೊಲಾದುವು ।
ಗವಾಕ್ಷಜಾಳಂಗಳಮರತನಯಂಗಾಗಳ್ ॥ 928

1 ಪದಪ್ರಪೃಗ್ರಾ. 2 ದಿನ. 3 ದ್ವಾಷ್ಟ್ರಾಂಗದಿಂ. 4 ದಾ। ನವನಂ. 5 ದಾಕಾರಮಂ ತಾಳ್ದಿದಂ. 6 ನೀಲಾಂಬರ. 7 ವಿಕಸ. 8 ನಿಕಟದಿ. 9 ಶಿಖಾವಿಳಾಸ, ಶಿರೋವಿಳಾಸ.

ವೃ ॥ ಒದವಿದ ಪೇಟದತ್ತಳಗದೊಳ್ ಮುಳಿಸಂ ಪುರುಡುಂಟುಮಾಡೆ ಜ ।
ರ್ವಿದ ಕಡೆಗಣ್ಣ ಜರ್ವುಗಳೊ ಮೋ[1]ದಿದ ನೆಯ್ದಿಲ ನೀಲ್ದ ಮಾಲೆಯಿಂ ॥
ದುದಿರ್ದ ಮದಂಗಳೊಳ್ ತೊಡರ್ದು ತೋರ್ಪ ದಳಂಗಳೊ ಪೇೞಿಮಾವುದೆಂ ।
ಬು[2]ದನೆನೆ ಕಾ[3]ದಿ ಮೋದಿದವಿನಾಣಮು[4]ದಿಲ್ಲದಲ್ಲಿ ನಲ್ಲಳಾ ॥ 929

ಮಿಶ್ರವರ್ಣಂಗಳ್ಗೆ ॥

ವೃ ॥ ವದನಾಬ್ಜಸವಗಂಧಲಂಪಟರಟದ್ಭೃಂಗಂಗಳಂ ಸೋಯಲೆ ।
ತ್ತಿದ ನೀಳೋತ್ಪಳಮಾಳೆಯಂ ದ್ವಿಗುಣಿಸಲ್ಕಾರ್ತತ್ತು ಕರ್ಣಾಂತಗಾ ॥
ಮಿ ದಳೆನ್ನೀಳಸರೋಜರೋಚಿ ಕುಮುದಜ್ಯೋತ್ಸ್ನಾವದಾತಪ್ರಭಂ ।
ಮ[5]ದನೋತ್ತೇಜಿತಬಾಣವಿಭ್ರಮಮಪಾಂಗಾಲೋಕನಂ ನಲ್ಲಳಾ ॥ 930

ಗಣಿಕೆಯರ ವಿಳಾಸಾಗಾರದೊಳ್ ಜಾಳಮಾರ್ಗ ।
ಪ್ರಣಯಿನಿಯರಪಾಂಗಶ್ರೇಣಿಗ[6]ಳ್ ಮೂಱುಬಣ್ಣಂ ॥
ಪೆಣೆದೊದವೆ ಗವಾಕ್ಷಸ್ಥೇಂದುಕಾಂತೇಂದ್ರನೀಲಾ ।
ರುಣಮಣಿಕಿರಣಂಗಳ್ ಪೊಣ್ಮುವಂತಾದುವಾಗಳ್ ॥ 931

ಇದು ಗುಣಂ ॥

ಸೂತ್ರಂ ॥ 234 ॥

ಅನುಗತಮಪ್ಪಂತಿರೆ ಚೇ ।
ತನಧರ್ಮಂಗಳನಚೇತನಾರ್ಥಂಗಳೊಳಂ ॥
ಸ್ತನನಯನಾದಿಯೊಳಂ ದ್ವಿ ।
ತ್ವನಿಷ್ಠಮಂ ಜಾತಿಯಂ ವಿವರ್ಣಿಪರರೆಬರ್ ॥ 932

ಲಕ್ಷ್ಯಂ ॥

ಪೂರ್ವಾರ್ಧಕ್ಕೆ ॥

ವೃ ॥ ತೋಳ ಘಟ್ಟಣೆಗುಚ್ಚಳಿಸುತ್ತುಂ ಸೂಸುವ ಶೀಕರವಾರಿ ಮು ।
ಕ್ತಾಳಿಯಿಂದಭಿಷೇಕಮಂ ಗೆಯ್ವಂತೊಪ್ಪೆ ಕಳಿಂದಜೆಯುಂ ಮನೋ ॥
ಲೀಳೆಯಿಂ ಪುಗೆ ತನ್ನದಿ ಕೃಷ್ಣಂಗಾಟಿಸಿದಂತಿರೆ ಲೋಲಕ ।
ಲ್ಲೋಳಕೋಮಲಹಸ್ತದೆ ಪೊಯ್ದಳ್ ಮುಂದಲೆಯಂ ಕಮಳಾಕ್ಷನಾ ॥ 933

ಉತ್ತರಾರ್ಧಕ್ಕೆ ॥

ವೃ ॥ ಕಡೆದವೊಲಿ[7]ರ್ಪ ಪೆರ್ಮೊಲೆ ತೊದಳ್ನುಡಿ ಮೆಲ್ನಡೆ ಚೆಲ್ವನಪ್ಪ ತೆ ।
ಳ್ನಡು ನಳಿತೋಳ್ ಪೊದಳ್ದಧರಮೊತ್ತದೆಯುಂ ನಿಱಿಗೊಂಡ ಚುಂಚು ಸೋ ॥
ರ್ಮುಡಿ ಕಡುನುಣ್ಪುವೆತ್ತ ತೊಡೆ ತುಂಬಿದ ಪೀನನಿತಂಬಬಿಂ[8]ಬಮೊ ।
ರ್ಕುಡಿತಮೆನಿಪ್ಪ ಕಣ್ ಕರಮೆ ರಂಜಿಸೆ ಬಂಧಕಿಳೇಶಕಾಂತೆಯರ್ ॥ 934

1 ದೋಡಿದ, ನೋಡಿದ. 2 ಬಿದ. 3 ಕಾಡಿಮೋಡಿದ, ಕಾಡೆಮಾಡಿದ. 4 ಮುದಿಲ್ಲಿದಲೆಲ್ಲಿ, ಮುದಿಲ್ಲದಲಲ್ಲಿ.
5 ಮದನೋತ್ಸ್ರೇರಿತ. 6 ಯೊಳ್. 7 ಲಪ್ಪ. 8 ಮೆಕ್ಕ.

ಸೂತ್ರಂ ॥ 235 ॥

ಪದದೊಳ್ ಮಾಱ್ಪಂತಿರೆ ಮಾ ।
ಱ್ಪುದು ನಿತ್ಯಂ ಪಾದದೆಡೆಗಳೊಳ್ ಸಂಹಿತೆಯುಂ ॥
ತುದಿಯೊಳಮರ್ಧದೊಳಂ ಮಾ[1] ।
ಱದಿರ್ಕೆ ಮೇಣ್ ಮಾಱ್ಕೆ ತಾನದೆಲ್ಲಿ ಯಥೇಷ್ಟಂ ॥ 935

ಲಕ್ಷ್ಯಂ ॥

ವೃ ॥ ಮೃಡನುಡುರಾಜಪನ್ನಗವಿರಾಜಿಜಟಾಮುಕುಟಂ ಕಪರ್ದಿ ನೂ ।
ರ್ಮ್ಮಡಿ ಧವಳಂ ಸುರಾಸುರಕದಂಬಕಸೇವ್ಯಪದಾಂಬುಜದ್ವಯಂ ॥
ಅಡರೆ ಮೃಡಾನಿಗನ್ಯಕುಳಶೈಳಕುಳಂಗಳ ನಾಡೆ ರಯ್ಯಮ ।
ಪ್ಪೆಡೆಗಳನೆಲ್ಲಮಂ ನೆಱೆಯೆ ತೋಱ್ಪುದು ಪೇಳ್ಕೆಯೆ ಬಂದನೀಶ್ವರಂ ॥ 936

ಕಂ ॥ ಸೋ[2]ತಂ ಪುರೋಹಿತಂ ಬೆರ ।
ಸಾತತತಿಮಿರಪ್ರಭೇದನೋಪಾಯಮಿದೆಂ ॥
ದಾತಮಮಂ ಕಿಡಿಸಲ್ ಸಂ ।
ಜಾತನಯಂ ಬ[3]ಗೆದು ತದ್ಗೃಹಾಭಿತ್ತಿಗಳೊಳ್ ॥ 937

ಇಲ್ಲಿಯೆ ಪೇೞ್ವೆಂದು ಮಹೀ ।
ವಲ್ಲಭದೂತಂಗೆ ನು[4]ಡಿಯೆ ದಶನಾಂಶುಗ[5]ಳಂ ॥
ಮೆಲ್ಲನೆ ದಂ[6]ತಚ್ಛದಮೃದು ।
ಪ[7]ಲ್ಲವದೊಳ್ ನಿಱಿಸಿ ಮರಳೆ ದೂತಂ ನುಡಿದಂ ॥ 938

ಅರಸುಗಳೆಲ್ಲಂ ಬಾಯ್ಕೇ ।
ಳ್ದರೆಂದುಮಾಶಾಂತರಂಗಳಕ್ಕುದುವೆಂ[8]ದುಂ ॥
ಧರಣಿತಳಂ ಬಣ್ಣಿಸೆ ಕೇ ।
ಳ್ದ ರಾಗಿಸುತ್ತಿರ್ಪ್ಪಮಿನ್ನುಮೇಂ ತೊದಳುಂಟೇ ॥ 939

* ಎರಡಱೊಳಂ ಚಂದ್ರಾದಿ ।
ತ್ಯರನಾಗಳ್ ಬರೆದು ಕಾಕಿಣೀರತ್ನದೊಳಂ ॥
ಸ್ಫುರಿತಮಣಿರತ್ನದೊಳಮಂ ।
ತರಿಸುತ್ತುಂ ಯೋಜನಕ್ಕೆ ಮುಂದೊಂದೊಂದಂ ॥ 940

1 ಕೂ. 2 ಆತಂ. 3 ಬೆರದುತಂದುಗೃಹಭಿತ್ತಿ, ಬರೆದು. 4 ನುಡಿದು. 5 ಗಳಂ. 6 ದಶನ,
7 ಪಲ್ಲವದೊಳೆ ಮಱಿಸಿನಾಗೆ, 8 ವೆಂಟುಂ, * ಈ ಪದ್ಯವು ಒಂದುಪ್ರತಿಯಲ್ಲಿ ಮಾತ್ರ ಇದೆ.

ಸೂತ್ರಂ ॥ 236 ॥

ಸಂಬಂಧದ ಸಂಬಂಧದೊ ।
ಳಂ ಬಹುಳಂ ಷಷ್ಠಿಯಕ್ಕುಮೊಂದಿರೆ ನೆಗಳ್ಗುಂ ॥
ಬಿಂಬಾಧರಾದಿಶಬ್ದಮೊ ।
ಡಂಬಟ್ಟಿರೆ ಮಧ್ಯಪದವಿ[1]ಲೋಪಿಸಮಾಸಂ ॥ 941

ಲಕ್ಷ್ಯಂ ॥

ಕಂ ॥ ಕಮಳದ ಕೋಮಳಕಂದಾ ।
ಗ್ರಿಮಾಂಕುರಾಸ್ವಾದಮಾ[2]ದಮೊದವಿಸೆ ಮುದಮಂ ॥
ಕಮಳಾಕರದೊಳ್ ಹಂಸಂ ।
ರಮಿಯಿಸುಗುಂ ಪದ್ಮಿನೀರಜೋರುಣಿತಾಂಗಂ ॥ 942

ಬಿಂಬಾಧರಕಾಂತಿಪ್ರತಿ ।
ಬಿಂಬಂ ಸುಲಿವಲ್ಲೊಳ್[3]ಸೆಯೆ ಪಲ್ ಸುಲಿಯುಮೆ ಗೆ ॥
ತ್ತೇಂ ಬಾಲೆ ಮುಗ್ಧೆಯೋ ಮ ।
ತ್ತಂ ಬಿಡದಡಿಗಡಿಗೆ ನೋಡುವಳ್ ಕನ್ನಡಿಯಂ ॥ 943

ಸೂತ್ರಂ ॥ 237 ॥

ಭಂಗುರಭಿದುರಚ್ಛಿದುರಪ ।
ದಂಗಳ್ ಸಲೆ ಕರ್ಮ್ಮಕ[4]ರ್ತೃವೊಳ್ ಕರ್ತೃವೊಳಂ ॥
ಸಂಗತಿವೆತ್ತಿರ್ಕ್ಕುಂ ಕವಿ ।
ಪುಂಗವಸಮಯವ್ಯವಸ್ಥೆಯಿಂದಂ ಕೃತಿಯೊಳ್ ॥ 944

ಲಕ್ಷ್ಯಂ ॥

ವೃ ॥ ಭಂಗುರಕೇಶಿ ನಲ್ಲನ ತಳಂಗಳೊಳೊಯ್ಯನೆ ಮೆಯ್ಯನಿಕ್ಕಿ ಮಿಂ[5] ।
ಚೆಂಗೆಣೆಯಾಗಿ ತಳ್ತು ಕೊರಲಂ ಬಿಗಿಯಪ್ಪಿ ಕಟಿಪ್ರದೇಶಮಂ ॥
ಪಿಂಗದಿಱಿಂಕಿ ತನ್ನೆರಡುಮೂರುಗ[6]ಳಿಂ ಪಡೆದಳ್ ನಿ[7]ಜಾಂಗಸಂ ।
ಸಂಗದಿನಾಲತಾಂಗಿ ತನಗಂ ಖ[8]ಚರಂಗಮನಂಗರಾಗಮಂ ॥ 945

ಕಂ ॥ ಸಂ[9]ಗತನಿಜಹಸ್ತಕನಿ ।
ಷ್ಠಾಂಗುಲಿಧೃತಮಂ ಪ್ರಿಯಾಮನಃಖೇದಲತಾ ॥
ಭಂಗುರಮಂ ರವಿಮಂಡಳ ।
ದುಂಗುರಮಂ ರಘುಜನಿತ್ತನಣುವನ ಕೆಯ್ಯೊಳ್ ॥ 946

---

1 ವಿಲೋಪ. 2 ವಾಗಳೊದವಿಸೆ. 3 ಳೆನ್ನೆ. 4 ಕರ್ತೃರ್ಥದಂ ಕರ್ತೃರ್ಥದೊಳಂ, ಕರ್ತೃವೇ ಕಾರ್ಕ್ಷದೊಳಂ.
5 ಪಿಣಿಂಗಣೆ. 6 ಗಳಂ. 7 ನಿಜೇಕನು! ತ್ಸಂಗದಿ. 8 ಸುಖರಂಗಮನಂಗರಾಗದಿಂ. 9 ಸಂಗತನಿಜಮಸ್ತಕ.

ವೃ ॥ ಪ್ರಾಲೇಯಾದ್ರಿನವಪ್ರಸೂನಭಿದುರಂ ಗಂಗಾಸರಿಲ್ಲೋಲಕ ।
ಲ್ಲೋಲಾಂಭೋಲ[1]ವಶೀಕರಂ ಚಿರರತಿಶ್ರಾಂತಾಮ[2]ರಸ್ತ್ರೀಕುಚ ॥
ವ್ಯಾಲಿಪ್ತಾಗರುಕುಂಕುಮದ್ರವಹರಂ ಮಾ[3]ದ್ಯತ್ಪಿಕಾಲಾಪಮಾ ।
ಚಾಲಂ ಮಾರುತನೊಯ್ಯನೂದಿ ಕಳೆದತ್ತಾ[4]ದಂಪತಿಶ್ರಾಂತಿಯಂ ॥ 947

ಅದಱಿನೀತನನಾತನೆ ಕೊಂದು ವಿ ।
ಚ್ಛಿದುರಸಂಗರನಕ್ಕೆಮ ಕೊಲ್ಲೆನೆಂ ॥
ದೊ[5]ದಱಿ ಗಾಂಡಿವಿ ಖಂಡಿಸಿದಂ ಮಹಾ ।
ಸ್ತ್ರದಿನರಾತಿಯ ಕೆಯ್ದುಗಳೆಲ್ಲಮಂ ॥ 948

ಮತ್ತಮುೞಿದೆಡೆಗಂ ನೋಡಿಕೊಳ್ವುದು ॥

ಸೂತ್ರಂ ॥ 238 ॥

ಗದ್ಯಮುಮಂ ಪದ್ಯಮುಮಂ ।
ತ[6]ದ್ಯಮಳವಿಮಿಶ್ರಮೆಂದು ಕೃತಿ ಮೂಱು ತೆಱಂ ॥
ಗದ್ಯದೊಳ್ ಸಮೆದುಮಂ[7]ತವು ।
ಹೃದ್ಯವಚಃಪ್ರೌಢಿಗ[8]ಳ್ ಕಥಾಖ್ಯಾಯಿಕೆಯೊಳ್ ॥ 949

ಸೂತ್ರಂ ॥ 239 ॥

ದೊರೆವೆತ್ತ ಪ[9]ದ್ಯದಿಂದಂ ।
ವಿರಚಿಸಿದುದು ಸರ್ಗ್ಗಬಂಧಮಕ್ಕುಂ ಕಾವ್ಯಂ ॥
ಬೆರಸಿ ಬರೆ ಗದ್ಯಪದ್ಯಮ ।
ವೆರಡುಂ ಕೃತಿ ಚಂಪುವೆಂಬ ಪೆಸರಂ ಪಡೆಗುಂ ॥ 950

ಸೂತ್ರಂ ॥ 240 ॥

ಇಡುಕುಂಗೆಬ್ಬಂ ಮುಕ್ತಕ ।
ಮೊ[10]ಡಂಬಡಲ್ ನೆಗೞೆ ಪಲವುಮೇಕಕ್ರಿಯೆಯೊಳ್ ॥
ಪಡೆಗುಂ ಕುಳಕಾಖ್ಯೆಯನೆಡೆ ।
ಮಡಗದನೇಕಾರ್ತ್ಥವಸ್ತುಕಥನಂ ಕೋಶಂ ॥ 951

ಸೂತ್ರಂ ॥ 241 ॥

ಸಂದಿಸಿರೆ ಕಂದಮುಂ ಪೆಱ ।
ತೊಂದಱಿಕೆಯ ವೃತ್ತಜಾತಿಯುಂ ಪದಮುವು ತ ॥
ಳೊಂದಿರೆ ಪನ್ನೆರಡುವರಂ ।
ಸಂ[11]ದುದು ಮೆಲ್ಪಾಡೆನಿಕ್ಕುಮದು ಕನ್ನಡದೊಳ್ ॥ 952

1 ರಹ. 2 ದರ. 3 ಮಾಂದ್ಯತ್ಪಿಕಾಲೋಕ. 4 ತ್ತಾದಂ ಪರಿಶ್ರಾಂತಿಯಂ. 5 ದೊಮಱಿ. 6 ತದ್ಯಮಳ. 7 ದಂತದು. 8 ಯೆಳ್. 9 ವೃತ್ತಬಂಧದೆ 10 ಮೊತಂಬಡಂ. 11 ಸಂದುದಮೊಳ್ಪಾ, ಸಂದು ಸುಮೇಲಿಪ್ಪ.

ಸೂತ್ರಂ ॥ 242 ॥

ಪದಿನಯ್ದು ಮಿರ್ಪ್ಪತಯ್ದುಂ ।
ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್ ॥
ಪುದಿದೊದವಿ ನೆ[1]ಗೞ್ವೊಡಂತದು ।
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ ॥ 953

ಸೂತ್ರಂ ॥ 243 ॥

ಪಾಡುಗಳಿಂದಂ ತಱಿಸಲೆ ।
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ ॥
ಡಾಡುವರ[2]ದಱಿಂ ದಲ್ ಮೆ[3] ।
ಲ್ಪಾಡುಂ ರೂಢಿಯು ಬೆದಂಡೆಗಬ್ಬಮುಮಕ್ಕುಂ ॥ 954

ಸೂತ್ರಂ ॥ 244 ॥

ಪಲತೆಱದ ಪ[4]ದ್ಯದಿಂದಂ ।
ಲಲಿತವಚೋರ[5]ಚನೆಸಿಚಯಪದ್ಧತಿಕೆಗಳಿಂ ॥
ಸಲೆ ನಿಲೆ ಸಮೆದುದು ಸರಸಾ ।
ಖಿಲವರ್ಣ್ನನಮಾ[6]ದೊಡದುವೆ ಬಾಜನೆಗಬ್ಬಂ ॥ 955

ಸೂತ್ರಂ ॥ 245 ॥

ನಗರಾರ್ಣ್ನವಸ[7]ರಿದಟವೀ ।
ನಗಚಂದ್ರಾರ್ಕ್ಕೋದಯರ್ತ್ತುಸಲಿಲಕ್ರೀಡಾ ॥
ದಿ[8]ಗಳಾದಿಯಾಗೆ ಸರಸೋ ।
ಕ್ತಿಗಳಿಂ ವರ್ಣ್ನಿಸುಗೆ ವರ್ಣ್ನಕಂಗಳನ[9]ದಱೊಳ್ ॥ 956

ಸೂತ್ರಂ ॥ 246 ॥

ಸಮಸಂದ ಮುಖಂ ಪ್ರತಿಮುಖ ।
ಮ[10]ವಮರ್ಶಂ ಗರ್ಭ್ಭಮಂತೆ ನಿರ್ವ್ವಹಣಮೆನಿ ॥
ಪ್ಪವ[11]ಯ್ದೆ ಸಂಧಿಯುಕ್ಕುಂ ।
ಸುವಿಹಿತಕವಿಮಹಿತವಿತತಕೃತಿಪದ್ಧತಿಯೊಳ್ ॥ 957

1 ನಿಲೆಯ್ವಂತದು. 2 ರಸ್ನದು. 3 ಮೇಲ್ಪಾತುಂ, ಮೊಳ್ಪಾಡುಂ. 4 ಗದ್ಯ. 5 ರಚಿತ, ರಸ್ನ. 6 ಮಾದುದಮವೆ, 7 ಸಂಭೋಗಂ. 8 ಳಗೆಮಧುರಸರಸರಸೋ. 9 ನಿಗಱುರಿತೊಳ್, ನವಱಿತೊಳ್. 10 ಮವಮರ್ಶಕಂ. 11 ಪುಮಯುಬ್ದ.

ಸೂತ್ರಂ ॥ 247 ॥

ಉಪಯೋಗದೆ ಬೀಜಂ ಬಿಂ ।
ದು ಪ[1]ತಾಕೆ ಪ್ರಕರಿ ಕಾರ್ಯ್ಯಮೆನೆ ಪಂಚವಿಧಂ ॥
ನಿಪುಣಕವಿರಚನೆಯೊಳ್ ಸ[2] ।
ಪ್ರಪಂಚದಿಂದೊಂದಿ ತೋಱುಗುಂ ಸಂ[3]ಧ್ಯಂಗಂ ॥ 958

ಇದು ಕವಿಸಮಯದೊಳ್ ಐಕ್ಯಪ್ರಕರಣಂ ಚತುರ್ತ್ಥಂ ॥

ಗೀತಿಕೆ ॥ ಇಂತು ಕ[4]ವೀಂದ್ರಸಮಯಮಂ ಚೈ ।
ರಂತನಮಾ[5]ರ್ಗ್ಗದೊಳೊಂದೆ ತಿಳಿಯೆ ಪೇೞ್ದಂ ॥
ಭ್ರಾಂ[6]ತಿನಿಸುಂ ಪೊರ್ದ್ದದಲ್ಲಿ ತಾನೆಂ ।
ಬಂತಿರೆ ತಿರ್ದ್ದಿ ವಿವೇಕಿ ನಾಕಿಗಂ ॥ * 959

ವೃ ॥ ದ್ವಿಜವಂಶಾರ್ಣ್ಣವಪಾರಿಜಾತಕುಜದೇ[7]ಶೀಯಂ ಜಿನೇಂದ್ರಕ್ರಮಾಂ ।
ಬುಜಚಂಚನ್ನವಚಂಚರೀಕಯು[8]ವಲೀಲೋದ್ದಾಮನೈದಂಯುಗೀ ॥
ನಜನೋದಾಹ[9]ರಣಪ್ರಸಾಧಿತಧರಿತ್ರೀಮಂಡಲಂ ಸತ್ಕವಿ ।
ವ್ರಜಚೂಡಾಮಣಿ ನಾಗವರ್ಮ್ಮನಿದನುರ್ವ್ವೀಸಂಸ್ತುತಂ ಮಾಡಿದಂ ॥ 960

ಕಂ ॥ ವಾಮನನುಂ ರುದ್ರಟನುಂ ।
ಭಾಮಹನುಂ ದಂಡಿಯುಂ ಮನಂಗೊಳೆ ಪೇೞ್ದಂ ॥
ತೀಮಹಿಗೆ ನೆಗೞ್ಚೆ ಪೇೞ್ದಂ ।
ದಾಮೋದರತನಯನೀವಚೋಲಂಕೃತಿಯಂ ॥ 961

ವೃ ॥ ಸಕಲಕಲಾವಿದಂ ಮದವಿದೂರನುದಾರನಮತ್ಸರಂ ಗುಣಾ ।
ಧಿಕನಭಿಮಾ[10]ನತುಂಗನವದಾತಯಶಂ ವಿಬುಧೈಕವತ್ಸಲಂ ॥
ಸುಕವಿ ಸರಸ್ವತೀವದನಮಂಗಳದರ್ಪ್ಪಣನೆಂದು ಕೂ[11]ರ್ತ್ತು ಕೀ ।
ರ್ತ್ತಿಕುಮನುರಾಗದಿಂ ವಸುಮತೀವಳಯಂ ಕವಿನಾಗವರ್ಮ್ಮನಂ ॥ † 962

ಸರಭಸತೆಯಿಂ ಮತ್ತೊಂದಜ್ಞಾನದಿಂದುಚಿತೋಕ್ತಿಯೊಳ್ ।
ಪೊರೆಯದಿದು ತಾನಿನ್ನೊಂದೇನಾನುಮಾದೊಡಮಿಲ್ಲಿ ಮ ॥
ತ್ಸರವಿರಹಿತರ್ ಪಾರೋಭಾಗ್ಯವ್ಯಪೇತಮನಸ್ಕರ ।
ಕ್ಕರಿಗರಧಿಕಪ್ರಜ್ಞರ್ ಕೆಯ್ಕೊಂಡು ತಿರ್ದ್ದುಗೆ ದೋಷಮಂ ॥ 963

1 ಪತಾಕಪ್ರಕರ· 2 ಸು. 3 ಸಾಧ್ಯಂಗಳ್· 4 ಕವಿಸಮಯಮಂ. 5 ಮಾರ್ಗ್ಗದೊಳೆತಿಳಿಯೆ ಪೇೞ್ವೆಂಬೆಡಂಗಿಂ ॥
6 ಭ್ರಾಂತಿನಿಸು ಪೊರ್ದ್ದದಿಲ್ಲಿನ್ನೆಂ । * ಎರಡು ಪ್ರತಿಗಳಲ್ಲಿ ಈ ಪದ್ಯದೊಡನೆ ಗ್ರಂಥವು ಸಮಾಪ್ತಿಯಾಗಿದೆ.
7 ಕೇಶೀಯಂ. 8 ನತಿ. 9 ಹರಣಂ ಪ್ರಸಾಧಕ. 10 ಮಾನಿ. 11 ನಾಡೆ. † ಒಂದು ಪ್ರತಿಯಲ್ಲಿ ಈ ಪದ್ಯದೊಡನೆ ಗ್ರಂಥವು ಸಮಾಪ್ತಿಯಾಗಿದೆ.

ವೃ ॥ ಮಂದರಶೈಲದಂತೆ ದಿವಿಜಾಪಗೆಯಂತೆ ಪಯೋಧಿಯಂತೆ ಪೆಂ ।
ಪಿಂ ದೊರೆವೆತ್ತ ದೇವಕುಲದಂತೆ ದಿಶಾಗಜರಾಜಿಯಂತೆ ಸೂ ॥
ರ್ಯೇಂದುಗಳಂತೆ ತಾರಗೆಗಳಂತೆ ಸನಾತನವೇದದಂತೆ ನಿ ।
ಲ್ಕೆಂದುಮವಿಘ್ನತಾಪ್ರಸರಮಿಂತಿದು ಕೂರ್ತ್ಸ್ವ ಸಮಸ್ತಧಾತ್ರಿಯೊಳ್ ॥ 964

ಕಂ ॥ ಛಂದೋವಿಚಿತಿಯಲಂಕೃತಿ ।
ಸಂಪ್ಪಭಿಧಾನ . ಕೋಶವೆಂಬಿವು ವಾಕ್ ಶ್ರೀ ॥
ಸುಂದರಿಗೆ ರತ್ನಮಂಡನ ।
ದಂದದೊಳಿರ್ದ್ದಪುವು ನಾಗವರ್ಮ್ಮನ ಕೃತಿಗಳ್ ॥ 965

ಇದು ಸಕಲಸುಕವಿಜನಮನಸ್ಸರೋಜಿನೀ ರಾಜಹಂಸಾಯ
ಮಾನಾನೂನಕವಿತಾಗುಣೋದಯಶ್ರೀಮನ್ನಾಗ
ವರ್ಮ್ಮಪ್ರಣೀತಮಪ್ಪ ಕಾವ್ಯಾವ
ಲೋಕನದೊಳ್ ಕವಿಸಮಯ
ಮೆಂಬುದು ಪಂಚಮಾ
ಧಿಕರಣಂ.

ERRATA.

ಶುದ್ಧಪತ್ರಂ.

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
7	3	ಪೊಗೞದಿರ್ಪ್ವವೆ	ಪೊಗೞದಿರ್ಪ್ಪವೆ
14	1	ಶಿಸುಗಲ್	ಕಿಸುಗಲ್
39	9	ಇಕಾರೈತ್ವಮುಮಂ	ಏಕಾರೇತ್ವಮುಮಂ
41	20	ಪರಾರ್ಧಕ್ಕೆ	ಅಪರಾರ್ಧಕ್ಕೆ (ಹೀಗೆಯೇ ಎಲ್ಲಾ ಕಡೆಯಲ್ಲಿಯೂ)
49	13	ವೇೞ್ವುದದರ್ಕ್ಕೆ	ಪೇೞ್ವುದದರ್ಕ್ಕೆ
,,	14	ಟೀಕುವೇೞ್ವುದೆನೆ	ಟೀಕು ಪೇೞ್ವುದೆನೆ
52	15	ಸಮಾಸಪ್ರಕರಣಂ ॥	ಸಮಾಸಪ್ರಕರಣಂ ತೃತೀಯಂ ॥
53	3	ಶಬ್ದಮುಕ್ಕಂ	ಶಬ್ದಮುಕ್ತಂ
60	24	ತದ್ಧಿತಪ್ರಕರಣಂ ॥	ತದ್ಧಿತಪ್ರಕರಣಂ ಚತುರ್ಥಂ ॥
68	29	ಅಯ್ದನೆಯಆಖ್ಯಾತಪ್ರಕರಣಂ ॥	ಆಖ್ಯಾತಪ್ರಕರಣಂ ಪಂಚಮಂ ॥
74	20	ಬಸಿರ್	ಬಸಿಱ್
75	1	ಕಾವ್ಯವಾಕ್ಯಾರ್ಥ	ವಾಕ್ಯವಾಕ್ಯಾರ್ಥ (ಹೀಗೆಯೇ ಎಲ್ಲಾ ಕಡೆಯಲ್ಲಿಯೂ)
,,	19	ವ್ಯವಹಿತಾನ್ವಯಂ	ವ್ಯವಹಿತಾಹ್ವಯಂ
77	11	ಮಾಯಾ	ಮಾಯಾರ್
78	12	ಅ ॥	ಶ್ಲೋ ॥
79	4	ಸಂಸೃತಿಯಂ	ಸಂಸ್ಕೃತಿಯಂ
82	14	ಸುಕುಮಾರೋಜ	ಸುಕುಮಾರಾಜ
83	13	ಎಂಬುದಕ್ಕಂನೇಯಂ	ಎಂಬುದಕ್ಕುಮನೇಯಂ
93	6	ಗ್ರಾಮೆ	ಗ್ರಾಮ್ಯೆ
,,	24	ಪದಗತಪಾಟಂ	ಪದಗತಪಾಠಂ
95	5	ಪಾದಂಗಳ್ಗಂ	ಪಾಠಂಗಳ್ಗಂ
96	5	ಕೆಯ್ಯುದ್ದಮೆ	ಕೆಯ್ಯುಗಮೆ
106	3,4	ತೋಳ. ॥ ಳ್ತುರು	ತಾಳತ ॥ ತ್ವರ
119	14	ಅರ್ಥಾಂತರಂಪ್ರಸಂಗ	ಅರ್ಥಾಂತರಪ್ರಸಂಗೆ

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
120	14	ಮಾನ್ಯಮೊತದುಗ್ಗಣ	ಮಾನ್ಯಮಾತದುಗ್ಗಣ
135	15	ಕರುಣಾತ್ಮಕವಿಪ್ರಲಂಭಂ	ಕರುಣಾತ್ಮಕಂ
144	23	ನದೀಲೀಲೆಯಾಂ	ನಟೀಲೀಲೆಯಂ

ಷರಾ— 297ನೆಯ ಮತ್ತು 452ನೆಯ ಪದ್ಯಗಳು ಸೂತ್ರಗಳಾದುದರಿಂದ ಅವು ಳನ್ನು ದಪ್ಪಕ್ಷರದಲ್ಲಿ ಮುದ್ರಿಸಿ ಅವುಗಳಿಗೆ ಪ್ರತ್ಯೇಕವಾಗಿ ಸಂಖ್ಯೆಯನ ಕೊಡಬೇಕಾಗಿದ್ದಿತು. ಮೊದಲನೆಯದನ್ನು $65\frac{1}{2}$ ಸೂತ್ರವೆಂದೂ ಎರಡ ಯದನ್ನು $103\frac{1}{2}$ ಸೂತ್ರವೆಂದೂ ಭಾವಿಸಬೇಕು.

OTHER READINGS.

ಪಾಠಾಂತರಗಳು.

——:0:——

ನಾಗವರ್ಮನು ಕಾವ್ಯಾವಲೋಕನದಲ್ಲಿ ಉದಾಹರಿಸಿರುವ ಪದ್ಯಗಳಲ್ಲಿ ಹಲವು ಇತರಗ್ರಂಥಗಳಲ್ಲಿ ದೊರೆಯುತ್ತವೆ. ಆ ಗ್ರಂಥಗಳಲ್ಲಿಯ ಪಾಠಾಂತರಗಳು ಕೆಳಗೆ ಕೊಟ್ಟಿವೆ.

ಪುಟ.	ಪಙ್ಕ್ತಿ.	ಅಚ್ಚಾಗಿರುವ ಪಾಠ.	ಪಾಠಾಂತರ.
4	24	ಮೇಗಿರಿವರ	ದಾಖಗನಗ
7	18	ಮಾಱ್ಕೆಯೊಳೆ	ಮಾಱ್ಕೆಯೊಳ್
,,	34	ಸರಸ್ವತೀಮಣಿಹಾರಾ	ಸರಸ್ವತೀಮುಖತಿಲಕಾ
10	7	ಬಾಱ್ವೆಣಂ	ಪೋಱ್ವೆಣಂ
,,	,,	ಸಮ್ಮನ ಸೂಲಮಾಲದೊಳ್	ಬೊಮ್ಮನ ಸೂಲಮಾಗಲಾ
,,	8	ಸಂದಣಿಯಾಗಿ	ಸಂದಣಿಗೊಂಡು
,,	9	ದಱಿಯಲ್ಕೆ ಮಾಡಿದಡೆ	ಬಱಿಯಲ್ಕೆ ಮಾಡಿದೊಡೆ
,,	11	ಕಣ್ಬೊಲನಾಗಿ	ಕಣ್ಬೊಲನಾಗೆ
11	15	ದುದ್ಘ	ದುತ್ಕ
13	3	ಎಣೆಗೆವರ್ಪ್ಪೊಡಂ	ಎಣೆಯೆನಿಪ್ಪೊಡಂ
17	31	ಕೂಡುವರಬಲೇ	ಬೆರಸುವರಬಲೇ
19	8	ತಾಳ್ದಿದಂ	ಪೊದ್ದಿರ್ದಂ
21	7	ಕೆಯ್ಪ್ಪಿಡಿ	ಕೆಯ್ಪೊಡೆ
,,	10	ಎರ್ದೆಗಾಣ್ಮ	ಎರ್ದೆಯಮಾಣ್ಮ
,,	30	ನಿಂದಗ್ನಿ	ಸಂದಗ್ನಿ
22	12	ಸ.ರತಾಲಮುಂ	ಸುರಸಾಲಯುಂ
,,	14	ನೋಡುತಿರ್ಪ್ಪದೇ	ನೋಡುತಿರ್ಪ್ಪರೇ
,,	29	ತಡವತ್ತೇ	ತಡೆವಂತೇಂ
25	5	ಬಗೆದರಿಲ್ಲ	ಬಗೆದುದಿಲ್ಲ
26	17	ಳೆನತುತಂದೆಯು	ಳೆನಿತುಮಾಱಿದ
27	6,7,8	ಅದು	ಇದು
,,	8	ವಟ್ಟಮಂತದು	ಛತ್ರಮಿಂತಿದು
,,	,,	ಕೆಯ್ಪ್ಪಿಡಿಯೆಂದೆ	ಕೆಯ್ಪ್ಪಿಡಿಯೆಂದು
31	18,19	ಕೇ | ಳೀಯಲ್	ಕೊ | ಳ್ಳೀಯಲ್

ಪುಟ.	ಪಙ್ಕ್ತಿ.	ಅಚ್ಚಾಗಿರುವ ಪಾಠ.	ಪಾಠಾಂತರ.
34	18	ಸಲಿಪೇಱ್ವುದುಕಲ್ತು	ನೆಱೆಪೇೞ್ದುದುಗಲ್ತು
,,	20	ಅದಾವೆಡೆಗವಲ್ತುದುಕಲ್ಪಿ	ಅದಾರಬಗೆಗಲ್ತುದುಕಬ್ಬ
,,	22	ಲಾಳಿವಾಯ್, ಕೆಂದಳಂ	ತೊಂಡೆವಾಯ್, ಸೆಳ್ಳುಗುರ್
,,	24	ಬಯಸಿ	ಬಳಸಿ, ಬೆರಸಿ
,,	24,25	ಪೆರ್ಮೊರ್ಲೆ	ಕಣ್ಗೊಳೆ
,,	25	ಮಹೀವಲ್ಲಭಂ	ಮಹೀಪಾಲಕಂ
35	8	ಸರಲುಂ	ಕೋಲುಂ
36	18	ಮುಗಿಲಂ	ಮುಗಿಲೊಳ್
37	26	ಚಟ್ಟು	ಭಟ್ಟು
39	18	ಎಂತುಂ	ಎಂದುಂ
40	8	ಅರ್ತ್ಥಸೃಷ್ಟಿ	ಅರ್ತ್ಥದೃಷ್ಟಿ
,,	10	ಕಸವನೆ	ಕಸವುಂ
42	28	ಗಂಧಂ	ವರ್ಣ್ಣಂ
44	12	ಬಳ್ಗೊಂಬುವುಂ	ಬಳ್ಗೊಂಬುಗಳ್
,,	21	ಕೊಂಡಲ್ಲಿಂ	ಕೊಂಡಲ್ಲಿಗೆ
,,	24	ನೀಪಿಕಳಗೆ	ಗಿಳಿಯಕಳಗೆ
,,	26	ಮೀಱುದನಂ	ಮೀಱುಜನಂ
,,	29	ಆಯುವೃಂಟಿನೆ	ಆಯುಮುಂಟೆನೆ
,,	32	ನಾಲ್ವರ್ಗ್ಗೆ	ಸುರಜನರ್ಗೆ, ಕಲ್ಪಜರ್ಗೆ
,,	,,	ದುಃಖದತೆಱನಂ	ದುಃಖಕ್ರಮುವಂ
45	2	ಇಂಬಾಗಿ	ಇಂಪಾಗಿ
,,	4	ಕುರುವೃಂಕ್ಷಣದೊಳ್	ಕುರುವೃಂಪ್ಪೇಗಂ
,,	15	ಯೋಜನವುೞ್ದು	ಯೋಜನವುಮರ್ದು
,,	27	ನೆಲೆಗುಯ್ದುನೆಂಬುದ	ನೆಲೆಗುಯ್ದುದೆಂಬುದ
46	10	ಪಯಿಂಜಾಸಿರ್ವ್ವರಂ	ಪಯಿಂಛಾಸಿರ್ವ್ವರಂ
47	2	ಪುಡಿಕೆ	ಪುಟಕೆ
,,	27	ಮುದ	ಮದ
,,	28,29	ಸಂ ॥ ಮದ	ಯಾ ॥ ಸ್ವದ
,,	29	ಚೆಲ್ವೂರೂರ	ಪೆಂಪ್ರೂರೂರ
,,	34	ನಡೆನೋಡಿ	ಮಿಗೆನೋಡಿ
,,	34,35	ಗುಣಂಪ್ರೊದ । ಲ್ಡಳವಡೆ	ಗುಣಂಗಳಂ । ತಳವಡೆ
48	10	ಪಾಯ್ಬುದು	ಪಾಯ್ವುದು
49	11	ರಸವುರ್ತ್ಥಮುಮಕ್ಕರಮುಂ	ರಸದರ್ತ್ಥಮನಕ್ಕರಮಂ

ಪುಟ.	ಪಙ್ಕ್ತಿ.	ಅಚ್ಚಾಗಿರುವ ಪಾಠ.	ಪಾಠಾಂತರ.
50	9	ವರೆಗಂದುಶ್ಯಾಸನ	ವರವಣಾದುಶ್ಯಾಸನ
,,	10	ಚ್ಛ್ವಸಿತಾ	ಷ್ಣಸೃತಾ
51	1	ನಿಡುಪು	ಮಿಡುಪು
,,	2	ಮಿಂತುಸಂದಂದಿನಿಬರ	ವಂತೆಲುಂದದಿಸಿರುಳೊಳ್
,,	4	ಪೋಯ್ತಿಂತು	ಜೆಳಗಾಯ್ತು
52	25	ವೊಂದರಿಗಂ	ವೊಂದುರಿಗಂ
55	13	ದೃಢವೇತ್ರ, ಕತದುಪ್ಪ್ರವೇಶ	ಪರಿವೇತ್ರ, ಸತತಪ್ರವೇಶ
,,	14	ಸಂಗತ	ಸಂಕುಲ
,,	15	ತಿರೆತತ, ತತವಿದ್ರುಮ	ತುರುತರ, ನವವಿದ್ರುಮ
57	24	ನೀಱಂ, ಕರೆಯೆ	ಸೀಱಿಗೆ, ಕಳೆಯೆ
58	22	ಆದನಂತು	ಅದನಂತೆ, ಆದನೆತ್ತೆ, ಆದನೊತ್ತಿ
65	23	ಅಡಂಗಿನಿಲ್ ಭ್ರಮರಿಯೊಳ್	ಅಡಂಗು ನಿಲ್ ಭ್ರಮರಿವೋಲ್
71	14	ಏನೇನುಂ	ಏನೇನೋ
,,	15	ರುಂವುದ	ರಾವುದ
,,	15,16	ಅವರ್ಗಂ । ತೇನೇತಱೊಳ್	ಅವರ್ಗೇ । ಸೇನೇತಱೊಳ್
,,	16	ಆಯ್ತುದ	ಆದುದ
80	11	ವೃಗಂದಲಂಜಿಸುವವಂ	ವೃಗಂಗಳೊಡ್ಡಿಸುವವಂ
,,	12	ಕೆಯ್ಕೊಳಂ	ಕಯ್ಬನಂ
,,	13	ಬಿಂದದಂತೆ ಬಂ	ಬಿಂದದಂದದಿಂ
84	23	ಮಡು	ಮಡಿ
100	25,26	ಪೆ ॥ ಲ್ಪೊಗೆದಿರೆ	ಪೆ ॥ ಲ್ಪುಗಿದಿರೆ
102	4	ಬರ್ವ್ವರ್ಿಲ್ಲಿ	ಬರ್ವ್ವರಿಲ್ಲ
106	3,4	ತೋಳ . ॥ ಳ್ತುರು	ತಾಳತ ॥ ತ್ವರ
,,	5	ಮುಗ್ಧೆಯುದೇಂವಿದಗ್ಧೆಯೋ	ಮುಗ್ಧೆಕರಂವಿದಗ್ಧೆವೋಲ್
107	3	ಪದದೊಳ್	ಪದದೊಳ್
,,	15	ನೃತ್ಯಮಿತ್ತಲ್	ನೃತ್ತಮತ್ತಲ್
,,	17	ಅತ್ತಲಾಮಹೀಶನ	ಇತ್ತಲಧಿಕವಿಭವನ
111	5	ಪೋಲಿಪರಂತದೇಂ ಮರುಳರೋ	ಪೋಲಿಸುವಂತುಟಾಂಮರುಳನೇ
,,	25	ಗುಹಾಚಳಕ್ಕೆ	ಗುಹಾತಳಕ್ಕೆ
126	27	ಖಳರಭಿವಂದ್ಯರ್	ಖಳರುಂವಂದ್ಯರ್
ವೃತ್ತಿಃ ॥ ಅಥಶಬ್ದೋಯಮಾದೌ ಮಂ[1]ಗಳಾರ್ಥಃ । ಮಂಗಳಾದೀನಿ ಶಾಸ್ತ್ರಾಣಿ ಪ್ರ[2]ಥಂತೇ । ಅಧಿಕಾರಾರ್ಥೋ ವಾ । ಇ[3]ಹ ಕರ್ಣಾಟವಿಷಯೇ ಶಬ್ದಸಿದ್ಧಿರಧಿಕ್ರಿಯತ ಇ[4]ತಿ ॥

ಟೀಕೆ ॥ ಅಥ — ಇಷ್ಟದೇವತಾನಮಸ್ಕಾರಾನಂತರಂ. ಕರ್ಣಾಟಕಶಬ್ದಸಿದ್ಧಿಃ — ಕರ್ಣಾಟಕಭಾಷೆಯ ಶಬ್ದದ ಆಗು ಪೇೞಲ್ಪಡುವುದು.

ಸೂ ॥ ಅಕಾರಾದಯಃ ಪ್ರಸಿದ್ಧಾ ವರ್ಣಾಃ ॥ 2 ॥

ವೃ ॥ ಅಕಾರಾದಯೋ ವರ್ಣಾಃ ಹಕಾರಪರ್ಯವಸಾನಾಃ ಪ್ರಸಿದ್ಧಾ ಏ[5]ವ ವೇದಿತವ್ಯಾಃ । ತೇ[6]ಷ್ವನಾದಿಕಾಲಪ್ರಸಿದ್ಧತ್ವಾದನ್ಯಥಾ ನೋಪದೇಷ್ಟವ್ಯಾ ಇತ್ಯರ್ಥಃ ॥

ತೇ ಕೇ ?

ಅ ಆ, ಇ ಈ, ಉ ಊ, ಋ ೠ, ಎ ಏ, ಏ ಐ, ಒ ಔ ; ಕ್ ಖ್ ಗ್ ಘ್ ಙ್, ಚ್ ಛ್ ಜ್ ಝ್ ಞ್, ಟ್ ಠ್ ಡ್ ಢ್ ಣ್, ತ್ ಥ್ ದ್ ಧ್ ನ್, ಪ್ ಫ್ ಬ್ ಭ್ ಮ್, ಯ್ ರ್ ಲ್ ವ್ ಶ್ ಷ್ ಸ್ ಹ್.

ಟೀ ॥ ಅಕಾರಾದಯಃ — ಅಕಾರಂ ಮೊದಲಾಗಿ ಹಕಾರಂ ಕಡೆಯಾಗಿ ಉಳ್ಳಂತಪ್ಪ. ವರ್ಣಾಃ — ಅಕ್ಷರಂಗಳ್. ಪ್ರಸಿದ್ಧಾಃ — ಅನಾದಿ ಪ್ರಸಿದ್ಧಂಗಳಪ್ಪುವು. ತೇ ಕೇ — ಅವಾವುವೆಂದೊಡೆ — (ವೃತ್ತಿಯನ್ನು ನೋಡಿ).

---

1 ಮಾಂಗಲ್ಯಾರ್ಥಃ. 2 ಪ್ರಥಂತ ಇತಿ ಪ್ರಸಿದ್ಧೇಃ. 3 ಮಯಾ ಕರ್ಣಾಟಕವಿಷಯಃ. 4 ಇತ್ಯರ್ಥಃ. 5 ಇತಿ.
6 ತೇಷಾಮನಾದಿಕಾಲತ್ವಾತ್, ತೇಷಾಮನಾದಿಕಾಲ ಪ್ರಸಿದ್ಧತ್ವಾತ್.

ಸೂ ॥ ತೇಷ್ವಾದೌ ಚತುರ್ದಶ ಸ್ವರಾಃ ॥ 3 ॥

ವೃ ॥ ತೇಷ್ವಕಾರಾದಿಷು ವರ್ಣೇಷು ಆದೌ ವ್ಯವಸ್ಥಿತಾ ಯೇ ಚತುರ್ದಶವರ್ಣಾಃ ತೇ ಸ್ವರ ಸಂಜ್ಞಾ ಭವಂತಿ ॥

ತೇ ಕೇ?

ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ.

ಟೀ ॥ ತೇಷು — ಆ ಅಕ್ಕರಂಗಳಲ್ಲಿ. ಆದೌ — ಮೊದಲಿರ್ಪ. ಚತುರ್ದಶ — ಪದಿನಾಲ್ಕಕ್ಕರಂಗಳ್. ಸ್ವರಾಃ — ಸ್ವರಂಗಳೆಂದು ಪೆಸರುಳ್ಳುವಪ್ಪುವು. ತೇ ಕೇ — ಅವಾವುವೆಂದೊಡೆ—(ವೃತ್ತಿಯನ್ನು ನೋಡಿ.)

ಸೂ ॥ ಏಕದ್ವಿತ್ರಿಮಾತ್ರಾಸ್ತೇ ಹ್ರಸ್ವದೀರ್ಘಪ್ಲುತಾಃ ॥ 4 ॥

ವೃ ॥ ತೇ[1]ಇತಿ ತಚ್ಛಬ್ದೋಪಾದಾನಂ ವ್ಯ[2]ಕ್ತ್ಯರ್ಥಂ । ಅಕಾರಾದಿಸ್ವ[3]ರವ್ಯಕ್ತಯೋ ವರ್ಣಾ ಏಕದ್ವಿತ್ರಿಮಾತ್ರಾಃ ತೇ ಖಲು ಯ[4]ಥಾಸಂಖ್ಯಂ ಹ್ರಸ್ವದೀರ್ಘಪ್ಲುತಾ ಭವಂತಿ ॥

ಉದಾಹರಣಂ ॥ ಅ1, ಆ2, ಆ3; ಇ1, ಈ2, ಈ3; ಇತ್ಯಾದಿ.

ಸಾಮಾನ್ಯಾಪೇಕ್ಷಯಾ ಸಂಖ್ಯಾಪಿ ನ ವಿರುಧ್ಯತೇ ॥

ಟೀ ॥ ತೇ — ಆ ಪದಿನಾಲ್ಕು ಸ್ವರಂಗಳ್. ಏಕ ದ್ವಿ ತ್ರಿಮಾತ್ರಾಃ — ಒಂದುಮೆರಡುಂ ಮೂಱುಂ ಮಾತ್ರೆಯುಳ್ಳುವಾದಂದು. ಹ್ರಸ್ವದೀರ್ಘಪ್ಲುತಾಃ — ಪರಿವಿಡಿಯಿಂದೆ ಹ್ರಸ್ವ ದೀರ್ಘಪ್ಲುತಂಗಳಪ್ಪುವು. ಉದಾಹರಣಂ ॥ (ವೃ. ನೋ.)[5]

ಸೂ ॥ ಏದೋತೌ ಹ್ರಸ್ವೌ ಚ ॥ 5 ॥

ವೃ ॥ ಏಕಾರೌಕಾರೌ ದ್ವಾವಪಿ ಕ್ವಚಿದ್ಭಾ[6]ಷಾಯಾಂ ಹ್ರಸ್ವೌ ಚ ಭವತಃ । ನಿತ್ಯಂ ಸಂಧ್ಯಕ್ಷರಾಣಿ ದೀರ್ಘಾಣಿ—ಇತ್ಯುಪದೇಶಾದಿದಂ ವಚನಂ ॥

ಉ ॥ ಎಲೆ, ಏ[7]ಲೆ; ಸೆಲೆ, ಸೇಲೆ; ಒಲೆ, ಓಲೆ; ಗೊಲೆ, ಗೋಲೆ.

ಟೀ ॥ ಏದೋತೌ — ಏಕಾರೌಕಾರಂಗಳ್. ಹ್ರಸ್ವೌ ಚ — ಈ ಕರ್ಣಾಟಕಭಾಷೆಯಲ್ಲಿ ಹ್ರಸ್ವಂಗಳುಮಪ್ಪುವು. ಉ ॥ (ವೃ. ನೋ).

ಈಯಂತಂಗಳ್ ಸಂಸ್ಕೃತದೊಳ್— ನಿತ್ಯಂ ಸಂಧ್ಯಕ್ಷರಾಣಿ ದೀರ್ಘಾಣಿ—ಎಂಬ ವ್ಯಾಕರಣಸೂತ್ರದಿಂದೆ ದೀರ್ಘಂಗಳ್ ಅಪ್ಪುವು.

ಸೂ ॥ ಕಾದಯಸ್ತ್ರಯಸ್ತ್ರಿಂಶದ್ವ್ಯಂಜನಾನಿ ॥ 6 ॥

ವೃ ॥ ಕಕಾರಪ್ರಭೃತಯಃ ತ್ರಯಸ್ತ್ರಿಂಶತ್ಪರಿಮಿತಾಃ ಯೇ ವರ್ಣಾಃ ಪ್ರತ್ಯೇಕಂ ತೇ ವ್ಯಂಜನಸಂಜ್ಞಾ ಭವಂತಿ ॥

---

1 ತೇ ಖಲು ಸ್ವರಾಃ ಅಕಾರಾದಯಃ ಏಕದ್ವಿತ್ರಿಮಾತ್ರಾಸ್ಸಂತಃ ಹ್ರಸ್ವದೀರ್ಘಪ್ಲುತಸಂಜ್ಞಾ ಭವಂತಿ. 2 ವ್ಯಕ್ತ್ಯರ್ಥಂ. 3 ಸ್ವರಾ ಇತ್ಯುಕ್ತಾ ಏವ ವರ್ಣಾಃ, ಸ್ವರಯುಕ್ತಾ ಯೇ ವರ್ಣಾಃ. 4 ಯಥಾಸಂಖ್ಯಂ ಪ್ರತ್ಯೇಕಂ. 5 ವೃತ್ತಿಯನ್ನು ನೋಡಿ—ಎಂಬುದಕ್ಕೆ ಸಂಜ್ಞೆ. ಹೀಗೆಯೇ ಮುಂದೆಯೂ. 6 ಭಾಷಾವಿಷಯೇ. 7 ಏಲಕ್ಕಿ.

ತೇ ಕೇ?

ಕ್ ಖ್ ಗ್ ಘ್ ಙ್, ಚ್ ಛ್ ಜ್ ಝ್ ಞ್, ಟ್ ಠ್ ಡ್ ಢ್ ಣ್, ತ್ ಥ್ ದ್ ಧ್ ನ್, ಪ್ ಫ್ ಬ್ ಭ್ ಮ್, ಯ್ ರ್ ಲ್ ವ್ ಶ್ ಷ್ ಸ್ ಹ್.

ಟೀ ॥ ಕಾದಯಃ—ಕಕಾರಂ ಮೊದಲಾಗಿ ಹಕಾರಂ ಕಡೆಯಾದ. ತ್ರಯಸ್ತ್ರಿಂಶತ್—ಮೂವತ್ತುಮೂಱು ಅಕ್ಕರಂಗಳ್. ವ್ಯಂಜನಾನಿ—ವ್ಯಂಜನಂಗಳೆಂದು ಪೆಸರುಳ್ಳುವಪ್ಪುವು.

ತೇ ಕೇ—ಅವಾವುವೆಂದೊಡೆ—(ವೃ. ನೋ.)

ಸೂ ॥ ವರ್ಗಾಸ್ತೇ[1] ಮಾಂತಾಃ ಪಂ[2]ಚಶಃ ಪಂಚ ॥ 7 ॥

ವೃ ॥ ತೇ ಪುನಃ ಕಕಾರಾದಯೋ ವ[3]ರ್ಣಾಃ ಮಕಾರಾಂತಾಃ ಪಂಚ ಪಂಚ ಭೂತ್ವಾ ಪಂಚೈವ ವರ್ಗಸಂ[4]ಜ್ಞಾ ವೇದಿತವ್ಯಾಃ ॥

ತೇ ಕೇ?

ಕ್ ಖ್ ಗ್ ಘ್ ಙ್, ಚ್ ಛ್ ಜ್ ಝ್ ಞ್, ಟ್ ಠ್ ಡ್ ಢ್ ಣ್, ತ್ ಥ್ ದ್ ಧ್ ನ್, ಪ್ ಫ್ ಬ್ ಭ್ ಮ್.

ಟೀ ॥ ತೇ ಮಾಂತಾಃ—ಕಕಾರಂ ಮೊದಲಾಗಿ ಮಕಾರಂ ಕಡೆಯಾಗಿ ಉಳ್ಳ ಆ ವ್ಯಂಜನಂಗಳ್. ಪಂಚಶಃ—ಅಯ್ದಯ್ದುಗಳೊಂದಾಗಿ. ಪಂಚವರ್ಗಾಃ—ಅಯ್ದು ವರ್ಗಂಗಳಪ್ಪುವು.

ತೇ ಕೇ—ಅವಾವುವೆಂದೊಡೆ—(ವೃ. ನೋ.)

ಸೂ ॥ ಅನುನಾಸಿಕಾಸ್ತೇಷಾಂ ಪಂಚಮಾಃ ॥ 8 ॥

ವೃ ॥ ತೇಷಾಂ ವರ್ಗಾಣಾಮಂತೇ ವ್ಯವಸ್ಥಿತಾ ಯೇ ವರ್ಣಾಸ್ತೇ ಅನುನಾಸಿಕಸಂಜ್ಞಾ ಭವಂತಿ ॥ ತೇ ಕೇ?

ಙ ಞ ಣ ನ ಮಾಃ.

ಟೀ ॥ ತೇಷಾಂ—ಆ ವರ್ಗಂಗಳ. ಪಂಚಮಾಃ—ಅಯ್ದನೆಯ ಅಕ್ಕರಂಗಳ್. ಅನುನಾಸಿಕಾಃ—ಅನುನಾಸಿಕಂಗಳಪ್ಪುವು. ತೇ ಕೇ—ಅವಾವುವೆಂದೊಡೆ—ಙ ಞ ಣ ನ ಮ.

ಸೂ ॥ ವಿಭಾಷಯಾ ಯವಲಾಃ ॥ 9 ॥

ವೃ ॥ ಯವಲಾ ಇತ್ಯೇತೇ ವರ್ಣಾಃ ವಿಕಲ್ಪೇನ ಅನುನಾಸಿಕಸಂಜ್ಞಾ ಭವಂತಿ ॥ ತದ್ಯಥಾ—ಸಂ[5]ಯುತಂ, ಸಯ್ಯುತಂ; ಸೇಂವೆ, ಸೇವೆ; ಕಂ[6]ಲೆನೆ ಕನಲ್ದು, ಕಲ್ಲೆನೆ ಕನಲ್ದು; ಯುಂ[7]ಲೋಕಂ, ಯುಲ್ಲೋಕಂ; ಜಂವಂ, ಜವಂ; ಗಾಂವೆ, ಗಾವೆ; ಓಂವಂ, ಓವಂ; ಕಾಂವಂ, ಕಾವಂ; ಬಂಲನೆಯೊನಲ್ದು, ಬಲ್ಲನೆಯೊನಲ್ದು—ಇತ್ಯಾದಿ.

ಟೀ ॥ ವಿಭಾಷಯಾ—ವಿಕಲ್ಪದಿಂ. ಯವಲಾಃ—ಯಕಾರ ವಕಾರ ಲಕಾರಂಗಳ್ ಅನುನಾಸಿಕಂಗಳಪ್ಪುವು. ಉ ॥ (ವೃ. ನೋ.) ಇವು ಮೊದಲಾದುವು.

1 ಸ್ತು. 2 ಪಂಚ ಪಂಚ. 3 ಮಾವಸಾನಾ ವರ್ಣಾಃ. 4 ಸಂಜ್ಞಿಕಾಃ ಪ್ರತ್ಯೇತವ್ಯಾಃ. 5 ಸಂಯುತಂ. 6 ಕಂಲನೆ. 7 ಇದರಿಂದ ಮುಂದೆ ಇರುವ ಉದಾಹರಣಗಳು ಕೆಲವು ಪ್ರತಿಗಳಲ್ಲಿ ಇಲ್ಲ.

ಸೂ॥ ಲ[1]ರಡಾ ಏವ ಳಱೞಾಃ ಪ್ರಯತ್ನಾಶ್ರಯಾತ್ ॥ 10 ॥

ವೃ ॥ ಲರಡಾ ಇ[2]ತ್ಯೇತೇ ವರ್ಣಾಃ ಪ್ರ[3]ಯತ್ನವಿಶೇಷಾಶ್ರಯಾತ್ ಳಱೞಾ ಭವಂತಿ ।
ತೇಷಾಂ ಭಾ[4]ಷಾಯಾಂ ಪೃಥಕ್ಪೃಥಕ್ಪ್ರಯೋಗಾರ್ಹತ್ವಾದಯಮಾರಂಭಃ ॥

ತದ್ಯಥಾ—ಮೊಲೆ, ಮೊಳೆ; ಕಲೆ, ಕಳೆ; ಮೊರೆ, ಮೊಱೆ; ಮರೆ; ಮಱೆ; ಕಡಲ್, ಕೞಲ್; ಕೋಡಿ, ಕೋೞಿ—ಇತ್ಯಾದಿ. ಸಂ[5]ಸ್ಕೃತಪದೇಷು ತೇಷಾಮೈಕ್ಯಮೇವ—ಸಲಿಲಂ, ಸಳಿಳಂ; ಖಡ್ಗಂ, ಖೞ್ಗಂ.

ಟೀ ॥ ಲರಡಾಏವ—ಲಕಾರಂ ರಕಾರಂ ಡಕಾರಮೆಂಬೀಯಕ್ಕರಂಗಳೆ. ಪ್ರಯತ್ನಾಶ್ರಯಾತ್—ಪ್ರಯತ್ನಾಶ್ರಯದತ್ತಣಿಂ. ಯಥಾಕ್ರಮದಿಂ, ಳಱೞಾಃ—ಕುಳಮೆಸರ ಳಕಾರಂ ಱಕಾರಂ ೞಱಮೆಸರ ೞಕಾರಮೆಂಬೀಯಕ್ಕರಂಗಳಪ್ಪುವು.

ಅದೆಂತೆನೆ—

ಲ[6]ಕಾರಂ ಪುಟ್ಟುವ ತಾಣಮಂ ಬಿಟ್ಟಿತ್ತಾಗಿ ಉಚ್ಚರಿಸೆ ಕುಳಮೆಸರ ಳಕಾರಂ ಪುಟ್ಟುಗುಂ. ಮೊಲೆ, ಕಲೆ ಎಂಬಿವು ಮೊದಲಾದುವಕ್ಕೆ ಮೊಳೆ, ಕಳೆ ಎಂದಾಯ್ತು. ಸಂಸ್ಕೃತ ಶಬ್ದದ ಲಕಾರಕ್ಕೆ ಪುಟ್ಟಿದ ಳಕಾರಮಂ ಕ್ಷಳನೆಂಬುದು. ಸಲಿಲಂ, ಇಲಾ, ಬಾಲಾ ಎಂಬೀ ಶಬ್ದಂಗಳ ಲಕಾರಕ್ಕೆ ಪುಟ್ಟಿದ ಳಕಾರಂ ಸಳಿಳಂ, ಇಳೆ, ಬಾಳೆ ಎಂದಾಯ್ತು.

ರೇ[6]ಫೆ ಪುಟ್ಟುವ ತಾಣಮಂ ಬಿಟ್ಟಿತ್ತಾಗಿ ಉಚ್ಚರಿಸೆ ಱಕಾರಂ ಪುಟ್ಟುಗುಂ. ಮೊರೆ, ಮರೆ ಎಂಬಿವು ಮೊದಲಾದ ರೇಫೆಗೆ ಪುಟ್ಟಿದ ಱಕಾರಂ ಮೊಱೆ, ಮಱೆ ಎಂದಾಯ್ತು.
ಡ[6]ಕಾರಂ ಪುಟ್ಟುವ ತಾಣಮಂ ಬಿಟ್ಟಿತ್ತಾಗಿ ಉಚ್ಚರಿಸೆ ೞಱಮೆಸರ ೞಕಾರಂ ಪುಟ್ಟುಗುಂ. ಖಡ್ಗಂ[7], ಕೋಡುಕುಟ್ಟು, ಕಾಡುಕಿಚ್ಚು ಎಂಬಿವು ಮೊದಲಾದ ಶಬ್ದಂಗಳ್ಗೆ ಖೞ್ಗಂ, ಕೋೞ್ಕುಟ್ಟು, ಕಾೞ್ಕಿಚ್ಚು ಎಂದಾಯ್ತು.

ಕನ್ನಡದ ಲಕಾರಕ್ಕೆ ಪುಟ್ಟಿದ ಕುಳಮೆಸರ ಳಕಾರಮುಂ ಸಂಸ್ಕೃತಶಬ್ದದ ಲಕಾರಕ್ಕೆ ಪುಟ್ಟಿದ ಕ್ಷಳಮೆಸರ ಳಕಾರಮುಂ ತಮ್ಮೊಳೆರಡುಂ ಪ್ರಾಸಕ್ಕೆ ಸಲ್ವುವು—

ಕಿಳಿಱಿ ಹಯಂಗಳ್ ಗರ್ಜಿಸೆ ।
ಜಳದ ನಿಭಂಗಳ್ ಗಜಂಗಳ್ . . . . . . ॥ ಇವುಮೊದಲಾದುವು.

ಲ[8]ಕಾರಂ ದಂತ್ಯಂ, ಕುಳನದಱಿಯೊಳೇಕಸ್ಥಾನಿ ; ರೇಫೆ ಮೂರ್ಧನ್ಯಂ, ಱಕಾರಮುದಱಿಯೊಳೇಕಸ್ಥಾನಿ ; ಡಕಾರಂ ಮೂರ್ಧನ್ಯಂ, ೞಱನದಱಿಯೊಳೇಕಸ್ಥಾನಿ ; ಅದುಕಾರಣದಿನಿವು ವರ್ಣಾವೃತ್ತಿಗೆ ಸಲ್ವುವು, ಪ್ರಾಸಕ್ಕೆ ಸಲ್ಲವು. ಕ್ರಮಪ್ರಯೋಗಂ—

ಲಕಾರಳಕಾರಂಗಳ್ಗೆ—
...ತಳತಳಿಸಿ ದೆಸೆಗಳ ।
ನಳಂದರ್ಪಿಸಿರಲ್ಕೆ ಳದರ್ಪ ಮಿಳಿರ್ದರ್ಪ ತಳರ್ದತ್ತಾಗಳ್[9] ॥

1 ಲರಡೈರೇವ. 2 ಇತ್ಯೇಭಿರ್ವರ್ಣೈಃ. 3 ಪ್ರಯತ್ನಾಶ್ರಯಾತ್. 4 ವಿಭಾಷಯಾ 5 ಸಂಸ್ಕೃತೇಷು. 6 ಶಬ್ದಮಣಿದರ್ಪಣ, ಪುಟ 27. 7 ಒಂದು ಪ್ರತಿಯಲ್ಲಿ ಈ ಉದಾಹರಣವಿಲ್ಲ. 8 ಶ. ಮ. ದ. ಪುಟ 27. 9 ಕಾವ್ಯಾವಲೋಕನ, ಪದ್ಯ 23.

ರೇಫ ಱಕಾರಂಗಳ್ಗೆ —

ಸುರಗಿಱಿದೊಱಗಿದ ಬಿರುದರ ।
ಕರುಳಂ ಕೊಱೆಕೊಱೆದು ಮರುಳ್ಗಳ್ ತಿಂಬೆಡೆಯೊಳ್ ॥

ಡಕಾರ ೞೞಂಗಳ್ಗೆ —

ಕ[1]ೞಲೆ ನುಡಿದೞಲೆ ಬಗ್ಗಿಸಿ ।
ಘೞಿಲೆನೆ ನಡೆಯೆಂದು ಜಡಿದು ಸಾರಥಿಯಂ .॥

ಲಕಾರಪ್ರಾಸಕ್ಕೆ ಸಂಸ್ಕೃತದ ಲಕಾರಕ್ಕೆ ಪುಟ್ಟಿದ ಕ್ಷಳವೆಸರ ಳಕಾರಮನಿರಿಸಲ್ಬಾರದುದಕ್ಕೆ —

ಬಲಗದೊಳೊರ್ವ ನತನರ ।
ಪಾಳಕಚೂಡಾಮಣಿದ್ಯುತಿಪ್ಲುತಚರಣಂ ॥

ಲಕಾರಪ್ರಾಸಕ್ಕೆ ಕನ್ನಡಶಬ್ದಕ್ಕೆ ಪುಟ್ಟಿದ ಕುಳವೆಸರ ಳಕಾರಮನಿರಿಸಲ್ಬಾರದುದಕ್ಕೆ —

ನೆಲದೊಳ್ ಪಗೆ ಪುಗೆ ಫಣಿಯುಮೊ ।
ಲೊಳಪೊಕ್ಕಳಱಿಸಿದನೆಂಬ ನಿಯಮಂ ದೂಷ್ಯಂ ॥

ರೇಫಪ್ರಾಸಕ್ಕೆ ಱಕಾರಮನಿರಿಸಲ್ಬಾರದುದರ್ಕೆ —

ಧುರದೊಳ್ ಪಱಿಮಱಿಯಾಡುವ ।
ತೆಱದಿಂದುಱದಿಱಿದನೆಂಬ ನಿಯಮಂ ದೂಷ್ಯಂ ॥

ಈಯಕ್ಷರಂಗಳ್ ಯಮಕಕ್ಕೆಸಲ್ಲವು. ಕ್ರಮಪ್ರಯೋಗಂ —

ತಲೆಯಂ ಕೀೞ್ತೀಕರದೊಳ್ ।
ತಳೆಯದೆ ಪೆಸರಂತುಟಕ್ಕಂ. . . . ॥

ಕ[2]ರೆಯಂ ನೆರವಂ ವಂಶಂ ।
ಕಱೆಯಂ ಪೊತ್ತಪ್ಪುದೆಂದು ಸಂಗರಮುಖದೊಳ್ ॥

ಇಲ್ಲಿ ಶಬ್ದಾವೃತ್ತಿ ಕೆಟ್ಟಪುರ್ದಾಗಿಯುಂ ಕಱೆಯಂ ಪೊತ್ತಪ್ಪುದೆಂಬುದಂ ಕರೆಯಂ ಪೊತ್ತಪ್ಪುದೆಂದೊಡೆ ಅರ್ಥಘಟನೆ ಇಲ್ಲಾಗಿಯುಂ ಯಮಕಲಕ್ಷಣಮಿಲ್ಲ.

ಡಕಾರ ೞಕಾರಂಗಳ್ಗಮಂತೆ.

ಸೂ ॥ ನಾತ್ರ ಪ್ರಾಯೇಣ ವರ್ಗಾಣಾಂ ದ್ವಿತೀಯಚತುರ್ಥಾಃ ॥ **11** ॥

ವೃ ॥ ಅಸ್ಮಿನ್ ಕರ್ಣಾಟಕವಿಷಯೇ ವರ್ಗಾಣಾಂ ದ್ವಿತೀಯಚತುರ್ಥಾಕ್ಷರಾಃ ಖ ಛ ಠ ಥ ಫಾ ಘ ಝ ಢ ಧ ಭಾ ಶ್ಚ ಪ್ರಾ[3]ಯೇಣ ನ ವಿ[4]ದ್ಯಂತೇ ।

ಪ್ರಾಯೇಣೇತಿವಚನೇನ ಕ್ವಚಿತ್ಸಂಖ್ಯಾನುಕರಣಾದೌ ದೃಶ್ಯಂತೇ ॥ ತತ್ಕಥಂ ?

ಸಂಖ್ಯಾಯಾಂ ತಾವತ್ — ಇರ್ಛಾಸಿರಂ, ಎಣ್ಛಾಸಿರಂ, ನೂರ್ಛಾಸಿರಂ.

1 ಕಾವ್ಯಾವಲೋಕನ, ಪದ್ಯ 26. 2 ಶ. ಮ. ದ. ಪುಟ 28. 3 ಒಂದು ಪ್ರತಿಯಲ್ಲಿ ಈ ಶಬ್ದವಿಲ್ಲ. 4 ಭವಂತಿ.

ಅನುಕರಣೇ—ಖಮ್ಮನೆ, ಘಿಱಿಲೆನೆ, ಛಿಲ್ಲನೆ, ಪಱಿಲೆನೆ, ದುಢುಮ್ಮನೆ, ಥೊಕ್ಕನೆ, ಧೊಪ್ಪನೆ, ಭೋಂಕೆನೆ.

ಆದಿಗ್ರಹಣಾದನ್ಯತ್ರಾಪಿ— ಘಿಱಿಯಂ, ಝುಳಂ, ಠಕ್ಕು, ಥೊಕ್ಕರಂ, ಧಱಿಂ, ಭರಂ.

ಟೀ ॥ ಅತ್ರ—ಈ ಕರ್ಣಾಟಕಭಾಷೆಯಲ್ಲಿ. ವರ್ಗಾಣಾಂ—ವರ್ಗಂಗಳ. ದ್ವಿತೀಯ ಚತುರ್ಥಾಃ—ಎರಡನೆಯ ಖ ಛ ಠ ಥ ಫಂಗಳುಂ ನಾಲ್ಕನೆಯ ಘ ಝ ಢ ಧ ಭಂಗಳುಂ ಎಂಬೀ ಅಕ್ಕರಂಗಳ್. ನ—ಇಲ್ಲ. ಪ್ರಾಯೇಣ—ಸೂತ್ರದಲ್ಲಿ ಪ್ರಾಯೇಣ ಎಂಬ ಶಬ್ದಸ್ವೀಕಾರದಿಂ ಕೆಲವು ತಾವಿನಲ್ಲಿ ದ್ವಿತೀಯಚತುರ್ಥಾಕ್ಷರಂಗಳೊಳವು. ಅವು, ಸಂಖ್ಯಾನುಕರಣಾದೌ—ಸಂಖ್ಯೆಯಲ್ಲಿಯುಂ ಅನುಕರಣೆ ಮೊದಲಾದುವಱಲ್ಲಿಯುಂ. ದೃಶ್ಯಂತೇ—ಕಾಣಲ್ಪಡುವುವು.

ಸಂಖ್ಯೆಯೆಂಬುದು ಎಣಿಕೆಯಂ ಪೇೞ್ವುದು. ಅನುಕರಣವೆಂಬುದು ಮೊಱಗು ಮೊದಲಾದ ಶಬ್ದಮಂ ಪೇೞ್ವುದು.

ಉ ॥ ಸಂಖ್ಯೆಗೆ--(ವೃ. ನೋ.) ಅನುಕರಣೆಗೆ—(ವೃ. ನೋ.) ಇವು ಮೊದಲಾದುವು. ಮತ್ತಂ ಆದಿಶಬ್ದದಿಂ ಸಂಖ್ಯಾನುಕರಣಮಲ್ಲದೆಡೆಯೊಳಂ ಸ್ವಲ್ಪಮುಂಟು.

ಉ ॥ (ವೃ. ನೋ.)

ಸೂ ॥ ಶಷೌ ಚ ॥ 12 ॥

ವೃ ॥ ಶಕಾರಷಕಾರೌ ದ್ವಾವಪ್ಯಸ್ಮಿನ್ ಕ[1]ರ್ಣಾಟಕವಿಷಯೇ ನ ಸ್ತಃ ॥

ಉ ॥ ಸಸಿ, ಸಿಸು, ಸೇಸೆ.

ಟೀ॥ ಈ ಕರ್ಣಾಟಕ ಭಾಷೆಯಲ್ಲಿ, ಶಷೌ ಚ—ಶಕಾರ ಷಕಾರಂಗಳುಮಿಲ್ಲ. ಉ ॥ (ವೃ. ನೋ.)

ಸೂ ॥ ಋ[2]ಕಾರಾದಯಶ್ಚತ್ವಾರಃ ಸ್ವರಾಃ ॥ 13 ॥

ವೃ ॥ ಋ, ೠ, ಌ, ೡ ಇತ್ಯೇತೇ ಚತ್ವಾರಃ ಸ್ವರಾಶ್ಚ ಕರ್ಣಾಟಕವಿಷಯೇ ನ ಸಂತಿ ॥

ಉ ॥ ರಿಸಿ, ಬಸವಂ. ಏವಮಾದಿ.

ಟೀ ॥ ಋಕಾರಾದಯಃ—ಋ, ೠ, ಌ, ೡ ಎಂಬ. ಚತ್ವಾರಃ ಸ್ವರಾಃ—ನಾಲ್ಕು ಸ್ವರಂಗಳುಂ ಈ ಕರ್ಣಾಟಕಭಾಷೆಯೊಳಿಲ್ಲ. ಉ ॥ (ವೃ. ನೋ.)

ಸೂ ॥ ಅನುಸ್ವಾರೋ ಬಿಂದುಃ ॥ 14 ॥

ವೃ ॥ ನಿಸ್ತುಳೋದಾತ್ತಮುಕ್ತಾಫಲಾನುಕಾರೀ ಬಿಂದುಃ ಅನುಸ್ವಾರಸಂಜ್ಞೋ ಭವತಿ ।[3]
ಕೇ[4]ವಲಸ್ಯಾಸ್ಯ ಬಿಂದೋಃ ಪ್ರಯೋಗಾಭಾವಾದಕಾರಃ ಸನ್ನಿಧೀಯತೇ—ಅಂ ಇತಿ.

1 ಭಾಷಾವಿಷಯೇ. 2 ಋ ೡ ಚತ್ವಾರಃ. 3 ಇದಾದವೇಲೆ–ಅರ್ಧಚಂದ್ರೋಪಮೋ ಬಿಂದುಶ್ಚೇದೋನುಸ್ವಾರ ಇಷ್ಯತೇ—ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 4 ಕೇವಲಸಶ್ಯ ಪ್ರಯೋಗಿತ್ವಾತ್.

ಟೀ ॥ ಅನುಸ್ವಾರಃ—ಅನುಸ್ವಾರವೆಂದು. ಬಿಂದುಃ—ಬಿಂದುವೆಕ್ಕುಂ. ಬಿಂದುವೆಂದು ಸೊನ್ನೆಯ ಪೆಸರ್. ಆ[1]ದಂ ಸ್ವರಾಂಗಮುಂ ವ್ಯಂಜನಾಂಗಮುಂ ಎಂಬರ್.

ಸೂ ॥ ಸ ಉಪರ್ಯಧಸ್ತಾಚ್ಚ ವಿ[2]ಸರ್ಗಃ ॥ 15 ॥

ವೃ ॥ ಸ ಏವ ಬಿಂದುಃ ಉಪರ್ಯಧಸ್ತಾಚ್ಚ ವ್ಯವಸ್ಥಿತೋ ವಿಸರ್ಗಸಂಜ್ಞೋ ಭವತಿ— ಅಃ ಇತಿ.

ಟೀ ॥ ಸಃ—ಆ ಸೊ[3]ನ್ನೆ. ಉಪರ್ಯಧಸ್ತಾತ್ ಚ—ಮೇಗೆಯುಂ ಕೆಳಗೆಯುಂ ಮಣಿಗೊಪ್ಪಿನಂತಿರ್ದೊಡೆ. ವಿಸರ್ಗಃ—ವಿಸರ್ಗವೆಂಬ ಪೆಸರುಳ್ಳುದಕ್ಕುಂ.

ಸೂ ॥ ವಿಭಕ್ತ್ಯಂತಂ ಪದಂ ॥ 16 ॥

ವೃ ॥ ನಾಮಾಖ್ಯಾತವಿಭಕ್ತ್ಯಂತಂ ಯಚ್ಛಬ್ದರೂಪಂ ತತ್ಪದಸಂಜ್ಞಂ ಭವತಿ ॥
ಉ ॥ ಕೆಯ್ಯೊಲಂ ದಿವದಂತೆ ಸಸಿಯಿಂದೆಸೆದತ್ತು.

ಟೀ ॥ ವಿಭಕ್ತ್ಯಂತಂ—ನಾಮಾಖ್ಯಾತವಿಭಕ್ತಿಗಳಂ ಕಡೆಯಾಗಿ ಉಳ್ಳ ಶಬ್ದಂ. ಪದಂ—ಪದವೆಂಬುದು. ಉ ॥ (ವೃ. ನೋ.)

ಸೂ ॥ ಪರಸ್ಪರಸನ್ನಿಕರ್ಷಃ ಸಂಹಿತಾ ॥ 17 ॥

ವೃ ॥ ಶ್ಲಿ[4]ಷ್ಟಾನಾಂ ವರ್ಣಾನಾಂ ಪರಸ್ಪರಮನ್ಯೋನ್ಯಂ ಸನ್ನಿಕರ್ಷಃ ಸಂಶ್ಲೇಷಃ ಸಂ[5]ಹಿತಾ ಸಂಧಿರಿತ್ಯುಚ್ಯತೇ ॥

ಟೀ ॥ ಪರಸ್ಪರ ಸನ್ನಿಕರ್ಷಃ—ವರ್ಣಂಗಳಂ ಬಂದಱೊಳೊಂದಂ ಕೂ[6]ಡಿ ನುಡಿವುದು. ಸಂಹಿತಾ—ಸಂಹಿತೆಯೆಂಬುದು.

ಇತಿ ಕರ್ಣಾಟಕವ್ಯಾ[7]ಕರಣವಿವರಣೇ ಸಂಜ್ಞಾವಿಧಾನಂ ನಾಮ
ಪ್ರಥಮಃ ಪರಿಚ್ಛೇದಃ.

---

1 ಅದು ಸ್ವರಾಂಗವೆಂದುಂ ವ್ಯಂಜನಾಂಗವೆಂದುಂ ಸಲ್ವುದು. 2 ವಿಸರ್ಜನೀಯಃ. 3 ಸೊನ್ನೆಯುಂ. 4 ವಿಶಿಷ್ಟಾನಾಂ, ವಿಶೇಷಣಾನಾಂ. 5 ಸಂಹಿತೇತ್ಯುಚ್ಯತೇ, ಸಂಧಿರುಚ್ಯತೇ. 6 ಕೂಡೆ. 7 ವ್ಯಾಕರಣೇ, ಭಾಷಾಭೂಷಣೇ.

2. ಸಂಧಿವಿಧಾನಂ.

ಸೂ ‖ ಸಂಧೌ ‖ 18 ‖

ವೃ ‖ ಸಂಧಾವಿತ್ಯಧಿಕಾರೋಽಯಂ । ಇತ ಉತ್ತರಂ ಯ[1]ದ್ವಕ್ಷ್ಯತೇ ತತ್ಪುನಃ ಸಂಧೌ ವಿ[2]ವಕ್ಷಿತಂ ಭವತೀತ್ಯವಗಂತವ್ಯಂ ‖

ಟೀ ‖ ಸಂಧೌ=ಮುಂದೆ ಪೇೞ್ವುದೆಲ್ಲಂ ಸಂಧಿಲಕ್ಷಣದಲ್ಲಿ ಎಂದಱಿವುದು.

ಸೂ ‖ ಸ್ವರೇ ಸ್ವರಸ್ಯ ಲೋಪಃ ‖ 19 ‖

ವೃ ‖ ಸ್ವರೇ ಪರತ್ರಾವಸ್ಥಿತೇ ಪೂರ್ವಸ್ವರಸ್ಯ ಲೋಪೋ ಭವತಿ ‖

ಉ ‖ ಎನ್ನರಸಂ, ತನ್ನಾೞಿಂ, ಮುನ್ನಿಱುವಂ, ಕೂರ್ತಿೞವಂ, ಬಿಟ್ಟುೞಿವಂ, ಕೆಟ್ಟೊಳ್ವಂ, ತಳ್ತಿಸೆವಂ, ಪದೆದೈದುಗೊಳ್ವಂ, ಬಿಟ್ಟೊಳ್ಪಂ.

ಟೀ ‖ ಈ ಕರ್ಣಾಟಕಸಂಧಿಯೊಳ್ ಸಾಧಾರಣವಾಗಿ, ಸ್ವರೇ=ಸ್ವರಂ ಪರವಾಗುತ್ತಿರೆ. ಸ್ವರಸ್ಯ=ಪೂರ್ವಸ್ವರಕ್ಕೆ. ಲೋಪಃ=ಲೋಪಮಕ್ಕುಂ. ಉ ‖ (ವೃ. ನೋ.)

ಸೂ ‖ ಪ್ರಕೃತೇರುದೇತೋಃ ‖ 20 ‖

ವೃ ‖ ಸಿದ್ಧೇ ಸ[3]ತ್ಯಾರಭ್ಯಮಾಣೋ ವಿಧಿರ್ನಿಯಮಾಯೇತಿ ನಿಯಮಾರ್ಥೋಽಯಂ ಯೋಗಃ ।[4] ಪ್ರ[5]ಕೃತೇಃ ಸಂಬಂಧಿನಃ ಸ್ವರಸ್ಯ ಲೋಪೋ ಯದಿ ಸ್ಯಾತ್ ತ[6]ದುಕಾರೈಕಾರಯೋರೇವ। ನಾನ್ಯಸ್ಯ । ಸ್ವರಾಧಿಕಾರಾದತ್ರ ಸ್ವರಲೋಪೋ ನಿಯಮ್ಯತೇ । ನ ಪುನಃ ಪ್ರಕೃತಿಃ ‖

ಉ ‖ ಮಾತೆಲ್ಲಂ, ಲೇಸೆಲ್ಲಂ, ನಾಲಗುಳ್ಳನೆ ಬಾೞ್ಗಂ, ಸೇಸಿಕ್ಕಿದಂ.

ಟೀ ‖ ಸ್ವರೇ ಸ್ವರಸ್ಯ ಲೋಪಃ — ಎಂಬ ಸೂತ್ರದಿಂ ಸಿದ್ಧಮಾಗುತ್ತಿರೆ, ಈ ಸೂತ್ರಂ ನಿಯಮಾರ್ಥವಾಗಿ ಪೇೞ್ದಪುದು.

ಪ್ರಕೃತೇಃ=ಪ್ರಕೃತಿಯೆಂದು ಪೆಸರುಳ್ಳ ಲಿಂಗದ. ಉದೇತೋಃ=ಉಕಾರ ಎಕಾರಂಗಳ್ಗೆ ಮುಂದೆ ಸ್ವರಂ ಪರಮಾಗುತ್ತಿರೆ ಮೊದಲ ಸ್ವರಂಗಳ್ಗೆ ಲೋಪಮಕ್ಕುಂ. ಉ‖ (ವೃ.ನೋ.)

ಸೂ ‖ ನ ನಾಮಭಾಗಪ್ರಧ್ವಂಸೇ ‖ 21 ‖

ವೃ ‖ ಯಸ್ಮಿನ್ ನಾ[7]ಮಭಾಗಪ್ರಧ್ವಂಸಃ ಸಂಭವತಿ ತಸ್ಮಿನ್ ಉಕಾರಸ್ಯೈಕಾರಸ್ಯ ಚ ಲೋಪೋ ನ ಭವತಿ ‖

---

1 ಯದ್ವಿವಕ್ಷ್ಯತೇ. 2 ಒಂದು ಪ್ರತಿಯಲ್ಲಿ ಈ ಪದವಿಲ್ಲ. 3 ವಿಧಿರಾರಭ್ಯಮಾಣೋ ನಿಯಮಾರ್ಥೋಽಯಂ ಯೋಗಃ.
4 ಒಂದು ಪ್ರತಿಯಲ್ಲಿ ಈ ವಾಕ್ಯಕ್ಕೆ ಪ್ರತಿಯಾಗಿ—ಸ್ವರೇ ಸ್ವರಸ್ಯ ಲೋಪಃ ಇತಿ ವಿಧಿರ್ನ ಪ್ರಕೃತೇರುದಿತಃ—ಎಂದಿದೆ.
5 ಪ್ರಕೃತಿ ಸಂಬಂಧಿನಃ. 6 ಉಕಾರೈಕಾರಯೋರೇವ. 7 ನಾಮಭಾಗಯೋಃ ಪ್ರಧ್ವಂಸಃ.

ಉ॥ ಪಟುವೀತಂ, ಗಾಳುವಿವಳ್, ಮಡುವಿದು, ಆನೆಯೊಡ್ತು, ಕುದುರೆಯೆಕ್ಕತುಳಂ, ಪಡೆಯಿದು.

ಟೀ॥ ಆವುದಾನೊಂದು ಸಂಧಿಯಲ್ಲಿ, ನಾಮಭಾಗದ್ವಯ್ಯಂಸೇ =ಪೆಸರಿಟ್ಟಿಯುತಿರ್ದುದು ಅಲ್ಲಿ. ಪ್ರಕೃತಿಯ ಉಕಾರ ಎಕಾರಂಗಳ್ಗೆ ಲೋಪಂ, ನ =ಇಲ್ಲ.

ಲೋಪಃ ಕ್ವ[1] ?

ಸೂ॥ ಭರದಿಂ ವರ್ಣವಿನಾಶಂ।
ತರಮಾಗಿಯುವಿಾಕ್ಷಿಸಲ್ಕೆ ಕೇಳಲ್ಕಿರದು॥
ಚ್ಚರಿಸಲ್ಕೆ ಬಾರದಿರ್ದೊಡೆ।
ನಿರತಂ ತಾಂ ಲೋಪವೆಂಬ ಪೆಸರಂ ಪಡೆಗುಂ॥

ಪಟು ಏಕವಾಕ್ಯಂ ಎಂಬ ಸಂಧಿಗೆ ಪಟೇಕವಾಕ್ಯನೆಂದಾಗದು ; ಮಡು ಇದು ಎಂಬುದಕ್ಕೆ ಮಡಿದು ಎಂದಾಗದು ; ಮಾಲೆ ಇಕ್ಕಿದಳ್ ಎಂಬುದಕ್ಕೆ ಮಾಲಿಕ್ಕಿದಳ್ ಎಂದಾಗದು.

ಸೂ॥ ಆ[2]ದಿವರ್ಣೈಕಾರೇಭ್ಯೋ ಯಃ॥ 22॥

ವೃ॥ ಆಕಾರಾಂತಾದಿವರ್ಣಾಂತಾದೇಕಾರಾಂತಾಚ್ಚ ಶಬ್ದಾತ್ ಸ್ವ[3]ರೇ ಪರೇ ಯಕಾರೋ ವ್ಯವಧಾಯಕೋ ಭವತಿ॥

ಉ॥ ಆಯೆಡೆಯೊಳ್ ಸಂಗತಿಯಿಂ ಶ್ರೀಯೊಡೆಯರ್ ಸಲೆಯಿರ್ದರ್.

ಟೀ॥ ಆದಿವರ್ಣೈಕಾರೇಭ್ಯಃ =ಆಕಾರ ಇವರ್ಣ ಎಕಾರಂಗಳತ್ತಣಿಂ ಪರಮಾಗಿ. ಯಃ =ಯಕಾರಮಕ್ಕುಂ. ಉ॥ (ವೃ. ನೋ.)

ಸೂ॥ ಅಕಾರಾಂತಾಚ್ಛಬ್ದಾವಧಾರಣಾರ್ಥೇ ಏ[4]॥ 23॥

ವೃ॥ ಅಕಾರಾಂತಾಚ್ಛಬ್ದರೂಪಾದವಧಾರಣಾರ್ಥೇ ಏಕಾರೇ ಪರೇ ಯಕಾರೋ ವ್ಯವಧಾಯಕೋ ಭವತಿ॥

ಉ॥ ಆತನಯೆ, ಅವಳಯೆ.

ಟೀ॥ ಅಕಾರಾಂತಾತ್ =ಅಕಾರಾಂತಮಪ್ಪ ಶಬ್ದದತ್ತಣಿಂ ಪರಮಾಗಿ. ಅವಧಾರಣಾರ್ಥೇ ಏ ಚ =ಅವಧಾರಣಾರ್ಥಕ್ಕಾದೇಶಮಾದ ಏಕಾರಂ ಬರುತ್ತಿರೆಯುಂ ಯಕಾರಮಕ್ಕುಂ. ಉ॥ (ವೃ. ನೋ.)

ಸೂ॥ ವ್ರೋಃ ವೃವರ್ಣಾಭ್ಯಾಂ॥ 24॥

ವೃ॥ ಉವರ್ಣಾಂತಾತ್ ಋವರ್ಣಾಂತಾದಪಿ ಸ್ವರೇ ಪರೇ ವಕಾರೋ ವ್ಯವಧಾಯಕೋ ಭವತಿ॥

---

1 ಕಿಂ. 2 ಆ ಈ ವರ್ಣೈಕಾರೇಭ್ಯೋ ಯಃ. 3 ಪರಸ್ವರಸ್ಯ. 4 ಒಂದು ಪ್ರತಿಯಲ್ಲಿ ಈ ಅಕ್ಷರವಿಲ್ಲ.

ಉ ॥ ವಿಧುವಿಲ್ಲದಿರುಳ್ ಪೂವಿಲ್ಲದ ಕೊಳನಂತೆಸೆಯದು; ಪಿತೃವಿವಂ, ಮಾತೃವಿವಳ್, ಋವಿತ್ತಂ.

ಟೀ ॥ ವೃವರ್ಣಾಭ್ಯಾಂ—ಉವರ್ಣ ಋವರ್ಣಂಗಳತ್ತಣಿಂ ಪರವಾಗಿ, ವಃ—ವಕಾರಮಕ್ಕುಂ.

ಉ ॥ (ವೃ. ನೋ.)

ಸೂ ॥ ಏದೋದಂತಾ ನಿಪಾತಾಃ ಸ್ವರೇ ಪರೇ ಪ್ರಕೃತ್ಯಾ ॥ 25 ॥

ವೃ ॥ ಏಕಾರಾಂತಾ ಓಕಾರಾಂತಾಶ್ಚ ಯೇ ನಿಪಾತಾಸ್ತೇ ಸ್ವರೇ ಪ[1]ರೇ ಪ್ರ[2]ಕೃತ್ಯೈವ ತಿಷ್ಠಂತಿ—ನ ಚ ಸಂಧಿವಿಕಾರಾನಾಪ್ನುವಂತೀತ್ಯರ್ಥಃ ॥

ಉ ॥ ಎಲೆ ಇದಾವುದೊ, ಅಂತುಟೆ ಅಲ್ತೆ, ಅರಮೆ ಅರಲ್ದು, ಅರೆ ಎಡೆಯೊಳ್; ಅಯ್ಯೋ ಅಕ್ಕಟ, ಓಹೋ ಇರಲಿಂ.

ಟೀ ॥ ಏದೋದಂತಾಃ—ಏಕಾರಾಂತಮುಂ ಓಕಾರಾಂತಮುಮಪ್ಪ. ನಿಪಾತಾಃ—ನಿಪಾತಶಬ್ದಂಗಳ್. ಸ್ವರೇ ಪರೇ—ಸ್ವರಂಪರಮಾಗೆ. ಪ್ರಕೃತ್ಯಾ—ಸಂಧಿಯಾಗವು.

ಉ ॥ (ವೃ. ನೋ.) ಇಂತಿರ್ದಂತಿರ್ಕುಂ.

ಸೂ ॥ ವಿಶಂಕಾವಧಾರಣಯೋಃ[3] ॥ 26 ॥

ವೃ ॥ ವಿಶಂಕಾಯಾಮವಧಾರಣೇ[4]ಚ ವರ್ತಮಾನಾಶ್ಶಬ್ದಾಃ ಸ್ವರೇ ಪರೇ ಪ್ರಕೃತ್ಯಾ ಭವಂತಿ ॥

ಉ ॥ ಆನೆಯೋ ಅದ್ರಿಯೋ, ರಜ್ಜುವೋ ಅಹಿಯೋ, ಈ[5]ವನೋ ಈಯನೋ, ಅ[6]ಕ್ಕುಮೊ ಆಗದೊ ; ಪೊರೆವನೆ ಆಳ್ದಂ, ಕೂರ್ಪನೆ ಆಪ್ತಂ.

ಟೀ ॥ ವಿಶಂಕಾವಧಾರಣಯೋಃ—ವಿಶಂಕೆಯುಲ್ಲಿಯುಂ ಅವಧಾರಣೆಯುಲ್ಲಿಯುಂ ಸ್ವರಂ ಪರಮಾಗೆ ಸಂಧಿಯಿಲ್ಲ. ಉ ॥ (ವೃ. ನೋ.)

ಸೂ ॥ ಪ್ಲುತಾಶ್ಚ ॥ 27 ॥

ವೃ ॥ ತ್ರಿಮಾತ್ರಾ ಯೇ ವರ್ಣಾಸ್ತೇ ಚ ಸ್ವರೇ ಪರೇ ಪ್ರ[7]ಕೃತ್ಯೈವ ತಿಷ್ಠಂತಿ ॥

ಉ ॥ ಎಲೆ ಅಣ್ಣಾ೩ ಇತ್ತ ಬಾ. ಕು ಕ್ಕೂ ಕೂ೩ ಎಂದು ಕೋಟಿ ಕೂ[8]ಗಿತ್ತಾಗಳ್.

ಟೀ ॥ ಪ್ಲುತಾಃಶ್ಚ—ಪ್ಲುತಂಗಳ್ಗಿಯುಂ ಸ್ವರಂ ಪರಮಾಗೆ ಸಂಧಿಯಿಲ್ಲ. ಉ ॥ (ವೃ. ನೋ.)

ಸೂ ॥ ವರ್ಗಪ್ರಥಮಾನಾಂ ತೃತೀಯಾಃ ಸಮಾಸೋತ್ತರಪದಾದೌ ॥ 28 ॥

ವೃ ॥ ವರ್ಗಪ್ರಥಮಾಕ್ಷರಾಣಾಂ ಸಮಾಸೋತ್ತರಪದಾದೌ ವರ್ತಮಾನಾನಾಂ ತೆ[9]ತ್ತೃತೀಯವರ್ಣಾ ಭವಂತಿ ॥

---

1 ಪರಶಃ. 2 ಪ್ರಕೃತ್ಯಾ ಭವಂತಿ. 3 ಇದರ ಮುಂದೆ ವರ್ತಮಾನಃ ಎಂದು ಒಂದು ಪ್ರತಿಯಲ್ಲಿಮಾತ್ರ ಇದೆ. 4 ಗೇಥೇ. 5 ಈವನೆ ಈಯುಂ. 6 ಅಕ್ಕುಮೆ ಆಗದು. 7 ಪ್ರಕೃತ್ಯೈವಾವತಿಷ್ಠಂತೇ. 8 ಕೂಗಿದುದಾಗಳ್. 9 ತೇಷಾಂತೃತೀಯಾ ವರ್ಣಾ ಭವಂತಿ.

ಉ ॥ ಪೞಗನ್ನಡಂ, ಅೞಗಬ್ಬಂ; ಕೆಂದಳಿರ್, ಬಾಂದೊಱೆ; ನುಣ್ಬರಲ್, ತಣ್ಬುೞಲ್.

ಟೀ ॥ ಸಮಾಸೋತ್ತರಪದಾದೌ=ಸಮಾಸದ ಮುಂದಣ ಪದದ ಆದಿಯೊಳಿರ್ದ್ದಂ ತಪ್ಪ. ವರ್ಗಪ್ರಥಮಾನಾಂ=ವರ್ಗದ ಮೊದಲಕ್ಕರಂಗಳ್ಗೆ. ತೃತೀಯಾಃ=ತಂತಮ್ಮ ತೃತೀಯಾಕ್ಷರಂಗಳಪ್ಪುವು. ಉ ॥ (ವೃ. ನೋ.)

ಸೂ ॥ ನಾ[1]ದಿಷ್ಟರೇಫಾತ್ ॥ 29 ॥

ವೃ ॥ ಆದೇಶವಿ[2]ಹಿತಃ ಪರಿಣಾಮಿಾ ಯೋ ರೇಫಃ ತಸ್ಮಾತ್ಪರಭೂತಾನಾಂ ವರ್ಗಪ್ರಥಮಾನಾಂ ವ[3]ರ್ಗತೃತೀಯತ್ವಂ ನ ಭವತಿ ॥

ಉ ॥ ಮಾರ್ಕೊರಲ್, ಮಾರ್ತಲೆ, ಮೊರ್ಪಡೆ; ಬರ್ಕೈ, ಬರ್ತಲೆ, ಬರ್ಪಿಡಿ.

ಟೀ ॥ ಆ ವರ್ಗಪ್ರಥಮಾಕ್ಷರಂಗಳ್, ಆದಿಷ್ಟರೇಫಾತ್=ಆದೇಶದಿಂ ಬಂದ ರೇಫೆಯುತ್ತಣಿಂ ಪರಮಾದೊಡೆ. ಅವರ್ಕೆ, ನ=ತಂತಮ್ಮ ತೃತೀಯಾಕ್ಷರಂಗಳ್ ಇಲ್ಲ.

ಉ ॥ ಮಾರ್ಕೊರಲ್ ಎಂಬುದರ್ಕೆ ಮಾರ್ಗೊರಲೆಂದಾಗದು, ಮಾರ್ಕೊರಲ್. (ವೃ. ನೋ.) ಇವು ಮೊದಲಾದುವು.

ಸೂ ॥ ಚಟವರ್ಗಯೋಶ್ಚ ॥ 30 ॥

ವೃ ॥ ಚವರ್ಗ ಟವರ್ಗಯೋಃ ಪ್ರಥಮಾಕ್ಷರಯೋಶ್ಚ ತೃತೀಯೌ ನ ಭವತಃ ॥

ಉ ॥ ಅೞಿಚೆನ್ನಂ, ಕಡುಚಾಗಿ, ಉರಚಲ್ಲಿ; ಮಾಱುಟೆಪ್ಪರಂ, ಪೊಸಟಂಕಂ, ಮಾಣಿಕಟಿಕ್ಕೆ.

ಟೀ ॥ ಚಟವರ್ಗಯೋಶ್ಚ=ಚಟವರ್ಗಂಗಳ ಪ್ರಥಮಾಕ್ಷರಂಗಳ್ಗೆಯುಂ ಸಮಾಸದಲ್ಲಿ ತೃತೀಯಾಕ್ಷರಂಗಳಾಗವು.

ಉ ॥ ಅೞಿಚೆನ್ನಂ, ಅೞಿಜೆನ್ನನೆಂದಾಗದು. (ವೃ. ನೋ.) ಇವರ್ಕ್ಕೆ ಜತ್ವಡತ್ವಂಗಳಾಗವು.

ಸೂ ॥ ಸ್ವರಯರಲೇಭ್ಯೋ ಬಹುಳಂ ವಃ ಪವರ್ಗಸ್ಯ ॥ 31 ॥

ವೃ ॥ ಸ್ವರಾತ್ ಯಕಾರಾತ್ ರೇಫಾತ್ ಲಕಾರಾಚ್ಚ ಪರಸ್ಯ ಪವರ್ಗಸ್ಯ ಬಹುಳಂ ವಕಾರಾದೇಶೋ ಭವತಿ ॥

ಉ ॥ ಪೊಸವೆಸರ್, ಎಳವಿದಿರ್, ಮರವಣೆ; ಕೆಯ್ವೞಿ, ಮೆಯ್ವೆಸಂ, ತಾಯ್ವನೆ; ಬಲ್ವಡೆ, ಕಲ್ವಾೞಿ, ಪುಲ್ವನೆ; ನೀರ್ವಾವು, ನೀರ್ವೆಳಸು, ನೀರ್ವಾನಸಂ.

ಬಹುಳಗ್ರಹಣಾತ್ ಕ್ವಚಿನ್ನ ಭವತಿ ॥

1 ನಾದೇಶಜಾತ, 2 ರಚಿತಃ, 3 ತೃತೀಯಾ ನ ಭವಂತಿ,

ಉ ‖ ನಿ[1]ಡುರ್ಪೆ, ಉ[2]ಡುವೊಗಂ; ಕೆಯ್ಮಾಡಿದಂ, ಕೆಯ್ಮುಱಿಯಂ; ಪೆರ್ಬಾಗಿಲ್, ಕಾಮ್ಮುರ್ಗಿಲ್; ಬಲ್ಮುಗುಳ್, ಪುಲ್ಮುರುಳ್.

ಕ್ವ[3]ಚಿದ್ವಾಕ್ಯೇಽಪಿ ಭವತಿ ‖

ಉ ‖ ಊರ್ಗೆ ವೋದಂ.

ಟೀ ‖ ಸ್ವರಯುರಲೇಭ್ಯಃ—ಸ್ವರ ಯಕಾರ ರಕಾರ ಲಕಾರಂಗಳತ್ತಣಿಂ ಪರವಾದ. ಪವರ್ಗಸ್ಯ—ಪವರ್ಗಕ್ಕೆ. ಬಹುಳಂ—ವಿಕಲ್ಪದಿಂ. ವಃ—ವಕಾರವುಕ್ಕುಂ.

ಉ ‖ (ವೃ. ನೋ.) ಬಹುಳ ಗ್ರಹಣಾತ್—ಬಹುಳಶಬ್ದ ಸ್ವೀಕಾರದಿಂ. ಕ್ವಚಿತ್ ನ ಭವತಿ—ಕೆಲವೆಡೆಯೊಳಾಗದು. ಉ ‖ (ವೃ. ನೋ.) ಎಂಬಿವಱೊಳ್ ವತ್ವವಾಗದು.

ಸೂ ‖ ವ್ಯಂಜನಾದಲಯಾತ್ಸಸ್ಯ ಚಃ ಕ್ವಚಿಜ್ಜತ್ವಂ[4] ‖ 32 ‖

ವೃ ‖ ಲಕಾರ ಯಕಾರ ವರ್ಜಿತಾತ್ ವ್ಯಂಜನಾತ್ ಪ[5]ರತೋಽವಸಿ ತಸ್ಯ ಸಕಾರಸ್ಯ ಚಕಾರಾದೇಶೋ ಭವತಿ ‖

ಉ ‖ ನುಣ್ಚರಂ, ಇಂಚರಂ, ಬಿಚ್ಚವಡಿ.

ಬಹುಳಮಿ[6]ತ್ಯನುವರ್ತತೇ । ತತಃ ಕ್ವಚಿನ್ನ ಭವತಿ ।

ಉ ‖ ಕಣ್ಸೋಲಂ, ಕೀಟ್ಸರಿ.

ಕ್ವಚಿತ್ ಜಕಾರೋಽಪಿ ಭವತಿ ‖

ಉ ‖ ಪೊಂಜುರಿಗೆ, ಮುಂಜಾರ್.

ಅಲಯಾದಿತಿ ಕಿಂ ? ಮೆಲ್ಸರಂ, ಬಲ್ಸರಿ; ಮೆಯ್ಸೋಂಕು, ಬಾಯ್ಸವಿ, ಕಯ್ಸೊರೆ.

ಟೀ ‖ ಅಲಯಾತ್—ಲಕಾರ ಯಕಾರಂಗಳಲ್ಲದಂತಪ್ಪ. ವ್ಯಂಜನಾತ್—ವ್ಯಂಜನಂಗಳತ್ತಣಿಂ ಪರವಾದ. ಸಸ್ಯ—ಸಕಾರಕ್ಕೆ. ಚಃ—ಚಕಾರಾದೇಶವುಕ್ಕುಂ. ಉ ‖ (ವೃ. ನೋ.)

ಬಹುಳಶಬ್ದಸ್ವೀಕಾರದಿಂ ಕೆಲವೆಡೆಯೊಳಾಗದು. ಕಣ್ಸೋಲಂ, ಕೀಟ್ಸರಿ ಎಂಬೀ ಶಬ್ದಂಗಳ್ಗೆ ಚಕಾರವಾಗದು.

ಕ್ವಚಿತ್—ಕೆಲವೆಡೆಯೊಳ್. ಆ ಸಕಾರಕ್ಕೆ, ಜತ್ವಂ—ಜಕಾರಮುಮುಕ್ಕುಂ. ಉ ‖ (ವೃ. ನೋ.)

ಅಲಯಾತ್ ಎಂಬ ನಿಷೇಧಶಬ್ದದಿಂ ಲಕಾರ ಯಕಾರಂಗಳಿಂ ಪರವಾದ ಸಕಾರಕ್ಕೆ ಚತ್ವವಾಗದು. ಉ ‖ (ವೃ. ನೋ.)

---

1 ನಡುರ್ಪೆ. 2 ಉಡುವೊಲಂ. 3 ಈ ವಾಕ್ಯವು ಒಂದು ಪ್ರತಿಯಲ್ಲಿ ಮಾತ್ರ ಇದೆ. 4 ಒಂದು ಪ್ರತಿಯಲ್ಲಿ ಕ್ವಚಿಜ್ಜತ್ವಂ ಎಂಬುದು ಬೇರೆ ಸೂತ್ರವಾಗಿ ಇದೆ. 5 ಪರಸಕಾರಸ್ಯ, ಪರತಸ್ಸಕಾರಸ್ಯ. 6 ಮಿತಿ ವರ್ತತೇ.

ಸೂ ‖ ಸಂಖ್ಯಾಯಾಂ ಛ[1]ತ್ವಂ ‖ 33 ‖

ವೃ ‖ ಸಂ[2]ಖ್ಯಾವಿಷಯೇ ವರ್ತಮಾನಸ್ಯ ಲಕಾರಯಕಾರರಹಿತವ್ಯಂಜನಾ[3]ತ್ಪರಸ್ಯ ಸಕಾರಸ್ಯ ಛಕಾರಾದೇಶೋ ಭವತಿ ‖

ಉ ‖ ಇ[4]ರ್ಛಾಸಿರಂ, ಎಣ್ಛಾಸಿರಂ.

ಅಲಯಾದಿತಿ ಕಿಂ ? ನಾಲ್ಸಾಸಿರಂ, ಅಯ್ಸಾಸಿರಂ.

ಟೀ ‖ ಅಲಯುಮುಪ್ಪ ವ್ಯಂಜನಂಗಳತ್ತಣಿಂ ಪರಮಾದ ಸಕಾರಕ್ಕೆ, ಸಂಖ್ಯಾಯಾಂ—ಲೆಕ್ಕದೆಣಿಕೆಯುಂ ನುಡಿವಲ್ಲಿ. ಛತ್ವಂ—ಛಕಾರಮಕ್ಕುಂ. ಉ ‖ (ವೃ. ನೋ.)

ಲಕಾರ ಯಕಾರಂಗಳ ಮುಂದಣ ಸಕಾರಕ್ಕೆ ಛಕಾರಮಾಗದು. ನಾಲ್ಸಾಸಿರಂ, ಅಯ್ಸಾಸಿರಂ, ಎಂದಪ್ಪುದಲ್ಲದೆ ನಾಲ್ಛಾಸಿರಂ, ಅಯ್ಛಾಸಿರಂ, ಎಂದಾಗದು.

ಸೂ ‖ ಣಳಲಯಳಾ ದ್ವಿಃ ಸ್ವರೇ ಹ್ರಸ್ವಪೂರ್ವಾಃ ‖ 34 ‖

ವೃ ‖ ಹ್ರ[5]ಸ್ವಾಕ್ಷರಪೂರ್ವಕಾಃ ನಣಲಯಳಕಾರಾಃ ಸ್ವರೇ ಪರೇ ದ್ವಿರ್ಭಾವಮಾಪದ್ಯಂತೇ ‖

ಉ ‖ ಪೊ[6]ನ್ನುಳ್ಳವನೆ ಕುಲೀನಂ, ಮಣ್ಣೊಲ್ಲಂ, ಪುಲ್ಲಿಲ್ಲಂ, ಕೆಯ್ಯಾದುದು, ಮುಳ್ಳುಳ್ಳುವೆ ಕೇದಗೆಗಳ್.

ಹ್ರಸ್ವಪೂರ್ವಾ ಇತಿ ಕಿಂ ? ತಾನೆಂದಂ, ಜಾಣಿಂದಂ, ಮೇಲಾಳ್ಗಳ್, ಬಾಯಾಱಿಲ್, ಕೇಳೀತಂ.

ಟೀ ‖ ಹ್ರಸ್ವಪೂರ್ವಾಃ—ಹ್ರಸ್ವಾಕ್ಷರಂಗಳಂ ಮೊದಲೊಳುಳ್ಳ. ನಣಲಯಳಾಃ—ನಕಾರ ಣಕಾರ ಲಕಾರ ಯಕಾರ ಳಕಾರಂಗಳ್. ಸ್ವರೇ—ಸ್ವರಂ ಪರಮಾಗುತ್ತಿರೆ. ದ್ವಿಃ—ದ್ವಿತ್ವಂಗಳಪ್ಪುವು. ಉ ‖ (ವೃ. ನೋ.)

ಹ್ರಸ್ವಪೂರ್ವದೊಳಲ್ಲದೆ ದೀರ್ಘಪೂರ್ವದೊಳಾದೊಡೆ ನಣಲಯಳಂಗಳ್ಗೆ ದ್ವಿತ್ವಮಾಗದು. ತಾನ್ ಎಂದಂ ಎಂಬಲ್ಲಿ ತಾನ್ನೆಂದಂ ಎಂದಾಗದು, ತಾನೆಂದಂ ಎಂದೇ ಅಪ್ಪುದು. (ವೃ. ನೋ.) ಇವು ಮೊದಲಾದುವು.

ಸೂ ‖ ನಾನೇಕಾಕ್ಷರಪದೇ ‖ 35 ‖

ವೃ ‖ ದ್ವಿ[7]ತ್ರ್ಯಾದಿಸ್ವರಸಂಪನ್ನೇ ಪದೇ ವ್ಯವಸ್ಥಿತಾಃ ನಣಲಯಳಕಾರಾಃ ಸ್ವರೇ ಪರೇ ದ್ವಿರ್ಭಾವಂ ನ ಪ್ರಾಪ್ನುವಂತಿ ‖

ಉ ‖ ಕಡನಿಲ್ಲಂ, ಸರಣಾರುಂ, ಪವಣುಂಟು, ಕವಲಿಲ್ಲಂ, ತೊಡಳಿಲ್ಲದ ನುಡಿ.

---

1 ಛಃ. 2 ಸಂಖ್ಯಾಯಾಂ. 3 ನಾದುತ್ತರಸ್ಯ. 4 ಮೂವತ್ತಿಛ್ಛಾಸಿರಂ, ಇರ್ಪತ್ತಾಛಾಸಿರಂ. 5 ಹ್ರಸ್ವ ಪೂರ್ವಾಃ. 6 ಪೊನ್ನಳ್ಳಿಯು. 7 ಅನೇಕಸ್ವರ.

ಟೀ ॥ ಹ್ರಸ್ವಾಕ್ಷರಂ ಪೂರ್ವಮಾಗಿಯುಂ, ಅನೇಕಾಕ್ಷರಪದೇ—ಅನೇಕಾಕ್ಷರಮಪ್ಪ ಪದಂ ಮೊದಲೊಳಿರ್ದ್ದು ಸ್ವರಂ ಮುಂದಾಗೆ. ನ—ಣಲಯಳಂಗಳ್ಗೆ ದ್ವಿತ್ವಮಾಗದು. ಉ ॥ (ವೃ. ನೋ.)

ಸೂ ॥ ಅ[1]ವ್ಯಯೇಪಿ ॥ 36 ॥

ವೃ ॥ ಅವ್ಯಯಶಬ್ದೇಷು ವರ್ತಮಾನಾಃ ಣಲಯಳಾಃ ಸ್ವರೇ ಪರೇ ದ್ವಿ[2]ರ್ಭಾವಂ ನ ಪ್ರಾಪ್ನುವಂತಿ ॥

ಉ॥ ಇದ.ದಲಪೂರ್ವಂ, ಸ್ಮರನಪೊಲೀತಂ.

ಟೀ ॥ ಅವ್ಯಯೇಪಿ—ಅವ್ಯಯಪದಂ ಪೂರ್ವಮಾಗಿ ಸ್ವರಂಪರಮಾಗುತ್ತಿರೆ ಣಲಯಳಂಗಳ್ಗೆ ದ್ವಿತ್ವಮಾಗದು. ಉ ॥ (ವೃ. ನೋ.)

ಇತಿ ಕರ್ಣಾಟಕವ್ಯಾಕರಣವಿವರಣೇ ಸಂಧಿವಿಧಾನಂ ನಾಮ
ದ್ವಿತೀಯಃ ಪರಿಚ್ಛೇದಃ.

---

1 ಅವ್ಯಯೇಪಿಚ, 2 ದ್ವಿರ್ನ ಭವಂತಿ.

3. ವಿಭಕ್ತಿವಿಧಾನಂ.

———:0:———

ಸೂ ॥ ಅರ್ಥವದಕ್ರಿಯಾವಾಚಿ ಕೃದಂತಂ ಚ ಲಿಂಗಂ ॥ 37 ॥

ವೃ ॥ ಕ್ರಿಯಾವಾ[1]ಚಿನೋಽನ್ಯದರ್ಥವಚ್ಛಬ್ದರೂಪಂ ಕೃತ್ಪ್ರತ್ಯಯಾಂತಂ ಚ ಲಿಂಗಸಂಜ್ಞಂ ಭವತಿ ॥

ಟೀ ॥ ಅಕ್ರಿಯಾವಾಚಿ = ಕ್ರಿಯಾವಾಚಕಮಲ್ಲದೆ ವರ್ತಿಸುತ್ತಿರ್ಪ. ಅರ್ಥವತ್ = ಅರ್ಥಮುಳ್ಳ ಶಬ್ದಮಂ. ಕೃದಂತಂ ಚ = ಕೃತ್ಪ್ರತ್ಯಯಾಂತಮಪ್ಪ ಶಬ್ದಮುಮಂ. ಲಿಂಗಂ = ಲಿಂಗಮೆಂಬರ್.

ಸೂ ॥ ತತೋ ವಿಭಕ್ತಯಃ ॥ 38 ॥

ವೃ ॥ ತಸ್ಮಾಲ್ಲಿಂಗಸಂಜ್ಞಾತ್ ಪ[2]ರತೋ ವಿಭಕ್ತಯೋ ವ್ಯು[3]ತ್ಪಾದ್ಯಂತೇ ॥

ಟೀ ॥ ತತಃ = ಆಲಿಂಗದತ್ತಣಿಂ ಪರಮಾಗಿ. ವಿಭಕ್ತಯಃ = ವಿಭಕ್ತಿಗಳಪ್ಪುವು.

ಸೂ ॥ ತಾ[4]ಸ್ತು ಮುಮಿಂಕೆ ಅದದೊಳ್ ॥ 39 ॥

ವೃ ॥ ಮ್, ಅಮ್, ಇಮ್, ಕೆ, ಅತ್, ಅತ್, ಒಳ್, ಇತಿ ತಾಃ ಪುನಃ ಸಪ್ತ ವಿಭಕ್ತಯೋ ಜ್ಞಾತವ್ಯಾಃ ॥ ತ[5]ದ್ಯಥಾ—

ನೆಲಂ, ನೆಲನಂ, ನೆಲದಿಂ, ನೆಲಕೆ, ನೆಲದತ್ತಣಿಂ, ನೆಲದ, ನೆಲದೊಳ್.

ಮ[6]ರನಿರ್ದುದು ಕೊಳ್ ಮರನಂ ।
ಮರದಿಂ ಮಾಡಾನೆಯುಂ ಮರಕ್ಕೆಱೆ ನೀರಂ ॥
ಮರದತ್ತಣಿನಾಂ ಬಂದೆಂ ।
ಮರದದು ಪಣ್ ಮರದೊಳಿರು ತಳಿರ್ತಿರ್ದರು ಮರನೇ ॥

ಟೀ ॥ ತಾಃ = ಅವು. ತು = ಮತ್ತೆ. ಮುಮಿಂಕೆ ಅದದೊಳ್ = ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಎಂದಿಂತು ಏೞು ವಿಭಕ್ತಿಗಳಪ್ಪುವು. ಅವು ಯಥಾಕ್ರಮದಿಂದೆ ಪ್ರಥಮೆ, ದ್ವಿತೀಯೆ, ತೃತೀಯೆ, ಚತುರ್ಥಿ, ಪಂಚಮಿ, ಷಷ್ಠಿ, ಸಪ್ತಮಿ ಎಂದು ಪೆಸರುಳ್ಳುವಾಗಿ ಲಿಂಗದ ಪರದಲ್ಲಿ ನಿ[7]ಱಿಸೆ ಸಿದ್ಧಿಯುಪ್ಪುವು.

ಅದೆಂತೆನೆ—

‘ಮರ’ ಎಂಬ ಲಿಂಗದ ಮುಂದೆ ಪ್ರಥಮೈಕವಚನದ ವಿಭಕ್ತಿಯು ‘ಮ್’ ಎಂಬುದ ನಿಱಿಸೆ ‘ಮರಮ್’ ಎಂದಿರ್ದಲ್ಲಿ, ಅತೋಽನುಸ್ವಾರಃ ಪ್ರಥಮೈಕವಚನಸ್ಯ (45)—ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ ಪ್ರಥಮೈಕವಚನದ ವಿಭಕ್ತಿಯು ಮಕಾರಕ್ಕೆ ಸೊನ್ನೆಯಕ್ಕುಂ—‘ಮರಂ’ ಎಂದಾಯ್ತು.

---

1 ವಚನಾದನ್ಯತ್. 2 ಪರಾ. 3 ವ್ಯುತ್ಪದ್ಯಂತೇ. 4 ಒಂದು ಪ್ರತಿಯಲ್ಲಿ ತಾಸ್ತು ಎಂಬುದಿಲ್ಲ. 5 ಯಥಾ. 6 ಈ ಪದ್ಯವು ಒಂದು ಪ್ರತಿಯಲ್ಲಿ ಮಾತ್ರ ಇದೆ. 7 ಇರಿಸೆ.

ದ್ವಿತೀಯೈಕವಚನದಲ್ಲಿ 'ಮರ' ಎಂಬ ಲಿಂಗದ ಮುಂದೆ ದ್ವಿತೀಯೈಕವಚನದ ವಿಭಕ್ತಿಯಾದ 'ಅಮ್' ಎಂಬುದು ಇರ್ದಲ್ಲಿ, ವಿಭಾಷಯಾಮಿ ಮ್ನೌ (52)—ಅಕಾರಾಂತಮಪ್ಪ ನಪುಂಸಕಲಿಂಗದ ಮುಂದೆ ದ್ವಿತೀಯೈಕವಚನದ ಅಮ್ ಇರೆ ವಿಕಲ್ಪದಿಂ ಆ ಅಮ್ ಶಬ್ದದ ಆದಿಯಲ್ಲಿ ಮಕಾರನಕಾರಂಗಳಪ್ಪುವು—ಮರ + ಮ್ + ಅಮ್ ಅಥವಾ ಮರ + ನ್ + ಅಮ್ ಎಂದಿರೆ, ಅಸ್ವರಮಪ್ಪ ವ್ಯಂಜನಂ ಪರದೊಳಿರ್ದ ಸ್ವರಮಂ ಕೂಡುವ ಲಕ್ಷಣಸೂತ್ರಂ—

ಎರಡುಂ ಪಲವುಂ ವರ್ಣಂ ।
ಪರಸ್ಪರಂ ಕೂಡುವಂದವದು ಸಂಧಿ ವಲಂ ॥
ಸ್ವರರಹಿತವ್ಯಂಜನಮವು ।
ಪರವರ್ಣಮನೆಯ್ದುತಿರ್ಪುವಾ ಸಂಹಿತೆಯೊಳ್ ॥ (ಶ. ಮ. ದ. 49).

ಮರಮಮ್, ಮರನಮ್, ಎಂದು ಮಕಾರನಕಾರಂಗಳ್ ವಿಭಕ್ತಿಸ್ವರಮಂ ಕೂಡಿರೆ, ಮುಂದಣ ಮಕಾರಕ್ಕೆ ಅನುಸ್ವಾರಮಪ್ಪ ಸೂತ್ರಂ: ಮನಯೋರ್ಬಿಂದುಃ (112)—ವಿರಾಮದೊಳ್ ವರ್ತಿಸುವ ಮಕಾರನಕಾರಂಗಳ್ಗೆ ಸೊನ್ನೆಯಕ್ಕುಂ—ಮರಮಂ, ಮರನಂ, ಎಂದು ಸಿದ್ಧಮಾಯ್ತು, ಇದರ್ಕೆ ಅನ್ಯವ್ಯಾಕರಣಸೂತ್ರಂ—

ವಿತತನಪುಂಸಕಲಿಂಗ ।
ದ್ವಿತೀಯೆಯೊಳ್ ಮತ್ವನತ್ವವಿಧಿ ಮತ್ವಮೆ ಸಂ ॥
ಗತಿವಡೆಗುಂ ಸಂಸ್ಕೃತದೊಳ್ ।
ತೃತೀಯೆ ಮೊದಲಾದುವರ್ಕೆ ದಾಗಮಮಕ್ಕುಂ ॥ (ಶ. ಮ. ದ. 106).

'ಮರ' ಎಂಬ ಲಿಂಗದ ಮುಂದೆ ತೃತೀಯೈಕವಚನದ ವಿಭಕ್ತಿಯು 'ಇಮ್' ಇರೆ, ನಪುಂಸಕಲಿಂಗೇ ದಃ (51)—ಅಕಾರಾಂತಮಪ್ಪ ನಪುಂಸಕಲಿಂಗದಲ್ಲಿ ತೃತೀಯಾವಿಭಕ್ತಿ ಮೊದಲಾದ ವಿಭಕ್ತಿಗಳ ಸ್ವರದ ಆದಿಯೊಳ್ ದಕಾರಾಗಮಮಕ್ಕುಂ—'ಮರದ + ಇಮ್' ಎಂದಿರೆ, ಸ್ವರೇ ಸ್ವರಸ್ಯ ಲೋಪಃ (19) ಎಂಬ ಸೂತ್ರದಿಂ ದಕಾರದ ಅಕಾರಂ ಲೋಪಮಾಗಿ, 'ಇಮ್' ಶಬ್ದದ ಇಕಾರಮಂ ಕೂಡಿ ಮುಂದಣ ಮಕಾರಕ್ಕೆ ಸೊನ್ನೆಯಾಗೆ 'ಮರದಿಂ' ಎಂದಾಯ್ತು. ಅಂತೇ ದಂ ತೃತೀಯಾಯಾಃ (60)—ತೃತೀಯಾವಿಭಕ್ತಿಯು ಕಡೆಯಲ್ಲಿ ಸಿದ್ಧಮಾದ ಪದದ ಮುಂದೆ 'ದಂ' ಎಂಬುದಕ್ಕುಂ—'ಮರದಿಂದಂ' ಎಂದಾಯ್ತು. ಪದಾಂತಕಾ ಚ (61)—ಆ ತೃತೀಯೆಗಾಗಮವಾದ 'ದಂ' ಎಂಬುದರ್ಕೆ ಅನುಸ್ವಾರಂ ಲೋಪಮಾಗಿ ಏಕಾರಾಂತತೆಯುಮಕ್ಕುಂ—'ಮರದಿಂದೆ' ಎಂದಾಯ್ತು. ಕೆಲವೆಡೆಯೊಳ್ ಬಳಿಯ ಎಕಾರಾದೇಶಮಕ್ಕುಂ—'ಮರದೆ' ಎಂದಕ್ಕುಂ. ಈ ತೃತೀಯಾವಿಭಕ್ತಿಯ ವಿಕಲ್ಪಮಂ ತೋರುವುದರ್ಕೆ ಅನ್ಯವ್ಯಾಕರಣಸೂತ್ರಂ—

ಸಮನಿಸಿ ತೋರುಗು . ಮಿಮಿಂ ।
ದಮಿಂದೆಯೆಂಬಿವು ತೃತೀಯೆಯೊಳ್ ಮತ್ತಮೆಕಾ ॥
ರಮದೊಂದೆ ಮೇಣ್ ತೃತೀಯೆಗೆ ।
ಸಮುಚಿತಮಾದೇಶಮಱಿದುಕೊಳ್ಗೆ ಕ್ರಮದಿಂ ॥ (ಶ. ಮ. ದ. 107).

ಚತುರ್ಥ್ಯೇಕವಚನದಲ್ಲಿ 'ಮರ' ಎಂಬ ಲಿಂಗದ ಮುಂದೆ ಚತುರ್ಥ್ಯೇಕವಚನದ ವಿಭಕ್ತಿಯು 'ಕೆ' ಇರೆ, ವಾ ನಪುಂಸಕೇ ದ್ವಿತ್ವಂ (63)—ಅಕಾರಾಂತಮಪ್ಪ ಲಿಂಗದತ್ತಣಿಂ ಪರವಾದ ಚತುರ್ಥೀವಿಭಕ್ತಿಗೆ ನಪುಂಸಕಲಿಂಗದಲ್ಲಿ ವಿಕಲ್ಪದಿಂ ದ್ವಿತ್ವಮಕ್ಕುಂ— 'ಮರಕೆ', 'ಮರಕ್ಕೆ', ಎಂದಾಯ್ತು. ಈ ಚತುರ್ಥಿಯ ದ್ವಿತ್ವವಿಕಲ್ಪಕ್ಕೆ ಅನ್ಯವ್ಯಾಕರಣಸೂತ್ರಂ—

ಬದವುವುದದಂತಪುಲ್ಲಿಂ ।
ಗದೊಳ್ ಗೆಯೆಂದಾದಿಬಿಂದುವಿಂ ದ್ವಿತ್ವಂ ಮೇ॥
ಕೊದವುವುದು ನಪುಂಸಕಲಿಂ ।
ಗದೊಳ್ ಚತುರ್ಥಿಗೆ ಗೆಯಕ್ಕು ಮುಱಿದೆಡೆಗೆಲ್ಲಂ॥ (ಶ. ಮ. ದ. 113).

ಪಂಚಮ್ಯೇಕವಚನದಲ್ಲಿ 'ಮರ' ಎಂಬ ಲಿಂಗದ ಮುಂದೆ ಪಂಚಮ್ಯೇಕವಚನದ ವಿಭಕ್ತಿಯು 'ಅತ್' ಇರೆ, ಅನುಬಂಧಲೋಪಮಾಗಿ ದತ್ವಮಾಗಿ 'ಮರ+ದ+ಅ' ಇರೆ, ಅತ್ತಣಿಂ ತ್ವನುಸಂಧೇಯಃ ಪಂಚಮ್ಯಾಃ (66)—ಪಂಚಮೀವಿಭಕ್ತಿಗೆ 'ಅತ್ತಣಿಂ' ಎಂಬ ಶಬ್ದಮಂ ಪತ್ತಿಸೆ, ಪೂರ್ವಸ್ವರಕ್ಕೆ ಲೋಪಮಾಗೆ, 'ಮರದತ್ತಣಿಂ' ಎಂದು ಸಿದ್ಧಮಾಯ್ತು. ಮತ್ತಂ ಅನ್ಯವ್ಯಾಕರಣದಲ್ಲಿ ಪಂಚಮ್ಯೇಕ ವಚನಕ್ಕೆ ವಿಕಲ್ಪದಿಂ ಮೂಱು ರೂಪಂ ತೋಱುವ ಲಕ್ಷಣಸೂತ್ರಂ—

ಅತ್ತಣಿನೆಂದು ನಿಮಿರ್ಚುವ ।
ರೆತ್ತಮದೆಂದುಸಿರ್ವ ಪಂಚಮಿಯನಲ್ಲಿ ಕೆಲರ್॥
ಪತ್ತಿಸುವರ್ ಮೂದೆಱನಂ ।
ಪೆತ್ತು ತೃತೀಯೆಯನೆಕಾರಮಂ ಪರಿಹರಿಪರ್॥ (ಶ. ಮ. ದ. 116).

ಈ ಲಕ್ಷಣದಿಂ 'ಮರದತ್ತಣಿಂದಂ', 'ಮರದತ್ತಣಿಂದೆ', ಎಂದುಂ ಪ್ರಯೋಗಿಸಲಕ್ಕುಂ; ತೃತೀಯೆಯ ಮೂಱು ರೂಪಿಂಗಾದೇಶಮಾದ 'ಎ' ಎಂಬುದಂ 'ಮರದತ್ತಣೆ' ಎಂದು ಪ್ರಯೋಗಿಸಲಾಗದು.

ಷಷ್ಠ್ಯೇಕವಚನದಲ್ಲಿ 'ಮರ' ಎಂಬ ಲಿಂಗದ ಮುಂದೆ ಷಷ್ಠ್ಯೇಕವಚನದ ವಿಭಕ್ತಿಯು 'ಅತ್' ಇರೆ, ಅನುಬಂಧಲೋಪಮಾಗಿ ದತ್ವಮಾಗಿ 'ಮರ+ದ+ಅ' ಇರೆ, ಪೂರ್ವಸ್ವರಕ್ಕೆ ಲೋಪಮಾಗಿ ವಿಭಕ್ತಿಯ ಅಕಾರಂ ಪೂರ್ವವ್ಯಂಜನದೊಳ್ ಕೂಡೆ 'ಮರದ' ಎಂದು ಸಿದ್ಧಮಾಯ್ತು. ದೀರ್ಘಾದೇಶಃ ಷಷ್ಠ್ಯಾ ಯಥೇಷ್ಟಂ (67)—ಈ ಕರ್ಣಾಟಕಭಾಷೆಯೊಳ್ ಷಷ್ಠೀವಿಭಕ್ತಿಗೆ ಇಷ್ಟಮಪ್ಪಂತು ದೀರ್ಘಮಕ್ಕುಂ—'ಮರದಾ' ಎಂದಾಯ್ತು. ಮತ್ತಮನ್ಯವ್ಯಾಕರಣದೊಳ್ ದೀರ್ಘಾದೇಶಕ್ಕೆ ಪೇೞ್ದ ಸೂತ್ರಂ—

ಆದರಿಪರ್ ಕೆಲಬರ್ ದೀ ।
ರ್ಘಾದೇಶಮನಗ್ರದಲ್ಲಿ ಷಷ್ಠಿಯಕಾರ॥
ಕ್ಕಾ ದೀರ್ಘಮನಿರದರೆಬರ್ ।
ಖೇದದ ಸಂಭ್ರಮದ ಮೆಯ್ಯೊಳುತ್ಪಾದಿಸುವರ್॥ (ಶ. ಮ. ದ. 117).

ಸಪ್ತಮ್ಯೇಕವಚನದಲ್ಲಿ 'ಮರ' ಎಂಬ ಲಿಂಗದ ಮುಂದೆ ಸಪ್ತಮ್ಯೇಕವಚನದ ವಿಭಕ್ತಿಯ 'ಒಳ್' ಇರೆ, ದಕಾರಾಗಮಮವಾಗೆ, 'ಮರದೊಳ್' ಎಂದು ಸಿದ್ಧಮಾಯ್ತು. **ಸಪ್ತಮ್ಯಾ ಅಲ್ಲಿ ವಾ** (69)—ಲಿಂಗದತ್ತಣಿಂ ಪರಮಾದ ಸಪ್ತಮೀವಿಭಕ್ತಿಯ 'ಒಳ್' ಎಂಬಲ್ಲಿ ವಿಕಲ್ಪದಿಂ 'ಅಲ್ಲಿ' ಎಂಬುದಕ್ಕುಂ—'ಮರದಲ್ಲಿ' ಎಂದಾಯ್ತು. 'ಅಲ್ಲಿ' ಎಂಬ ರೂಪಮಂ ಸಪ್ತಮ್ಯೇಕವಚನದಲ್ಲಿ ತೋಱಿಸೆ ಪೇೞ್ದ ಅನ್ಯವ್ಯಾಕರಣಸೂತ್ರಂ—

ಅಲ್ಲಿಯೊಳೆಂಬಿವು ಮಿಕ್ಕೆಡೆ।
ಗೆಲ್ಲಂ ದಿಗ್ವಾಚಿಯಪ್ಪದಂತಕ್ಕಲ್ ಮ॥
ತ್ತಲ್ಲಿಯುಕಾರಕ್ಕೆತ್ವಂ।
ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್॥ (ಶ. ಮ. ದ. 119).

ಆಮಂತ್ರಣೈಕವಚನದಲ್ಲಿ 'ಮರ' ಎಂಬ ಲಿಂಗದ ಮುಂದೆ ಆಮಂತ್ರಣಾರ್ಥದ ಏಕವಚನದ 'ಮ್' ಇರೆ, **ಆಮಂತ್ರಣೇ ಪ್ರಥಮೈಕವಚನಸ್ಯ ಲೋಪಃ** (70)—ಸಂಬೋಧನೆಯಲ್ಲಿ ಪ್ರಥಮೈಕವಚನದ ಮಕಾರಕ್ಕೆ ಲೋಪಮಕ್ಕುಂ—'ಮರ' ಎಂದಾಯ್ತು. **ಏತ್ವಂ ವಾ ತದಂತಸ್ಯ** (71)—ಆಮಂತ್ರಣಾರ್ಥದಲ್ಲಿ ವರ್ತಿಸುವ ಪ್ರಥಮಾವಿಭಕ್ತಿಯ ಏಕವಚನದ ಮಕಾರಕ್ಕೆ ವಿಕಲ್ಪದಿಂ ಏಕಾರಮಕ್ಕುಂ— 'ಮರವೇ' ಎಂದಾಯ್ತು. **ಅನುಸ್ವಾರಸ್ಯ ಚ** (53)—ನಪುಂಸಕಲಿಂಗದಲ್ಲಿ ಪ್ರಥಮೈಕವಚನದ ಮಕಾರಕ್ಕೆ ಅನುಸ್ವಾರಮಾಗೆ, ಆಮಂತ್ರಣಾರ್ಥದಲ್ಲಿ ವರ್ತಿಸುವ ಏತ್ವಂ ವಿಕಲ್ಪದಿಂ ಆ ಸೊನ್ನೆಗೆ ಪರಮಾಗೆ, ಆ ಸೊನ್ನೆಗಂ ಮಕಾರನಕಾರಂಗಳಪ್ಪುವು—'ಮರನೇ' ಎಂದುಮಾಯ್ತು. ಸೂತ್ರದಲ್ಲಿಯ ಚ ಶಬ್ದದಿಂ ವಕಾರಮುಮಪ್ಪುದು. ಇವಕ್ಕೆ ಪೂರ್ವಶಿಷ್ಟಕವಿಪ್ರಯೋಗಂ—

ನಂ[1]ದನಮೇ ಲತಾಭವನಮೇ ಕೊಳನೇ ತಳಿರೇ ಮದಾಳಿಯೇ।
ಚಂದನವೃಕ್ಷಮೇ ಕುಳಿರ್ವ ತಣ್ಬುೞಿಲೇ ಗಿಳಿಯೇ ವಸಂತನೇ॥
ನೊಂದಪೆನಾರ್ದ್ರಬಿಲ್ದಪೆನಡರ್ದ್ದಱೆ ನಟ್ಟಲರಂಬ ಗಾಯದಿಂ।
ಬೆಂದಪೆನಿಂದು ತಂದು ಕುಡು ನಾಡೆಯುಮಾಕಮಲಾಯತಾಕ್ಷಿಯಂ॥

ದೀರ್ಘೋಕ್ತಿರ್ನಯಸೇನಸ್ಯ(73)—ನಯಸೇನಾಚಾರ್ಯನ ಮತದಿಂ ಸಂಬೋಧನೆಯೊಳ್ ದೀರ್ಘಾದೇಶಮಕ್ಕುಂ.

ಉ॥ ಎ[2]ಲೆ ಗಣಪ, ಸುಖಸಂಪದಮಂ ಮಾೞ್ಪುದೆಮಗೆ ಪರಮಜಿನೇಂದ್ರಾ.

ಈ ಸಂಬೋಧನೆಗೆ ಅನ್ಯವ್ಯಾಕರಣಲಕ್ಷಣಸೂತ್ರಂ—

ಎಲ್ಲಿಯುಮಾಮಂತ್ರಣದೊಳ್।
ಬಲ್ಲರ್ ಪ್ರಥಮೈಕವಚನಮಂ ಲೋಪಿಸುವರ್॥
ನಿಲ್ಲದೆ ವಿಕಲ್ಪಮುಖದಿಂ।
ಸೊಲ್ಲಿಸುವರ್ ಹ್ರಸ್ವದೀರ್ಘಕಾಕುಗಳೆರಡಂ॥ (ಶ. ಮ. ದ. 123).

1 ಶ. ಮ. ದ. ಪುಟ 152. 2 ದಿಟೋ. ಪುಟ 151.

ಈ ಕರ್ಣಾಟಕವ್ಯಾಕರಣದೊಳ್ ವಿಕಲ್ಪವಾಗಿ ಸಪ್ತವಿಭಕ್ತಿಗಳ ಪ್ರಥಮೈಕವಚನಾದಿಗಳ್ಗೆ ತೋಱಿಸಿದನಿತಕ್ಕರ್ಂ ಉದಾಹರಣಂ :—

ಮರಂ ;
ಮರಮುಂ, ಮರನಂ ;
ಮರದಿಂ, ಮರದಿಂದಂ, ಮರದಿಂದೆ, ಮರದೆ ;
ಮರಕೆ, ಮರಕ್ಕೆ ;
ಮರದತ್ತಣಿಂ, ಮರದತ್ತಣಿಂದಂ, ಮರದತ್ತಣಿಂದೆ ;
ಮರದ, ಮರದಾ ;
ಮರದೊಳ್, ಮರದಲ್ಲಿ ;
ಮರ, ಮರಮೋ, ಮರನೇ, ಮರವೇ.

ಮತ್ತೆಯುಂ ವಿಭಕ್ತಿಗಳ ಸಹಜ [ರೂಪವ] ನಿತಕ್ಕರ್ಂ ಉದಾಹರಣಂ—
ಮರಂ, ಮರಮಂ, ಮರದಿಂ, ಮರಕ್ಕೆ, ಮರದತ್ತಣಿಂ, ಮರದ, ಮರದೊಳ್.

ಈ ವಿಭಕ್ತಿಗಳ ಲಕ್ಷಣದ ಕಂದಂ—

ಮ[1]ರನಿರ್ದುದು ಮರನಂ ಕಡಿ ।
ಮರದಿಂ ಮಾಡಾನೆಯಂ ಮರಕ್ಕೆಱೆ ನೀರಂ ॥
ಮರದತ್ತಣಿನೆಲೆಯುದಿರ್ದುದು ।
ಮರದದು ಪಣ್ ಮರದೊಳಿರು ತಳಿತ್ತಿರು ಮರನೇ ॥

'ಹರಿ' ಎಂಬ ಲಿಂಗದ ಮುಂದೆ ಪ್ರಥಮೈಕವಚನದ ವಿಭಕ್ತಿಯು 'ಮ್' ಇರೆ, ಅನ್ಯಸ್ಮಾಲ್ಲೋಪಃ (46)—ಅಕಾರಾಂತಮಲ್ಲದುೞಿದ ಸ್ವರಾಂತವ್ಯಂಜನಾಂತಂಗಳತ್ತಣಿಂ ಪರಮಾದ ಪ್ರಥಮೈಕವಚನದ ಮಕಾರಕ್ಕೆ ಲೋಪಮಕ್ಕುಂ—'ಹರಿ' ಎಂದಾಯ್ತು 'ಹರಿ + ಅಮ್' ಎಂದಿರ್ದಲ್ಲಿ, ಆದಿವರ್ಣೈರ್ಕಾರೇಭ್ಯೋ ಯಃ (22) ಎಂಬ ಸೂತ್ರದಿಂ ಯತ್ವಮಾಗಿ—ಹರಿಯಂ, ಹರಿಯಿಂ. ಚತುರ್ಥಿಯಲ್ಲಿ 'ಹರಿ+ಕೆ' ಎಂದಿರ್ದಲ್ಲಿ, ಶೇಷಾತ್ತೃತೀಯತ್ವಂ (64)—ಅಕಾರಾಂತಮಲ್ಲದುೞಿದ ಲಿಂಗದತ್ತಣಿಂ ಪರಮಾದ ಚತುರ್ಥೀ ವಿಭಕ್ತಿಯ ಕೆಕಾರಕ್ಕೆ ಆಕವರ್ಗದ ತೃತೀಯಾಕ್ಷರಮಪ್ಪ ಗಕಾರಮಕ್ಕುಂ—ಹರಿಗೆ, ಹರಿಯತ್ತಣಿಂ, ಹರಿಯ, ಹರಿಯೊಳ್. ಇದಱಂತೆ ಕರಿ, ಬಿದಿ, ನದಿ, ಮೊದಲಾದ ಶಬ್ದಂಗಳ ಸಿದ್ಧಮಪ್ಪುವು.

'ವಿಧು' ಎಂಬ ಲಿಂಗದ ಮುಂದೆ ಪ್ರಥಮೈಕವಚನದ ವಿಭಕ್ತಿಯು 'ಮ್' ಇರೆ, ಅನ್ಯಸ್ಮಾಲ್ಲೋಪಃ (46) ಎಂಬ ಸೂತ್ರದಿಂ ಮಕಾರಕ್ಕೆ ಲೋಪಮಾಗಿ 'ವಿಧು' ಎಂದಾಯ್ತು. 'ವಿಧು + ಅಮ್' ಎಂದಿರೆ, ವೋ ವೃವರ್ಣಾಭ್ಯಾಂ (24) ಎಂಬ ಸೂತ್ರದಿಂ ವಕಾರಾಗಮಮಾಗಿ—ವಿಧುವಂ. ಉದಂತಾತ್ತೃತೀಯಾದಿಷ್ವಿನಾಗಮೋ ಬಹುಳಂ

1 ಶ. ಮ. ದ. ಪುಟ 115.

(54)—ಉಕಾರಾಂತವಪ್ಪ ಲಿಂಗದತ್ತಣಿಂ ತೃತೀಯೆ ಮೊದಲಾದ ವಿಭಕ್ತಿಗಳ್ ಪರವಾಗೆ ವಿಕಲ್ಪದಿಂದೆ ಇನಾಗಮಮಕ್ಕುಂ—ವಿಧುವಿನಿಂ, ವಿಧುವಿಂಗೆ, ವಿಧುವಿನತ್ತಣಿಂ, ವಿಧುವಿನ, ವಿಧುವಿನೊಳ್. ಈ ಪ್ರಕಾರದಿಂ ಮಧು, ವಧು, ಮಡು, ಗಿಡು, ಮೊದಲಾದುವು ಸಿದ್ಧಮಕ್ಕುವು.

ಭ್ರಾತೃ, ಮಾತೃ, ಸವಿತೃ; ಕೆಱೆ, ಪೆಱೆ, ತೊಱೆ, ಬಾಲೆ, ಮಾಲೆ; ತೋಳ್, ಬಾಳ್, ಕೋಳ್; ಎಂಬೀಸ್ವರಾಂತವ್ಯಂಜನಾಂತಂಗಳಪ್ಪ ಲಿಂಗಂಗಳತ್ತಣಿಂ ಪರವಾದ ವಿಭಕ್ತಿಗಳಂ ಪೂರ್ವಾಪರಲಕ್ಷಣಸೂತ್ರಂಗಳಿಂ ಪ್ರಕೃತಿಪ್ರತ್ಯಯಂಗಳಂ ನಿಱಿಸಿ ಸಿದ್ಧಂಮಾಳ್ಕೆ.

ಸೂ ॥ ದ್ವಿತ್ವಬಹುತ್ವಯೋರ್ಗಳಾದೌ ॥ 40 ॥

ವೃ ॥ ತಾಸಾಂ ವಿಭಕ್ತೀನಾಮಾದೌ ದ್ವಿತ್ವಬಹುತ್ವವಿಷಯೇ ವಿವಕ್ಷಿತೇ ಗಳಾಗಮೋ ಭವತಿ ॥

ಉ ॥ ದ್ವಿತ್ವೇ—ಕಣ್ಗಳ್, ಕಣ್ಗಳಂ, ಕಣ್ಗಳಿಂ, ಕಣ್ಗಳ್ಗೆ, ಕಣ್ಗಳತ್ತಣಿಂ, ಕಣ್ಗಳ, ಕಣ್ಗಳೊಳ್.

ಬಹುತ್ವೇ—ಕುರುಳ್ಗಳ್, ಕುರುಳ್ಗಳಂ, ಕುರುಳ್ಗಳಿಂ, ಕುರುಳ್ಗಳ್ಗೆ, ಕುರುಳ್ಗಳತ್ತಣಿಂ, ಕುರುಳ್ಗಳ, ಕುರುಳ್ಗಳೊಳ್.

ಟೀ ॥ ಈ ಕರ್ಣಾಟಕಭಾಷೆಯೊಳ್, ದ್ವಿತ್ವಬಹುತ್ವಯೋಃ=ದ್ವಿವಚನಬಹುವಚನಂಗಳೊಳ್. ಆದೌ=ವಿಭಕ್ತಿಯ ಮೊದಲಲ್ಲಿ. ಗಳ್=ಗಳಾಗಮಮಕ್ಕುಂ.

'ತೊಡೆ' ಎಂಬ ಲಿಂಗದ ಮುಂದೆ ಗಳಾಗಮಮಾಗಿ 'ತೊಡೆ+ಗಳ್' ಎಂದಿರೆ, ಅನ್ಯಸ್ಮಾಲ್ಲೋಪಃ (46) ಎಂಬ ಸೂತ್ರದಿಂ ಮಕಾರಕ್ಕೆ ಲೋಪಮಾಗಿ—ತೊಡೆಗಳ್, ತೊಡೆಗಳಂ, ತೊಡೆಗಳಿಂ. ಶೇಷಾತ್ತೃತೀಯತ್ವಂ (64) ಎಂಬ ಸೂತ್ರದಿಂ ಕೆಕಾರಕ್ಕೆ ಗೆಕಾರಮಾಗಿ—ತೊಡೆಗಳ್ಗೆ. ತೊಡೆಗಳತ್ತಣಿಂ, ತೊಡೆಗಳ, ತೊಡೆಗಳೊಳ್. ಈ ತೆಱದಿಂದೆಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು. ದ್ವಿವಚನದ ಗಳಾಗಮಕ್ಕೆ ಪ್ರಯೋಗಂ—

ತೊ[1]ಡೆಗಳ್ ರಂಭಾಸ್ತಂಭದ ।
ಗಿಡುಗಳ್ ಕಣ್ಗಳ್ ಮನೋಜವೀರನ ನೇಣ್ಗಳ್ ॥
ನಿಡುದೋಳ್ಗಳ್ ದಿಕ್ಕರಿಕರ ।
ದೊಡನಾಡಿಗಳೆನಿಸಿ ಮೆಱೆವುದಾತನ ರೂಪಂ ॥

ಬಹುವಚನಕ್ಕೆ—ಕೊಳಗಳ್, ಕೊಳಗಳಂ, ಕೊಳಗಳಿಂ, ಕೊಳಗಳ್ಗೆ, ಕೊಳಗಳತ್ತಣಿಂ, ಕೊಳಗಳ, ಕೊಳಗಳೊಳ್.

ಕೊ[2]ಳಗಳ್ ದಳಿತಾಬ್ಜಂಗಳ್ ।
ದಳಿತಾಬ್ಜಂಗಳ್ ಸಮೃದ್ಧಮಧುಗಳ್ ಮಧುಗಳ್ ॥
ಚಳದಳಿಕುಳಾಕುಳಂಗಳ್ ।
ವಿಳಸದಳಿಪ್ರತತಿ ಮಧುರವಿರುತಿಯೆ ಬನದೊಳ್ ॥

---

1 ಶ. ಮ., ದ, ಪುಟ 117. 2 ಕಾವ್ಯಾವಲೋಕನ, ಪದ್ಯ 623.

ಸೂ || ಸರ್ವನಾಮಗುಣವಚನಾನಾಮವು ತದಂತೇ || 41 ||

ವೃ|| ಸರ್ವನಾಮ್ನಾಂ ಗುಣವಚನಾನಾಂ ಚ ದ್ವಿತ್ವಬಹುತ್ವವಿಷಯೇ ವಿವಕ್ಷಿತೇ ತೇಷಾಮಂತೇ ವಿಭಕ್ತಿಷು ಪರಭೂತಾಸು ಅವು ಭವತಿ ||

ಉ|| ಸರ್ವನಾಮ್ನಿ—ಎಲ್ಲವು, ಎಲ್ಲವಂ, ಎಲ್ಲವಱಿಂ, ಎಲ್ಲವರ್ಕ್ಕೆ, ಎಲ್ಲವಱತ್ತಣಿಂ, ಎಲ್ಲವಱ, ಎಲ್ಲವಱೊಳ್.

ಗುಣವಚನೇ—ಇನಿಯುವು, ಇನಿಯುವಂ, ಇನಿಯುವಱಿಂ, ಇನಿಯುವರ್ಕ್ಕೆ ಇತ್ಯಾದಿ. ಪಿರಿಯುವು, ಪಿರಿಯುವಂ, ಪಿರಿಯುವಱಿಂ ಇತ್ಯಾದಿ.

ಪ್ರ[1]ಕೃತತ್ವಾತ್ ಕ್ವಚಿನ್ನ ಳಪಿ. ಉ|| ನೀಂಗಳ್.

ಟೀ|| ಸರ್ವನಾಮಗುಣವಚನಾನಾಂ—ಸರ್ವನಾಮಗುಣವಚನಂಗಳ್ಗೆ. ದ್ವಿತ್ವಬಹುತ್ವಂ ನುಡಿಯಲ್ವೇಡಿದೊಡೆ, ತದಂತೇ—ಅವಱ ಅಂತದೊಳ್. ಅವು—ಅವು ಪ್ರತ್ಯಯಮಕ್ಕುಂ.

ಸರ್ವನಾಮಗುಣವಚನಂಗಳಾವುವು ಎಂದೊಡೆ—

ಅದುವಿದುವುದುವಾವುದುವೆ |
ಲ್ಲದು ಪೆಱರ್ತೇ ಪೆಱದೆನಿಪ್ಪ ಶಬ್ದಂಗಳ್ ತ||
ಪ್ಪದೆ ಸರ್ವನಾಮಮಕ್ಕುಂ |
ವಿದಗ್ಧರಿದನಱಿದು ನಿಲಿಕೆ ಲಿಂಗಸ್ಥಳದೊಳ್|| (ಶ. ಮ. ದ. 78).

ಒಳ್ಳಿತು ಮೆಲ್ಲಿತು ಬೆಟ್ಟಿತು |
ತೆಳ್ಳಿತು ಬಸಿದಸಿದು ಕಡಿದು ನಿಡಿದಿನಿದೆಂಬಂ ||
ತುಳ್ಳುವು ತು ದು ಕಡೆಯೊನೆ ಕೆ |
ಯ್ಕೊಳ್ಳಿಂ ಗುಣವಾಚಿ ಮೇಣ್ ತುಕಾರಂ ದ್ವಿತ್ವಂ|| (ಶ. ಮ. ದ. 77).

ಸರ್ವನಾಮದಲ್ಲಿ ರೂಪಸಿದ್ಧಿಯಪ್ಪ ಕ್ರಮಂ—

'ಎಲ್ಲದು' ಎಂಬ ಲಿಂಗದ ಅಂತಕ್ಕೆ, ಸರ್ವನಾಮಗುಣವಚನಾನಾಮವು ತದಂತೇ (41) ಎಂಬ ಸೂತ್ರದಿಂ ಅವುಪ್ರತ್ಯಯಮಾಗಿ 'ಎಲ್ಲದು + ಅವು' ಎಂದಿರೆ,

ಸಂಗಡಿಸಿ ಸರ್ವನಾಮದ |
ಲಿಂಗಾಂತ್ಯಾಕ್ಷರಕಮವುವಿನಾದ್ಯಕ್ಷರಕಂ ||
ಪಿಂಗದೆ ಲೋಪಂ ಗುಣವಚ |
ನಂಗಳೊಳಂತ್ಯಂ ದುಕಾರಮಾದೊಡೆ ಲೋಪಂ || (ಶ. ಮ. ದ. 96).

ಎಂಬ ಸೂತ್ರದಿಂ ದುಕಾರಕ್ಕಂ ಅವುವಿನ ಅಕಾರಕ್ಕಂ ಲೋಪಮಾಗಿ 'ಎಲ್ಲವು' ಎಂದಿರೆ, ಈ ಲಿಂಗದ ಮುಂದೆ ಪ್ರಥಮೈಕವಚನದ 'ಮ್' ಎಂಬ ವಿಭಕ್ತಿಯಂ ನಿಱಿಸೆ 'ಎಲ್ಲವು + ಮ್'

1 ಅತ್ರ ಪ್ರಕೃತಿತ್ವಾತ್.

ಎಂದಿರೆ, ಅನ್ಯಸ್ಮಾಲ್ಲೋಪಃ (46) ಎಂಬ ಸೂತ್ರದಿಂ ಮಕಾರಕ್ಕೆ ಲೋಪಮಾಗಿ 'ಎಲ್ಲವು' ಎಂದಾಯ್ತು. ಎಲ್ಲವಂ. ತೃತೀಯಾವಿಭಕ್ತಿಗೆ, ಅಱುಕಾರಸ್ಯ ಸಂಖ್ಯಾಸರ್ವನಾಮಗುಣವಚನೇಷು (55)—ಸಂಖ್ಯಾಸರ್ವನಾಮಗುಣವಚನಂಗಳ ಕಡೆಯಲ್ಲಿರ್ಪ ಉಕಾರಕ್ಕೆ ತೃತೀಯಾವಿಭಕ್ತಿ ಮೊದಲಾದ ವಿಭಕ್ತಿಗಳ್ ಪರಮಾಗೆ ಅಱಾದೇಶಮಕ್ಕುಂ— ಎಲ್ಲವಱಿಂ, ಎಲ್ಲವರ್ಕ್ಕೆ, ಎಲ್ಲವಱತ್ತಣಿಂ, ಎಲ್ಲವಱ, ಎಲ್ಲವಱೊಳ್.

ಗುಣವಚನಂಗಳ ರೂಪಸಿದ್ಧಿಯುಂ ಪೂರ್ವದಹಗಪ್ಪುದು.

'ನಿಡಿದು' ಎಂಬ ಶಬ್ದಕ್ಕೆ ಅವುಪ್ರತ್ಯಯಮಾಗಿ, ದುಕಾರಂ ಲೋಪಮಾಗಿ, 'ನಿಡಿ + ಅವು' ಎಂದಿರೆ, ಆದಿವರ್ಣೈರ್ಕಾರೇಭ್ಯೋ ಯಃ (22) ಎಂಬ ಸೂತ್ರದಿಂ ಯಕಾರಮಾಗಿ—'ನಿಡಿಯುವು' ಎಂದಾಯ್ತು. ನಿಡಿಯುವಂ, ನಿಡಿಯುವಱಿಂ, ನಿಡಿಯುವರ್ಕ್ಕೆ, ನಿಡಿಯುವಱತ್ತಣಿಂ, ನಿಡಿಯುವಱ, ನಿಡಿಯುವಱೊಳ್.

ಸೂ ‖ ಸ್ತ್ರೀಪುರುಷವಾ[1]ಚಕೇಷ್ವಿರರ್ ದಿರ್ ವಿರ್ ಕ್ವಚಿತ್ ‖ 42 ‖

ವೃ ‖ ಸ್ತ್ರೀಪುರುಷವಾಚಕೇಷು ಶಬ್ದೇಷು ವರ್ತಮಾನಾನಾಂ ವಿ ಭಕ್ತೀನಾಮಾದೌ ಕ್ವಚಿತಃ ಇರ್, ಅರ್, ದಿರ್, ವಿರ್, ಇತ್ಯೇತೇ ಗಳಪವಾದಾ ವಿ[3]ಧೀಯಂತೇ ‖

ಉ ‖ ಪೆಂಡಿರ್, ತೊಱ್ತಿರ್ ; ನಂಟರ್, ನಲ್ಲರ್ ; ಮಗಳ್ದಿರ್, ತಮ್ಮಂದಿರ್; ತಾಯ್ವಿರ್, ತಂದೆವಿರ್.

ಗ[4]ಳಪಿ ಕ್ವಚಿತ್—ಅಯ್ಯಂಗಳ್, ಅಬ್ಬೆಗಳ್. ಕ್ವ[5]ಚಿದುಭಯಂ—ಮಾವಂದಿರ್, ಮಾವಂಗಳ್ ; ಅತ್ತೆವಿರ್, ಅತ್ತೆಗಳ್.

ಟೀ ‖ ಸ್ತ್ರೀಪುರುಷವಾಚಕೇಷು—ಸ್ತ್ರೀಪುರುಷವಾಚಕಂಗಳಲ್ಲಿ. ದ್ವಿತ್ವಬಹುತ್ವಂ ನುಡಿಯಲ್ವೇಡಿದೊಡೆ, ಕ್ವಚಿತ್—ಕೆಲವೆಡೆಯಲ್ಲಿ. ವಿಭಕ್ತಿಯ ಮೊದಲೊಳ್, ಇರರ್ ದಿರ್ ವಿರ್—ಇರ್, ಅರ್, ದಿರ್, ವಿರ್, ಎಂಬ ಪ್ರತ್ಯಯಂಗಳ್ ಪಿಂದೆ ಪೇಳ್ದ ದ್ವಿತ್ವಬಹುತ್ವಂಗಳ ಗಳ ಪ್ರತ್ಯಯಮುಮಂ ನಿಷೇಧಿಸಿ ಅಪ್ಪುವು. ಉ ‖ (ವೃ. ನೋ.) ಇಲ್ಲಿ ಕೆಲವೆಡೆಯೊಳ್ ಗಳಪ್ರತ್ಯಯಮಕ್ಕುಂ. ಉ ‖ (ವೃ. ನೋ.) ಕೆಲವೆಡೆಯೊಳ್ ಗಳಪ್ರತ್ಯಯಮುಂ ದಿರ್ ವಿರ್ ಪ್ರತ್ಯಯಂಗಳುಮಪ್ಪುವು. ಉ ‖ (ವೃ. ನೋ).

ಆ[6]ರಾರ್ಗೆ ಪೆಂಡಿರೊಡಮುಟ್ಟಿದರೆಂಬರಾರಾ ।
ರ್ಗಾರಾರ್ಗೆ ತಂದೆವಿರತಿಪ್ರಿಯಪುತ್ರರಾರಾ ।
ರ್ಗಾರಾರ್ಗೆ ತಾಯ್ವಿರೆರಡಿಲ್ಲದೆ ಕೂರ್ಪರಾರಾ ।
ರ್ಗಾರಯ್ಯ ತಾನೆ ತನಗಂ ನೆರವಲ್ಲರಾರುಂ ‖

ಮಿಱುಗುವ ತಮ್ಮ ನುಣ್ಗೊಡೆಯ ಕಾಂತಿ ಕವಲ್ತುದೆನಿಪ್ಪ ಪೀಲಿಯೊ ।
ಳ್ನಱಿ ನವವಿದ್ರುಮಾಧರದೆ ಸೂಸಿದ ಕಾಂತಿಯ ಕಣ್ಗೆಳೆಂಬಿನಂ ‖
ತುಱುಗಿದ ಗುಂಜೆಯಾಭರಣಮುಣ್ಮುವಪಾಂಗಮರೀಚಿಮಾಲೆ ಸು ।
ತ್ತಿಱಿದುದೆನಿಪ್ಪ ಕೇದಗೆಯ ಬೆಳ್ಸುಱಿಯೋಲೆ ಬೆಡಂಗವಳ್ದಿರಾ ‖

---

1 ವಾಚಿಷ್ವಿರರ. 2 ವಿಭಕ್ತೀನಾಂ. 3 ಸ್ಯನ್ನಿರ್ದಿಶ್ಯಂತೇ, ಭವಂತಿ. 4 ಗಳ್ ಕ್ವಚಿತ್, ಕ್ವಚಿತ್ಕ್ವಚ್ಚೇನ ಅಯ್ಯಂಗಳ್. 5 ಇದಕ್ಕೆ ಹಿಂದೆ ಒಂದು ಪ್ರತಿಯಲ್ಲಿ—ಗಳ್ಸಂಬಂಧೋಪಲಕ್ಷಣಾತ್ ಎಂದಿದೆ. 6 ಕಾವ್ಯಾವಲೋಕನ, ಪದ್ಯ 93.

ಇವಱೊಳ್ ಮುಂಪೇೞ್ದ ಪ್ರಯೋಗಮಂ ನೋಡಿಕೊಳ್ವುದು.

ಸೂ ॥ ಸ್ವಾರ್ಥೇ ऽತಃ ಕಳ್ ॥ 43 ॥

ವೃ ॥ ಅತ ಏ[1]ತೇಭ್ಯಃ ಸ್ವಾರ್ಥೇ ಕಳ್ ಭವತಿ ॥

ಉ ॥ ಪಂಡಿತರ್ಕಳ್, ಸುತರ್ಕಳ್, ವಿಚಾರಪರರ್ಕಳ್; ತಾ[2]ಯ್ವಿರ್ಕಳ್.

ಕೇ[3]ವಲಾದಪಿ ಕ್ವಚಿದ್ಭವತಿ. ಉ ॥ ಮಕ್ಕಳ್, ನಾಳ್ಕಳ್, ಕೋೞ್ಕಳ್.

ಟೀ ॥ ಅತಃ—ಮುಂಪೇೞ್ದ ಪ್ರತ್ಯಯಂಗಳತ್ತಣಿಂ ಪರಮಾಗಿ. ಸ್ವಾರ್ಥೇ—ಸ್ವಾರ್ಥದಲ್ಲಿ. ಕಳ್—ಕಳ್ ಪ್ರತ್ಯಯಮಕ್ಕುಂ.

ಉ ॥ (ವೃ. ನೋ.) ಬಱಿಯ ಶಬ್ದಮಾತ್ರದೊಳಂ ಕಳ್ ಪ್ರತ್ಯಯಮಕ್ಕುಂ. ಉ ॥ (ವೃ. ನೊ.).

ಸೂ ॥ ಸಂಖ್ಯಾಯಾಂ ವಃ ॥ 44 ॥

ವೃ ॥ ಸಂಖ್ಯಾವಾಚಿನಃ ಶಬ್ದಾತ್ಪರಾಸಾಂ ವಿಭಕ್ತೀನಾಮಾದೌ ವಕಾರಾಗಮೋ ಭವತಿ ॥

ಉ ॥ ಬರ್ವರ್, ಇರ್ವರ್, ಮೂವರ್.

ಟೀ ॥ ಸಂಖ್ಯಾಯಾಂ—ಸಂಖ್ಯೆಯಂ ಪೇೞ್ವ ಶಬ್ದಂಗಳಲ್ಲಿ. ಅರ್ ಪ್ರತ್ಯಯಂ ಪರಮಾಗುತ್ತಿರೆ ನಡುವೆ, ವಃ—ವಕಾರಮಕ್ಕುಂ.

ಬರ್ವರ್, ಇರ್ವರ್, ಮೂವರ್, ನಾಲ್ವರ್, ಅಯ್ವರ್, ಅಱುವರ್, ಎಂಬಂತೆ ಲಕ್ಷ್ಯಾನುರೂಪಮಾಗಿ ಅಱಿವುದು.

ಸೂ ॥ ಅತೋऽನುಸ್ವಾರಃ ಪ್ರಥಮೈಕವಚನಸ್ಯ ॥ 45 ॥

ವೃ ॥ ಅಕಾರಾಂತಾತ್ ಲಿಂಗಾತ್ ಪರಸ್ಯ ಪ್ರಥಮೈಕವಚನಸ್ಯ ಅ[4]ನುಸ್ವಾರಾದೇಶೋ ಭವತಿ ॥

ಉ ॥ ಮರಂ, ನರಂ, ಧರ್ಮಂ, ದಾನಂ.

ಟೀ ॥ ಅತಃ—ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ. ಪ್ರಥಮೈಕವಚನಸ್ಯ—ಪ್ರಥಮೈಕವಚನದ ವಿಭಕ್ತಿಯ ಮಕಾರಕ್ಕೆ. ಅನುಸ್ವಾರಃ—ಸೊನ್ನೆಯಕ್ಕುಂ. ಉ ॥ (ವೃ. ನೋ.).

ಸೂ ॥ ಅನ್ಯಸ್ಮಾಲ್ಲೋಪಃ ॥ 46 ॥

ವೃ ॥ ಅನಕಾರಾಂತಾತ್ ಲಿಂಗಾತ್ ಉತ್ತರಸ್ಯ ಪ್ರ[5]ಥಮೈಕವಚನಸ್ಯ ಲೋಪೋ ಭವತಿ ॥

ಉ ॥ ಹರಿ, ಕರಿ, ಬಿದಿ, ನದಿ; ಮಧು, ವಧು, ವಿಧು, ಸಿಸು; ಪಿತೃ, ಸವಿತೃ; ಕೆಱೆ, ತೊಱೆ; ತೋಳ್, ಬಾಳ್.

---

1 ಏಭ್ಯಃ ಪರಂ. 2 ಇದು ಕೆಲವು ಪ್ರತಿಗಳಲ್ಲಿಲ್ಲ. 3 ಪೃಥಗ್ಯೋಗಕರಣಾತ್ ಪೃಥಗಪಿ. 4 ಮೋऽನುಸ್ವಾರೋ ಭವತಿ.
5 ಪ್ರಥಮಾವಿಭಕ್ತೇರೇಕವಚನಸ್ಯ.

ಟೀ ॥ ಅನ್ಯಸ್ಮಾತ್—ಅಕಾರಾಂತಮಲ್ಲದುೞಿದ ಸ್ವರಾಂತವ್ಯಂಜನಾಂತಂಗಳತ್ತಣಿಂ ಪರಮಾದ ಪ್ರಥಮೈಕವಚನದ ಮಕಾರಕ್ಕೆ. ಲೋಪಃ=ಲೋಪಮಕ್ಕುಂ. ಉ॥ (ವೃ. ನೋ).

ಸೂ ॥ ಗುಣೋಕ್ತೇರವಾವುಪಾಂತ್ಯಾವಧೇಃ ॥ 47 ॥

ವೃ ॥ ಗುಣವಚನಸ್ಯ ಶಬ್ದಸ್ಯ ಅವೌ ಪರೇ ಉಪಾಂತ್ಯಾವಧೇರವಯವಸ್ಯ ಲೋಪೋ ಭವತಿ॥

ಉ ॥ ಕಿಱಿಯುವು, ಪಿರಿಯುವು, ಅಸಿಯುವು.[1]

ಟೀ ॥ ಗುಣೋಕ್ತೇಃ—ಗುಣವಚನಕ್ಕೆ. ಅವೌ—ಸರ್ವನಾಮಗುಣವಚನನಾಮವುಂ ತದಂತೇ (41) ಎಂಬ ಸೂತ್ರದಿಂ ದ್ವಿತ್ವಬಹುತ್ವಕ್ಕೆ ಉಕ್ತಮಾದ 'ಅವು' ಪರಮಾಗೆ. ಉಪಾಂತ್ಯಾವಧೇಃ—ಕಡೆಯ ಅವಯವಕ್ಕೆ ಲೋಪಮಕ್ಕುಂ.

'ಕರಿದು' ಎಂಬ ಗುಣವಚನದ ಮುಂದೆ 'ಅವು' ಪರಮಾಗೆ, 'ಕರಿದು' ಎಂಬುದಱ ದುಕಾರಂ ಲೋಪಮಾಗಿ 'ಕರಿ+ಅವು' ಎಂದಿರೆ, ಯತ್ವಮಾಗಿ 'ಕರಿಯುವು' ಎಂದಾಯ್ತು. ಕರಿಯುವಂ, ಕರಿಯುವಱಿಂ, ಕರಿಯುವರ್ಕೆ, ಕರಿಯುವಱತ್ತಣಿಂ, ಕರಿಯುವಱ, ಕರಿಯುವಱೊಳ್. ಪಿರಿಯುವು, ಕಿಱಿಯುವು, ಅಸಿಯುವು, ಮೊದಲಾದ ಗುಣವಚನಂಗಳ್ ಪಿಂದಣಂತೆ ಸಿದ್ಧಮಪ್ಪುವು.

ಸೂ ॥ ಸರ್ವನಾಮ್ನಸ್ತದಾದೇರಪಿ ॥ 48 ॥

ವೃ ॥ ಸರ್ವನಾಮಸಂಜ್ಞಾನಾಂ[2] ಅವೌ ಪರೇ ಉಪಾಂತ್ಯಾವಧೇರವುಶಬ್ದಾದೇಶ್ಚ ಲೋಪೋ ಭವತಿ ॥

ಉ ॥ ಅವು, ಅವಂ, ಅವಱಿಂ, ಇತ್ಯಾದಿ. ಇವು ಇತ್ಯಾದಿ. ಉವು ಇತ್ಯಾದಿ.

ಟೀ ॥ ಸರ್ವನಾಮ್ನಃ—ಸರ್ವನಾಮಕ್ಕೆ ಅವು ಪರಮಾಗೆ. ತದಾದೇರಪಿ—ಅವು ಎಂಬುದಱ ಆದಿಗಂ ಲೋಪಮಕ್ಕುಂ. ಉ ॥ (ವೃ. ನೋ).

ಸೂ ॥ ಅದಂತಾನ್ನಾಗಮಃ ಪೂರ್ವಸ್ಮಿನ್ ಗಳಃ ॥ 49 ॥

ವೃ ॥ ಅಕಾರಾಂತಾತ್ ಶಬ್ದರೂಪಾತ್ ಗಳಃ ಪೂರ್ವಸ್ಮಿನ್ ನಕಾರಾಗಮೋ ಭವತಿ ॥

ಉ ॥ ಗಜಂಗಳ್, ಹಯಂಗಳ್.

ಬಹುಳಾಧಿಕಾರಾತ್ ಕ್ವಚಿದ್ವಿಕಲ್ಪಃ—ಮರಂಗಳ್, ಮರಗಳ್ ; ಕೊಳಂಗಳ್, ಕೊಳಗಳ್. ಅಕಾರಾಂತಾದಿತಿ ಕಿಂ ? ಮಡಿಗಳ್, ಮಡುಗಳ್, ಮನೆಗಳ್, ಊರ್ಗಳ್, ಸಾಲ್ಗಳ್.

ಟೀ ॥ ಅದಂತಾತ್—ಅಕಾರಾಂತಮಪ್ಪ ಶಬ್ದದತ್ತಣಿಂ ಪರಮಾಗಿ, ದ್ವಿತ್ವಬಹುತ್ವಕ್ಕೆ ಉಕ್ತಮಾದ, ಗಳಃ—ಗಳ್ ಪ್ರತ್ಯಯದ. ಪೂರ್ವಸ್ಮಿನ್—ಮೊದಲಲ್ಲಿ. ಪ್ರಕೃತಿಯ ಪರದಲ್ಲಿ, ನಾಗಮಃ—ನಕಾರಾಗಮಮಕ್ಕುಂ. ಉ ॥ (ವೃ. ನೋ).

---

1 ಇದಾದಮೇಲೆ, ಇರದಾದಾವಪಿ—ಇರರಾದಾವಪಿ ಕ್ವಚಿಲ್ಲೋಪೋ ಭವತಿ. ಪಂಡಿರ್. ಸ್ತ್ರೀಪುರುಷವಾಚಕೇಷ್ವಿರಾದಯೋ ಭವಂತ್ಯೇವ ॥ ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 2 ಇದಾದಮೇಲೆ ಅದು ಇದು ಉದೂನಾಂ ಎಂದು ಕೆಲವು ಪ್ರತಿಗಳಲ್ಲಿ ಇದೆ.

ಬಹುಳಶಬ್ದಾಧಿಕಾರದಿಂ ಕೆಲವೆಡೆಯೊಳ್ ವಿಕಲ್ಪದಿಂ ನಕಾರಾಗಮಮಕ್ಕುಂ. ಉ॥ (ವೃ. ನೋ.)

ಅಕಾರಾಂತಮಲ್ಲದೆ ಉೞಿದ ಸ್ವರಾಂತವ್ಯಂಜನಾಂತಂಗಳತ್ತಣಿಂ ಪರಮಾಗಿ ಗಳ್ ಪ್ರತ್ಯಯಮಾದೊಡಂ ನಡುವೆ ನಕಾರಾಗಮಮಾಗದು. ಉ॥ (ವೃ. ನೋ.)

ಸೂ ॥ ಸ್ವರಾದೌ ನಾಗಮಃ ಪುಂಸಿ ॥ 50 ॥

ವೃ ॥ ಅಕಾರಾಂತಾತ್ ಶಬ್ದಾತ್[1] ಸ್ವರಾದೌ ವಿಭಕ್ತಿಗಣೇ ಪರೇ ಪುಲ್ಲಿಂಗವಿವಕ್ಷಾಯಾಂ ನಕಾರಾಗಮೋ ಭವತಿ ॥

ಉ ॥ ದೇವನಂ, ದೇವನಿಂ, ದೇವನತ್ತಣಿಂ, ದೇವನ, ದೇವನೊಳ್; ಅ[2]ರಸನಂ ಕಂಡರ, ಸಚಿವನಿಂ ಮುಂಚೆ, ಕೆಳೆಯನ ಬಲದೊಳ್.

ಟೀ ॥ ಅಕಾರಾಂತಮಪ್ಪ, ಪುಂಸಿ=ಪುಲ್ಲಿಂಗಮಪ್ಪ ಶಬ್ದದಲ್ಲಿ. ಸ್ವರಾದೌ=ಸ್ವರಮನಾದಿಯಾಗುಳ್ಳ ವಿಭಕ್ತಿಗಳ್ ಪರಮಾಗುತ್ತಿರೆ ಆವಿಭಕ್ತಿಗಳ ಸ್ವರದ ಮೊದಲೊಳ್. ನಾಗಮಃ=ನಕಾರಾಗಮಮಕ್ಕುಂ.

'ಅರಸ + ಅಮ್' ಎಂದಿರೆ, ಪ್ರಕೃತಿಯ ಪರದಲ್ಲಿ ವಿಭಕ್ತಿಯ ಸ್ವರದ ಆದಿಯಲ್ಲಿ ನಕಾರಾಗಮಮಾಗಿ—ಅರಸನಂ. ಅರಸನಿಂ. ಅತಶ್ಚತುರ್ಥ್ಯಾಸ್ತೃತೀಯೋಽನುಸ್ವಾರಪೂರ್ವಃ ಪುಂಸಿ (62)—ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ ಚತುರ್ಥೀವಿಭಕ್ತಿಗೆ ಪುಲ್ಲಿಂಗದಲ್ಲಿ ಸೊನ್ನೆಯುಂ ಮೊದಲೊಳುಳ್ಳುದಾಗಿ ತನ್ನ ತೃತೀಯಾಕ್ಷರಮಕ್ಕುಂ—'ಅರಸಂಗೆ' ಎಂದಾಯ್ತು. ಅರಸನತ್ತಣಿಂ, ಅರಸನ, ಅರಸನೊಳ್.

ಸೂ ॥ ನಪುಂಸಕಲಿಂಗೇ ದಃ ॥ 51 ॥

ವೃ ॥ ಅಕಾರಾಂತಾತ್ ಶ[3]ಬ್ದಾತ್ ನಪುಂಸಕಲಿಂಗೇ ವಿವಕ್ಷಿತೇ ಸ್ವರಾದೌ ವಿಭಕ್ತಿಗಣೇ ಪರೇ ದಕಾರಾಗಮೋ ಭವತಿ ॥

ಉ ॥ ಮನದಿಂ ಬೇಗಂ, ವನದತ್ತಣಿಂ ಬಂದಂ, ಜಗದೊಳ್ ಸಂದಂ.

ಟೀ ॥ ನಪುಂಸಕಲಿಂಗೇ=ಅಕಾರಾಂತಮಪ್ಪ ನಪುಂಸಕಲಿಂಗದಲ್ಲಿ. ತೃತೀಯಾವಿಭಕ್ತಿ ಮೊದಲಾದ ವಿಭಕ್ತಿಗಳ ಸ್ವರದ ಆದಿಯೊಳ್, ದಃ=ದಕಾರಾಗಮಮಕ್ಕುಂ.
ಉ ॥ (ವೃ. ನೋ.)

ಸೂ ॥ ವಿಭಾಷಯಾಮಿ ಮ್ನೌ ॥ 52 ॥

ವೃ ॥ ಅಮಿ ದ್ವಿತೀಯೈಕವಚನೇ ಪರೇ ನಪುಂಸಕಲಿಂಗಾದಕಾರಾಂತಾತ್ ವಿಭಾಷಯಾ ಮ್ನೌ ಮಕಾರನಕಾರೌ ಭವತಃ ॥ ಸಂ[4]ಸ್ಕೃತೇ ಮಕಾರ ಏವ ॥

---

1 ಪುಲ್ಲಿಂಗಾತ್. ಪುಲ್ಲಿಂಗವಿವಕ್ಷಾಯಾಂ ಎಂಬುದಿಲ್ಲ. 2 ಇದರಿಂದ ಮುಂದೆ ಇರುವ ಉದಾಹರಣಗಳು ಒಂದು ಪ್ರತಿಯಲ್ಲಿಲ್ಲ. 3 ಸ್ವರಾದಿವಿಭಕ್ತಿಗಣೇ ಪರೇ ನಪುಂಸಕಲಿಂಗವಿಷಯೇ ದಕಾರಾಗಮೋ ಭವತಿ. 4 ಒಂದು ಪ್ರತಿಯಲ್ಲಿ ಈ ಭಾಗವಿಲ್ಲ.

ಉ ॥ ಪೊಲಮಂ, ಪೊಲನಂ; ನೆಲಮಂ, ನೆಲನಂ; ಕುಲಮಂ, ಬಲಮಂ.

ಟೀ ॥ ಅಮಿ—ಅಕಾರಾಂತಮಪ್ಪ ನಪುಂಸಕಲಿಂಗದಮುಂದೆ ದ್ವಿತೀಯೈಕವಚನದ 'ಅಮ್' ಇರೆ. ವಿಭಾಷಯಾ—ವಿಕಲ್ಪದಿಂ. ಮ್ನೌ—ಆ ಅಮ್ ವಚನದ ಆದಿಯಲ್ಲಿ ಮಕಾರನಕಾರಂಗಳಪ್ಪುವು. ಉ ॥ (ವೃ. ನೋ.)

ಸೂ ॥ ಅ[1]ನುಸ್ವಾರಸ್ಯ ಚ ॥ 53 ॥

ವೃ ॥ ಪ[2]ದಾಂತೇ ವರ್ತಮಾನಸ್ಯಾಪ್ಯನುಸ್ವಾರಸ್ಯ ಸ್ವರೇ ಪರೇ ಮಕಾರನಕಾರೌ ಭವತಃ ॥

ಉ ॥ ಇವನಧಿಕಬಲಂ, ಹರನಗಮಿಂತಿದು.

ಟೀ ॥ ಅನುಸ್ವಾರಸ್ಯ ಚ—ಪದದ ಕಡೆಯೊಳುಳ್ಳ ಸೊನ್ನೆಗಂ ಸ್ವರಂ ಪರಮಾಗೆ ಮಕಾರನಕಾರಂಗಳಪ್ಪುವು. ಉ ॥ (ವೃ. ನೋ.). ಸೂತ್ರದಲ್ಲಿಯ ಚಶಬ್ದದಿಂ ವಕಾರಮುಮಪ್ಪುದು.

ಸೂ ॥ ಉ[3]ದಂತಾತ್ತೃತೀಯಾದಿಷ್ವಿನಾಗಮೋ ಬಹುಳಂ ॥ 54 ॥

ವೃ ॥ ಉಕಾರಾಂತಾಲ್ಲಿಂಗಾತ್ ತೃತೀಯಾದಿವಿಭಕ್ತಿಗಣೇ ಪರೇ ಬಹುಳಂ ಇನಾಗಮೋ ಭವತಿ ॥

ಉ ॥ ಗುರುವಿನಿಂ ನೀತಿಜ್ಞಂ, ಮನುವಿನಿಂ ಮಿಗಿಲ್, ಪೆಂ[4]ಪಿನೊಳ್ ಸುರನಗಂ, ಗುರುವಿನ ಮ[5]ತಂ, ಮನುವಿನ ಕುಲಂ.

ಬಹುಳಗ್ರಹಣಾತ್ ಕ್ವಚಿನ್ನ ಭವತಿ.—ಗುರುವ ಮತಂ, ಮನುವ ಕುಲಂ.

ಬಹುಳಗ್ರಹಣಾತ್ ಕ್ವಚಿನ್ನಿತ್ಯಂ.—ಮನುವಿನೊಳ್, ಗುರುವಿನೊಳ್, ಮಡುವಿನೊಳ್.

ಟೀ ॥ ಉದಂತಾತ್—ಉಕಾರಾಂತಮಪ್ಪ ಲಿಂಗದತ್ತಣಿಂ. ತೃತೀಯಾದಿಷು—ತೃತೀಯೆ ಮೊದಲಾದ ವಿಭಕ್ತಿಗಳ್ ಪರಮಾಗೆ. ಬಹುಳಂ—ವಿಕಲ್ಪದಿಂದೆ. ಇನಾಗಮಃ—ಇನಾಗಮಮಕ್ಕುಂ. ಉ ॥ (ವೃ. ನೋ.)

ಸೂ ॥ ಅಱುಕಾರಸ್ಯ ಸಂಖ್ಯಾಸರ್ವನಾಮಗುಣವಚನೇಷು ॥ 55 ॥

ವೃ ॥ ಸಂಖ್ಯಾಸರ್ವನಾಮಗುಣವಚನವಿಷಯೇ ವರ್ತಮಾನಸ್ಯ ಉ[6]ದಂತಸ್ಯ ಶಬ್ದಸ್ಯ ತೃತೀಯಾದಿವಿಭಕ್ತಿಗಣೇ ಪರೇ ಅಱಾದೇಶೋ ಭವತಿ ॥

ಉ ॥ ಒಂದಱಿಂ, ಎರಡಱಿಂ, ಮೂರಱಿಂ, ಮೂಱರ್ಕೆ, ನಾಲ್ಕರ್ಕೆ; ಅದಱಿಂ, ಅವಱಿಂ, ಅವರ್ಕೆ, ಇದಱಿಂ, ಇವಱಿಂ, ಇವರ್ಕೆ; ಇನಿಯುವಱಿಂ, ಇನಿಯುವರ್ಕೆ, ಇನಿಯುವಱತ್ತಣಿಂ.

---

1 ಅನುಸ್ವಾರಸ್ಯಾಪಿ ಮೌ ವಾ. 2 ಅನುಸ್ವಾರಸ್ಯಾಪಿ ಸ್ವರೇ ಪರೇ ಮ್ನೌ ಭವತಃ । ವಿಕಲ್ಪೇನ ವಕಾರಃ. 3 ಉಕಾರಾಂತಾತ್. 4 ಪೆಂಪಿನಿಂ. 5 ಮಗಂ. 6 ಉಕಾರಸ್ಯ.

ಟೀ ॥ ಸಂಖ್ಯಾಸರ್ವನಾಮಗುಣವಚನೇಷು—ಸಂಖ್ಯಾಸರ್ವನಾಮಗುಣವಚನಂಗಳ ಕಡೆಯುಲ್ಲಿರ್ಪ. ಉಕಾರಸ್ಯ—ಉಕಾರಕ್ಕೆ. ತೃತೀಯಾವಿಭಕ್ತಿ ಮೊದಲಾದ ವಿಭಕ್ತಿಗಳ್ ಪರಮಾಗೆ, ಅಙ್—ಅಙಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ದಿಗ್ವಾಚಿಭ್ಯೋಽಣ್ ॥ 56 ॥

ವೃ ॥ ದಿಗ್ವಾಚಿಭ್ಯಃ ಶಬ್ದೇಭ್ಯಃ ತೃತೀಯಾದಿವಿಭಕ್ತಿಗಣೇ ಪರೇ ಅಂ[1]ತ್ಯಸ್ಯ ಅಣ್ ಭವತಿ ॥

ಉ ॥ ಮೂಡಣಿಂ, ಮೂಡಣ್ಗೆ; ಪಡುವಣಿಂ, ಪಡುವಣ್ಗೆ; ಬಡಗಣಿಂ, ಬಡಗಣ್ಗೆ; ತೆಂಕಣಿಂ, ತೆಂಕಣ್ಗೆ; ತೆಂಕಣ ದೆಸೆಯಿಂ, ಬಡಗಣ ಮೇರೆಯಿಂ.

ಟೀ ॥ ದಿಗ್ವಾಚಿಭ್ಯಃ—ದಿಕ್ಕಂ ನುಡಿವ ಶಬ್ದದತ್ತಣಿಂ ಪರಮಾದ ತೃತೀಯೆ ಮೊದಲಾದ ವಿಭಕ್ತಿಗಳ ಆದಿಯಲ್ಲಿ. ಅಣ್—ಅಣ್ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ವಾಲತಃ ಪ್ರಥಮಾದ್ವಿತೀಯಯೋಃ ॥ 57 ॥

ವೃ ॥ ಅತಃ ಅಕಾರಾಂತಾದ್ದಿಗ್ವಾಚಿನಃ ಶಬ್ದಾತ್ ಪ[2]ರಯೋಃ ಪ್ರಥಮಾದ್ವಿತೀಯಯೋಃ ಅ[3]ಲ್ ವಾ ಭವತಿ ॥

ಉ ॥ ಮೂಡಲ್, ಮೂಡ; ತೆಂಕಲ್, ತೆಂಕ; ಪಡುವಲ್, ಪಡುವ; ಬಡಗಲ್, ಬಡಗ.

ಟೀ ॥ ಅತಃ—ಅಕಾರಾಂತಮಪ್ಪ ದಿಕ್ಕಂ ಪೇೞ್ವ ಶಬ್ದದತ್ತಣಿಂ ಪರಮಾದ. ಪ್ರಥಮಾದ್ವಿತೀಯಯೋಃ—ಪ್ರಥಮೆದ್ವಿತೀಯೆಗಳ್ಗೆ. ವಾ—ವಿಕಲ್ಪದಿಂ. ಅಲ್—ಅಲ್ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)[4]

ಅತ್ತ, ಇತ್ತ, ಎಂಬ ಶಬ್ದಂಗಳ್ಗಂ ಪ್ರಥಮೆದ್ವಿತೀಯೆಗಳ್ಗೆ ಅಲ್ ಪ್ರತ್ಯಯಂ ವಿಕಲ್ಪದಿಂದಕ್ಕುಂ. ಉ ॥ ಅತ್ತ, ಅತ್ತಲ್; ಇತ್ತ, ಇತ್ತಲ್. ತೃತೀಯಾವಿಭಕ್ತಿ ಮೊದಲಾದುವರ್ಕೆ ಮೊದಲಂತೆ ಸಿದ್ಧಂ.

ಸೂ ॥ ಸಪ್ತಮ್ಯಾಂ ಚ ॥ 58 ॥

ವೃ ॥ ಅಕಾರಾಂತಾದ್ದಿಗ್ವಾಚಿನಃ ಶಬ್ದಾತ್ ಪ[5]ರಭೂತಾಯಾಃ ಸಪ್ತಮ್ಯಾಃ ಸ್ಥಾನೇ ತ[6]ದಲ್ ವಾ ಭವತಿ ॥ ಅ[7]ಲಭಾವಪಕ್ಷೇ ಪ್ರಥಮಾದ್ವಿತೀಯಯೋರಭಾವಾತ್—ದಿಗ್ವಾಚಿಭ್ಯೋಽಣ್— ಇತಿ ಅಣ್ ನ ಸ್ಯಾತ್ ॥

ಉ ॥ ಮೂಡಲಿರ್ದಂ, ಮೂಡಿರ್ದಂ; ತೆಂಕಲಿರ್ದಂ, ತೆಂಕಿರ್ದಂ; ಅತ್ತಲಿರ್ದಂ, ಅತ್ತಿರ್ದಂ; ಇತ್ತಲಿರ್ದಂ, ಇತ್ತಿರ್ದಂ.

---

1 ಅಣಾದೇಶೋ ಭವತಿ. 2 ಕೆಲವು ಪ್ರತಿಗಳಲ್ಲಿ ಈ ಪದವಿಲ್ಲ. 3 ವಿಕಲ್ಪೇನ ಅಲ್ ಭವತಿ. 4 ಉದಾಹರಣಗಳಾದ ಮೇಲೆ—ನಾ ಶಬ್ದಾದೇಕಸ್ಮಿನ್ ಪಕ್ಷೇ ವಿಭಕ್ತಯೋ ಲೋಪಾ ಭವಂತಿ—ಎಂದಿದೆ. 5 ಸಪ್ತಮ್ಯಾಂ ಪರಾಯಾಂ. 6 ಅಲ್. 7 ಈ ವಾಕ್ಯವು ಒಂದು ಪ್ರತಿಯಲ್ಲಿ ಮಾತ್ರ ಇದೆ.

ಟೀ ॥ ಸಪ್ತಮ್ಯಾಂ ಚ—ಅಕಾರಾಂತಮಪ್ಪ ದಿಕ್ಕಂ ಪೇೞ್ವ ಶಬ್ದದತ್ತಣಿಂ ಪರಮೂದ ಸಪ್ತಮೀವಿಭಕ್ತಿಗಂ ವಿಕಲ್ಪದಿಂ ಅಲ್ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ಉತ ಏತ್ ॥ 59 ॥

ವೃ ॥ ಉ[1]ಕಾರಾಂತಾದ್ದಿಗ್ವಾಚಿನಃ ಶಬ್ದಾತ್ ಪರಭೂತಾಯಾಃ ಸಪ್ತಮ್ಯಾಃ ಸ್ಥಾನೇ ಏಕಾರೋ ಭವತಿ ॥

ಉ ॥ ಮೇಗಿರ್ದುದು, ಕೆೞಗೆ ಪೋಲಂ, ಬಳಗೆ ಪೆಳಗು, ಪೊಱಗೆ ಕಟ್ಟಿಲೆ.

ದಿ[2]ಗ್ವಾಚಿಭ್ಯೋಽಣ್—ಇತಿ ಅಣಿ ಪ್ರಾಪ್ತೇ ಸಾಕ್ಷಾತ್ಸಪ್ತಮ್ಯಭಾವಾತ್ ಅಣ್ ನ ಸ್ಯಾತ್।

ಉತ ಇತಿ ಕಿಂ? ಅತ್ತಲ್, ಇತ್ತಲ್.

ಟೀ ॥ ಉತಃ—ದಿಕ್ಕಂ ಪೇೞ್ವ ಶಬ್ದದ ಕಡೆಯ ಉಕಾರಕ್ಕೆ. ಏತ್—ಸಪ್ತಮೀವಿಭಕ್ತಿ ಪರಮಾಗೆ ಏಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ಅಂತೇ ದಂ ತೃತೀಯಾಯಾಃ ॥ 60 ॥

ವೃ ॥ ತೃತೀಯಾವಿಭಕ್ತ್ಯಂತಸ್ಯ ಶ[3]ಬ್ದಸ್ಯಾಂತೇ ದಂ ಭವತಿ ಸ್ವಾರ್ಥೇ ॥

ಉ ॥ ದಾನದಿಂದಂ, ದಯೆಯಿಂದಂ, ಗತಿಯಿಂದಂ, ಮತಿಯಿಂದಂ.

ಟೀ ॥ ತೃತೀಯಾಯಾಃ—ತೃತೀಯಾವಿಭಕ್ತಿಯ. ಅಂತೇ—ಕಡೆಯಲ್ಲಿ. ಸಿದ್ಧಮಾದ ಪದದ ಮುಂದೆ, ದಂ—ದಂ ಎಂಬುದಕ್ಕುಂ. ಉ ॥ (ವೃ. ನೋ.)

ಸೂ ॥ ಏದಂತತಾ ಚ ॥ 61 ॥

ವೃ ॥ ತಸ್ಯ ತೃತೀಯಾಂತಸ್ಯ ಶಬ್ದರೂಪಸ್ಯ ಏಕಾರಾಂತತಾ ಚ ಭವತಿ ॥

ಉ ॥ ಅದಱಿಂದೆ, ಯದೃಚ್ಛೆಯಿಂದೆ, ಗಂಧದಿಂದೆ.

ನ[4]ಪುಂಸಕೇ ಕೇವಲಾದಪಿ । ಉ ॥ ಗಂಧದೆ, ನೆಲದೆ, ಪೊಲದೆ, ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ.

ಟೀ ॥ ಏದಂತತಾ ಚ—ಆ ತೃತೀಯೆಗಾಗಮಮಾದ 'ದಂ' ಎಂಬುದರ್ಕೆ ಅನುಸ್ವಾರಂ ಲೋಪಮಾಗಿ ಏಕಾರಾಂತತೆಯುಮಕ್ಕುಂ. ಉ ॥ (ವೃ. ನೋ.)

ಕೆಲವೆಡೆಯೊಳ್ ಬಱಿಯ ಏಕಾರಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ಅ[5]ತಶ್ಚತುರ್ಥ್ಯಾಸ್ತೃತೀಯೋಽನುಸ್ವಾರಪೂರ್ವಃ ಪುಂಸಿ ॥ 62 ॥

ವೃ ॥ ಅಕಾರಾಂತಾತ್ ಪು[6]ಲ್ಲಿಂಗಾತ್ಪರಭೂತಾಯಾಶ್ಚತುರ್ಥೀವಿಭಕ್ತೇಃ ಅನುಸ್ವಾರಪೂರ್ವಸ್ತೃತೀಯೋ ಭವತಿ ॥

1 ದಿಗ್ವಾಚಿಸಂಬಂಧಿನ ಉಕಾರಸ್ಯ ಸಪ್ತಮೀವಿಭಕ್ತೌ ಪರಾಯಾಮೇಕಾರಾದೇಶೋ ಭವತಿ. 2 ಈ ವಾಕ್ಯವು ಒಂದು ಪ್ರತಿಯಲ್ಲಿ ಮಾತ್ರ ಇದೆ. 3 ಶಬ್ದಸ್ಯ ತದಂತೇ ದಂ ಭವತಿ. 4 ಈ ಭಾಗವು ಒಂದು ಪ್ರತಿಯಲ್ಲಿ ಮಾತ್ರ ಇದೆ. 5 ಅಕಾರಾಂತಾತ್. 6 ಲಿಂಗಾತ್ಪರಸ್ಯಶ್ಚತುರ್ಥ್ಯಾಃ ಪುಂಸಿ,

ಉ॥ ನೃಪಂಗೆ, ದೇವಂಗೆ, ಇಂದ್ರಂಗೆ, ಚಂದ್ರಂಗೆ, ಅಯ್ಯಂಗೆ, ಅಪ್ಪಂಗೆ, ಪೆಱಂಗೆ, ಅವಂಗೆ.

ಟೀ॥ ಅತಃ—ಅಕಾರಾಂತವಪ್ಪ ಲಿಂಗದತ್ತಣಿಂ ಪರವಪ್ಪ. ಚತುರ್ಥ್ಯಾಃ—ಚತುರ್ಥೀವಿಭಕ್ತಿಗೆ. ಪುಂಸಿ—ಪುಲ್ಲಿಂಗದಲ್ಲಿ. ಅನುಸ್ವಾರಪೂರ್ವಃ—ಸೊನ್ನೆಯುಂ ಮೊದಲೊಳುಳ್ಳುದಾಗಿ. ತೃತೀಯಃ—ತನ್ನ ತೃತೀಯಾಕ್ಷರವಕ್ಕುಂ. ಉ॥ (ವೃ. ನೋ.)

ಸೂ॥ ವಾ ನಪುಂಸಕೇ ದ್ವಿತ್ವಂ ॥ 63 ॥

ವೃ॥ ಅ[1]ಕಾರಾಂತಾತ್ ಪರಭೂತಾಯಾಶ್ಚತುರ್ಥ್ಯಾಃ ನಪುಂಸಕಲಿಂಗವಿಷಯೇ ದ್ವಿತ್ವಂ ವಾ ಭವತಿ ॥

ಉ॥ ಕುಲಕ್ಕೆ, ಕುಲಕೆ; ಜಲಕ್ಕೆ, ಜಲಕೆ; ಮನಕ್ಕೆ, ಮನಕೆ; ಬನಕ್ಕೆ, ಬನಕೆ; ನೆಲಕ್ಕೆ, ನೆಲಕೆ; ತೃಣಕ್ಕೆ, ತೃಣಕೆ.

ಟೀ॥ ಅಕಾರಾಂತವಪ್ಪ ಲಿಂಗದತ್ತಣಿಂ ಪರವಪ್ಪ ಚತುರ್ಥೀವಿಭಕ್ತಿಗೆ, ನಪುಂಸಕೇ—ನಪುಂಸಕಲಿಂಗದಲ್ಲಿ. ವಾ—ವಿಕಲ್ಪದಿಂ. ದ್ವಿತ್ವಂ—ದ್ವಿತ್ವವಕ್ಕುಂ. ಉ॥(ವೃ. ನೋ.)

ಸೂ॥ ಶೇಷಾತ್ತೃತೀಯತ್ವಂ ॥ 64 ॥

ವೃ॥ ಅಕಾರಾಂತಾದವಶೇಷಾತ್ ಶಬ್ದರೂಪಾತ್ ಪರಸ್ಯಾಃ ಚತುರ್ಥ್ಯಾಃ ತೃತೀಯತ್ವಮೇವ ಭವತಿ ॥

ಉ॥ ಯತಿಗೆ, ಮತಿಗೆ, ಗಿಡುಗೆ, ಮಡುಗೆ, ಮನೆಗೆ, ನೆಲೆಗೆ, ಊರ್ಗೆ, ನೀರ್ಗೆ, ಕೆಯ್ಗೆ, ತೋಳ್ಗೆ, ಪವಣ್ಗೆ, ಕಲ್ಗೆ.

ಟೀ॥ ಶೇಷಾತ್—ಅಕಾರಾಂತಮಲ್ಲದುೞಿದ ಲಿಂಗದತ್ತಣಿಂ ಪರವಪ್ಪ ಚತುರ್ಥೀವಿಭಕ್ತಿಯ ಕೆಕಾರಕ್ಕೆ. ತೃತೀಯತ್ವಂ—ಆ ಕವರ್ಗದ ತೃತೀಯಾಕ್ಷರವಪ್ಪ ಗಕಾರವಕ್ಕುಂ. ಉ॥ (ವೃ. ನೋ.)

ಸೂ॥ ಸ[2]ರ್ವನಾಮ್ನೋಽಲಿಂಗಾದೋ ವಾ ॥ 65 ॥

ವೃ॥ ಅಲಿಂಗಾತ್ಸರ್ವನಾಮ್ನಃ ಪರಸ್ಯಾಶ್ಚತುರ್ಥ್ಯಾಃ ಪೂರ್ವಂ ಅಕಾರೋ ವಾ ಭವತಿ ॥

ಉ॥ ಅದರ್ಕೆ, ಅದಕೆ; ಇದರ್ಕೆ, ಇದಕೆ.

ಟೀ॥ ಅಲಿಂಗಾತ್—ಅಲಿಂಗಮಪ್ಪ. ಸರ್ವನಾಮ್ನಃ—ಸರ್ವನಾಮದತ್ತಣಿಂ ಪರವಪ್ಪ ಚತುರ್ಥೀವಿಭಕ್ತಿಯ ಮೊದಲೊಳ್. ವಾ—ವಿಕಲ್ಪದಿಂ. ಅಃ—ಅಕಾರವಕ್ಕುಂ. ಉ॥ (ವೃ. ನೋ.)

---

1 ನಪುಂಸಕಲಿಂಗವಿಷಯಾದಕಾರಾಂತಾತ್ಪರತ್ರ ವ್ಯವಸ್ಥಿತಾಯಾಶ್ಚತುರ್ಥ್ಯಾಃ ದ್ವಿತ್ವಂ ವಾ ಭವತಿ. 2 ಕೆಲವು ಪ್ರತಿಗಳಲ್ಲಿ ಈ ಸೂತ್ರವೇ ಇಲ್ಲ. ಒಂದರಲ್ಲಿ—ಸರ್ವನಾಮ್ನೋಽಲಿಂಗಾದವಾ—ಎಂದಿದೆ. ಮತ್ತೊಂದರಲ್ಲಿ—ಸರ್ವನಾಮ್ನೋಽಲಿಂಗಾದವಾ । ಸರ್ವನಾಮ್ನೋಽಲಿಂಗಾತ್ಪರಸ್ಯಶ್ಚತುರ್ಥೀವಿಭಕ್ತೇಃ ಪೂರ್ವೋಽತ್ರಾ ಅಕಾರೋ ಭವತಿ ವಾ—ಎಂದಿದೆ.

ಸೂ ॥ ಅತ್ತಣಿಂ ತ್ವ[1]ನುಸಂಧೇಯಃ ಪಂಚಮ್ಯಾಃ ॥ 66 ॥

ವೃ ॥ ಪಂಚಮ್ಯಂತಸ್ಯ[2]ಶಬ್ದಸ್ಯ ತದಭಿವ್ಯಕ್ತ್ಯೆಯೇ ಪುನಸ್ತದಂತೇ ಅತ್ತಣಿಮಿತಿ ಶಬ್ದೋऽನುಸಂಧೇಯಃ ಅ[3]ನುಪ್ರಯುಜ್ಯತ ಇತ್ಯರ್ಥಃ ॥

ಉ ॥ ಊರತ್ತಣಿಂ ಬಂದಂ, ಅವನತ್ತಣಿಂ ಭಯಂ, ಕೆಱೆಯತ್ತಣಿಂ ತಂದಂ.

ಟೀ ॥ ಪಂಚಮ್ಯಾಃ = ಪಂಚಮೀವಿಭಕ್ತಿಗೆ. ಅತ್ತಣಿಂ = ಅತ್ತಣಿಂ ಎಂಬ ಶಬ್ದಂ. ಅನುಸಂಧೇಯಃ = ಪತ್ತಿಸಲ್ಪಡವೇೞ್ಕುಂ. ಉ ॥ (ವೃ. ನೋ.)

ಸೂ ॥ ದೀರ್ಘಾದೇಶಃ ಷಷ್ಠ್ಯಾ ಯಥೇಷ್ಟಂ ॥ 67 ॥

ವೃ ॥ ಷಷ್ಠ್ಯಂತಸ್ಯ ಶಬ್ದಸ್ಯ ದೀರ್ಘಾದೇಶಃ ಕಾಮಚಾರತೋ ವೇ[4]ದಿತವ್ಯಃ ॥

ಉ ॥ ನ[5]ರೇಂದ್ರನಾ ಪರಿಜನಂ, ಎಸೆದತ್ತಾ ಲೋಕವಮಾಕಾಂತೆಯಾ, ಪರ್ವ ಧರ್ಮದಾ. ಕಾ[6]ಮಚಾರಾದಿಹ ನ ಭವತಿ । ಮದನನ ಕೆಯ್ಯುವೆಲ್ಲಿದನನಂಗನ ಕೆಯ್ಪಿಡಿಯೆಲ್ಲಿದಂ.

ಟೀ ॥ ಈ ಕರ್ಣಾಟಕಭಾಷೆಯೊಳ್, ಷಷ್ಠ್ಯಾಃ = ಷಷ್ಠೀವಿಭಕ್ತಿಗೆ. ಯಥೇಷ್ಟಂ = ಇಷ್ಟಬಪ್ಪಂತು. ದೀರ್ಘಾದೇಶಃ = ದೀರ್ಘಾದೇಶವಕ್ಕುಂ. ಉ ॥ (ವೃ. ನೋ.)

ಸೂ ॥ ದ್ವಿತೀಯಾಂತಸ್ಯ ವಾ ಸ್ವರೇ ॥ 68 ॥

ವೃ ॥ ದ್ವಿ[7]ತೀಯಾಂತಸ್ಯ ಪದಸ್ಯ ಸ್ವರೇ ಪರೇ ವಾ ದೀರ್ಘೋ ಭವತಿ ॥

ಹ[8]ರಿಪಾಲಪ್ರಯೋಗಃ—ಕಲ್ಲಾನೇಱಿದಂ, ಕಲ್ಲನೇಱಿದಂ; ಬಿಲ್ಲಾನೇಱಿಸಿದಂ, ಬಿಲ್ಲನೇಱಿಸಿದಂ. ತಥಾ ಗುಣವರ್ಮಕವಿಪ್ರಯೋಗಃ—

ಎ[9]ನಿತ್ತನಿತ್ತಂಬುಜಪತ್ರನೇತ್ರೆಯಾ ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ ॥
ಅನಿತ್ತನಿತ್ತಂ ವನದೊಳ್ ವನೇಚರಂ ।
ತನತ್ತು ಬಿಲ್ಲಾನದನೊತ್ತಿ ಕೀಸುಗುಂ ॥

ಟೀ ॥ ದ್ವಿತೀಯಾಂತಸ್ಯ = ದ್ವಿತೀಯಾವಿಭಕ್ತ್ಯಂತಮಪ್ಪ ಪದಕ್ಕೆ. ಸ್ವರೇ = ಸ್ವರಂ ಪರಮಾಗೆ. ವಾ = ವಿಕಲ್ಪದಿಂ ದೀರ್ಘಮಕ್ಕುಂ. ಉ ॥ ಬಿಲ್ಲಂ, ಬಿಲ್ಲಾಂ.

ಮತ್ತಮನ್ಯವ್ಯಾಕರಣಸೂತ್ರಮಿಂತೆಂದಪುದು—

1 ತ್ವಾನುಸಂಧೇಯಃ. 2 ಶಬ್ದಾಭಿವ್ಯಕ್ತ್ಯೇ. 3 ಇದು ಒಂದು ಪ್ರತಿಯಲ್ಲಿ ಮಾತ್ರ ಇದೆ. 4 ವಿಧಾತವ್ಯಃ. 5 ನೃಪೇಂದ್ರನಾ. 6 ಕಾಮಚಾರತ್ವವಿಧಾನಾನ್ನ ಭವತಿ ಚ, ಕಾಮಚಾರತೋ ದೀರ್ಘೋ ನ ಭವತಿ, ಯಥೇಷ್ಟತ್ವಾತ್ಕ್ವಚಿದ್ದೀರ್ಘೋ ನ. 7 ದ್ವಿತೀಯಾವಿಭಕ್ತ್ಯಂತಸ್ಯ ಸ್ವರೇ ಪರೇ. 8 ಒಂದು ಪ್ರತಿಯಲ್ಲಿ ಹರಿಪಾಲಪ್ರಯೋಗಃ—ಎಂಬುದೂ, ತಥಾ ಗುಣವರ್ಮಕವಿಪ್ರಯೋಗಃ—ಎಂಬುದೂ ಅದರ ಕೆಳಗೆ ಕೊಟ್ಟಿರುವ ಉದಾಹರಣಪದ್ಯವೂ ಇಲ್ಲ. 9 ಕಾವ್ಯಾವಲೋಕನ, ಪದ್ಯ 359.

ಆ[1]ದಿಸ್ವರಪದಮಂತ್ಯದೊ।
ಳಾದೆಡೆಯೊಳ್ ದೀರ್ಘಮಕ್ಕು ಮೆರಡನೆಯ ವಿಭ॥
ಕ್ತ್ಯಾದಾನಪದಂ ದೀರ್ಘಂ।
ಪಾದಾಂತ್ಯದೊಳಱಿದ ಠಾವಿನೊಳ್ ಸ್ವಚ್ಛಂದಂ॥

ಇದರ್ಕೆ ಗುಣವರ್ಣನ ಪ್ರಯೋಗಂ—(ವೃ. ನೋ.)

ಮತ್ತಂ ಶಿಷ್ಟಪ್ರಯೋಗಂ—

ನೃ[2]ಪನಾನಭಿನುತಮನನಾ।
ನುಪಮೇತರನಾನಪಾರಕೀರ್ತಿಧ್ವಜನಂ॥
ವಿಪುಳಗುಣಜ್ಞನನುಚಿತನ।
ನಪಗತದೋಷನನುದಾರಚರಿತೋದಯನಂ॥

ಇಂತು ದ್ವಿತೀಯೆ ಪಿರಿದುಂ ದೀರ್ಘಪ್ರಯೋಗಂ ವಿರಸಂ ಶಿಥಿಲಬಂಧಮೆನಿಸುಗುಂ.

ನೃ[2]ಪನನಭಿಮಾನಧನನನ।
ನುಪಮನನತಿಶಯವಿಶಾಲಕೀರ್ತಿಧ್ವಜನಾ॥
ನುಪಚಿತಗುಣನಾನುಚಿತನ।
ನ[3]ಪಗತದೋಷನನುದಾರಚರಿತೋದಯನಂ॥

ಸೂ ॥ ಸಪ್ತಮ್ಯಾ ಅಲ್ಲಿ ವಾ ॥ 69 ॥

ವೃ॥ ಲಿಂ[4]ಗಸಂಜ್ಞಕಾದ್ವಿಹಿತಾಯಾಃ ಸಪ್ತಮ್ಯಾಃ ಸ್ಥಾನೇ ಅಲ್ಲಿ ವಾ ಭವತಿ॥

ಉ॥ ಮನದೊಳ್, ಮನದಲ್ಲಿ; ಬನದೊಳ್, ಬನದಲ್ಲಿ.

ಟೀ॥ ಸಪ್ತಮ್ಯಾಃ=ಲಿಂಗದತ್ತಣಿಂ ಪರಮಾದ ಸಪ್ತಮೀವಿಭಕ್ತಿಯ 'ಒಳ್' ಎಂಬಲ್ಲಿ. ವಾ=ವಿಕಲ್ಪದಿಂ. ಅಲ್ಲಿ='ಅಲ್ಲಿ' ಎಂಬುದಕ್ಕುಂ. ಉ॥ (ವೃ. ನೋ.)

ಸೂ ॥ ಆಮಂತ್ರಣೇ ಪ್ರಥಮೈಕವಚನಸ್ಯ ಲೋಪಃ ॥ 70 ॥

ವೃ॥ ಆಮಂತ್ರಣಾರ್ಥೇ ವಿಹಿತಸ್ಯ ಪ್ರಥಮೈಕವಚನಸ್ಯ ಲೋಪೋ ಭವತಿ॥

ಉ॥ ಎಲೆ ದೇವ, ಎಲೆ ಭೂಪ, ಎಲೆ ಅಣ್ಣ, ಎಲೆ ಅಕ್ಕ.

ಟೀ॥ ಆಮಂತ್ರಣೇ=ಸಂಬೋಧನೆಯಲ್ಲಿ. ಪ್ರಥಮೈಕವಚನಸ್ಯ=ಪ್ರಥಮೈಕವಚನದ ಮಕಾರಕ್ಕೆ. ಲೋಪಃ=ಲೋಪಮಕ್ಕುಂ. ಉ॥ (ವೃ. ನೋ.)

ಸೂ ॥ ಏ[5]ತ್ವಂ ವಾ ತದಂತಸ್ಯ ॥ 71 ॥

ವೃ॥ ಆ[6]ಮಂತ್ರಣಾರ್ಥೇ ವರ್ತಮಾನಸ್ಯ ಪ್ರಥಮಾವಿಭಕ್ತೇರೇಕವಚನಸ್ಯ ಏತ್ವಂ ವಾ ಭವತಿ॥

1 ಕವಿರಾಜಮಾರ್ಗ 2—15. 2 ಡಿಟೋ. 2—16. 3 ನಪೇತದೋಷ. 4 ಲಿಂಗಸಂಜ್ಞಾಯಾಂ ವಿಹಿತಾಯಾಃ. 5 ವಾಮಂತ್ರಣ ಪ್ರಥಮಾಯಾ ಏತ್ವಂ. 6 ಆಮಂತ್ರಣಪ್ರಥಮೈಕವಚನಸ್ಯ ವಿಕಲ್ಪೇನ ಏತ್ವಂ ಭವತಿ.

ಉ॥ ಎಲೆ ಮಂದಾನಿಲನೇ, ತಂಪೆಲರೇ, ಮಾವೇ, ಮಲ್ಲಿಗೆಯೇ, ಇಂದೋಳವೇ.

ವಾ[1]ಶಬ್ದೋಽಯಂ ವ್ಯವಸ್ಥಿತವಿಭಾಷಾಯಾಂ ವರ್ತಮಾನೋ ಗೃಹ್ಯತೇ । ತೇನ ಕ್ವಚಿನ್ನ ಭವತಿ—ಎಲೆ ದೇವ, ಎಲೆ ಭೂಪ, ಇತ್ಯಾದಿ.

ಟೀ॥ ತದಂತಸ್ಯ=ಆಮಂತ್ರಣಾರ್ಥದಲ್ಲಿ ವರ್ತಿಸುವ ಪ್ರಥಮಾವಿಭಕ್ತಿಯ ಏಕವಚನದ ಮಕಾರಕ್ಕೆ. ವಾ=ವಿಕಲ್ಪದಿಂ. ಏತ್ವಂ=ಏಕಾರಮಕ್ಕುಂ. ಉ॥ (ವೃ. ನೋ.)

ಸೂ ॥ ಇರಾಶ್ಲೇಷೋ ಗಳಃ ಸಂ[2]ಬೋಧನ ವಿಷಯೇ ॥ 72 ॥

ವೃ॥ ದ್ವಿ[3]ತ್ವಬಹುತ್ವಯೋರ್ವರ್ತಮಾನಸ್ಯ ಗಳಃ ಇರಾಶ್ಲೇಷೋ ಭವತಿ ಸಂಬೋಧನ ವಿಷಯೇ ॥

ಉ॥ ದೈವಂಗಳಿರ, ದೇವತೆಗಳಿರ, ಮಾಮರಂಗಳಿರ, ನಂದನಂಗಳಿರ.

ಇ[4]ರೋ ಗಳ ಇತಿ ಪಂಚಮ್ಯಾ ಸಿದ್ಧೇ ಆಶ್ಲೇಷಗ್ರಹಣಂ ದ್ವಿತ್ವಬಹುತ್ವವ್ಯಕ್ತ್ಯರ್ಥಂ । ತೇನ ಕ್ವಚಿದಿರೋ ಭವತಿ—ನಂಟರಿರ, ನಲ್ಲರಿರ, ಪಂಡಿತರ್ಕಳಿರ, ತಾಯ್ವಿರ್ಕಳಿರ.

ಟೀ॥ ಸಂಬೋಧನವಿಷಯೇ=ಆ ಸಂಬೋಧನೆಯಲ್ಲಿ. ಗಳಃ=ದ್ವಿತ್ವಬಹುತ್ವಕ್ಕೆ ಉಕ್ತಮಾದ ಗಳ್ ಪ್ರತ್ಯಯದ ಮುಂದೆ. ಇರಾಶ್ಲೇಷಃ=ಇರಾಗಮಮಕ್ಕುಂ.
ಉ॥ (ವೃ. ನೋ.)

ಅನ್ಯಪ್ರಯೋಗಂ—

ಸು[5]ರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ ।
ತರಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತಸುಂ ॥
ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ ।
ರ್ನೆರಮೆಱೆದುಯ್ವೊ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪುದೇ ॥

ಸೂ ॥ ದೀರ್ಘೋಕ್ತಿರ್ನಯಸೇನಸ್ಯ ॥ 73 ॥

ವೃ॥ ಸಂಬೋಧನಾರ್ಥೇ ವರ್ತಮಾನಸ್ಯ ಸರ್ವಸ್ಯಾಪಿ ಶ[6]ಬ್ದಸ್ಯ ನಯಸೇನಮುನೇ ರ್ಮತೇ ದೀ[7]ರ್ಘೋಕ್ತಿರ್ಭವತಿ ॥

ಉ॥ ದೇವಾ ಬಿನ್ನಪಂ, ದೇವ ಬಿನ್ನಪಂ; ಸುಗ್ಗೀ, ಸುಗ್ಗಿ; ವಿಧೂ, ವಿಧು; ಕಾಂತೇ, ಕಾಂತೆ; ಗಿ[8]ಳಿಗಳಿರಾ, ಗಿಳಿಗಳಿರ.

ಟೀ॥ ನಯಸೇನಸ್ಯ=ನಯಸೇನಾಚಾರ್ಯನ ಮತದಿಂ. ದೀರ್ಘೋಕ್ತಿಃ=ಸಂಬೋಧನೆಯೊಳ್ ದೀರ್ಘಾದೇಶಮಕ್ಕುಂ. ಉ॥ (ವೃ. ನೋ.)

ಇತಿ ಕರ್ಣಾಟಕವ್ಯಾಕರಣವಿವರಣೇ ವಿಭಕ್ತಿವಿಧಾನಂ ನಾಮ
ತೃತೀಯಃ ಪರಿಚ್ಛೇದಃ.

---

1 ವಾಶಬ್ದೇನ ಕ್ವಚಿನ್ನ ಭವತಿ. 2. ಸಂಬೋಧನವಿಷಯೇ ಎಂಬುದು ಒಂದು ಪ್ರತಿಯಲ್ಲಿಲ್ಲ. 3 ಸಂಬೋಧನದ್ವಿತ್ವಬಹುತ್ವವಿಷಯೇ ಗಳಂತೇ ಇರಾಶ್ಲೇಷೋ ಭವತಿ. 4 ಈ ಭಾಗವು ಒಂದು ಪ್ರತಿಯಲ್ಲಿ ಮಾತ್ರ ಇದೆ. 5 ಕಾವ್ಯಾವಲೋಕನ, ಪದ್ಯ 130. ಆದಿಪುರಾಣ, 3—4. 6 ಶಬ್ದರೂಪಸ್ಯ. 7 ದೀರ್ಘೋ ಭವತಿ. 8 ಇದಕ್ಕೆ ಹಿಂದೆ ನವಿಲೇ ನವಿಲೇ ಎಂದು ಒಂದು ಪ್ರತಿಯಲ್ಲಿದೆ.

4. ಕಾ ರ ಕ ವಿ ಧಾ ನ ೦.

ಅ[1]ಥ ಕಾರಕಂ ನಿರೂಪ್ಯತೇ.

ಟೀ॥ ಅಥ=ಸಂಜ್ಞಾಸಂಧಿವಿ[2]ಭಕ್ತಿವ್ಯಾಖ್ಯಾನಾನಂತರಂ. ಕಾರಕಂ=ಕರ್ತೃಕರ್ಮಕರಣಸಂಪ್ರದಾನಾಪಾದಾನಸ್ವಾಮ್ಯಾಧಿಕರಣಂಗಳೆಂಬ ಪೆಸರನುಳ್ಳ ಕಾರಕಂ. ಯಥಾಕ್ರಮದಿಂ, ನಿರೂಪ್ಯತೇ=ಪೇೞಲ್ಪಡುತ್ತಿರ್ಪುದು.

ಸೂ ॥ ಲಿಂಗಾರ್ಥವಚನಮಾತ್ರೇ ಪ್ರಥಮಾ ॥ 74 ॥

ವೃ॥ ಲಿಂಗಾರ್ಥವಚನಮಾತ್ರೇ ವಿವಕ್ಷಿತೇ ಪ್ರಥಮಾವಿಭಕ್ತಿರ್ಭವತಿ ॥

ಉ॥ ಲಿಂ[3]ಗಮಾತ್ರೇ ತಾವತ್—ದೇವಂ, ನೃಪಂ; ನಾರಿ, ನಲ್ಲಳ್; ಕುಲಂ, ಜ[4]ಲಂ. ಅರ್ಥಮಾತ್ರೇ—ಉಚ್ಚಂ, ನೀಚಂ.[5] ವಚನಮಾತ್ರೇ—ಬಂದಾನುಂ, ಎರಡಾನುಂ.

ಟೀ॥ ಲಿಂಗಾರ್ಥವಚನಮಾತ್ರೇ=ಲಿಂಗದಲ್ಲಿಯುಂ ಅರ್ಥದಲ್ಲಿಯುಂ ವಚನದಲ್ಲಿಯುಂ. ಪ್ರಥಮಾ=ಪ್ರಥಮಾವಿಭಕ್ತಿಯಪ್ಪುದು. ಉ॥ (ವೃ. ನೋ.)

ಸೂ ॥ ಸಂಬೋಧನೇ ಚ ॥ 75 ॥

ವೃ॥ ಸಂಬೋಧನಮಭಿಮುಖೀಕ[6]ರಣಂ ತ[7]ದರ್ಥೇಽಪಿ ಪ್ರಥಮಾವಿಭಕ್ತಿರ್ಭವತಿ ॥

ಉ॥ ನೃಪೇಂದ್ರ, ಕಾಂತೆ, ಕೊಳನೇ, ವನಮೆ, ವಸಂತನೆ.

ಟೀ॥ ಸಂಬೋಧನೇ ಚ=ಸಂಬೋಧನೆಯೆಂಬುದು ಇದಿರೊಳಿರ್ಪರಂ ತನ್ನತ್ತಲ್ ಮುಂದುಮಾಡಿಕೊ[8]ಳ್ವುದಱ ಪೆಸರ್, ಆ ಸಂಬೋಧನೆಯಲ್ಲಿಯುಂ ಪ್ರಥಮಾವಿಭಕ್ತಿಯಪ್ಪುದು. ಉ॥ (ವೃ. ನೋ). ಅನ್ಯಪ್ರ[9]ಯೋಗಂ—

ನೀಲಾಳಕೆ ಮಂಜುಳಮೃಗ।
ಬಾಲೇಕ್ಷಣೆ ತುಂಗಕುಚೆ ಸರೋಜಾಸ್ಯೇ ಲಸ॥
ದ್ಭಾಲಗಜಗಮನೆ ನಿ[10]ನ್ನುಮ।
ನಾಲೋಕಿಸಿ ಸೋಲದಿರ್ಪ ಗಂಡರುಮೊಳರೇ ॥

---

1 ಈ ವಾಕ್ಯವು ಕನ್ನಡಟೀಕೆಯಲ್ಲಿಮಾತ್ರ ಇದೆ; ಇತರಪ್ರತಿಗಳಲ್ಲಿಲ್ಲ. ಇದು ಸೂತ್ರವಾಗಿ ಕಾಣುವುದಿಲ್ಲ. 2 ವಿಭಕ್ತಿ, ಪದಸಿದ್ಧಿವ್ಯಾಖ್ಯಾನಾನಂತರಂ. 3 ಲಿಂಗೇ. 4 ಜನಂ. 5 ಇದರಮುಂದೆ, ಅತ್ರ ಅತೋಽನುಸ್ವಾರ ಇತ್ಯನುಸ್ವಾರಃ—ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 6 ಕರಣಮಾತ್ರಂ. 7 ತಸ್ಮಿನ್ ವಿವಕ್ಷಿತೇ. 8 ಕೊಳ್ವುದು. 9 ಗ್ರಂಥಲಕ್ಷಣಂ. 10 ನಿನ್ನನು। ಮಾಲೋಕಿಸಿ.

ಸೂ ॥ ಕ[1]ರ್ಮಣಿ ದ್ವಿತೀಯಾ ॥ 76 ॥

ವೃ ॥ ಯ[2]ತ್ಕ್ರಿಯತೇ ತತ್ಕರ್ಮ ಉಚ್ಯತೇ । ತ[3]ದೇಕಂ ನಿರ್ವರ್ತ್ಯಂ ವಿಕಾರ್ಯಂ ಪ್ರಾಪ್ಯಂ ವೈ[4]ಷಯಿಕಮಿತಿ ಚತುರ್ಧಾ ಭಿದ್ಯತೇ । ಅಸ್ಮಿನ್ನರ್ಥೇ ದ್ವಿತೀಯಾವಿಭಕ್ತಿರ್ಭವತಿ ॥

ಉ ॥ ನಿರ್ವರ್ತ್ಯೇ—ಮನೆಯಂ ಮಾಡಿದಂ. ವಿಕಾರ್ಯೇ—ಪಱುವಂ ಕಡಿದಂ. ಪ್ರಾಪ್ಯೇ—ಊರನೆಯ್ದಿದಂ. ವೈಷಯಿಕೇ—ನೇಸಱಂ ನೋಡಿದಂ.

ತಚ್ಚೇಪ್ಸಿತಮನೀಪ್ಸಿತಮಿತಿ ದ್ವಿಧಾ ಭವತಿ ॥

ಉ ॥ ಈಪ್ಸಿತೇ—ಕೂೞನಟ್ಟಂ, ಬಾಡಂ ಕೊಯ್ದಂ. ಅನೀಪ್ಸಿತೇ—ಪಾವಂ ದಾಂಟಿದಂ. ಕೊೞಡನೆ[5]ಡರ್ಪಿದಂ.

ಟೀ ॥ ಆವುದು ಮಾಡಲ್ಪಡುವುದೋ ಅದು ಕರ್ಮಂ. ಕರ್ಮಣಿ=ಕರ್ಮಾರ್ಥದಲ್ಲಿ. ದ್ವಿತೀಯಾ=ದ್ವಿತೀಯಾವಿಭಕ್ತಿಯಪ್ಪುದು. ಆ ಕರ್ಮಂ ನಿರ್ವರ್ತ್ಯಮೆಂದುಂ ವಿಕಾರ್ಯಮೆಂದುಂ ಪ್ರಾಪ್ಯಮೆಂದುಂ ವೈಷಯಿಕಮೆಂದುಂ ನಾಲ್ಕು ತೆಱನಕ್ಕುಂ. ಉ ॥ (ವೃ. ನೋ.) ಮತ್ತಮದು ಇಷ್ಟಮೆಂದುಂ ಅನಿಷ್ಟಮೆಂದುಂ ಇರ್ತೆಱನಕ್ಕುಂ. ಉ ॥ (ವೃ. ನೋ.)

ಸೂ ॥ ಕಾಲಾಧ್ವನೋರವಿಚ್ಛೇದೇ ॥ 77 ॥

ವೃ ॥ ಕಾ[6]ಲೇ ಅಧ್ವನಿ ವಾ ಅವಿಚ್ಛೇದಃ ಕ್ರಿಯಾವ್ಯಾಪ್ತಿಃ ತತ್ರ ದ್ವಿತೀಯಾವಿಭಕ್ತಿರ್ಭವತಿ ॥

ಉ ॥ ಕಾಲೇ—ಒಂದು ಬರಿಸಮನಿರ್ದಂ, ಇರ್ತಿಂಗಳನೋದಿದಂ, ಅರೆಜಾವಮುಂ ನಿದ್ದೆಗೆ[7]ಯ್ದಂ. ಅಧ್ವನಿ—ಒರ್ಗಾವುದಮುಂ ಪರಿದಂ, ನಾಲ್ಗಾವುದಮುಂ ನಡೆದಂ.

ಟೀ ॥ ಕಾಲಾಧ್ವನೋಃ=ಕಾಲದಲ್ಲಿ ಮೇಣ್ ಬಟ್ಟೆಯಲ್ಲಿ. ಅವಿಚ್ಛೇದೇ=ಕ್ರಿಯೆಯ ವ್ಯಾಪ್ತಿಯಾಗೆ ದ್ವಿತೀಯಾವಿಭಕ್ತಿಯಕ್ಕುಂ. ಉ ॥ (ವೃ. ನೋ.)

ಸೂ ॥ ಕರ್ತೃಕರಣಯೋಸ್ತೃತೀಯಾ ॥ 78 ॥

ವೃ ॥ ಯಃ ಕ್ರಿ[8]ಯಾಂ ಕರೋತಿ ಸ ಕರ್ತಾ । ಸಾಧಕತಮಂ ಕರಣಂ । ತ[9]ಸ್ಮಿನ್ ಕರ್ತರಿ ಕರಣೇ ಚ ವಿ[10]ವಕ್ಷಿತೇ ತೃತೀಯಾವಿಭಕ್ತಿರ್ಭವತಿ ॥

ಉ ॥ ಕರ್ತರಿ—ದೇವದತ್ತನಿಂ ಮಾ[11]ಡಲ್ಪಟ್ಟುದು, ಯಜ್ಞಮಿ[12]ತ್ರನಿಂ ಪೇ[13]ಡಲ್ಪಟ್ಟುದು. ಕರಣೇ—ಕುಡುಗೋಲಿಂ ಕೊಯ್ದಂ, ಪರಶುವಿಂ ಕಡಿದಂ.

ಟೀ ॥ ಕರ್ತೃಕರಣಯೋಃ=ಕರ್ತೃಕರಣಾರ್ಥಂಗಳಲ್ಲಿ. ತೃತೀಯಾ=ತೃತೀಯಾವಿಭಕ್ತಿಯಪ್ಪುದು. ಕರ್ತೃಕರಣಂಗಳಾವುವೆನೆ—ಮಾಡುವಾತಂ ಕರ್ತೃ, ಸಾಧಿಸುವುದು ಕರಣಂ. ಉ ॥ (ವೃ. ನೋ.)

---

1 ದ್ವಿತೀಯಾ ಕರ್ಮಣಿ. 2 ಯತ್ಕರ್ತ್ರಭಿಮತಂ ತತ್ಕರ್ಮ. 3 ತಚ್ಚತುರ್ವಿಧಂ. 4 ವಿಷಯಭೂತಮಿತಿ. 5 ನೆರಪಿದಂ. 6 ಕಾಲೇ ವಾ. 7 ಗೆಯ್ದು ಬಂದಂ. 8 ಒಂದು ಪ್ರತಿಯಲ್ಲಿ ಕ್ರಿಯಾಂ ಎಂಬುದಿಲ್ಲ. 9 ತಸ್ಮಿನ್ನರ್ಥೇ. 10 ಕಾರಕೇ. 11 ಕಾರ್ಯಂ ಮಾಡಪಟ್ಟುದು. 12 ದತ್ತ. 13 ಮಂತ್ರಂ ಪೇೞಲ್ಪಟ್ಟುದು.

ಸೂ ॥ ಹೇತಾವಪಿ ॥ 79 ॥

ವೃ॥ ಹೇತುರ್ನಿಮಿತ್ತಂ । ತಸ್ಮಿನ್ನರ್ಥೇಽಪಿ ತೃತೀಯಾವಿಭಕ್ತಿರ್ಭವತಿ ॥

ಉ॥ ಓಲಗದಿಂದಿರ್ದಂ, ಓಲಗದಿಂ ಬೞ್ದಂ.

ಟೀ॥ ಹೇತಾವಪಿ — ಕಾರಣಾರ್ಥದೊಳಂ ತೃತೀಯಾವಿಭಕ್ತಿಯಕ್ಕುಂ.

ಉ॥ (ವೃ. ನೋ.)

ಸೂ ॥ ಸಂಪ್ರದಾನೇ ಚತುರ್ಥೀ ॥ 80 ॥

ವೃ॥ ಕ[1]ರ್ಮಣೋ ವಿಷಯಭೂತತ್ವೇನ ವಿವಕ್ಷಿತಂ ಸಂಪ್ರದಾನಂ । ತ[2]ಸ್ಮಿನ್ ಚತುರ್ಥೀ ವಿಭಕ್ತಿರ್ಭವತಿ ॥

ಉ॥ ಉಪಾಧ್ಯಾಯಂಗೆ ದಕ್ಷಿಣೆಯುಂ ಕೊಟ್ಟಂ, ಬ್ರಾಹ್ಮಣಂಗೆ ಗೋವನಿತ್ತಂ.

ಟೀ॥ ....ಕರ್ಮದೊಡನೆ ಕೂಡಿದುದು ಸಂಪ್ರದಾನವೆಂಬುದು. ಸಂಪ್ರದಾನೇ — ಆ ಸಂಪ್ರದಾನಕಾರಕದಲ್ಲಿ. ಚತುರ್ಥೀ — ಚತುರ್ಥೀವಿಭಕ್ತಿಯಕ್ಕುಂ. ಸಂಪ್ರದಾನವೆಂದು ಕೊಳ್ವ ಪಾತ್ರಂ. ಉ॥ (ವೃ. ನೋ.)

ಸೂ ॥ ರುಚಿಹಿತೇರ್ಷ್ಯಾಭಯೇಷು ಚ ॥ 81 ॥

ವೃ॥ ರುಚೌ ಹಿತೇ ಈರ್ಷ್ಯಾಯಾಂ ಭಯೇ ಚ ಚತುರ್ಥೀವಿಭಕ್ತಿರ್ಭವತಿ ॥

ಉ॥ ರುಚೌ — ದೇವದತ್ತಂಗೆ ರುಚಿಯಾಯ್ತು ಮೋದಕಂ. ಹಿತೇ — ಪಶುವಿಂಗೆ ಹಿತಂ ತೃಣಂ. ಈರ್ಷ್ಯಾಯಾಂ — ಆರ್ಯಂಗೆ ಸೆಣಸುಗುಂ ದುರ್ಜನಂ. ಭಯೇ — ಪಾಪಕ್ಕಂಜುಗುಂ ತಕ್ಕಂ.

ಟೀ॥ ರುಚಿಹಿತೇರ್ಷ್ಯಾಭಯೇಷು ಚ — ರುಚಿಯಲ್ಲಿಯುಂ ಹಿತದಲ್ಲಿಯುಂ ಸೆಣಸಿನಲ್ಲಿಯುಂ ಭೀತಿಯಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಮನ್ಯಕ[3]ರ್ಮಣಿ ಚಾನಾದರೇ ॥ 82 ॥

ವೃ॥ ಅನಾದರೇ ಗಮ್ಯಮಾನೇ ಮನ್ಯತೇಃ ಕರ್ಮಣಿ ಚ ಚತುರ್ಥೀವಿಭಕ್ತಿರ್ಭವತಿ॥

ಉ॥ ಅವನಂ ಪುಲ್ಗೆ ಕಷ್ಟಮಾಗೆ ಬಗೆದಂ, ಆತನ ಮಾತನೊಂದಡಕೆಗೆ ಕೊಳ್ಳಂ.

ಟೀ॥ ಅನಾದರೇ — ಆದರಣೆಯಿಲ್ಲದಲ್ಲಿ. ಮನ್ಯಕರ್ಮಣಿ ಚ — ಬಗೆಧಾತುವಿನ ಕರ್ಮದಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ನ[4]ಮಸ್ಕ್ರಿಯಾಯಾಂ ಸ್ವಸ್ತ್ಯಾದಿಷು ಚ ॥ 83 ॥

ವೃ॥ ನಮಸ್ಕರಣೇ ಸ್ವಸ್ತ್ಯಾದಿಪ್ರಯೋಗೇ ಚ ಚತುರ್ಥೀವಿಭಕ್ತಿರ್ಭವತಿ ॥

---

1 ಕರ್ಮಕರಣಭೂತೇನೋಕ್ಷಪ್ರಾಪ್ತ್ಯಮುತ್ವೇನ ವಿವಕ್ಷಿತಂ. 2 ತಸ್ಮಿನ್ನರ್ಥೇ. 3 ಕರ್ಮಣ್ಯನಾದರೇ. 4 ನಮಸ್ಸ್ವಸ್ತ್ಯಾದಿಷು ಚ.

ಉ॥ ದೇವಂಗೆ ನಮಸ್ಕಾರಂಗೆಯ್ದಂ, ಅರಸಂಗೆಱಗಿದಂ; ಪ್ರಜೆಗೆಲ್ಲಂ ಸ್ವಸ್ತಿಯಕ್ಕೆ, ಭದ್ರಂ ಜಿನಶಾಸನಕ್ಕೆ.

ಆದಿಶಬ್ದಾತ್[1] ಸ್ವಾಹಾಸ್ವಧಾಲಂವ[2]ಷಡರ್ಥೇಷ್ವಪಿ ಚತುರ್ಥೀವಿಭಕ್ತಿರ್ಭವತಿ॥

ಉ॥ ಅಗ್ನಿಗೆ ಸ್ವಾಹಾಕಾರಂ, ಪಿತೃಗಳ್ಗೆ ಸ್ವಧಾಕಾರಂ, ಮಲ್ಲಂಗೆ ಪ್ರತಿಮಲ್ಲನಲಂ (ಅಲಂ=ಸಮರ್ಥಂ), ಇಂದ್ರಂಗೆ ವಷಟ್ಕಾರಂ ಪ್ರಿಯಂ.

ಟೀ॥ ನಮಸ್ಕ್ರಿಯಾಯಾಂ=ನಮಸ್ಕಾರದಲ್ಲಿ. ಸ್ವಸ್ತ್ಯಾದಿಷು ಚ=ಸ್ವಸ್ತಿ ಎಂಬುದು ಮೊದಲಾದ ಶಬ್ದಂಗಳಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಅಪಾದಾನೇ ಪಂಚಮೀ ॥ 84 ॥

ವೃ॥ ಅಪಾದಾನಮು[2]ಪನಯನಂ । ತ[3]ಸ್ಮಿನ್ ವಿವಕ್ಷಿತೇ ಪಂಚಮೀವಿಭಕ್ತಿರ್ಭವತಿ॥

ಉ॥ ಊರತ್ತಣಿಂ ಬಂದಂ, ಪಟದತ್ತಣಿಂದಿೞಿದಂ, ಕುದುರೆಯತ್ತಣಿಂದೋಡಿದಂ, ಪುಲಿಯತ್ತಣಿಂ ಭಯಂ.

ಟೀ॥ ಅಪಾದಾನೇ=ಅಪಾದಾನಕಾರಕದಲ್ಲಿ. ಪಂಚಮೀ=ಪಂಚಮೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಸಂ[4]ಬಂಧೇ ಷಷ್ಠೀ ॥ 85 ॥

ವೃ॥ ಸ್ವ[5]ಸ್ವಾಮಿಭಾವಾದಿಸಂಬಂಧೇ ಷಷ್ಠೀವಿಭಕ್ತಿರ್ಭವತಿ॥

ಉ॥ ಸ್ವಸ್ವಾಮಿಭಾವೇ—ನಾಡೆಱೆಯಂ. ಅವಯವೇ-ಮರದ ಕೊಂಬು. ಜಾತೌ—ಪುಲ್ಲೆಯ ಪಿಂಡು. ವಸ್ತುನಿ—ಪೊನ್ನಗೆಜ್ಜೆ.

ಟೀ॥ ಸಂಬಂಧೇ=ಸ್ವಸ್ವಾಮಿಭಾವಂ ಮೊದಲಾದ ಸಂಬಂಧದಲ್ಲಿ. ಷಷ್ಠೀ=ಷಷ್ಠೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಅಧಿಕರಣೇ ಸಪ್ತಮೀ ॥ 86 ॥

ವೃ॥ ಆಧಾರೋಽಧಿಕರಣಂ । ತ[6]ಸ್ಮಿನ್ ಸಪ್ತಮೀವಿಭಕ್ತಿರ್ಭವತಿ॥

ಉ॥ ನೆಲದೊಳ್ ಪ[7]ಟ್ಟಂ, ತೊಱೆಯೊಳ್ ಬಿಟ್ಟಂ, ಕೆಯ್ಯೊಳ್ ಕಂಕಣಂ, ಪೂವಿನೊಳ್ ಕಂಪು.

ಟೀ॥ ಅಧಿಕರಣೇ=ಅಧಿಕರಣಕಾರಕದಲ್ಲಿ. ಸಪ್ತಮೀ=ಸಪ್ತಮೀವಿಭಕ್ತಿಯಕ್ಕುಂ. ಅಧಿಕರಣಮೆಂಬೊಡೆ ಆಧಾರಂ. ಉ॥ (ವೃ. ನೋ.)

---

1 ವಷಡ್ಯೋಗೇಪಿ ಚ. 2 ಪಾಪಾಯಃ. 3 ತಸ್ಮಿನ್ನರ್ಥೇ. 4 ಸ್ವಸ್ವಾಮಿಸಂಬಂಧೇ. 5 ಸ್ವಸ್ವಾಮಿಸಂಬಂಧೇ ಷಷ್ಠೀವಿಭಕ್ತಿರ್ಭವತಿ, ಅವಯವಜಾತಿವಸ್ತುಷು ಚ. 6 ತಸ್ಮಿನ್ನರ್ಥೇ. 7 ಪಟ್ಟದ್ದಂ.

ಸೂ || ನಿರ್ಧಾರಣೇ ಚ || 87 ||

ವೃ || ಜಾ[1]ತಿಕ್ರಿಯಾಗುಣದ್ರವ್ಯೈರೇಕದೇಶಪೃಥಕ್ಕರಣಂ ನಿರ್ಧಾರಣಂ । ತಸ್ಮಿನ್ ವಿವಕ್ಷಿತೇ ಚ ಸಪ್ತಮೀವಿಭಕ್ತಿರ್ಭವತಿ ||

ಉ || ಪುರುಷರೊಳ್ ಕ್ಷತ್ರಿಯಂ ಶೂರಂ, ನುಡಿವರೊಳ್ ಕಡುಜಾಣಂ, ಕಲಿಗಳೊಳ್ ಮೆಯ್ಗಲಿ, ನರರೊಳುತ್ತಮಂ.

ಟೀ || ನಿರ್ಧಾರಣೇ ಚ = ಜಾತಿ, ಕ್ರಿಯೆ, ಗುಣಂ, ದ್ರವ್ಯಂ, ಎಂಬಿವಱಿಂ ವಸ್ತುವಂ ಬೇರ್ಕೆಯ್ವುದು ನಿರ್ಧಾರಣಂ; ಆ ನಿರ್ಧಾರಣದಲ್ಲಿಯುಂ ಸಪ್ತಮೀವಿಭಕ್ತಿಯಕ್ಕುಂ. ಉ || (ವೃ. ನೋ.)

ಸೂ || ಆಸಾಂ ವ್ಯತ್ಯಯೋ ಬಹುಳಂ || 88 ||

ವೃ || ಆಸಾಂ ವಿಭಕ್ತೀನಾಂ ಪ್ರಾಯೇಣ ವ್ಯತ್ಯಯೋ ವಿಪರ್ಯಾಸೋ ಭವತಿ ಉ[2]ತ್ತರತ್ರ ವಿವಕ್ಷಿತೇಽರ್ಥೇ ||

ಸ[3]ಪ್ತಮ್ಯರ್ಥೇ ಷಷ್ಠೀ —ಉ || ಚಾಗಿಗಳ ಬಲ್ಲಹಂ, ಅಂಕಮುಳ್ಳರ ದೇವಂ.

ಪಂಚಮ್ಯರ್ಥೇ ತೃತೀಯಾ—ಉ || ಬಱಿಯಿಂದುರ್ಚಿದಂ, ಸೆಱೆಯಿಂ ಬರ್ದುಂಕಿದಂ, ಮನೆಯಿಂ ಪೊಱಮಟ್ಟಂ.

ಷಷ್ಠ್ಯರ್ಥೇ ಚತುರ್ಥೀ —ಉ || ನೆಲಕ್ಕೆಱೆಯಂ, ಜಗಧೀಶ್ವರಂ.

ದ್ವಿತೀಯಾರ್ಥೇ ಚ[4] —ಉ || ಶಿ[5]ಷ್ಯಂಗೆ ಶಿಕ್ಷಿಸಿದಂ, ಬ[5]ಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ.

ಪ್ರ[6]ಥಮಾರ್ಥೇ ಷಷ್ಠೀ —ಉ || ನಿನ್ನ ಪೋಪ್ಪುದುಂ ಬಿನ್ನ ನಿರ್ದಳ್, ನಿನ್ನ ಬರೆ ಮುರಮಥನ.

ತೃತೀಯಾರ್ಥೇ ಸಪ್ತಮೀ — ಉ || ಚಲದೊಳವನ ದೊರೆಯಾವಂ, ಕೊಡಲಿಯೊಳ್ ಕಡಿದಂ.

ಟೀ || ಆಸಾಂ = ಈ ವಿಭಕ್ತಿಗಳ್ಗೆ. ಬಹುಳಂ = ವಿಕಲ್ಪದಿಂ. ಮುಂದೆ ಪೇೞ್ವರ್ಥಂಗಳಲ್ಲಿ, ವ್ಯತ್ಯಯಃ = ಪಲ್ಲಟಮಪ್ಪುದು.

ಸಪ್ತಮ್ಯರ್ಥೇ = ಸಪ್ತಮ್ಯರ್ಥದಲ್ಲಿ. ಷಷ್ಠೀ = ಷಷ್ಠೀವಿಭಕ್ತಿಯಕ್ಕುಂ.
ಉ || (ವೃ. ನೋ.)

ಪಂಚಮ್ಯರ್ಥೇ = ಪಂಚಮ್ಯರ್ಥದಲ್ಲಿ. ತೃತೀಯಾ = ತೃತೀಯಾವಿಭಕ್ತಿಯಕ್ಕುಂ.
ಉ || (ವೃ. ನೋ.)

---

1 ಕ್ರಿಯಯಾ ಗುಣೇನ ವಾ ಸಜಾತೀಯೇಷು ಯನ್ನಿರ್ಧಾರ್ಯತೇ ತನ್ನಿರ್ಧಾರಣಂ. ತತ್ರ ಷಷ್ಠೀಸಪ್ತಮ್ಯೌ ಭವತಃ. 2 ತಥಾ ಚ. 3 ಇದೂ ಇದರ ಮುಂದಣ ವಾಕ್ಯಗಳೂ ಒಂದು ಪ್ರತಿಯಲ್ಲಿ ಬೇರೆ ಬೇರೆ ಸೂತ್ರಗಳಾಗಿವೆ. 4 ಚತುರ್ಥೀ. 5 ಈ ಉದಾಹರಣೆಗಳು ಒಂದು ಪ್ರತಿಯಲ್ಲಿಲ್ಲ. ಅದರಲ್ಲಿ ನೆಲಕ್ಕೆ ಪೈದಂ, ನೆಲಕ್ಕೆ ಪಂದಂ ಎಂದಿದೆ. ಬಹುತಾಪಕ್ಕೆ—ಪಂಪರಾಮಾಯಣ 7—98. 6 ಇದಕ್ಕೆ ಹಿಂದೆ, ದ್ವಿತೀಯಾರ್ಥೇ ಷಷ್ಠೀ—ಅರಸನ ಕಂಡಂ, ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ.

ಷಷ್ಠ್ಯರ್ಥೇ=ಷಷ್ಠೀವಿಭಕ್ತ್ಯರ್ಥದಲ್ಲಿ. ಚತುರ್ಥೀ=ಚತುರ್ಥೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ದ್ವಿತೀಯಾರ್ಥೇ ಚ=ದ್ವಿತೀಯಾರ್ಥದಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ॥ ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ. ಮತ್ಸ್ಯಾವತಾರಮುಂ ಎಂಬುದರ್ಥಂ. ಮತ್ಸ್ಯಾವತಾರಮಂ ಪಡೆದನೆಂಬಲ್ಲಿ ಮತ್ಸ್ಯಾವತಾರಕ್ಕೆ ಎಂದಂ.

ಪ್ರಥಮಾರ್ಥೇ=ಪ್ರಥಮಾವಿಭಕ್ತ್ಯರ್ಥದಲ್ಲಿ. ಷಷ್ಠೀ=ಷಷ್ಠೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ತೃತೀಯಾರ್ಥೇ=ತೃತೀಯಾರ್ಥದಲ್ಲಿ. ಸಪ್ತಮೀ=ಸಪ್ತಮೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಜಾತಿರೇಕವದ್ಬ[1]ಹ್ವಾಖ್ಯಾಯಾಂ ಬ[2]ಹುಳಂ ॥ 89 ॥

ವೃ ॥ ಜಾತಿವಾ[3]ಚೀ ಶಬ್ದಃ ಬಹ್ವಾಖ್ಯಾನೇ ಏಕವದ್ಬಹುಳಂ ಭವತಿ॥

ಉ॥ ಕರಿಯಿವು, ಕರಿಗಳಿವು; ಕೆಯ್ ಬೆಳೆದುವು, ಕೆಯ್ಗಳ್ ಬೆಳೆದುವು.[4]

ಟೀ ॥ ಜಾತಿಃ=ಜಾತಿಯಂ ಪೇೞ್ವ ಶಬ್ದಂ. ಬಹ್ವಾಖ್ಯಾಯಾಂ=ಬಹುತ್ವಮಂ ನುಡಿವಲ್ಲಿ. ಬಹುಳಂ=ವಿಕಲ್ಪದಿಂ. ಏಕವತ್=ಏಕವಚನವಾಗಿರ್ಪುದು. ಉ॥ (ವೃ. ನೋ.)

ಸೂ ॥ ಸಂಖ್ಯೇಯೇ ಸಂಖ್ಯಾಸು ಚ ॥ 90 ॥

ವೃ ॥ ಸಂಖ್ಯೇಯೇ ಸಂಖ್ಯಾಸ್ವಪಿ ವರ್ತಮಾನಃ ಶಬ್ದಃ ಬಹ್ವಾಖ್ಯಾಯಾಮೇ[5]ಕವದ್ಭವತಿ॥
ಉ॥ ಪತ್ತು ದೆಸೆ, ಪತ್ತು ದೆಸೆಗಳ್; ಮೂಱು ನಾಲ್ಕು, ಮೂಱು ನಾಲ್ಕುಗಳ್.

ಬಹುಳಗ್ರಹಣಾತ್ ಕ್ವಚಿನ್ನ ಭವತಿ—ಪದಿನಯ್ವರ್.

ಟೀ॥ ಸಂಖ್ಯೇಯೇ=ಸಂಖ್ಯಾವಸ್ತುವಿನಲ್ಲಿ. ಸಂಖ್ಯಾಸು ಚ=ಸಂಖ್ಯೆಗಳಲ್ಲಿಯುಂ ಬಹುಳದಿಂ ಬಹುವಚನಮೇಕವಚನರೂಪಮಕ್ಕುಂ. ಉ॥ (ವೃ. ನೋ.)

ಸೂ ॥ ಭಾವವಚನೇಽಪಿ ॥ 91 ॥

ವೃ ॥ ಭಾವಾಖ್ಯಾಯಾಂ[6] ವರ್ತಮಾನೋ ಯಃ ಶಬ್ದಃ ಸೋಽಪ್ಯೇಕವದ್ಭವತಿ॥

ಉ॥ ಕರ್ಪು, ಬೆಳ್ಪು, ತಣ್ಪು, ತಿಣ್ಪು, ಕೂರ್ಮೆ, ಪೆರ್ಮೆ.

---

1 ಬಹುತ್ವಾಖ್ಯಾನೇ. 2 ಬಹುಳಂ ಎಂಬುದು ಕೆಲವು ಪ್ರತಿಗಳಲ್ಲಿ ಇಲ್ಲ. 3 ವಾಚಕಃ. 4 ಇದಾದಮೇಲೆ—ಬಹುಳಗ್ರಹಣಾತ್ (ಬಹುಳಾಧಿಕಾರಾತ್) ಸ್ತ್ರೀಪುರುಷ ವಿಷಯೇ ಕ್ವಚಿನ್ನ ಭವತಿ—ಎಂದು ಎರಡು ಪ್ರತಿಗಳಲ್ಲಿ ಇದೆ. 5 ಏಕಶಬ್ದಾ ಭವತಿ. 6 ಧರ್ಮಾಪಿ.

ಬಹುಳಾಧಿಕಾರಾತ್ ಬೆಳ್ಪುಗಳ್, ತೆಳ್ಪುಗಳ್, ಇತಿ ಭವತಿ॥

ಟೀ॥ ಭಾವವಚನೇಽಪಿ—ಭಾವವಚನದಲ್ಲಿಯುಂ ಬಹುವಚನಂ ವಿಕಲ್ಪದಿಂದೇಕವಚನರೂಪಮಕ್ಕುಂ. ಉ॥ (ವ್ಯ. ನೋ.) ವಿಕಲ್ಪಮೆಂತೆನೆ—ಬೆಳ್ಪುಗಳ್, ಕರ್ಪುಗಳ್, ಕೂರ್ಮೆಗಳ್, ಪೆರ್ಮೆಗಳ್.

ಇತಿ ಕರ್ಣಾಟಕವ್ಯಾಕರಣವಿವರಣೇ ಕಾರಕವಿಧಾನಂ ನಾಮ
ಚತುರ್ಥಃ ಪರಿಚ್ಛೇದಃ.

---

5. ಯು[1] ಷ್ಮ ದಾ ದಿ ವಿ ಧಾ ನಂ.

ಸೂ ॥ ನೀನಾ೯ತಾನಃ ಪ್ರಥಮಾವಿಭಕ್ತೌ ನಿ[2]ರ್ನ್ಲೇತನಾಂ ॥ 92 ॥

ವೃ ॥ ಯುಷ್ಮದಸ್ಮದನ್ಯದರ್ಥೇ ವರ್ತಮಾನಾನಾಂ ನಿರ್ ಎರ್ ತರ್ ಇತ್ಯೇತೇಷಾಂ ಪ್ರಥಮಾ ವಿಭಕ್ತೌ ಪರತಃ ನೀರ್ ಆರ್ ತಾರ್ ಇತ್ಯೇತಾನಿ ರೂಪಾಣಿ ಯ[3]ಥಾಕ್ರಮಂ ಭವಂತಿ ॥

ಉ ॥ ನೀನಿರ್ದಯೆ, ಆಂ ಪೋದೆಂ, ತಾಂ ಬಂದಂ.

ಟೀ ॥ ನಿರ್ನ್ಲೇತನಾಂ — ನಿರ್ ಎರ್ ತರ್ ಎಂಬಿವರ್ಕೆ. ಪ್ರಥಮಾವಿಭಕ್ತೌ — ಪ್ರಥಮಾ ವಿಭಕ್ತಿ ಪರಮಾಗುತ್ತಿರೆ. ನೀನಾ೯ತಾನಃ — ಯಥಾಕ್ರಮದಿಂ ನೀರ್ ಆರ್ ತಾರ್ ಎಂಬ ಆದೇಶಂಗಳಪ್ಪುವು. ಉ ॥ (ವೃ. ನೋ.)

ಸೂ ॥ ನಿನಏನತನಾಶ್ಚ[4]ತುರ್ಥ್ಯಾಂ ತೃತೀಯತ್ವಂಚಾಸ್ಯಾಃ ॥ 93 ॥

ವೃ ॥ ನಿರ್ ಎರ್ ತರ್ ಇತ್ಯೇತೇಷಾಂ ಪುನಃ ಚತುರ್ಥೀವಿಭಕ್ತೌ ಪರತಃ ಯಥಾಸಂಖ್ಯಂ ನಿನ ಎನ ತನ ಇತ್ಯೇತೇ ಆದೇಶಾ ಭವಂತಿ। ಅಸ್ಯಾಶ್ಚತುರ್ಥ್ಯಾ ಅಪಿ ತೃತೀಯತ್ವಂ ಭವತಿ ॥

ಉ ॥ ನಿನಗೆ, ಎನಗೆ, ತನಗೆ.

ಟೀ ॥ ಆ ನಿರ್ ಎರ್ ತರ್ ಎಂಬಿವರ್ಕೆ, ಚತುರ್ಥ್ಯಾಂ — ಮತ್ತೆ ಚತುರ್ಥೀವಿಭಕ್ತಿ ಪರಮಾಗುತ್ತಿರೆ. ನಿನ ಎನ ತನಾಃ — ಯಥಾಕ್ರಮದಿಂ ನಿನ ಎನ ತನ ಎಂಬಾದೇಶಂಗಳಪ್ಪುವು. ಅಸ್ಯಾಃ — ಆ ಚತುರ್ಥೀವಿಭಕ್ತಿಗೆ. ತೃತೀಯತ್ವಂ ಚ — ತನ್ನ ವರ್ಗದ ತೃತೀಯಾಕ್ಷರಂ ಗತ್ವಮುಮಕ್ಕುಂ. ಉ ॥ (ವೃ. ನೋ.)

ಸೂ ॥ ದ್ವಿ[5]ಬಹ್ವೋರ್ನಸ್ಯ ಮಃ ॥ 94 ॥

ವೃ ॥ ದ್ವಿತ್ವಬಹುತ್ವಯೋರ್ವಿಷಯೇ ವಿವಕ್ಷಿತೇ ನಕಾರಸ್ಯ ಸ್ಥಾನೇ ಮಕಾರೋ ಭವತಿ ॥

ಉ ॥ ನೀಮುಂ, ಆಮುಂ, ತಾಮುಂ; ನಿಮಗೆ, ಎಮಗೆ, ತಮಗೆ; ನಿಮ್ಮ, ಎಮ್ಮ, ತಮ್ಮ; ನಿಮ್ಮೊಳ್, ಎಮ್ಮೊಳ್, ತಮ್ಮೊಳ್.

ಟೀ ॥ ದ್ವಿಬಹ್ವೋಃ — ಆ ಶಬ್ದಂಗ[6]ಳ್ಗೆ ದಿತ್ವಬಹುತ್ವಂಗಳಂ ನುಡಿಯಲ್ವೇಡಿದೊಡೆ. ನಸ್ಯ — ನಕಾರಕ್ಕೆ. ಮಃ — ಮಕಾರಮಕ್ಕುಂ. ಉ ॥ (ವೃ. ನೋ.)

---

1 ಯುಷ್ಮದಸ್ಮತ್ಪ್ರಕರಣಂ, ಶಬ್ದರೀತಿವಿಧಾನಂ. 2 ನಿನ್ನೆನ್ನತನ್ನಾನಾಂ. 3 ಕ್ರಮೇಣ. 4 ಚತುರ್ಥ್ಯಾಸ್ತೃತೀಯತ್ವಂ. 5 ದ್ವಿತ್ವಬಹುತ್ವಯೋಃ. 6 ಗಳ್.

ಸೂ ॥ ಅ[1]ದು ಇದು ಉದೂನಾಮಂತೇ ವತೌ ಪುಂಸಿ ॥ 95 ॥

ವೃ ॥ ಅದು ಇದು ಉದು ಇತ್ಯೇತೇಷಾಂ ಪ್ರಕೃತಿವಿಶೇಷಾಣಾಂ ಪುಲ್ಲಿಂಗವಿವಕ್ಷಾಯಾಂ ಸರ್ವಾಸು ವಿಭಕ್ತಿಷು ಪರಭೂತಾಸು ಅಂತೇ ವಕಾರತಕಾರೌ ಭವತಃ ॥

ಉ ॥ ಅವಂ, ಇವಂ, ಉವಂ; ಆತಂ, ಈತಂ, ಊತಂ. ಸ್ವ[2]ರಾದೌನಾಗಮಃ ಪುಂಸಿ (50)—ಅವನಂ, ಇವನಂ, ಉವನಂ; ಅತನಂ, ಈತನಂ, ಊತನಂ. ಏವಂ ಸರ್ವತ್ರ.

ಟೀ ॥ ಅದು ಇದು ಉದೂನಾಂ—ಅದು ಇದು ಉದು ಎಂಬಿವರ್ಕೆ. ಪುಂಸಿ—ಪುಲ್ಲಿಂಗವಂ ನುಡಿಯಲ್ವೇಡಿದೊಡೆ. ಎಲ್ಲಾ ವಿಭಕ್ತಿಗಳ್ ಪರವಾಗೆಯುಂ, ಅಂತೇ—ಆ ಶಬ್ದಂಗಳ ಅಂತ್ಯದ ದುಕಾರಸ್ಥಾನದಲ್ಲಿ. ವತೌ—ವಕಾರತಕಾರಂಗಳ್ ಆದೇಶಮಕ್ಕುಂ.

ಉ ॥ (ವೃ. ನೋ.) ಇಂತಿವರ್ಕೆ ಸಪ್ತವಿಭಕ್ತಿಗಳಂ ಪತ್ತಿಸುವುದು.

ಪ್ರಯೋಗಂ—

ಆತಂ ದ್ರೋಣಂ ನೆಗೞ್ದಂ ।
ಈತಂ ಕುರುರಾಯನೂತನಶ್ವತ್ಥಾಮಂ ॥

ಸೂ ॥ ವಳ್ ಕೇ ಚ ಸ್ತ್ರಿಯಾಂ ॥ 96 ॥

ವೃ ॥ ತೇಷಾಂ ಅದು ಇದು ಉದೂನಾಂ ಸ್ತ್ರೀವಿವಕ್ಷಾಯಾಂ ಸರ್ವಾಸು ವಿಭಕ್ತಿಷು ಪರಭೂತಾಸು ಅಂ[3]ತೇ ವಳ್, ಕೇ, ಇತ್ಯೇತೌ ಭವತಃ ॥

ಉ ॥ ಅವಳ್, ಇವಳ್, ಉವಳ್; ಅವಳಂ, ಇವಳಂ, ಉವಳಂ; ಆಕೆ, ಈಕೆ, ಊಕೆ; ಆಕೆಯುಂ, ಈಕೆಯುಂ, ಊಕೆಯುಂ.

ಟೀ ॥ ಅದು ಇದು ಉದು ಎಂಬಿವರ್ಕೆ, ಸ್ತ್ರಿಯಾಂ—ಸ್ತ್ರೀಲಿಂಗದಲ್ಲಿ. ಎಲ್ಲಾ ವಿಭಕ್ತಿಗಳ್ ಪರವಾಗೆಯುಂ ಆಶಬ್ದಂಗಳ ಅಂತ್ಯದ ದುಕಾರಕ್ಕೆ, ವಳ್ ಕೇ ಚ—ವಳ್, ಕೇ, ಎಂಬೆರಡುಮಾದೇಶಮಕ್ಕುಂ.

ಉ ॥ (ವೃ. ನೋ.) ಇಂತಿವರ್ಕೆ ಎಲ್ಲಾ ವಿಭಕ್ತಿಗಳಂ ಪತ್ತಿಸುವುದು.

ಸೂ ॥ ದೀ[4]ರ್ಘಸ್ತಕಯೋಃ ॥ 97 ॥

ವೃ ॥ ತೇಷಾಮದುಪ್ರಭೃತೀನಾಂ ತ[5]ಕಯೋಃ ಪರಯೋಃ ಪೂರ್ವಸ್ವರಸ್ಯ ದೀರ್ಘಾದೇಶೋ ಭವತಿ ॥

ಪೂರ್ವೋಕ್ತಾನಿ ಉದಾಹರಣಾನಿ.

---

1 ಅಧ್ವಿದೂದೂನಾಂ. 2 ಈ ಸೂತ್ರವು ಒಂದು ಪ್ರತಿಯಲ್ಲಿ ಮಾತ್ರ ಇದೆ. 3 ಅಂತ್ಯಸ್ಯ. 4 ದೀರ್ಘಃ ಕೇತಯೋಃ. 5 ಕೇತಯೋಃ.

ಟೀ ॥ ಆ ಅದುಮೊದಲಾದ ಶಬ್ದಂಗಳ್ಗೆ ಪುಲ್ಲಿಂಗಸ್ತ್ರೀಲಿಂಗಂಗಳಲ್ಲಿ. ತಕಯೋಃ— ಅದುಇದು ಉದೂನಾಮಂತೇ ವತೌ ಪುಂಸಿ (95) ಎಂಬ ಸೂತ್ರದಿಂದಾದ ತಕಾರ ಮುಂ ವಳ್ ಕೇ ಚ ಸ್ತ್ರಿಯಾಂ (96) ಎಂಬ ಸೂತ್ರದಿಂದಾದ ಕೇಕಾರಮುಂ ಪರಮಾಗೆ. ಪೂರ್ವಸ್ವರಕ್ಕೆ, ದೀರ್ಘಃ—ದೀರ್ಘಮಕ್ಕುಂ.

ಅದಂ ಮುಂಪೇೞ್ದುದಾಹರಣಂಗಳಿಂ ನೋಡಿಕೊಳ್ವುದು.

ಮತ್ತಮನ್ಯವ್ಯಾಕರಣಸೂತ್ರದೊಳಮಿಂತೆಂಬುದು—

ಆ[1]ವನಾತನೆಂಬ ಮಾತುಗ।
ಳವು ಪುಲ್ಲಿಂಗಪ್ರಯೋಗದೊಳ್ ಸ್ತ್ರೀಗುಣದೊಳ್॥
ನ್ನವಳಾಕೆಯೆಂಬ ನುಡಿ ಸಂ।
ಭವಿಕುಂ ಶೇಷದೊಳದೆಂಬ ಮಾತಸೆದಿರ್ಕುಂ॥

ಸೂ ॥ ಸ್ತ್ರೀಪುಂಸಯೋರ್ವ್ಯತ್ಯಾಸಃ ಕ್ವಚಿತ್ ॥ 98 ॥

ವೃ ॥ ಸ್ತ್ರೀಲಿಂಗಪುಲ್ಲಿಂಗಯೋಃ ಕ್ವಚಿತ್ಕರುಣಾಭಿಲಾಷಾದೌ ವ್ಯತ್ಯಾಸೋ ವಿಪರ್ಯಾಸೋ ಭವತಿ ॥

ಉ ॥ ಕರುಣಂ, ಅಭಿಲಾಷೆ, ಉಪತ್ಯಕಂ.

ಟೀ ॥ ಸ್ತ್ರೀಪುಂಸಯೋಃ—ಸ್ತ್ರೀಲಿಂಗಪುಲ್ಲಿಂಗಂಗಳಲ್ಲಿ. ಕ್ವಚಿತ್—ಕರುಣಾ, ಅಭಿ ಲಾಷ, ಎಂಬಿವು ಮೊದಲಾದ ಕೆಲವು ಠಾವಿನಲ್ಲಿ. ವ್ಯತ್ಯಾಸಃ—ಪಲ್ಲಟಮಪ್ಪುದು.

ಉ ॥ (ವೃ. ನೋ.)

ಸೂ ॥ ನಿತ್ಯಂ ಕಳತ್ರಾದೌ ನಪುಂಸಕತ್ವಂ ॥ 99 ॥

ವೃ ॥ ಕಳತ್ರಪ್ರಭೃತಿಷು ಶಬ್ದೇಷು ನಿತ್ಯಂ ನ[2]ಪುಂಸಕತ್ವಮೇವ ಭವತಿ ॥

ಉ ॥ ಇ[3]ದು ಧರ್ಮಕಳತ್ರಂ, ಇದು ಅಪತ್ಯಂ, ಇದು ಕೂಸು.

ಟೀ ॥ ಕಳತ್ರಾದೌ—ಕಳತ್ರಂ ಮೊದಲಾದ ಶಬ್ದಂಗಳಲ್ಲಿ. ನಿತ್ಯಂ—ನಿತ್ಯಮಾಗಿ. ನಪುಂಸಕತ್ವಂ—ನಪುಂಸಕಲಿಂಗಮೆ ಅಕ್ಕುಂ. ಉ ॥ (ವೃ. ನೋ.)

ಸೂ ॥ ಆತೋ ಲಘೋರೇತ್ ॥ 100 ॥

ವೃ ॥ ಲಿಂಗಾಂತಸ್ಯ ಆಕಾರಸ್ಯ ವಿಭಕ್ತಿಷು ಪರಭೂತಾಸು ಲಘುಭೂತಃ ಏಕಾರೋ ಭವತಿ ॥

ಉ ॥ ವಸುಧೆ, ವನಿತೆ, ದಯೆ, ಚಂದ್ರಿಕೆ, ಮಾಲೆ, ಶಾಲೆ, ಧಾರೆ, ದ್ರಾಕ್ಷೆ, ಇತ್ಯಾದಿ.

ಟೀ ॥ ಆತಃ—ಲಿಂಗಾಂತದ ಆಕಾರಕ್ಕೆ ವಿಭಕ್ತಿಗಣಂ ಪರಮಾಗೆ. ಲಘೋಃ—ಲಘುವಪ್ಪ. ಏತ್—ಏಕಾರಮಕ್ಕುಂ. ಉ ॥ (ವೃ. ನೋ.)

1 ಕಾವ್ಯಾವಲೋಕನ, ಸೂತ್ರ 87. 2 ನಪುಂಸಕಲಿಂಗತಾ ಭವತಿ. 3 ಇದು ಕಳತ್ರಂ.

ಸೂ || ಈದೂತೋರ್ಹ್ರಸ್ವಃ || 101 ||

ವೃ || ಲಿಂ[1]ಗಾಂತಗತಯೋಃ ಈಕಾರೋಕಾರಯೋಃ ಹ್ರಸ್ವೋ ಭವತಿ ||

ಉ || ಲಕ್ಷ್ಮಿ, ನದಿ, ನಾರಿ, ಸರಸ್ವತಿ ; ಸರಯು, ಕುಹು, ವಧು, ವಾಮೋರು.

ಟೀ || ಈದೂತೋಃ—ಲಿಂಗಾಂತದ ಈಕಾರೋಕಾರಂಗಳ್ಗೆ. ಹ್ರಸ್ವಃ—ಹ್ರಸ್ವಮಕ್ಕುಂ. ಉ || (ವೃ. ನೋ.)

ಅನ್ಯಪ್ರಯೋಗಂ—

ಲಲಿತಾಳಿಕೆ ತಿಲನಾಸಿಕೆ |
ಲಲಿತಾಂಗಿ ವಿಶಾಲಜಘನೆ ಚಂದ್ರಾಸ್ಯೆ ಸಮು ||
ಜ್ವಲಿತರದೆ ಮನಸಿಜಂ ಕಡು |
ಗಲಿಯಾದಂ ನಿನ್ನಯವ್ವನಂ ಪೆರ್ಚಲೊಡಂ ||

ಸೂ || ನೈಕಾಕ್ಷರಪದೇ || 102 ||

ವೃ || ಏ[2]ಕಾಕ್ಷರಂ ಯತ್ಪದಂ ತ[3]ಸ್ಮಿನ್ ಈಕಾರೋಕಾರಯೋಃ ಹ್ರಸ್ವೋ ನ ಭವತಿ ||

ಉ || ಶ್ರೀ, ಸ್ತ್ರೀ, ಭೂ, ಭ್ರೂ.

ಟೀ || ಏಕಾಕ್ಷರಪದೇ—ಏಕಾಕ್ಷರಪದಮಾದಲ್ಲಿ. ಈ[4]ಕಾರೋಕಾರಂಗಳ್ಗೆ ಹ್ರಸ್ವಂ, ನ—ಆಗದು.

ಉ || (ವೃ. ನೋ.)

ಅನ್ಯವ್ಯಾಕರಣಸೂತ್ರಂ—

ಆ[5]ಕಾರಕ್ಕೆ ಲಘೂಕೃತ |
ಮೇಕಾರಂ ತಾನದಕ್ಕುವಿಾದೂದಂತ ||
ಕ್ಕೇಕಾಕ್ಷರಪದಮುಱಿಯೆ ನಿ[6] |
ರಾಕುಳದಿಂ ಹ್ರಸ್ವಮಕ್ಕುಮೆಲ್ಲೆಡೆಗಳೊಳಂ ||

ಸೂ || ಧಾತೋಸ್ತೃಶಬ್ದಸ್ಯ ವಾರಃ || 103 ||

ವೃ || ಧಾ[7]ತೋರ್ವಿಹಿತಸ್ಯ ತೃಶಬ್ದಸ್ಯ ವಾ ಆರಾದೇಶೋ ಭವತಿ ||

ಉ || ಕರ್ತಾರಂ, ಕರ್ತೃ ; ಧಾತಾರಂ, ಧಾತೃ ; ಭರ್ತಾರಂ, ಭರ್ತೃ ; ದಾತಾರಂ ದಾತೃ ; ಹೋತಾರಂ, ಹೋತೃ.

ಟೀ || ಧಾತೋಃ—ಧಾತುವಿನ. ತೃಶಬ್ದಸ್ಯ—ತೃಶಬ್ದಕ್ಕೆ. ವಾ—ವಿಕಲ್ಪದಿಂ. ಆರಃ—ಆರಾದೇಶಮಕ್ಕುಂ. ಉ || (ವೃ. ನೋ.)

---

1 ಲಿಂಗಾಂತಯೋಃ. 2 ಏಕಾಕ್ಷರಪದಾಂತಾನಾಮಾಕಾರ ಈಕಾರ ಊಕಾರ ಏತೇಷಾಂ ಹ್ರಸ್ವಾ ನ ಭವಂತಿ. 3 ತಸ್ಮಿನ್ನೀಕಾರಾಕಾರೋಕಾರಾಃ ಹ್ರಸ್ವಾ ನ ಭವಂತಿ. 4 ಆಕಾರ ಈಕಾರ ಊಕಾರಂಗಳ್ಗೆ. 5 ಕಾವ್ಯಾವಲೋಕನ, ಸೂತ್ರ 89. 6 ನಿರಾಕೃತದಿಂ. 7 ಧಾತುವಿಹಿತತೃಶಬ್ದಸ್ಯಾಂತ್ಯಸ್ಯ.

ಸೂ || ರಾಂತೋ ವೇಧಸಿ ವಿಧಾತುಃ || 104 ||

ವೃ || ವಿ[1]ಧಾತೃಶಬ್ದಸ್ಯ ವೇ[2]ಧಸ್ಯಭಿಧೇಯೇ ರಾಂತೋ ವಾ ಭವತಿ ||

ಉ || ವಿಧಾತ್ರಂ, ವಿಧಾತೃ.

ಟೀ || ವಿಧಾತುಃ—ವಿಧಾತೃಶಬ್ದಕ್ಕೆ. ವೇಧಸಿ—ಬ್ರಹ್ಮನಂ ನುಡಿವ ಅರ್ಥವಾಗೆ. ರಾಂತಃ—ರಕಾರಾಂತತೆ ವಿಕಲ್ಪದಿಂದಕ್ಕುಂ. ಉ || (ವೃ. ನೋ.)

ಸೂ || ಅರೋಽನ್ಯತ್ರ[3] || 105 ||

ವೃ || ಕ್ರಿಯಾವಾಚಿನೋ ಧಾತೋರನ್ಯತ್ರ ವರ್ತಮಾನಸ್ಯ ತೃಶಬ್ದಸ್ಯ ಅರೋ ಭವತಿ ||

ಉ || ಪಿತರಂ, ಪಿತೃ ; ಭ್ರಾತರಂ, ಭ್ರಾತೃ ; ಇತ್ಯಾದಿ.

ಟೀ || ಅನ್ಯತ್ರ—ಧಾತುವಿನದಲ್ಲದ ತೃಶಬ್ದಕ್ಕೆ. ಅರಃ—ಅರಾದೇಶಮಕ್ಕುಂ. ಉ || (ವೃ. ನೋ.)

ಸೂ || ಶ್ವಯುವಾಧ್ವನಾಮಾನಃ || 106 ||

ವೃ || ಶ್ವನ್ ಯುವನ್ ಅಧ್ವನ್ ಇತ್ಯೇತೇಷಾಮಂತಸ್ಯ ಆನೋ ಭವತಿ ||

ಉ || ಶ್ವಾನಂ, ಯುವಾನಂ, ಅಧ್ವಾನಂ.

ಟೀ || ಶ್ವಯುವಾಧ್ವನಾಂ—ಶ್ವನ್ ಯುವನ್ ಅಧ್ವನ್ ಎಂಬಿವೆಱಂತಕ್ಕೆ. ಆನಃ—ಆನಪ್ರತ್ಯಯಮಕ್ಕುಂ. ಉ || (ವೃ. ನೋ.)

ಸೂ || ಸಖ್ಯುರಾಯಃ || 107 ||

ವೃ || ಸ[4]ಖಿಶಬ್ದಾಂತಸ್ಯ ಆಯಪ್ರತ್ಯಯೋಭವತಿ ||

ಉ || ಸಖಾಯಂ.

ಟೀ || ಸಖ್ಯುಃ—ಸಖಿಶಬ್ದಕ್ಕೆ ವಿಭಕ್ತಿಗಣಂ ಪರಮಾಗೆ. ಆಯಃ—ಆಯಪ್ರತ್ಯಯಮಕ್ಕುಂ. ಉ || (ವೃ. ನೋ.)

ಸೂ || ವಸ್ಸಯಸ್ಸೋರುಪಾಂತ್ಯಸ್ಯ ದೀರ್ಘೋ ವಾ[5] || 108 ||

ವೃ || ವಸ್ಸಯಸ್ಸಪ್ರತ್ಯಯಾಂತಯೋರುಪಾಂತ್ಯಸ್ಯ ದೀ[6]ರ್ಘೋ ವಾ ಭವತಿ ||
ಉತ್ತರತ್ರ ಉದಾಹ್ರಿಯೇತೇ.

---

1 ವೇಧಸಿ ಅಭಿಹಿತೇ ವಿಧಾತೃಶಬ್ದೋ ರಾಂತೋ ವಾ ಭವತಿ. 2 ವೇಧಸ್ಯರ್ಥೇ. 3 ಈ ಸೂತ್ರವಾದಮೇಲೆ ಹಿಂದೆ ಅಚ್ಚಾಗಿರುವ ಪುಸ್ತಕಗಳಲ್ಲಿ—ಶ್ವಸ್ರ—ಎಂಬ ಸೂತ್ರವಿದೆ. ಆದರೆ ಈ ಸೂತ್ರವು ಈಗ ದೊರೆತಿರುವ 5 ಓಲೆಯ ಪ್ರತಿಗಳಲ್ಲಿಯೂ ಇಲ್ಲ. 4 ಸಖಿಶಬ್ದಸ್ಯ ವಿಭಕ್ತಿಷು ಪರಭೂತಾಸು ಅಂತ್ಯಸ್ಯ ಆಯೋ ಭವತಿ. 5 ವಾ ಲೋಪಃ.
6 ದೀರ್ಘೋ ಭವತಿ। ವಿಕಲ್ಪೇನ ಕ್ವಚಿಲ್ಲೋಪಃ, ದೀರ್ಘೋ ವಾ ಭವತಿ। ಕ್ವಚಿದಂತಸ್ಯ ಲೋಪಃ.

ಟೀ ॥ ವಸ್ಸ ಯಸ್ಸೋಃ=ವಸ್ಸ ಯಸ್ಸ ಪ್ರತ್ಯಯಾಂತಂಗಳ. ಉಪಾಂತ್ಯಸ್ಯ=ಉಪಾಂತ್ಯಕ್ಕೆ. ವಾ=ವಿಕಲ್ಪದಿಂ. ದೀರ್ಘಃ=ದೀರ್ಘಮಕ್ಕುಂ.

ಇದರ್ಕೆ ಮುಂದೆ ಉದಾಹರಣೆಯಂ ತೋಱುಿದಪರ್.

ಸೂ ॥ ಅದಂತತಾ ಚ ॥ 109 ॥

ವೃ ॥ ತಯೋಃ ವಸ್ಸ ಯಸ್ಸ ಪ್ರತ್ಯಯಾಂತಯೋಃ ಉಪಾಂತ್ಯಸ್ಯ ದೀರ್ಘೇ ಕೃತೇ ಅಕಾರಾಂತತಾ ಚ ಭವತಿ ॥

ಉ ॥ ವಿದ್ವಾಂಸಂ, ಕನೀಯಾಂಸಂ.

ವಾಗ್ರಹಣಾನುವರ್ತನಾತ್ ಕ್ವಚಿದ್ವಿಕಲ್ಪಃ—ಉ ॥ ಜ್ಯಾಯಾಂಸಂ, ಜ್ಯಾಯಂ; ಶ್ರೇಯಾಂಸಂ, ಶ್ರೇಯಂ.

ಟೀ ॥ ಆ ವಸ್ಸ ಯಸ್ಸ ಪ್ರತ್ಯಯಾಂತಂಗಳ ಉಪಾಂತ್ಯಕ್ಕೆ ದೀರ್ಘಮಾಗುತ್ತಿರೆ, ಅದಂತತಾ ಚ=ಅವರ್ಕೆ ಅಕಾರಾಂತತೆಯುಮಕ್ಕುಂ. ಉ ॥ (ವೃ. ನೋ.)

ವಾಶಬ್ದಸ್ವೀಕಾರದಿಂ ಕೆಲವೆಡೆಯೊಳ್ ವಿಕಲ್ಪಮಕ್ಕುಂ. ಉ ॥ (ವೃ. ನೋ.)

ಸೂ ॥ ವಿರಾಮೇ ವ್ಯಂ[1]ಜನಸ್ಯ ॥ 110 ॥

ವೃ ॥ ವಿರಾಮೇ ವರ್ತಮಾನಸ್ಯ ವ್ಯಂಜನಸ್ಯ ಅಕಾರಾಂತತಾ ಭವತಿ ॥

ಉ ॥ ಸಂಪದಂ, ಮರುತಂ, ವಿಹಾಯಸಂ.

ಟೀ ॥ ವಿರಾಮೇ=ವಿರಾಮದಲ್ಲಿ ವರ್ತಿಸುತ್ತಿರ್ಪ. ವ್ಯಂಜನಸ್ಯ=ವ್ಯಂಜನಕ್ಕೆ ಅಕಾರಾಂತತೆಯಕ್ಕುಂ. ಉ ॥ (ವೃ. ನೋ.)

ಸೂತ್ರ ॥ ಲೋಪೋ ವಿಭಾಷಯಾ ॥ 111 ॥

ವೃ ॥ ವಿರಾಮೇ ಸ್ಥಿತಸ್ಯ ವ್ಯಂಜನಸ್ಯ ವಿಭಾಷಯಾ ಲೋಪೋ ಭವತಿ ॥

ಉ ॥ ನವವಯಂ, ನವವಯಸಂ; ಜಾತವೇದಂ, ಜಾತವೇದಸಂ; ಉಶನಂ, ಉಶನಸಂ

ವ್ಯವಸ್ಥಿತವಿಭಾಷಯಾ ಕ್ವ[2]ಚಿಲ್ಲೋಪ ಏವ—ಉ ॥ ನಭಂ, ಮನಂ.

ಕ್ವಚಿದದಂತತ್ವಮೇವ—ಉ ॥ ದಿವಂ, ಕಕುಭಂ.

ಕ್ವ[3]ಚಿದುದಂತತ್ವಮೇವ । ವಿರಾಮೇ ದ್ವಿತ್ವಂ—ಉ ॥ ವಾಕ್ಕು, ದಿಕ್ಕು, ವೀರುತ್ತು, ಪರಿಷತ್ತು.

ಟೀ ॥ ಆ ವಿರಾಮದಲ್ಲಿ ವರ್ತಿಸುತ್ತಿರ್ಪ ವ್ಯಂಜನಕ್ಕೆ, ವಿಭಾಷಯಾ=ವಿಕಲ್ಪದಿಂ. ಲೋಪಃ=ಲೋಪಮಕ್ಕುಂ. ಉ ॥ (ವೃ. ನೋ.)

ಇದರ್ಕೆ ಅನ್ಯವ್ಯಾಕರಣಸೂತ್ರಂ—

---

1 ವ್ಯಂಜನಸ್ಯಾಪಿ. 2 ಕ್ವಚಿನ್ನಿತ್ಯಲೋಪಃ. 3 ಕ್ವಚಿದುದ್ವಿತ್ವಂ! ವಿರಾಮೇ ವ್ಯಂಜನಸ್ಯ ಕ್ವಚಿದ್ದ್ವಿತ್ವೇ ಉತ್ವಂ ಭವತಿ— ಎಂದು ಒಂದು ಪ್ರತಿಯುಲ್ಲಿದೆ.

ಜನಮುಲಿವ ಸಂಸ್ಕೃತವ್ಯಂ।
ಜನಾಂತಲಿಂಗಂಗಳತ್ವವುಂ ದ್ವಿತ್ವದಿನು ॥
ತ್ವನಿಯೋಗವುನಂತ್ಯದ ।
ರ್ಶನವುಂ ಮೇಣ್ ತಾಳ್ದಿ ಕನ್ನಡಕ್ಕವು ಲಿಂಗಂ ॥ (ಶ. ಮ. ದ. 86)

ಇದಱಿಂ ಕಿಱಿದು ದ್ವಿತ್ವಂಗೂಡಿದುಕಾರಾಂತಮುಕ್ಕುಂ. ಉ॥ ವಾಕ್ಕು ಇತ್ಯಾದಿ. (ವೃ. ನೋ.)

ಸೂ ॥ ಮನಯೋರ್ಬಿಂದುಃ ॥ 112 ॥

ವೃ ॥ ಮಕಾರನಕಾರಯೋಃ ಬಿಂದುರ್ಭವತಿ ವಿರಾಮೇ ॥

ಉ॥ ಕುಲಂ, ಜಲಂ, ಪೊಲಂ, ನೆಲಂ; ನೀಂ[1], ಆಂ, ತಾಂ.

ಟೀ॥ ವಿರಾಮದಲ್ಲಿ ವರ್ತಿಸುತ್ತಿರ್ಪ, ಮನಯೋಃ — ಮಕಾರ ನಕಾರಂಗಳ್ಗೆ. ಬಿಂದುಃ — ಸೊನ್ನೆಯಕ್ಕುಂ. ಉ॥ (ವೃ. ನೋ.)

ಸೂ ॥ ವರ್ಗೇ ತದ್ವರ್ಗಾಂತ್ಯಃ ॥ 113 ॥

ವೃ ॥ ವರ್ಗಾಕ್ಷರೇ ಪರೇ ಮ[2]ನಯೋಃ ಸ್ಥಾನೇ ತದ್ವರ್ಗಾಂತ್ಯಃ ಪಂಚಮೋ ಭವತಿ ॥

ಉ॥ ಬಿಂಕಙ್ಗೆಟ್ಟಂ, ತಾಞ್ಜಲಚಿತ್ತಂ, ಸುತ್ತಿಣ್ಟಕ್ಕುಂ, ಮೆ[3]ಲ್ಪನೊನ್ತೀರ್ಪಂ, ಬಲ್ಪಮ್ಬಿಸುಟಂ.

ಟೀ॥ ಆ ಮಕಾರನಕಾರಂಗಳ್ಗೆ, ವರ್ಗೇ — ವರ್ಗಾಕ್ಷರಂ ಪರವಾಗುತ್ತಿರೆ. ತದ್ವರ್ಗಾಂತ್ಯಃ — ಆವರ್ಗದ ಪಂಚಮಾಕ್ಷರಮುಕ್ಕುಂ. ಉ॥ (ವೃ. ನೋ.)[4]

ಸೂ ॥ ಣೋ ನಸ್ಯ ಣೇನ ॥ 114 ॥

ವೃ ॥ ಣಕಾರೇಣ ಯೋಗೇ ನಕಾರಸ್ಯ ಣತ್ವಂ ಭವತಿ ॥

ಉ॥ ತಣ್ಣೆಱಲ್, ತಣ್ಣೀರ್.

ಟೀ॥ ಣೇನ — ಣಕಾರದೊಡನೆ ಯೋಗವಾದ. ನಸ್ಯ — ನಕಾರಕ್ಕೆ. ಣಃ — ಣಕಾರಮುಕ್ಕುಂ. ಉ॥ (ವೃ. ನೋ.)

ಸೂ ॥ ಪೇ[5] ಹೋ ವಾ ॥ 115 ॥

ವೃ ॥ ಪಕಾರಸ್ಯ ಸ್ಥಾನೇ ಹಕಾರೋ ವಾ ಭವತಿ ॥

ಉ॥ ಪಲಗೆ, ಹಲಗೆ; ಕಾಪು, ಕಾಹು.

ಟೀ॥ ಪೇ — ಪಕಾರದ ಸ್ಥಾನದಲ್ಲಿ. ವಾ — ವಿಕಲ್ಪದಿಂ. ಹಃ — ಹಕಾರಮುಕ್ಕುಂ. ಉ॥ (ವೃ. ನೋ.)

---

1 ಒಂದು ಪ್ರತಿಯಲ್ಲಿ ನೀಂ, ಆಂ, ತಾಂ, ಎಂಬ ಉದಾಹರಣಗಳಿಲ್ಲ. 2 ಅನುಸ್ವಾರಸ್ಯ. 3 ಒಂದು ಪ್ರತಿಯಲ್ಲಿ ಕಡೆಯ ಎರಡು ಉದಾಹರಣಗಳಿಲ್ಲ. 4 ಉದಾಹರಣಗಳಾದಮೇಲೆ — ಇವು ವಿಕಲ್ಪಮುಮಕ್ಕುಂ। ಬಿಂಕಂಗೆಟ್ಟನೆಂಬೀ — ಎಂದು ಒಂದು ಪ್ರತಿಯಲ್ಲಿದೆ. 5 ಪೋ.

ಸೂ ॥ ಶಷಯೋಃ ಸಃ ॥ 116 ॥

ವೃ ॥ ಶಕಾರಷಕಾರಯೋಃ ಸಕಾರೋ ಭವತಿ ॥

ಉ ॥ ಸಸಿ, ಸೇಸೆ, ಸಿಸು, ಮಸಿ.

ಟೀ ॥ ಶಷಯೋಃ — ಶಕಾರಷಕಾರಂಗಳ್ಗೆ. ಸಃ — ಸಕಾರಮಕ್ಕುಂ.

ಉ ॥ (ವೃ. ನೋ.)

ಸೂ ॥ ರೇಫಸಂಯೋಗೇ ತದಂತರೇ ತ್ವಿಃ ॥ 117 ॥

ವೃ ॥ ರೇಫಸಂಯೋಗೇ ಸತಿ ಶಷಯೋಃ ರೇಫಸ್ಯ ಚಾಂತರೇ ಇಕಾರೋ ಭವತಿ ॥

ಉ ॥ ಪರಿಸಂ, ಸಿರಿ ; ಹರಿಸಂ, ಬರಿಸಂ, ಸರಿಸಪಂ.

ಟೀ ॥ ರೇಫಸಂಯೋಗೇ — ರೇಫೆ ಸಂಯೋಗಮಾಗುತ್ತಿರೆ. ತದಂತರೇ — ಆ ರೇಫೆಯ ಶಷಕಾರಂಗಳ ನಡುವೆ. ಇಃ — ಇಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ಹಕಾರಸ್ಯೋಃ[1] ॥ 118 ॥

ವೃ ॥ ರೇಫಸಂಯೋಗೇ ಸತಿ ಹಕಾರರೇಫಯೋರಂತರೇ ಉಕಾರೋ ಭವತಿ ॥

ಉ ॥ ಅರುಹಂ, ಬರುಹಂ, ಅರುಹಂತಂ, ಗಾರುಹಪತ್ಯಂ.

ಟೀ ॥ ಹಕಾರಸ್ಯ — ಹಕಾರಕ್ಕೆ ರೇಫೆ ಸಂಯೋಗಮಾಗುತ್ತಿರೆ. ರೇಫೆಯು ಹಕಾರದ ನಡುವೆ, ಉಃ — ಉಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ಳಕಾರಃ ಪದವಿಧೌ ಡಸ್ಯ ವ್ಯಂಜನೇಷು ॥ 119 ॥

ವೃ ॥ ಡಕಾರಸ್ಯ ಸ್ಥಾನೇ ವ್ಯಂಜನೇಷು ಪರೇಷು ಪದವಿಧೌ ಕ್ರಿಯಮಾಣೇ ಳಕಾರೋ ಭವತಿ ॥

ಉ ॥ ಕಾಳ್ಪುರಂ, ಕಾಳ್ಕಿಚ್ಚು, ನಾಳ್ಪಗರಣಂ, ನಾಳ್ಕಡೆ, ಕೋಳ್ಕುಟ್ಟ.

ಟೀ ॥ ಪದವಿಧೌ — ಸಮಾಸವಿಧಾನದಲ್ಲಿ. ವ್ಯಂಜನೇಷು — ವ್ಯಂಜನಂಗಳ್ ಪರಮಾಗುತ್ತಿರೆ. ಡಸ್ಯ — ಡಕಾರಕ್ಕೆ. ಳಕಾರಃ — ಳಕಾರಮಕ್ಕುಂ.

ಉ ॥ (ವೃ. ನೋ.) ಇವರ್ಕೆ ಸಮಾಸವಿಧಿಯಲ್ಲಿ ಪೂರ್ವಪದದ ಅಂತ್ಯಸ್ವರಂ ಲೋಪಮಾಗಿ ಈ ರೀತಿಯಿಂ ರೂಪಂ ಸಿದ್ಧಂ.

ಸೂ ॥ ಅತಿ ಟಃ ॥ 120 ॥

ವೃ ॥ ಅತಿ ಪ್ರತ್ಯಯೇ ಪರೇ ಡ[2]ಕಾರಸ್ಯ ಟಕಾರೋ ಭವತಿ ॥

ಉ ॥ ಆಟಂ, ನೋಟಂ, ಮಾಟಂ, ಬೇಟಂ, ಕೂಟಂ, ಊಟಂ, ಕಾಟಂ, ಪಾಟಂ.

ಟೀ ॥ ಆ ಡಕಾರಕ್ಕೆ, ಅತಿ — ಅಪ್ರತ್ಯಯಂ ಪರಮಾಗುತ್ತಿರೆ. ಟಃ — ಟಕಾರಮಕ್ಕುಂ. ಉ ॥ (ವೃ. ನೋ.)

---

1 ಸ್ಯೋಃಕ್. 2 ದಕಾರೇ, ದಾಂತಸ್ಯ.

ಸೂ ॥ ಱ[1]ಕಾರಸ್ಯ ರೇಫಃ ॥ 121 ॥

ವೃ ॥ ಱಕಾರಸ್ಯ ಸ್ಥಾನೇ ವ್ಯಂಜನೇಷು ಪರೇಷು ರೇಫೋ ಭವತಿ ॥

ಉ ॥ ಮೂರ್ಕಣ್ಣೆ, ಮೂರ್ಕೊರಲ್, ಮೂರ್ದನಿ, ಮೂರ್ಸಡಿ, ನೂರ್ವಡಿ.

ಟೀ ॥ ಱಕಾರಸ್ಯ — ಱಕಾರಕ್ಕೆ. ವ್ಯಂಜನಂ ಪರಮಾಗುತ್ತಿರೆ, ರೇಫಃ — **ರಕಾರಮಕ್ಕುಂ.** **ಉ** ॥ (ವೃ. ನೋ.)

ಸೂ ॥ ಆದೇರೃರಿಃ ॥ 122 ॥

ವೃ ॥ ಆದಿಭೂತಸ್ಯ ಋಕಾರಸ್ಯ ಸ್ಥಾನೇ ರಿಕಾರೋ ಭವತಿ ॥

ಉ ॥ ರಿಣಂ, ರಿತು, ರಿಸಿ.

ಟೀ ॥ ಆದೇಃ — ಶಬ್ದದ ಆದಿಯಾದ. ಋಃ — ಋಕಾರಕ್ಕೆ. ರಿಃ — ರಿಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ಯವಯೋರನಾದಿಸ್ಥಯೋರೈ[2]ಔ ಸ್ವರೇಣ ವಾ ॥ 123 ॥

ವೃ ॥ ಅನಾದಿಭೂತಯೋಃ ಯಕಾರವಕಾರಯೋಃ ಸ್ಥಾನೇ ಸ್ವರೇಣ ಸಹ ಐ[3]ಔ ವಾ ಭವತಃ ॥

ಉ ॥ ಕಯ್ವಾರಂ, ಕೈವಾರಂ; ಪಾರಯಿಸಿದಂ, ಪಾರೈಸಿದಂ; ಕವುಂಗು, ಕೌಂಗು; ತವುದಲೆ, ತೌದಲೆ.

ಟೀ ॥ ಅನಾದಿಸ್ಥಯೋಃ — ಆದಿಯಲ್ಲದಂತಪ್ಪ. ಯವಯೋಃ — ಯಕಾರವಕಾರಂಗಳ್ಗೆ. ಸ್ವರೇಣ — ಸ್ವರದೊಡನೆ ಕೂಡಿ. ವಾ — ವಿಕಲ್ಪದಿಂ. ಐ ಔ — ಐ, ಔ, ಎಂಬಿವಕ್ಕುಂ. ಉ ॥ (ವೃ. ನೋ.)

ಇತಿ ಕರ್ಣಾಟಕವ್ಯಾಕರಣವಿವರಣೇ ಯುಷ್ಮದಾದಿವಿಧಾನಂ ನಾಮ
ಪಂಚಮಃ ಪರಿಚ್ಛೇದಃ.

---

1 ಱಸ್ಯ. 2 ರೈಚ್ ಸ್ವರೇಣ ವಾ. 3 ವಾ ಐಚ್ ಭವತಿ, ಯಥಾಸಂಖ್ಯಂ ವಾ ಐಚ್ ಭವತಿ.

6. ಸಮಾಸವಿಧಾನಂ.

ಸೂ ॥ ನಾಮ್ನಾಂ ಸಮಾಸಃ ಸಂಗತಾರ್ಥಃ ॥ 124 ॥

ವೃ ॥ ನಾಮ್ನಾಂ ನಾಮಪದಾನಾಂ ಸಂಗತಾರ್ಥಃ ಸಂಬಂಧಾರ್ಥಃ ಸಮಾಸೋ ವೇ[1]ದಿತವ್ಯಃ[2] ॥

ಟೀ ॥ ನಾಮ್ನಾಂ = ನಾಮಪದಂಗಳ. ಸಂಗತಾರ್ಥಃ = ಕೂಡಿನುಡಿವರ್ಥಂ. **ಸಮಾಸಃ** = ಸಮಾಸನೆಂಬುದು.

ಸೂ ॥ ತ[3]ತ್ರಾಂತರ್ವರ್ತಿನ್ಯೋ ವಿಭಕ್ತಯೋ ಲೋಪ್ಯಾಃ ॥ 125 ॥

ವೃ ॥ ತತ್ರ ತಸ್ಮಿನ್ ಸಮಾಸೇ ಅಂ[4]ತರ್ವರ್ತಿನ್ಯೋ ವಿಭಕ್ತಯೋ ಲೋಪ್ಯಾ ಭವಂತಿ ॥

ಟೀ ॥ ತತ್ರ = ಆ ಸಮಾಸದಲ್ಲಿ. ಅಂತರ್ವರ್ತಿನ್ಯಃ = ನಡುವೆ ವರ್ತಿಸುತ್ತಿರ್ಪ. ವಿಭಕ್ತಯಃ = ವಿಭಕ್ತಿಗಳ್. ಲೋಪ್ಯಾಃ = ಲೋಪಿಸಲ್ಪಡುವುವು.

ಇದರ್ಕನ್ಯಲಕ್ಷಣಸೂತ್ರಂ —

ಸಂಗತಿಯಿಂದಂ ನಾಮಪ ।
ದಂಗಳವೇಕಾರ್ಥಗತಿಯೊಳಾಗೆ ಸಮಾಸಂ ॥
ಸಂಗಳಿಸುಗುಂ ವಿಭಕ್ತಿಗ ।
ಳಂಗಳ್ಗಂತರದೊಳಲ್ಲಿ ಲೋಪಮೆ ಅಕ್ಕುಂ ॥ (ಕಾವ್ಯಾವಲೋಕನ, ಸೂ. 45.)

ಸಮಾಸಾಃ ಕೇ ?

ಸೂ ॥ ಉತ್ತರಪದಾರ್ಥವೃ[5]ತ್ತಿಸ್ತತ್ಪುರುಷಃ ॥ 126 ॥

ವೃ ॥ ಉ[6]ತ್ತರಪದಾರ್ಥೇ ವೃತ್ತಿರ್ಯಸ್ಯ ಸಮಾಸಸ್ತತ್ಪುರುಷಸಂಜ್ಞೋ ಭವತಿ ॥

ಉ ॥ ಅರಮನೆ, ಸೂಳೆಗೇರಿ, ಮೊಂಗಾಯ್, ಸೀರ್ಪೀರೆ, ಆನೆವಾಲು, ಪೊನ್ನೋಲೆ.

ಟೀ ॥ ಉತ್ತರಪದಾರ್ಥವೃತ್ತಿಃ = ಮುಂದಣ ಪದದ ಅರ್ಥಮನೆ ಮುಖ್ಯಮಾಗುಳ್ಳುದು. ತತ್ಪುರುಷಃ = ತತ್ಪುರುಷಸಮಾಸಮೆಂಬುದು.

ಉ ॥ (ವ್ಯ. ಸೋ.) ಸೂಳೆಯರ ಕೇರಿ ಎಂಬಲ್ಲಿ ವಿಭಕ್ತಿಲೋಪಮಾಗಿ ಸೂಳೆಗೇರಿ ಎಂದಾಯ್ತು.

---

1 ಭವತಿ. 2 ಇದಾದಮೇಲೆ, ಸಂಗತಾರ್ಥಃ ಏಕಾರ್ಥ ಇತ್ಯರ್ಥಃ—ಎಂದು ಒಂದು ಪ್ರತಿಯಲ್ಲಿಯೂ, ಏಕಾರ್ಥೀಭಾವಃ ಸಮಾಸಶ್ಶಕ್ತಿರ್ಭವತ್—ಎಂದು ಮತ್ತೊಂದರಲ್ಲಿಯೂ ಇದೆ. 3 ತತ್ರಾಂತರ್ವರ್ತಿವಿಭಕ್ತೇರ್ಲೋಪಃ. 4 ಮಧ್ಯಸ್ಥಿತವಿಭಕ್ತೇರ್ಲೋಪೋ ಭವತಿ. 5 ಪ್ರವೃತ್ತಿಃ. 6 ಉತ್ತರಪದಾರ್ಥವೃತ್ತಿರ್ಯಸ್ಯಾಯಂ ಸಮಾಸಃ.

ಸೂ ॥ ಸ[1] ಏವೈಕಾಶ್ರಯಃ ಕರ್ಮಧಾರಯಃ ॥ 127 ॥

ವೃ ॥ ಸ[2] ಏವ ತತ್ಪುರುಷಃ ಏ[3]ಕಾಶ್ರಯಶ್ಚೇತ್ ಕರ್ಮಧಾರಯಸಂಜ್ಞೋ ಭವತಿ ॥

ಉ ॥ ನಳಿತೋಳ್, ಕೆಂದಳಂ, ತೆಳ್ವಸಿಱ್, ಪೆರ್ದೊಲೆ, ಕರ್ಕೆಯ್ದಿಲ್, ಕಟ್ಟಾಳ್.

ಟೀ ॥ ಸ ಏವ — ಆ ತತ್ಪುರುಷಸಮಾಸವು. ಏಕಾಶ್ರಯಃ — ಒಂದೇ ಅಧಿಕರಣ ಮುಳ್ಳುದಾಗೆ. ಕರ್ಮಧಾರಯಃ — ಕರ್ಮಧಾರಯಸಮಾಸಮೆಂದು ಪೆಸರಂ ಪಡೆಗುಂ.

ಉ ॥ (ವೃ. ನೋ.) ಕೆಂಪುಂ ತಾನೇ ತಾವರೆಯುಂ ತಾನೇ ಆಗಿ ಏಕಾಶ್ರಯಮಾಗೆ ವಿಭಕ್ತಿಲೋಪಮಾಗಿ ಕೆಂದಾವರೆ ಎಂದಾಯ್ತು.

ಸೂ ॥ ಸಂಖ್ಯಾದಿಶ್ಚೇತ್ ದ್ವಿಗುಃ ॥ 128 ॥

ವೃ ॥ ಸಂ[4]ಖ್ಯಾದಿಪದಶ್ಚೇತ್ ಸ ಏವ ಕರ್ಮಧಾರಯಃ ದ್ವಿಗುಸಂಜ್ಞೋ ಭವತಿ ॥

ಉ ॥ ಒರ್ತಲೆ, ಒರ್ಪಡಿ, ಇರ್ಕೆಯ್, ಇರ್ಕಣ್, ಮೂಲೋಕಂ, ಮುಕ್ಕೊಡೆ, ನಾಲ್ಗಾವುದಂ, ಅಯ್ಸರಂ, ಅಯ್ವಿಂಡಿರ್.

ಟೀ ॥ ಸಂಖ್ಯಾದಿಶ್ಚೇತ್ — ಆ ಕರ್ಮಧಾರಯಸಮಾಸವು ಸಂಖ್ಯಾಪದಂ ಮೊದಲೊಳುಳ್ಳುದಾದೊಡೆ. ದ್ವಿಗುಃ — ದ್ವಿಗುಸಮಾಸಮೆಂದು ಪೆಸರಂ ಪಡೆಗುಂ. ಉ ॥ (ವೃ. ನೋ.)

ಸೂ ॥ ಪೂರ್ವಪದಾರ್ಥಪ್ರಧಾನೋಽವ್ಯಯೀಭಾವಃ ॥ 129 ॥

ವೃ ॥ ಪೂ[5]ರ್ವಪದಾರ್ಥಮು[6]ಖ್ಯವೃತ್ತಿಃ ಸಮಾಸೋಽವ್ಯಯೀಭಾವಸಂಜ್ಞೋ ಭವತಿ ॥

ಉ ॥ ಕೀೞ್ಕೆಱೆ, ಕೀೞ್ಪೊಸೆ, ಮೇಗಣ್, ಮೇಂಗಾಲ್, ಅಂಗಯ್, ಅಂಗಾಲ್.

ಟೀ ॥ ಪೂರ್ವಪದಾರ್ಥಪ್ರಧಾನಃ — ಮೊದಲ ಪದದ ಅರ್ಥಮನೆ ಮುಖ್ಯಮಾಗುಳ್ಳುದು. ಅವ್ಯಯೀಭಾವಃ — ಅವ್ಯಯೀಭಾವಸಮಾಸಮೆಂಬುದು. ಉ ॥ (ವೃ. ನೋ.)

ಸೂ ॥ ಸ[7]ರ್ವಪದಾರ್ಥಪ್ರಧಾನೋ ದ್ವಂದ್ವಃ ॥ 130 ॥

ವೃ ॥ ಸ[8]ಮಸ್ತಪದಾನಾಂ ಸಮುಚ್ಚಯೋ ದ್ವಂದ್ವಸಮಾಸಸಂಜ್ಞೋ ಭವತಿ ॥

ಉ ॥ ಕೆಯ್ವನೆಗಳ್, ಕೆಱೆತೊಱೆಗಳ್, ಕಱೆಮಱೆಗಳ್, ನಾಡುಬೀಡುಗಳ್, ಬೆಟ್ಟಗಟ್ಟಂಗಳ್, ಕೆಯ್ಕಾಲ್ಗಳ್.

ಟೀ ॥ ಸರ್ವಪದಾರ್ಥಪ್ರಧಾನಃ — ಎಲ್ಲಾಪದಂಗಳ ಅರ್ಥಮುಂ ಮುಖ್ಯಮಾಗುಳ್ಳುದು. ದ್ವಂದ್ವಃ — ದ್ವಂದ್ವಸಮಾಸಮೆಂಬುದು. ಉ ॥ (ವೃ. ನೋ.)

---

1 ಸ ಏಕಾಶ್ರಯಃ. 2 ಭಿನ್ನಪ್ರವೃತ್ತಿ ಪ್ಯೇಕಾಶ್ರಯೋಽಸೌ ಸ ಏವ ತತ್ಪುರುಷಃ ಕರ್ಮಧಾರಯಸಂಜ್ಞೋ ಭವತಿ. 3 ಏಕಾಧಿಕರಣ ಶ್ಚೇತ್. 4 ಸಂಖ್ಯಾದಿಃ. 5 ಪೂರ್ವಪದಾರ್ಥಮುಖ್ಯವೃತ್ತಿಃ ಉತ್ತರಪದಾರ್ಥೋಪಸರ್ಜನಂ ಯತ್ರ ಸೋಽವ್ಯಯೀಭಾವಸಂಜ್ಞೋ ಭವತಿ. 6 ಮುಖ್ಯಃ. 7 ಸರ್ವಪದಮುಖ್ಯೋ ದ್ವಂದ್ವಃ. 8 ಸಮಸ್ತಪದಮುಖ್ಯತಾ ಯತ್ರ ಸ ಸಮಾಸೋ ದ್ವಂದ್ವೋ ಭವತಿ.

ಸೂ ॥ ಅನ್ಯಪದಾರ್ಥಪ್ರಧಾನೋ ಬಹುವ್ರೀಹಿಃ ॥ 131 ॥

ವೃ ॥ ಅನ್ಯಸ್ಯ ಪ[1]ದಸ್ಯಾರ್ಥೇ ವ[2]ರ್ತಮಾನಃ ಸಮಾಸೋ ಬಹುವ್ರೀಹಿಸಂಜ್ಞೋ ಭವತಿ ॥

ಉ ॥ ಕರ್ಬುರ್ವಿಲ್ಲಂ, ಕುಡುವಿಲ್ಲಂ, ಕಲ್ಲೆರ್ದೆಯಂ, ಕುಸಿಗೊರಲಂ, ನುಚ್ಚುಕ್ಕೆವಲ್ಲಂ, ಕೆಂದಲೆಯಂ, ಮೆಲ್ಲಡಿಯಂ, ಕುಱುಗೆಯ್ಯಂ, ಬಿಸುಗದಿರಂ, ತಣ್ಗದಿರಂ.

ಟೀ ॥ ಅನ್ಯಪದಾರ್ಥಪ್ರಧಾನಃ=ಮತ್ತೊಂದುಪದದ ಅರ್ಥವನೆ ಮುಖ್ಯವಾಗುಳ್ಳುದು. ಬಹುವ್ರೀಹಿಃ=ಬಹುವ್ರೀಹಿಸಮಾಸವೆಂಬುದು.

ಸೂ ॥ ಸಮಸಂಸ್ಕೃತಂ ದೇಶೀಯಪದೇನ ಸ[3]ಮಂ ಸಮಸ್ಯತೇ ॥ 132 ॥

ವೃ ॥ ಸಂಸ್ಕೃತಪದಸಮಂ ಯತ್ಪದಂ ತತ್ಸಮಸಂಸ್ಕೃತಂ । ತದ್ದೇಶೀಯಪದೇನ ಸ[4]ಮಂ ಸಮಸ್ಯತೇ ॥

ಉ ॥ ಪರದೇಸಂ, ಪರಕೊತ್ತೞ, ಪರವೆಣ್, ಪರಮಂಡಳಿಗಂ; ಬಳ್ಗವಿ, ಬೆಳ್ಗವಿ, ಅಱಿಗವಿ; ಕೂರಸಿ, ಮಾಜನಂ, ಮಾಪಾತಕಂ, ತುರಗದಱಂ, ಮಂ[5]ಗಳಾರತಿ, ಕಡುರಾಗಂ, ಪೊಡವೀಶಂ.

ಟೀ ॥ ಸಮಸಂಸ್ಕೃತಂ=ಸಮಸಂಸ್ಕೃತಪದಂ. ದೇಶೀಯಪದೇನ ಸಮಂ=ಕರ್ಣಾಟಕಪದದೊಡನೆ. ಸಮಸ್ಯತೇ=ಸಮಾಸಿಸಲ್ಪಡುವುದು.

ಸಮಸಂಸ್ಕೃತವೆಂಬ ಪೆಸರನುಳ್ಳುದಕ್ಕೆ ಅನ್ಯಲಕ್ಷಣಸೂತ್ರಂ—

ಸಮುದಿತಸಂಖ್ಯಾವ್ಯಯರಹಿ ।
ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ ॥
ತ್ತಮವರ್ಣಪ್ರಕೃತಿಗಳಂ ।
ಸಮಸಂಸ್ಕೃತಪೆಸರನಿಟ್ಟು ಲಿಂಗಂಮಾಳ್ಪರ್ ॥ (ಶ. ಮ. ದ. 80)

ನಾರದದಂಡಿಗೆ, ಶ್ರೀರಾಮಪಟ್ಟಣಂ. ಅಂತುಮಲ್ಲದೆಯುಂ ಕೆಲವುಂಟು-(ವೃ.ನೋ.)

ಸೂ ॥ ಕಾರಕಂ ಪ[6]ರೇಣ ಸಮರ್ಥಕ್ರಿಯಾಪದೇನ ॥ 133 ॥

ವೃ ॥ ಕರ್ಮಾದಿಕಂ ಯತ್ಕಾರಕಂ ತ[7]ತ್ಪರತ್ರಾವಸ್ಥಿತೇನ ಸ[8]ಮರ್ಥೇನ ಕ್ರಿಯಾವಾಚಿನಾ ಪದೇನ ಸಮಂ ಸಮಸ್ಯತೇ ॥

ಉ ॥ ಊರೇಱಲ್ ಬಂದಂ, ನಾಱ್ಕಿಡೆಪೋದಂ, ತೇಱಿದೆತ್ತಂ, ಎೞ್ತುಗೊಂಡಂ, ನೆಱೆಯಿರ್ದಂ, ಬಕ್ಕಲ್ವೋದಂ, ಬಿಲ್ಲೆತ್ತಿದಂ, ಬಳೆದೊಟ್ಟಂ, ಸೇದೆವಡೆದಂ.

1 ಪದಸ್ಯಾರ್ಥೇ ಯತ್ರ ಸಮಸ್ಯತೇ ಸ ಸಮಾಸೋ. 2 ಸಮಸ್ಯಮಾನೈಕಪದಂ ಯದಿ ಸ್ಯಾತ್ ಬಹುವ್ರೀಹಿಸಮಾಸೋ ಭವತಿ. 3 ಒಂದು ಪ್ರತಿಯಲ್ಲಿ ಸಮಂ ಎಂಬುದಿಲ್ಲ. 4 ಸಹ. 5 ಇಲ್ಲಿಂದ ಮುಂದೆ ಇರುವ ಉದಾಹರಣಗಳು ಒಂದು ಪ್ರತಿಯಲ್ಲಿ ಮಾತ್ರ ಇವೆ. 6 ಒಂದು ಪ್ರತಿಯಲ್ಲಿ ಪರೇಣ ಎಂಬುದಿಲ್ಲ. 7 ತತ್ಪರೋವಸ್ಥಿತೇನ. 8 ಸಮರ್ಥ ಕ್ರಿಯಾವಾಚಿನಾ.

ಟೀ॥ ಕಾರಕಂ—ಕರ್ಮಂ ಮೊದಲಾದ ಕಾರಕಪದಂ. ಪರೇಣ—ಮುಂದಣ. ಸಮರ್ಥಕ್ರಿಯೋಪದೇನ—ಸಮರ್ಥಮಾದ ಕ್ರಿಯಾಪದದೊಡನೆ ಸಮಾಸಿಸಲ್ಪಡುಗುಂ. ಉ॥ (ವೃ. ನೋ.)

ಸೂ ॥ ಅ[1]ಕಾರಾಂತಾನ್ಮಃ ॥ 134॥

ವೃ ॥ ಅಕಾರಾಂತಾತ್ ಕಾರಕಾತ್ ಕ್ರಿ[2]ಯಾವಾಚಿನಾ ಸಮಸ್ಯಮಾನಾತ್ ಪರೋ ಮ[3]ಕಾರಾಗಮೋ ಭವತಿ ॥

ಉ ॥ ಮನಂಗೊಳ್ಗುಂ, ಗುಣಂಗೊಂಡಂ, ಜಸಂಬಡೆದಂ, ಕಳಸಮಿಟ್ಟಂ.

ಟೀ॥ ಅಕಾರಾಂತಾತ್—ಅಕಾರಾಂತಮಪ್ಪ ಕಾರಕದತ್ತಣಿಂ ಪರಮಾಗಿ. ಮಃ—ಮಕಾರಾಗಮಮಕ್ಕುಂ. ಉ॥ (ವೃ. ನೋ.)

ಸೂ ॥ ವಿಶೇಷ್ಯೋತ್ತರಪ[4]ದಪೂರ್ವಪದಸ್ಯೋಪಾಂತ್ಯಸ್ವರಾದೇರ್ಲೋಪಃ ॥ 135 ॥

ವೃ ॥ ವಿಶೇಷ್ಯೋತ್ತರಪದಸ್ಯ ವಿಶೇಷಣರೂಪತಯಾಽವಸ್ಥಿತಸ್ಯ ಪೂರ್ವಪದಸ್ಯ ಉಪಾಂತ್ಯಸ್ವರಾದೇರವಯವಸ್ಯ ಲೋಪೋ ಭವತಿ ॥

ಉ ॥ ಕಾರ್ಮುಗಿಲ್, ಕೂರ್ವಾಳ್, ಇಮ್ಮಾವು, ಇನ್ನುಣಿಸು, ನುಣ್ಬರಂ, ಬಳ್ವಾತು, ಬಳ್ಗುಣಂ, ಬಳ್ನುಡಿ, ಬಳ್ವಾನಸಂ.

ಟೀ॥ ವಿಶೇಷ್ಯೋತ್ತರಪದ ಪೂರ್ವಪದಸ್ಯ—ವಿಶೇಷಣರೂಪಮಾಗಿರ್ದ ಮೊದಲ ಪದದ. ಉಪಾಂತ್ಯಸ್ವರಾದೇಃ—ಉಪಾಂತ್ಯಸ್ವರಮಂ ಆದಿಯಾಗುಳ್ಳ ಅವಯವಕ್ಕೆ. ಲೋಪಃ—ಲೋಪಮಕ್ಕುಂ.

ಉ ॥ (ವೃ. ನೋ.)

ಸೂ ॥ ಇಕಾರಸ್ಯೈದ್ಧ್ರಸ್ವಃ ॥ 136 ॥

ವೃ ॥ ತಸ್ಮಿನ್ನುಪಾಂತ್ಯಸ್ವರಾದೇರ್ಲೋಪೇ ಕೃತೇ ಪೂರ್ವಸ್ವರಸ್ಯ ಇಕಾರಸ್ಯ ಲಘುರೇಕಾರೋ ಭವತಿ ॥

ಉ ॥ ಪೆರ್ಮರಂ, ಪೆರ್ವಾಳ್, ಪೆಳ್ಮುಗಿಲ್, ಬೆಳ್ದಿಂಗಳ್.

ಟೀ ॥ ಆ ಉಪಾಂತ್ಯಸ್ವರಾದಿಗೆ ಲೋಪಂ ಮಾಡಲ್ಪಡುತ್ತಿರೆ, ಇಕಾರಸ್ಯ—ಮೊದಲ ಇಕಾರಕ್ಕೆ. ಹ್ರಸ್ವಃ—ಲಘುವಪ್ಪ. ಏತ್—ಏಕಾರಮಕ್ಕುಂ. ಉ ॥ (ವೃ. ನೋ.)

---

1 ಅಕಾರಾಂತಾದನುಸ್ವಾರಃ, ಮಾಕಾರಾಂತಾತ್. 2 ಒಂದು ಪ್ರತಿಯಲ್ಲಿ ಕ್ರಿಯಾವಾಚಿನಾ ಎಂಬುದಿಲ್ಲ. 3 ಅನುಸ್ವಾರೋ ಭವತಿ. 4 ಪದೇ. 5 ಪರಿಶಿಷ್ಟ ನೋ.

ಸೂ ॥ ನ ಚ ಕ್ವ[1]ಚನ ॥ 137 ॥

ವೃ ॥ ಕ್ವಚಿದಿಕಾರಸ್ಯ ಪೂರ್ವೋಕ್ತಹ್ರಸ್ವೈಕಾರೋ ನ ಭವತಿ ॥

ಉ ॥ ಬಿಣ್ಣೊಗ್ಗನೆ, ಬಿಣ್ಣೊಪ್ಪುಟಿ, ನಿಟ್ಟೆದರ್ದೆ, ನಿಟ್ಟೆಕರ್ಕೆ.

ಟೀ ॥ ಕ್ವಚನ — ಕೆಲವೆಡೆಯೊಳ್. ನ ಚ — ಇಕಾರಕ್ಕೆ ಪಿಂದೆ ಪೇೞ್ದ ಹ್ರಸ್ವಮಪ್ಪ ಏಕಾರಂ ಆಗದು. ಉ ॥ (ವೃ. ನೋ.)

ಸೂ ॥ ಸ್ವ[2]ರಾದೌ ದೀರ್ಘಸ್ತ್ವಗುರೋಃ ॥ 138 ॥

ವೃ ॥ ಸ್ವ[3]ರಾದೌ ಪದೇ ಪ[4]ರೇ ಅ[5]ಗುರುಕಸ್ಯ ಪೂರ್ವಪದಸ್ಯ ದೀ[6]ರ್ಘಾದೇಶೋ ಭವತಿ ॥

ಉ ॥ ಕಾರೊಸಡು, ಕಾರಿರುಳ್, ಪೇರೊಡಲ್.

ಅಗುರುವಿಶೇಷಣಂ ಕಿಂ? ಪಚ್ಚೋಲೆ, ಪಚ್ಚೋತಿ.

ನ ಚ ಕ್ವಚನೇತ್ಯ[7]ನುವರ್ತತೇ । ತಸ್ಮಾದಿ[8]ಹ ದೀರ್ಘೋ ಭವತಿ—

ಈಂಗೊರಲ್, ಈಂಚರಂ, ಈಂಗಡಲ್, ಈಂಬುಳಿ.

ಟೀ ॥ ಸ್ವರಾದೌ — ಸ್ವರಮಂ ಆದಿಯಾಗುಳ್ಳ ಪದಂ ಪರದಲ್ಲಿರೆ. ಅಗುರೋಃ — ಗುರುವಪ್ಪ ಅಕ್ಷರಮಿಲ್ಲದ ಪೂರ್ವಪದಕ್ಕೆ. ತು — ಮತ್ತೆ. ದೀರ್ಘಃ — ದೀರ್ಘಮಕ್ಕುಂ. ಉ ॥ (ವೃ. ನೋ.)

ಸೂತ್ರದಲ್ಲಿಯ ಅಗುರು ಎಂಬ ಶಬ್ದವಿಶೇಷದಿಂ ಪೂರ್ವಪದದೊಳ್ ಗುರ್ವಕ್ಷರಮಿರೆ ದೀರ್ಘಮಾಗದು. ಉ ॥ (ವೃ. ನೋ.)

ನ ಚ ಕ್ವಚನ ಎಂಬುದು ಅನುವರ್ತಿಪುದಱಿಂದೆ ಇಕಾರಕ್ಕೆ ಹ್ರಸ್ವೈಕಾರಮಾಗದು, ದೀರ್ಘಮೆ ಅಕ್ಕುಂ. ಉ ॥ (ವೃ. ನೋ.)

ಸೂ ॥ ಣಟಳನತಾನಾಂ ದ್ವಿರ್ಭಾವಃ ॥ 139 ॥

ವೃ ॥ ಣಟಳನತಾನಾಂ ವರ್ಣಾನಾಂ ಉ[9]ಪಾಂತ್ಯಸ್ವರಾದ್ಯವಯವಸ್ಯ ಲೋಪೇ ಕೃತೇ ಅವಶಿಷ್ಟಾನಾಂ ಸ್ವರಾದಿಪದೇ ಪರೇ ದ್ವಿರ್ಭಾವೋ ಭವತಿ ॥

ಉ ॥ ತಣ್ಣೆಲರ್, ಕಟ್ಟಾಯಂ, ಬಳ್ಳಾಳ್, ಇನ್ನುಣಿಸು, ಕಿತ್ತಡಿ.

ಟೀ ॥ ಣಟಳನತಾನಾಂ — ಣ, ಟ, ಳ, ನ, ತ, ಎಂಬ ಅಕ್ಷರಂಗಳ್ಗೆ. ಸ್ವರಮಂ ಆದಿಯಾಗುಳ್ಳ ಪದಂ ಪರಮಾಗಿರೆ, ಉಪಾಂತ್ಯಸ್ವರಾದ್ಯವಯವಕ್ಕೆ ಲೋಪಮಾಗಿ, ದ್ವಿರ್ಭಾವಃ — ದ್ವಿತ್ವಮಕ್ಕುಂ. ಉ ॥ (ವೃ. ನೋ.)

---

1 ಕ್ವಚಿತ್. 2 ಸ್ವರಾದೌ ದೀರ್ಘೋಽಗುರೋಃ. 3 ಗುರುರಹಿತೇ ಸ್ವರಾದಿಪದೇ ಪರೇ ಪೂರ್ವಸ್ಯ ದೀರ್ಘಾದೇಶೋ ಭವತಿ. 4 ಪರತ್ರಾವಸ್ಥಿತೇ. 5 ಅಗುರ್ವಕ್ಷರಸ್ಯ ಪೂರ್ವಸ್ಯ. 6 ದೀರ್ಘೋ ಭವತಿ. 7 ಕ್ವಚನಾನುವರ್ತನಾದಿಹ. 8 ಇಕಾರೋ. 9 ಉಪಾಂತ್ಯಸ್ಯ, ಉಪಾಂತ್ಯಸ್ವರಾದೇರವಯವಲೋಪಾವಶಿಷ್ಟಾನಾಂ. ಒಂದು ಪ್ರತಿಯಲ್ಲಿ ಇಲ್ಲಿಂದ ಅವಶಿಷ್ಟಾನಾಂ ವರೆಗೆ ಇಲ್ಲ.

ಸೂ ॥ ಕಡಿದುನಿಡಿದುದ್ವಯಸ್ಯಾ[1]ದ್ಯೈಕಸ್ವರಾತ್ಪರಸ್ಯ ಟಃ ॥ 140 ॥

ವೃ ॥ ಕಡಿದು ನಿಡಿದು ಇತ್ಯೇತಯೋರ್ದ್ವಯೋಃ ಆ[2]ದ್ಯೈಕಸ್ವರಾತ್ ಪರಸ್ಯಾವಯವಸ್ಯ ಟಕಾರೋ ಭವತಿ ॥

ಉ ॥ ಕಟ್ಟಾಳ್, ನಿಟ್ಟಡಕಿಲ್.

ಟೀ ॥ ಕಡಿದು ನಿಡಿದು ದ್ವಯಸ್ಯ—ಕಡಿದು ನಿಡಿದು ಎಂಬ ಎರಡು ಶಬ್ದಂಗಳ. ಆದ್ಯೈಕಸ್ವರಾತ್—ಮೊದಲ ಒಂದು ಸ್ವರದತ್ತಣಿಂ. ಪರಸ್ಯ—ಪರವಾದ ಅವಯವಕ್ಕೆ. ಟಃ—ಟಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ನಡೋಶ್ಚ ॥ 141 ॥

ವೃ ॥ ನಡು ಇತ್ಯೇತಸ್ಯ ಚ ಡ[3]ಕಾರಸ್ಯ ಟಕಾರೋ ಭವತಿ ॥

ಉ ॥ ನಟ್ಟಿರುಳ್, ನಟ್ಟಡವಿ.

ಟೀ ॥ ನಡೋಶ್ಚ—ನಡು ಎಂಬುದಱ ಡಕಾರಕ್ಕೆಯುಂ ಟಕಾರಮಕ್ಕುಂ.

ಉ ॥ (ವೃ. ನೋ.)

ಸೂ ॥ ಕಿಱಿದೋಸ್ತಃ ॥ 142 ॥

ವೃ ॥ ಕಿಱಿದುಶಬ್ದಸ್ಯ ಅಂತೇ ಪು[4]ನಸ್ತಕಾರೋ ಭವತಿ ॥

ಉ ॥ ಕಿತ್ತಡಿ, ಕಿತ್ತೀಳೆ.

ಟೀ ॥ ಕಿಱಿದೋಃ—ಕಿಱಿದು ಎಂಬ ಶಬ್ದದ ಕಡೆಯಲ್ಲಿ. ತಃ—ತಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ತೇಷಾಮುದಂತತ್ವಂ ವ್ಯಂಜನೇಷು ॥ 143 ॥

ವೃ ॥ ತೇಷಾಂ ಕಡಿದುಪ್ರಭೃತೀನಾಂ ವ್ಯಂಜನೇಷು ಪರೇಷು ಉ[5]ಕಾರಾಂತತ್ವಂ ಭವತಿ ॥

ಉ ॥ ಕಡುಗುದುರೆ, ಕಡುವಾಳ್; ನಿಡುದೋಳ್, ನಿಡುವುರ್ಬು; ನಡುವಗಲ್, ನಡುಮನೆ; ಕಿಱುನೆಲೆ, ಕಿಱುವಿಡಿ.

ಟೀ ॥ ತೇಷಾಂ—ಆ ಕಡಿದು ಮೊದಲಾದುವಕ್ಕೆ. ವ್ಯಂಜನೇಷು—ವ್ಯಂಜನಂಗಳ್ ಪರವಾಗುತ್ತಿರೆ. ಉದಂತತ್ವಂ—ಉಕಾರಾಂತತೆಯುಕ್ಕುಂ. ಉ ॥ (ವೃ. ನೋ.)

ಸೂ ॥ ಪೊಸತ್ಪ್ರಾದೀನಾಮದಂತತ್ವಂ ನಿಪಾತ್ಯತೇ ॥ 144 ॥

ವೃ ॥ ಪೊಸತು, ಪೞದು, ಎಳದು, ಇತ್ಯೇವಮಾದೀನಾಂ ಶಬ್ದಾನಾಂ ಉಪಾಂತ್ಯಸ್ವರಾದ್ಯವಯವಲೋಪೇ ಸತಿ ಅಕಾರಾಂತತ್ವಂ ನಿಪಾತ್ಯತೇ॥

1 ಸಪ್ರಥಮಸ್ವರಾತ್. 2 ಆದ್ಯಸ್ವರಾತ್. 3 ಡಕಾರಸಾ ನೇ. 4 ಎರಡು ಪ್ರತಿಗಳಲ್ಲಿ ಪುನಃ ಎಂಬುದಿಲ್ಲ. 5 ಉದಂತತ್ವಂ.

ಉ ॥ ಪೊಸಸುಗ್ಗಿ, ಪೊಸ ಅಡಕೆ; ಪೞಿಗೆಱೆವೆ, ಪೞಿ ಅಲಗು; ಎಳಮಾವು, ಎಳ ಅಂಬೆ; ಪೊಱಮಾಱು, ಪೊಱ ಅಡಿ; ಬಳಜಗಳಂ, ಬಳ ಅಟ್ಟಂ.

ಕೇ[1]ಚಿದೊಳಸ್ಯ ಉ[2]ಳ್ಳಾದೇಶಮಪೀಚ್ಛಂತಿ—ಉಳ್ವಕ್ಕಂ, ಉಳ್ಳಾಳ್, ಉಳ್ಮಡೆ.

ಟೀ ॥ ಪೊಸತ್ವಾದೀನಾಂ—ಪೊಸತು, ಪೞದು, ಎಳದು, ಮೊದಲಾದ ಶಬ್ದಂಗಳ್ಗೆ. ಉಪಾಂತ್ಯಸ್ವರಾನ್ವಯವುಮಂ ಲೋಪಮಾಗಲೊಡಂ, ಅದಂತತ್ವಂ—ಅಕಾರಾಂತತೆ, ನಿಪಾತ್ಯತೇ—ನಿಪಾತಿಸಲ್ಪಡುಗುಂ. ಉ॥ (ವೃ. ನೋ.)

ಕೆಲರ ಕರ್ಣಾಟಕಪ್ರಾಕ್ತನಾಚಾರ್ಯರ್ ಒಳಗಿಂಗೆ ಉಳ್ಳಾದೇಶಮುಮನಿಚ್ಛೈಸುವರ್— ಉ ॥ (ವೃ. ನೋ.)

ಸೂ ॥ ಕೆಚ್ಚನೆ ಬೆಚ್ಚನೆ ಪಚ್ಚನೆ ಶಬ್ದಾನಾಂ ಚಾದೇರ್ಮತ್ವಂ ॥ 145 ॥

ವೃ ॥ ಕೆಚ್ಚನೆ ಇ[3]ತ್ಯಾದಿಶಬ್ದಾನಾಂ ತ್ರಯಾಣಾಂ ಚಕಾರಾದೇಃ ಅ[4]ವಯವಸ್ಯ ವ್ಯಂಜನೇಷು ಪರೇಷು ಮತ್ವಂ ಭವತಿ ॥

ಉ ॥ ಕೆಂಗುಡಿ, ಕೆಂದಾವರೆ; ಬೆನ್ನೀರ್, ಬೆಂಬೂದಿ; ಪಂದಲೆ, ಪಂದಳಿರ್.

ಟೀ ॥ ಕೆಚ್ಚನೆ ಬೆಚ್ಚನೆ ಪಚ್ಚನೆ ಶಬ್ದಾನಾಂ—ಕೆಚ್ಚನೆ, ಬೆಚ್ಚನೆ, ಪಚ್ಚನೆ, ಎಂಬ ಶಬ್ದಂಗಳ. ಚಾದೇಃ—ಚಕಾರಮಂ ಆದಿಯಾಗುಳ್ಳ ಅವಯವಕ್ಕೆ. ವ್ಯಂಜನಂ ಪರಮಾಗುತ್ತಿರೆ, ಮತ್ವಂ—ಮಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ಸ್ವಾಂತತಾ ಚ ॥ 146 ॥

ವೃ ॥ ತೇ[5]ಷಾಂ ಕೆಚ್ಚನೆ ಪ್ರಭೃತೀನಾಂ ಸ್ವಾಂತತಾ ಚ ಭವತಿ ವ್ಯಂಜನೇ ಪರೇ ॥

ಉ ॥ ಕಿಸುಗಲ್, ಕಿಸುಗಾ[6]ಡು; ಬಿಸುಗದಿರ್, ಬಿಸುಗಲ್; ಪಸುವಂದರ್, ಪಸುರ್ವ್ಪ್. ಯೋ[7]ಗವಿಭಾಗಾದಿಷ್ಟಸಿದ್ಧಿರಿತಿ ಕ್ವಚಿತ್ ಸ್ವಾಂತತಾ ನ ಭವತಿ—

ಪಚ್ಚಡಕೆ, ಪಚ್ಚೋಲೆ; ಬೆಚ್ಚಡಿ, ಬೆಚ್ಚೋಡು.

ಟೀ ॥ ಸ್ವಾಂತತಾ ಚ—ಆಕೆಚ್ಚನೆ ಮೊದಲಾದ ಶಬ್ದಂಗಳ್ಗೆ ವ್ಯಂಜನಂ ಪರಮಾಗುತ್ತಿರೆ ಸುಕಾರಾಂತತೆಯುಮಕ್ಕುಂ. ಉ ॥ (ವೃ. ನೋ.)

ಯೋಗವಿಭಾಗದಿಂ ಕೆಲವೆಡೆಯೊಳ್ ಸುಕಾರಾಂತತೆಯಾಗದು. ಉ ॥ (ವೃ. ನೋ.)

ಸೂ ॥ ಇ[8]ಕಾರೋ ವಿಭಾಷಯಾ ಚ್ಯೈ[9]ತೇಃ ॥ 147 ॥

ವೃ ॥ ಸ್ವಾಂ[10]ತತಾವಿಧಾನೇ ಏಕಾರಸ್ಯ ಇಕಾರಾದೇಶೋ ವಿಭಾಷಯಾ ಭವತಿ ॥

ಉ ॥ ಕಿಸುರ್ವ್ಪ್, ಕಿಸುಸಂಜೆ; ಬಿಸುನೆತ್ತರ್, ಬಿಸುಸಯಿಲ್.

---

1 ಅತ್ರ ಕೇಚಿದುಳ್ಳಾದೇಶಮಪೀಚ್ಛಂತಿ. 2 ಉಳಾದೇಶ. 3 ಇತ್ಯಾದಿತ್ರಯಾಣಾಂ. 4 ಕೆಲವು ಪ್ರತಿಗಳಲ್ಲಿ ಈ ಪದವಿಲ್ಲ. 5 ಕ್ವಚಿತ್ ಕೆಚ್ಚನಾದೀನಾಂ ಚಕಾರಾದೇಃ ಸುರ್ಭವತಿ. 6 ಗೋಡು. 7 ಯೋಗವಿಭಾಗಾದಿಷ್ಟಪ್ರಸಿದ್ಧಿರಿತಿ, ಯೋಗವಿಭಾಗಾತ್ ಕ್ವಚಿದಿಷ್ಟಪ್ರವೃತ್ತಿಃ, ಯೋಗವಿಭಾಗಾದಿಷ್ಟಪ್ರವೃತ್ತಿಸ್ಸಿದ್ಧಾ. 8 ಏಕಾರ ಇಕಾರೋ ವಾ, ಏಕಾರೇ ವಿಭಾಷಯೇಕಾರಃ, ಇಕಾರೋ ವಿಭಾಷಯಾತ್ರೈವ. 9 ಸ್ಯೈವ. 10 ಸ್ವಾಂತತ್ವೇ ಸತಿ.

ವ್ಯವಸ್ಥಿತವಿಭಾಷಯಾ ಕ್ವಚಿದೇಕಾರ ಏವ ನೇಕಾರಃ—

ಕೇಸುರಿ, ಕೇಸಡಿ, ಕೇಸಕ್ಕಿ, ಕೇಸುಗುರ್.

ಟೀ ॥ ಸುಕಾರಾಂತವಾದಲ್ಲಿ, ಏತಃ—ಏಕಾರಕ್ಕೆ. ವಿಭಾಷಯಾ—ವಿಕಲ್ಪದಿಂದೆ. ಇಕಾರಶ್ಚ—ಇಕಾರವುಮುಕ್ಕುಂ. ಉ ॥ (ವೃ. ನೋ.)

ವಿಭಾಷಯಾ ಎಂಬುದಱಿಂ ಕೆಲವೆಡೆಯೊಳ್ ಏಕಾರಕ್ಕೆ ಇಕಾರವಾಗದು.

ಉ ॥ (ವೃ. ನೋ.)

ಸೂ ॥ ತತ್ಪುರುಷೇ[1] ಪೂರ್ವಪದಾಂತ್ಯಲೋಪಃ[2] ಪ್ರಾಯೋ ಯಥೋಚಿತಾಗಮಶ್ಚ ॥ 148 ॥

ವೃ ॥ ತತ್ಪುರುಷಸಮಾಸೇ ವರ್ತಮಾನಸ್ಯ ಪೂರ್ವಪದಸ್ಯ ಸಂಬಂಧಿನಃ ಅಂತ್ಯವರ್ಣಸ್ಯ ಲೋಪಃ ಪ್ರಾಯೇಣ ಭವತಿ । ಯಥೋಚಿತಾಗಮಶ್ಚ ವಿಧೇಯಃ[3] ॥

ಉ ॥ ಅರಮನೆ, ಮಾಮರಂ, ಪೂಗೊಂಚಲ್, ಜೇನೆಯ್, ಮಾಂಗಾಯ್, ಮಾಂದಳಿರ್, ತೆಂಬೆಲರ್, ದಾಂಗುಡಿ.

ಪ್ರಾಯೋಗ್ರಹಣಾತ್ ಕ್ವಚಿನ್ನ ಭವತಿ—ಅರಸುಗುಣಂ, ಅರಸಾಳ್ತನಂ.

ಟೀ ॥ ತತ್ಪುರುಷೇ—ತತ್ಪುರುಷಸಮಾಸದಲ್ಲಿ. ಪ್ರಾಯಃ—ಪ್ರಾಯಿಕಮಾಗಿ. ಪೂರ್ವಪದಾಂತ್ಯಲೋಪಃ—ಮೊದಲ ಪದದ ಕಡೆಯಕ್ಕರಕ್ಕೆ ಲೋಪಮಕ್ಕುಂ. ಯಥೋಚಿತಾಗಮಶ್ಚ—ಯಥೋಚಿತಮಾದ ಆಗಮಮುಮಕ್ಕುಂ. ಉ ॥ (ವೃ. ನೋ.)

ಪ್ರಾಯಃಶಬ್ದಸ್ವೀಕಾರದಿಂ ಕೆಲವೆಡೆಯೊಳ್ ಮೊದಲ ಪದದ ಕಡೆಯಕ್ಕರಕ್ಕೆ ಲೋಪಮಾಗದು.

ಅರಸು + ಗುಣಂ ಎಂಬುದಕ್ಕೆ ಅರಗುಣಂ ಎಂದಾಗದು; ಅರಸುಗುಣಂ ಎಂದೆ ಅಕ್ಕುಂ. ಅರಸಾಳ್ತನಂ ಅರಾಳ್ತನಂ ಎಂದಾಗದು.

ಸೂ ॥ ಅತ್ವಮೆಲ್ಲಸ್ಯ ॥ 149 ॥

ವೃ ॥ ಸಮಾಸೇ ಪೂರ್ವಪದಭೂತಸ್ಯ[4] ಎಲ್ಲಶಬ್ದಸ್ಯ ಅತ್ವಂ ಭವತಿ ॥

ಉ ॥ ಎಲ್ಲಾ ರತ್ನಂಗಳ್, ಎಲ್ಲಾ ಕಾರ್ಯಂಗಳ್, ಎಲ್ಲಾ ಮಾತುಗಳ್.

ಪ್ರಾಯೋ ನುವೃತ್ತ್ಯಾ ಕ್ವಚಿನ್ನ ಭವತಿ—ಎಲ್ಲ ತೆಱಂ, ಎಲ್ಲ ಧನಂ, ಎಲ್ಲೆಡೆ.

ಟೀ ॥ ಸಮಾಸದಲ್ಲಿ ಮೊದಲ ಪದಮಾದ, ಎಲ್ಲಸ್ಯ—ಎಲ್ಲ ಶಬ್ದಕ್ಕೆ. ಅತ್ವಂ—ಆಕಾರಮಕ್ಕುಂ. ಉ ॥ (ವೃ. ನೋ.)

ಪ್ರಾಯಃ ಎಂಬ ಶಬ್ದದ ಅನುವೃತ್ತಿಯಿಂ ಕೆಲವೆಡೆಯೊಳ್ ಆಕಾರಮಾಗದು. ಉ ॥ (ವೃ. ನೋ.)

1 ತತ್ಪುರುಷ, ತತ್ಪುರುಷೇ ತು. 2 ಪದಾಂತಸ್ಯ ಲೋಪಃ. 3 ಅನುಸಂಧೇಯಃ. ಬಂದು ಪ್ರತಿಯಲ್ಲಿ ವಿಧೇಯಃ ಎಂಬುದಿಲ್ಲ. 4 ಸಮಸ್ತ ಪದಪೂರ್ವಸ್ಯ, ಸಮಾಸಪೂರ್ವಭೂತಸ್ಯ.

ಸೂ ॥ ಬಹುವ್ರೀಹಾವದಂತೇ ॥ 150 ॥

ವೃ ॥ ಬ[1]ಹುವ್ರೀಹಿಸಮಾಸೇ ಕೃತೇ ತದಂತೇ ಅ[2]ಕಾರೋ ಭವತಿ ॥

ಉ ॥ ಕೆಂಗಣ್ಣಂ, ಬಟ್ಟುದೊಡೆಯುಂ, ನೆೞ್ವಕಿವಿಯುಂ, ಕುಸಿಗೊರಲಂ, ಕೊನೆವಲ್ಲಂ, ಕಾರೊಡಲಂ.

ಕ್ವಚಿನ್ನ ಭವತಿ—ಕಲ್ಲೆರ್ದೆ, ಅಳ್ಳೆರ್ದೆ.

ಟೀ ॥ ಬಹುವ್ರೀಹೌ—ಬಹುವ್ರೀಹಿಸಮಾಸದಲ್ಲಿ. ಅಂತೇ—ಕಡೆಯಲ್ಲಿ. ಅತ್—ಅಕಾರಮಕ್ಕುಂ. ಉ ॥ (ವೃ. ನೋ.)

ಕೆಲವೆಡೆಯೊಳ್ ಅಕಾರಮಾಗದು. ಉ ॥ (ವೃ. ನೋ.)

ಸೂ ॥ ಇಲ್ಲಸ್ಯೇಲಿಃ ॥ 151 ॥

ವೃ ॥ ತಸ್ಮಿನ್ ಬಹುವ್ರೀಹೌ ಇಲ್ಲಶಬ್ದಸ್ಯ ಇ[3]ಲಿರಾದೇಶೋ ಭವತಿ ॥

ಉ ॥ ನಾಣಿಲಿಮಾ[4]ನಸಂ, ಪಲ್ಲಿಲಿಮಾಯುಂ, ಕೂರಿಲಿಕುಡುಗೊಲ್, ಅಗಿಲಿಲಿಗಂಧಂ.

ಟೀ ॥ ಆ ಬಹುವ್ರೀಹಿಸಮಾಸದಲ್ಲಿ, ಇಲ್ಲಸ್ಯ—ಇಲ್ಲ ಎಂಬ ಶಬ್ದಕ್ಕೆ. ಇಲಿಃ—ಇಲಿ ಎಂಬ ಆದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ದ್ವಿಗೌ ಸಂಖ್ಯಾವಾಚಿನಾಮುಪಾಂತ್ಯವ್ಯಂಜನಾದೇರ್ಲೋಪಃ ॥ 152 ॥

ವೃ ॥ ದ್ವಿಗುಸಮಾಸೇ ಸಂಖ್ಯಾವಾಚಿಶಬ್ದಾನಾಂ ಉಪಾಂತ್ಯವ್ಯಂಜನಾದೇಃ ಅ[5]ವಯವಸ್ಯ ಲೋಪೋ ಭವತಿ ॥

ಉ ॥ ಮೂಲೋಕಂ, ನಾಲ್ಗೇಣ್, ನಾಲ್ದೆಸೆ, ಅಯ್ಗಂಡುಗಂ, ಅಯ್ಸರಂ, ಎಣ್ಬಾಗುದಂ, ಎಣ್ದೆಸೆ.

ಟೀ ॥ ದ್ವಿಗೌ—ದ್ವಿಗುಸಮಾಸದಲ್ಲಿ. ಸಂಖ್ಯಾವಾಚಿನಾಂ—ಸಂಖ್ಯೆಯಂ ಪೇೞ್ವ ಶಬ್ದಂಗಳ. ಉಪಾಂತ್ಯವ್ಯಂಜನಾದೇಃ—ಉಪಾಂತ್ಯವ್ಯಂಜನಮಂ ಆದಿಯಾಗುಳ್ಳ ಅವಯವಕ್ಕೆ. ಲೋಪಃ—ಲೋಪಮಕ್ಕುಂ. ಉ ॥ (ವೃ. ನೋ.)

ಸೂ ॥ ಏ[6]ಕಾರ್ಥವಾಚಕಸ್ಯ ರೋಽಂತೇ ॥ 153 ॥

ವೃ ॥ ಏ[7]ಕಾರ್ಥವಾಚಕೋ ಯಃ ಶಬ್ದಃ ತಸ್ಯ ಅಂ[8]ತೇ ರೇಫೋ ಭವತಿ ॥

ಉ ॥ ಒರ್ಕೆಯ್, ಒರ್ತಲೆ, ಒ[9]ರೆಂಜಲ ನಂ[10]ಟಂ, ಒರಂದದ ಮಾನಸಂ.

---

1 ಬಹುವ್ರೀಹೌ ಸಮಾಸೇ. 2 ಅದಂತೋ. 3 ಇಲಿ ಆದೇಶೋ ಭವತಿ. 4 ಮಾನಸಂ. 5 ಕೆಲವು ಪ್ರತಿಗಳಲ್ಲಿ ಈ ಪದವಿಲ್ಲ. 6 ಏಕಾರ್ಥವಾಚಕಸ್ಯ ರಾಂತಃ, ಏಕಾರ್ಥವಾಚಕಸ್ಯರಂತಃ, ಏಕಾರ್ಥವಾಚಕಸ್ಯರಂತೇ, ಏಕಾರ್ಥವಾಚಕಸ್ಯರ್. 7 ಏಕಸಂಖ್ಯಾವಾಚಕಸ್ಯ ಒರ್ ಭವತಿ. 8 ರೇಫಾದೇಶೋ ಭವತಿ. 9 ಇದಕ್ಕೆ ಹಿಂದೆ—ಕ್ವಚಿದ್ದೀರ್ಘಃ—ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 10 ನಾಂಡಂ.

ಟೀ ॥ ಏಕಾರ್ಥವಾಚಕಸ್ಯ—ಒಂದು ಎಂಬ ಶಬ್ದಕ್ಕೆ. ಅಂತೇ—ಕಡೆಯಲ್ಲಿ. ರಃ—ರೇಫವುಕ್ಕುಂ. ಉ॥ (ವೃ. ನೋ.)

ಸೂ ॥ ಇರಾದೇಶೋ ದ್ವ್ಯರ್ಥಸ್ಯ ॥ 154 ॥

ವೃ ॥ ದ್ವ್ಯರ್ಥವಾ[1]ಚಕಸ್ಯ ದ್ವಿಗುಸಮಾಸೇ ಪೂರ್ವಪದಸ್ಯ ಇರಾದೇಶೋ ಭವತಿ ॥

ಉ॥ ಇರ್ವೆಯ್, ಇರ್ಪಕ್ಕಂ, ಈ[2]ರಯ್ದು, ಈರೊಳ್ಳಿದರ್.

ಅತ್ರ ಕ್ವಚಿತ್ ಸ್ವ[3]ಭಾವೋ ವಕ್ತವ್ಯಃ—ಎರಱ್ಮತು, ಎರಱ್ಮೊಱು, ಎರಱ್ಕೆಯ್.

ಟೀ ॥ ದ್ವಿಗುಸಮಾಸದಲ್ಲಿ ಪೂರ್ವಪದವಾದ, ದ್ವ್ಯರ್ಥಸ್ಯ—ಎರಡು ಎಂಬ ಶಬ್ದಕ್ಕೆ. ಇರಾದೇಶಃ—ಇರ್ ಎಂಬ ಆದೇಶವುಕ್ಕುಂ. ಉ॥ (ವೃ. ನೋ.)

ಇಲ್ಲಿ ಕೆಲವೆಡೆಯೊಳ್ ಸ್ವಭಾವದೊಳಿರ್ಕುಂ—ಉ॥ (ವೃ. ನೋ.)

ಕೆಲಂಬರ ಮತದಿಂ ಕಿಱಿದೆಡೆಯೊಳ್ ಈರಾದೇಶಮುಕ್ಕುಂ—ಈರಯ್ದು, ಈರೊಳ್ಳಿದರ್.

ಸೂ ॥ ಕಪವರ್ಗಯೋಸ್ತ್ರ್ಯ[4]ಖ್ಯಸ್ಯ ತಾ[5]ವಾಗಮೌ ಬಹುಳಂ ಹ್ರ[6]ಸ್ವಪೂರ್ವೌ ಚ ॥ 155 ॥

ವೃ ॥ ತ್ರಿಸಂಖ್ಯಾವಾಚಿನಃ ಶಬ್ದಸ್ಯ ಕಪವರ್ಗಯೋಃ ಪರಯೋಃ ತಾ[7]ವಾಗಮೌ ಹ್ರ[8]ಸ್ವಪೂರ್ವೌ ಬಹುಳಂ ಭವತಃ ॥

ಉ ॥ ಮುಕ್ಕೊಡೆ, ಮುಪ್ಪುರಿ, ಮುಪ್ಪೊಱಲ್, ಮುವ್ಮಡಿ.

ಬಹುಳಗ್ರಹಣಾತ್ ಕ್ವಚಿನ್ನ ಭವತಿ—ಮೂಗೇಣ್, ಮೂಗಾವುದಂ, ಮೂವಣ್ಣಂ, ಮೂವಳಸು.

ಕ್ವಚಿದನ್ಯದೇವ—ಮುಯ್ಯೇಱಿ ಸೂಱ್, ಮುಯ್ಯಾರಡಿ.

ಟೀ॥ ತ್ರ್ಯಖ್ಯಸ್ಯ—ಮೂಱು ಎಂಬ ಶಬ್ದಕ್ಕೆ, ಕಪವರ್ಗಯೋಃ—ಕಪವರ್ಗಂಗಳ್ ಪರವಾಗುತ್ತಿರೆ. ತೌ—ಆ ಕಪವರ್ಗಂಗಳ್. ಬಹುಳಂ—ವಿಕಲ್ಪದಿಂ. ಹ್ರಸ್ವಪೂರ್ವೌ—ಹಸ್ವಾಕ್ಷರಪೂರ್ವಂಗಳಾಗಿ. ಆಗಮೌ—ಆಗಮಂಗಳಪ್ಪುವು. ಉ॥ (ವೃ. ನೋ.)

ಸೂತ್ರದಲ್ಲಿ ಬಹುಳಶಬ್ದಸ್ವೀಕಾರದಿಂ ಕೆಲವೆಡೆಯೊಳಿಲ್ಲ—ಉ॥ (ವೃ. ನೋ.)

ಸೂ ॥ ತ್ರ್ಯಾದೀನಾಂ ವ್ಯಂಜನೇಷ್ವೇವ ॥ 156 ॥

ವೃ ॥ ತ್ರ್ಯಾದೀನಾಂ ಸಂಖ್ಯಾವಾಚಿನಾಂ ಉಪಾಂತ್ಯವ್ಯಂಜನಾದೇರವಯವಸ್ಯ ಲೋಪೋ ಭವತಿ ವ್ಯಂಜನೇಷು ಪರೇಷು । ನ ಪುನಃ ಸ್ವರಾದೌ ॥

ಉ ॥ ಮೂಲೋಕಂ, ಮೂದೆಱಂ.

---

1 ವಚನಸ್ಯ. 2 ಇದಕ್ಕೆ ಹಿಂದೆ—ಕ್ವಚಿದೀರಾದೇಶಃ—ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 3 ಇಕಾರಸ್ಯೈಕಾರೋ ವಕ್ತವ್ಯಃ. 4 ತ್ರಿಸಂಖ್ಯಸ್ಯ. 5 ತಾವಾಗಮೋ ಬಹುಳಂ ಹ್ರಸ್ವಪೂರ್ವಕೌ. 6 ಹ್ರಸ್ವಪೂರ್ವಸ್ಯ. 7 ತಾವಾಗಮೋ ಹ್ರಸ್ವಪೂರ್ವಂ ಬಹುಳಂ ಭವತಿ. 8 ದ್ವಿತ್ವಹ್ರಸ್ವಪೂರ್ವಂ ಬಹುಳಂ ಭವತಿ.

ವ್ಯಂ[1]ಜನೇಷ್ವಿತಿ ಕಿಂ ? ಮೂಱಡಿ, ಮೂಱಾನೆ, ಮೂಱೊಡ್ಡು.

ಟೀ ॥ ತ್ರ್ಯಾದೀನಾಂ=ಮೂಱೆಂಬ ಶಬ್ದಮನಾದಿಯಾಗುಳ್ಳ ಸಂಖ್ಯಾವಾಚಕಂಗಳ ಉಪಾಂತ್ಯವ್ಯಂಜನಮನಾದಿಯಾಗುಳ್ಳ ಅವಯವಕ್ಕೆ. ವ್ಯಂಜನೇಷ್ವೇವ=ವ್ಯಂಜನಂಗಳ ಪರಮಾದಲ್ಲಿಯೆ ಲೋಪಮಕ್ಕುಂ. ಉ ॥ (ವೃ. ನೋ.)

ವ್ಯಂಜನೇಷ್ವೇವ ಎಂಬುದಱಿಂದೆ ಸ್ವರಾದಿಶಬ್ದಂ ಪರದೊಳಿರೆ ಆ ಅವಯವಕ್ಕೆ ಲೋಪಮಾಗದು. ಉ ॥ (ವೃ. ನೋ.)

ಸೂ ॥ ನ ಷಡರ್ಥವಾ[2]ಚಕಸ್ಯಾಪಿ ತು ಹ್ರಸ್ವಸ್ತದಾದೇಃ ॥ 157 ॥

ವೃ ॥ ಷಡರ್ಥವಾಚಕಸ್ಯ ಶಬ್ದಸ್ಯ ಉಪಾಂತ್ಯವ್ಯಂಜನಾದೇರವಯವಸ್ಯ ಪ್ರಾಗುಕ್ತಲೋಪೋ ನ ಭವತಿ । ಅಪಿತು ತ[3]ದಾದೇಃ ಹ್ರಸ್ವೋ ಭವತಿ ॥

ಉ ॥ ಅಱುವಿಂಗಳ್, ಅಱುವೆರಲ್, ಅಱುಗೇಣ್, ಅಱುವತ್ತು.[4]

ಟೀ ॥ ಷಡರ್ಥವಾಚಕಸ್ಯ=ಆಱು ಎಂಬ ಶಬ್ದದ ಉಪಾಂತ್ಯವ್ಯಂಜನಮನಾದಿಯಾಗುಳ್ಳ ಅವಯವಕ್ಕೆ. ನ=ಪಿಂದೆ ಪೇೞ್ದ ಲೋಪಮಾಗದು. ಅಪಿತು=ಮತ್ತೆ ಏನಪ್ಪುದೆಂದೊಡೆ. ತದಾದೇಃ=ಆಱೆಂಬುದಱ ಆದಿಯ ಆಕಾರಕ್ಕೆ. ಹ್ರಸ್ವಃ=ಹ್ರಸ್ವಮಕ್ಕುಂ. ಉ ॥ (ವೃ. ನೋ.)

ಸೂ ॥ ಸಪ್ತಾರ್ಥಾಭಿಧಾಯಿನಶ್ಚ ॥ 158 ॥

ವೃ ॥ ಸಪ್ತಸಂ[5]ಖ್ಯಾಭಿಧಾಯಿನಃ ಶಬ್ದಸ್ಯ ಉ[6]ಪಾಂತ್ಯವ್ಯಂಜನಸ್ಯ ಲೋಪೋ ನ ಭವತಿ ॥

ಉ ॥ ಏೞ್ಕಡಲ್, ಏೞ್ಪೊರೆ, ಏೞ್ಮೊಱಂ[7].

ಟೀ ॥ ಸಪ್ತಾರ್ಥಾಭಿಧಾಯಿನಶ್ಚ=ಏೞು ಎಂಬ ಶಬ್ದದ ಉಪಾಂತ್ಯವ್ಯಂಜನಕ್ಕೆ ಲೋಪಮಾಗದು. ಉ ॥ (ವೃ. ನೋ.)

ಸೂ ॥ ನ[8]ವಾಖ್ಯಾಯಾಸ್ತೊಮಾದೇಶಃ ಪಙ್ಕ್ತಿಹತೌ ॥ 159 ॥

ವೃ ॥ ನ[9]ವಾಖ್ಯಾಯಾಃ ಸಂಖ್ಯಾಯಾಃ ದ[10]ಶಹತೌ ತೊ[11]ಮಿತ್ಯಯಮಾದೇಶೋ ಭವತಿ ॥

ಉ ॥ ತೊಂಬತ್ತು.

ಟೀ ॥ ನವಾಖ್ಯಾಯಾಃ=ಒಂಬತ್ತು ಎಂಬ ಶಬ್ದಕ್ಕೆ. ಪಙ್ಕ್ತಿಹತೌ=ಪತ್ತು ಎಂಬ ಶಬ್ದಂ ಪರಮಾಗುತ್ತಿರೆ. ತೊಮಾದೇಶಃ=ತೊಂ ಎಂಬ ಆದೇಶಮಕ್ಕುಂ. ಉ ॥ (ವೃ. ನೋ.)

---

1 ವ್ಯಂಜನವಿಶೇಷಣಂ ಕಿಂ. 2 ವಾಚಕಸ್ಯಾದೇರ್ಹ್ರಸ್ವಃ. 3 ಆದೇಃ. 4 ಇದಾದವೇೞೆ, ನ ಪುನಃ ಸ್ವರೇ ಪರೇ—ಆಱಿಡಿ, ಆಱು ನೆ—ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 5 ಸಂಖ್ಯಾರ್ಥಾಭಿಧಾಯಿನಃ. 6 ಉಪಾಂತ್ಯಸ್ವರಲೋಪೋ ಭವತಿ ತದಾದೇರ್ಹ್ರಸ್ವಶ್ಚ, ಪ್ರಾಂತಸ್ವರಸ್ಯ ಲೋಪೋ ಭವತಿ ಆದೇರ್ಹ್ರಸ್ವಶ್ಚ. 7 ಇದಾದವೇೞೆ, ಸ್ವಚರಾದೇರ್ಹ್ರಸ್ವಶ್ಚ—ಎೞ್ಪತ್ತು, ಎಂದು ಒಂದು ಪ್ರತಿಯಲ್ಲಿ ಇದೆ. 8 ನವಾಖ್ಯಾಯಾಸ್ತೊಂಭತ್ತು ಪಙ್ಕ್ತಿಹತೌ, ನವದಶೇ ತೊಂಭತ್ತು. 9 ನವದಶಶಬ್ದಸ್ಯ ತೊಂಭತ್ತ್ವಾದೇಶೋ ಭವತಿ. 10 ಸಂಖ್ಯಾದಶಕಹತೌ. 11 ತೊಂಭತ್ತು ಇತ್ಯಯಮಾದೇಶೋ ಭವತಿ, ತೊಮಿತ್ಯೇವಮಾದೇಶೋ ಭವತಿ.

ಸೂ ॥ ಒಂ[1]ಬಯ್ ಶತೇ ॥ 160 ॥

ವೃ ॥ ನವಾಖ್ಯಾಯಾಃ ಶತವಾಚಿನಿ ಶಬ್ದೇ ಪರೇ ಒಂಬಯ್ ಇತ್ಯಯಮಾದೇಶೋ ಭವತಿ ॥

ಉ ॥ ಒಂಬಯ್ನೂಱು.

ಟೀ ॥ ಒಂಬತ್ತು ಎಂಬ ಶಬ್ದಕ್ಕೆ, ಶತೇ = ನೂಱು ಎಂಬ ಶಬ್ದಂ ಪರವಾಗುತ್ತಿರೆ. ಒಂಬಯ್ = ಒಂಬಯ್ ಎಂಬಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ಸಹಸ್ರೇ ಚ ॥ 161 ॥

ವೃ ॥ ನವಾಖ್ಯಾಯಾಃ ಸಹಸ್ರವಾಚಿನಿ ಶಬ್ದೇ ಪರೇ ಒಂಬಯ್ ಭವತಿ ॥

ಉ ॥ ಒಂಬಯ್ಸಾಸಿರಂ.

ಟೀ ॥ ಒಂಬತ್ತು ಎಂಬ ಶಬ್ದಕ್ಕೆ, ಸಹಸ್ರೇ ಚ = ಸಾಸಿರಂ ಎಂಬ ಶಬ್ದಂ ಪರವಾಗುತ್ತಿರೆಯುಂ ಒಂಬಯ್ ಎಂಬಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ದಶಾಖ್ಯಾಯಾಃ ಪಯಿರ್ ॥ 162 ॥

ವೃ ॥ ದ[2]ಶಾಖ್ಯಾಯಾಃ ಸಹಸ್ರವಾಚಿನಿ ಪರೇ ಪಯಿರ್ ಇತ್ಯಯಮಾದೇಶೋ ಭವತಿ ॥

ಉ ॥ ಪ[3]ಯಿಂಚಾಸಿರಂ.

ಟೀ ॥ ದಶಾಖ್ಯಾಯಾಃ = ಪತ್ತು ಎಂಬ ಶಬ್ದಕ್ಕೆ. ಸಾಸಿರಂ ಎಂಬ ಶಬ್ದಂ ಪರವಾಗುತ್ತಿರೆ, ಪಯಿರ್ = ಪಯಿರ್ ಎಂಬಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ಪನ್ನೇಕದ್ವ್ಯರ್ಥಯೋಃ ॥ 163 ॥

ವೃ ॥ ದಶಾಖ್ಯಾಯಾಃ ಏಕದ್ವ್ಯರ್ಥಯೋಃ ಪರಯೋಃ ಪನ್ ಇತ್ಯಯಮಾದೇಶೋ ಭವತಿ ॥

ಉ ॥ ಪನ್ನೊಂದು, ಪನ್ನೆರಡು.

ಟೀ ॥ ಪತ್ತು ಎಂಬ ಶಬ್ದಕ್ಕೆ, ಏಕದ್ವ್ಯರ್ಥಯೋಃ = ಒಂದು, ಎರಡು, ಎಂಬ ಶಬ್ದಂಗಳ್ ಪರವಾಗುತ್ತಿರೆ. ಪನ್ = ಪನ್ ಎಂಬಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ಅನ್ಯತ್ರ ಪದಿಃ ॥ 164 ॥

ವೃ ॥ ದ[4]ಶಾಖ್ಯಾಯಾಃ ಏಕದ್ವ್ಯರ್ಥಾಭ್ಯಾಮನ್ಯತ್ರ ಸಂಖ್ಯಾಶಬ್ದೇ ಪರೇ ಪದಿರಾದೇಶೋ ಭವತಿ ॥

ಉ ॥ ಪದಿಮೂಱು, ಪದಿನಾಲ್ಕು.

---

1 ಒಂಭೈ. 2 ಇದಕ್ಕೆ ಹಿಂದೆ, ಸಹಸ್ರೇ ಇತ್ಯನುವರ್ತತೇ—ಎಂದು ಒಂದು ಪ್ರತಿಯಲ್ಲಿದೆ. 3 ಪಯಿರ್ಸಾಸಿರಂ, ಪಯಿಂಛಾಸಿರಂ. 4 ಅನುಜ್ಞಸ್ಥಲೇ ದಶಶಬ್ದಸ್ಯ ಪದಿರ್ಭವತಿ.

ಟೀ॥ ಪತ್ತು ಎಂಬ ಶಬ್ದಕ್ಕೆ, ಅನ್ಯತ್ರ—ಉಳಿದ ಸಂಖ್ಯಾವಾಚಕಂಗಳ್ ಪರವಾಗೆ, ಪದಿ—ಪದಿ ಎಂಬಾದೇಶಮಕ್ಕುಂ. ಉ॥ (ವೃ. ನೋ.)

ಸೂ॥ ಸ್ವ[1]ರಾದೌ ನಾಗಮಃ ॥ 165 ॥

ವೃ॥ ದಶಾಖ್ಯಾಯಾಃ ಸ್ವರಾದಿಸಂಖ್ಯಾಯಾಂ ಪರಾಯಾಂ ಪ[2]ದಿರ್ಭವತಿ । ನಕಾರಾಗಮಶ್ಚ ॥

ಉ॥ ಪದಿನಯ್ದು, ಪದಿನಾಱು, ಪದಿನೇೞು, ಪದಿನೆಂಟು.

ಬಹುಳಾಧಿಕಾರಾತ್ ಕ್ವಚಿತ್ ಪ್ರಕೃತ್ಯೈವ[3] ತಿಷ್ಠತಿ— ಪತ್ತೊಂಬತ್ತು.

ಟೀ॥ ಪತ್ತು ಎಂಬ ಶಬ್ದಕ್ಕೆ, ಸ್ವರಾದೌ—ಸ್ವರಮನಾದಿಯಾಗುಳ್ಳ ಸಂಖ್ಯಾವಾಚಕಮಪ್ಪ ಪದಂ ಪರವಾಗೆ ಪದಿ ಎಂಬಾದೇಶಮಕ್ಕುಂ. ನಾಗಮಃ—ಅದಱ ಮುಂದೆ ನಕಾರಾಗಮಮುಮಕ್ಕುಂ. ಉ॥ (ವೃ. ನೋ.)

ಬಹುಳಾಧಿಕಾರದಿಂದೆ ಕೆಲವೆಡೆಯೊಳ್ ಸ್ವಭಾವದಿಂದಿರ್ಕುಂ—ಉ॥ (ವೃ. ನೋ.)

ಇತಿ ಕರ್ಣಾಟಕವ್ಯಾಕರಣವಿವರಣೇ ಸಮಾಸವಿಧಾನಂ ನಾಮ
ಷಷ್ಠಃ ಪರಿಚ್ಛೇದಃ.

---

1 ಸ್ವರಾದೌ [illegible] ಪದೇಃ 2 ಪದೇಂತ್ಯ [illegible] ಭವತಿ. 3 ಇದಾದವೋಲು, ದಶನ [illegible] ತದ್ವಿತ್ವ [illegible] —[illegible] ಶಬ್ದೇ ತಕಾರದ್ವಿತ್ವಂ [illegible] —ಪತ್ತೊಂಬತ್ತು, ಎಂದು ಬಂದು ಪ್ರಕೃತ್ಯಲ್ಲದೆ.

7. ತದ್ಧಿತವಿಧಾನಂ.

ಸೂ ॥ ತದಸ್ಯ ಪಣ್ಯಂ ಶಿಲ್ಪಂ ನಿ[1]ಯೋಗಶ್ಚೇತ್ಯಸ್ಮಿನ್ನಿಗಃ ॥ 166 ॥

ವೃ ॥ ತದಸ್ಯ ಪಣ್ಯಂ ತದಸ್ಯ ಶಿಲ್ಪಂ ಸೋಽಸ್ಯ ನಿ[2]ಯೋಗ ಇತ್ಯೇತಸ್ಮಿನ್ನರ್ಥೇ ತದಿತಿ ಪ್ರಥಮಾಂತಾತ್ ಪ್ರಕೃತಿವಿಶೇಷಾತ್ ಪ[3]ರತಃ ಇಗಪ್ರತ್ಯಯೋ ಭವತಿ ॥

ಉ ॥ ಪಣ್ಯೇ—ತಂಬುಲಿಗಂ, ಗಂದಿಗಂ, ದವಸಿಗಂ. ಶಿಲ್ಪೇ—ಸರವಂದಿಗಂ, ಪಟ್ಟಸಾಲಿಗಂ, ಚಿಪ್ಪಿಗಂ. ನಿಯೋಗೇ—ಭಂಡಾರಿಗಂ, ಬಾಣಸಿಗಂ, ಕೊಟ್ಟಾರಿಗಂ.

ಟೀ ॥ ತತ್=ಅದು. ಅಸ್ಯ=ಈತಂಗೆ. ಪಣ್ಯಂ=ವ್ಯವಹಾರಂ. ಶಿಲ್ಪಂ=ಕೆಲಸಂ. ನಿಯೋಗಶ್ಚ=ಉಲಗಂ. ಇತಿ ಅಸ್ಮಿನ್=ಎಂಬ ಈ ಅರ್ಥದಲ್ಲಿ. ಲಿಂಗದತ್ತಣಿಂ ಪರವಾಗಿ, ಇಗಃ=ಇಗಪ್ರತ್ಯಯುಮಕ್ಕುಂ. ಉ ॥ (ವೃ. ನೋ.)

ಸೂ ॥ ತದ್ವೇತ್ತ್ಯಧೀತೇ ವಾ ॥ 167 ॥

ವೃ ॥ ತದ್ವೇತ್ತಿ ತ[4]ದಧೀತೇ ಇತ್ಯೇತಸ್ಮಿನ್ನರ್ಥೇ ಇ[5]ಗಪ್ರತ್ಯಯೋ ಭವತಿ ॥

ಉ ॥ ಜೋಯಿಸಿಗಂ, ಗಣಿತಿಗಂ, ಸಿದ್ಧಾಂತಿಗಂ.

ಟೀ ॥ ತತ್=ಅದಂ. ವೇತ್ತಿ=ಅಱಿವಂ, ಅಧೀತೇ ವಾ=ಪೇೞ ಓದುವಂ, ಎಂಬ ಅರ್ಥದಲ್ಲಿಯುಂ ಇಗಪ್ರತ್ಯಯುಮಕ್ಕುಂ. ಉ ॥ (ವೃ. ನೋ.)

ಸೂ ॥ ತದಾಚರತಿ ॥ 168 ॥

ವೃ ॥ ತದಿತಿ ದ್ವಿತೀಯಾಂತಾತ್ ಆಚರತಿ ಇತ್ಯೇತಸ್ಮಿನ್ನರ್ಥೇ ಇಗಪ್ರತ್ಯಯೋ ಭವತಿ ॥

ಉ ॥ ಪಡಿಸಣಿಗಂ, ಸುಂಕಿಗಂ.

ಟೀ ॥ ತತ್=ಅದಂ. ಆಚರತಿ=ಆಚರಿಸುವಂ, ಎಂಬ ಅರ್ಥದಲ್ಲಿಯುಂ ಇಗಪ್ರತ್ಯಯುಮಕ್ಕುಂ. ಉ ॥ (ವೃ. ನೋ.)

ಸೂ ॥ ಇ[6]ಚಸ್ತತ್ರ ಜಾತೇ ಭವೇ ವಾ ॥ 169 ॥

ವೃ ॥ ತ[7]ತ್ರೇತಿ ಸಪ್ತಮ್ಯಂತಾತ್ ತ[8]ತ್ರ ಜಾತಃ ತತ್ರ ಭವಃ ಇತ್ಯೇತಸ್ಮಿನ್ನರ್ಥೇ ಇಚಪ್ರತ್ಯಯೋ ಭವತಿ ॥

---

1 ನಿಯೋಗಶ್ಚೇತ್ಯೇತಸ್ಮಿನ್ನಿಗಃ, ನಿಯೋಗಶ್ಚೇತ್ಯಸ್ಮಿನ್ನರ್ಥ ಇಗಃ. 2 ನಿಯೋಗ ಇತ್ಯಸ್ಮಿನ್ನರ್ಥೇ. 3 ಪರಃ. 4 ಅಧೀತೇ. 5 ವಾ ಇಗಪ್ರತ್ಯಯೋ ಭವತಿ—ಎಂಬ ಒಂದು ಪ್ರತಿಯಲ್ಲಿ ಮಾತ್ರ ಇದೆ. 6 ಇಚಸ್ತತ್ರಭವೇ ಜಾತೇ ಭವತಿ, ಇಚಸ್ತತ್ರಜಾತೇ ಭವತಿ. 7 ತತ್ರೇತಿ ಅತ್ರೇತಿ ಯತ್ರೇತಿ ಸಪ್ತಮ್ಯಂತಾದ್ವಿಶೇಷೇ ಇಚಪ್ರತ್ಯಯೋ ಭವತಿ. 8 ಭವಾದ್ಯರ್ಥೇಷು ಇಚಪ್ರತ್ಯಯೋ ಭವತಿ.

ಉ ॥ ಪೊಟಲಿಚಂ, ಅಲರಿಚಂ, ಕರಹಡಿಚಂ, ಕಾಲುರಿಚಂ.

ಅತ್ರ ಯಥಾಲಕ್ಷ್ಯಂ ಹ್ರಸ್ವೋ ವಕ್ತವ್ಯಃ ।

ಟೀ ॥ ತತ್ರ=ಅಲ್ಲಿ. ಜಾತೇ ಭವೇ ವಾ=ಪುಟ್ಟಿದಂ ಮೇಣ್ ವರ್ತಿಸುವಂ ಎಂಬರ್ಥದಲ್ಲಿ. ಇಚಃ=ಇಚಪ್ರತ್ಯಯಮುಕ್ಕುಂ. ಉ ॥ (ವೃ. ನೋ.)

ಇಲ್ಲಿ ಲಕ್ಷ್ಯಾನುಸಾರವಾಗಿ ಹ್ರಸ್ವಮಂ ಪೇಟಬೇಟ್ಕುಂ—ಕಾಲೂರಿಚಂ ಎಂಬುದು ಕಾಲುರಿಚಂ ಎಂದಾಯ್ತು.[1]

ಸೂ ॥ ವಳವಳ್ಳೌ ತತ್ರಾಧಿಕೃತೇ ॥ 170 ॥

ವೃ ॥ ತತ್ರೇತಿ ಸಪ್ತಮ್ಯಂತಾತ್ ಅಧಿಕೃತ[2] ಇತ್ಯೇತಸ್ಮಿನ್ನರ್ಥೇ ವಳ, ವಳ್ಳ, ಇತ್ಯೇತೌ[3] ಭವತಃ ॥

ಉ ॥ ಅಡಪವಳಂ, ಅಡಪವಳ್ಳಂ; ಮಡಿವಳಂ, ಮಡಿವಳ್ಳಂ; ಸೆಜ್ಜೆವಳಂ, ಸೆಜ್ಜೆವಳ್ಳಂ; ಪಡೆವಳಂ, ಪಡೆವಳ್ಳಂ.

ಟೀ ॥ ತತ್ರ=ಅಲ್ಲಿ. ಅಧಿಕೃತೇ=ಇವಂಗಧಿಕಾರಂ ಎಂಬರ್ಥದಲ್ಲಿ. ವಳವಳ್ಳೌ=ವಳ ವಳ್ಳ ಎಂಬೆರಡು ಪ್ರತ್ಯಯಂಗಳಕ್ಕುಂ. ಉ ॥ (ವೃ. ನೋ.)

ಸೂ ॥ ವ್ಯಾಪೃತೇ ಪ್ರವಣೇ ಚ ಕಾಱಃ ॥ 171 ॥

ವೃ ॥ ತತ್ರೇತ್ಯಧಿಕಾರೋ ವರ್ತತೇ । ತತ್ರೇತಿ ಸಪ್ತಮ್ಯಂತಾತ್ ವ್ಯಾಪೃತಃ ಪ್ರವಣಃ ಇತ್ಯೇತಯೋರರ್ಥಯೋಃ ಕಾಱಪ್ರತ್ಯಯೋ ಭವತಿ ॥

ಉ ॥ ಪಗೆಕಾಱಂ, ಬಗೆಕಾಱಂ, ನಡೆವಳಿಕಾಱಂ, ದಂಡುಕಾಱಂ, ಬಿಲ್ಕಾಱಂ, ಮೊನೆಕಾಱಂ.

ಟೀ ॥ ವ್ಯಾಪೃತೇ ಪ್ರವಣೇ ಚ=ಇದಱೊಳವಂ ವ್ಯಾಪೃತಂ, ಇದಱೊಳವಂ ಆಸಕ್ತಂ, ಎಂಬ ಅರ್ಥಂಗಳಲ್ಲಿ. ಕಾಱಃ=ಕಾಱಪ್ರತ್ಯಯಮುಕ್ಕುಂ. ಉ ॥ (ವೃ. ನೋ.)

ಸೂ ॥ ತದಸ್ಯಾಸ್ತೀತಿ ವಂತಃ ॥ 172 ॥

ವೃ ॥ ತದಿತಿ ಪ್ರಥಮಾಂತಾತ್ ತದಸ್ಯಾಸ್ತೀತ್ಯೇತಸ್ಮಿನ್ನರ್ಥೇ ವಂತಪ್ರತ್ಯಯೋ ಭವತಿ ॥

ಉ ॥ ಸಿರಿವಂತಂ, ಗುಣವಂತಂ.

ಟೀ ॥ ತತ್=ಅದು. ಅಸ್ಯ=ಈತಂಗೆ. ಅಸ್ತಿ=ಉಂಟು. ಇತಿ=ಎಂಬ ಅರ್ಥದಲ್ಲಿ. ವಂತಃ=ವಂತಪ್ರತ್ಯಯಮುಕ್ಕುಂ. ಉ ॥ (ವೃ. ನೋ.)

---

1 ಇದಾದಮೇಲೆ, ಕ್ವಚಿದಿಗಂಶಕ್ಕಂ—ಪೊಟಲಿಗಂ, ಕರಹಡಿಗಂ, ಕಾಲೂರಿಗಂ, ಎಂದು ಕನ್ನಡ ಟೀಕೆಗಳಲ್ಲಿ ಮಾತ್ರ ಇದೆ.

2 ಅಧಿಕಾರಾರ್ಥೇ. 3 ವಳವಳ್ಳಾವಿತ್ಯೇತೌ, ವಳವಳ್ಳೌ.

ಸೂ ॥ ಉಪಮಾನೇ ಪೋಲ್ ॥ 173 ॥

ವೃ ॥ ಉ[1]ಪಮಾನಾರ್ಥೇ ವಿವಕ್ಷಿತೇ ಶ[2]ಬ್ದಾತ್ಪರತಃ ಪೋಲ್‌ಪ್ರತ್ಯಯೋ ಭವತಿ ॥

ಉ ॥ ಕರಿಪೋಲ್ ಭದ್ರಗುಣಂ, ಗಿರಿಪೋಲ್ ಸುಸ್ಥಿರಂ, ಹರಿಪೋಲ್ ಧೀರಂ, ಮನುಪೋಲ್ ನ[3]ಯಜ್ಞಂ.

ಟೀ ॥ ಉಪಮಾನೇ=ಉಪಮಾನಾರ್ಥದಲ್ಲಿ. ಪೋಲ್=ಪೋಲ್ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ಹ್ರಸ್ವೋಽಪಿ ವಾ ॥ 174 ॥

ವೃ ॥ ಅಪಿಚಾಸ್ಯ ಪೋಲ್‌ಪ್ರತ್ಯಯಸ್ಯ ಹ್ರಸ್ವೋ ವಾ ಭವತಿ ॥

ಉ ॥ ಹರಿಪೊಲಿಂದ್ರಜನಾಂತಿರೆ ಭೀತಿಯಿಂ.

ಟೀ ॥ ಆ ಪೋಲ್‌ಪ್ರತ್ಯಯಕ್ಕೆ, ವಾ=ವಿಕಲ್ಪದಿಂ. ಹ್ರಸ್ವೋಪಿ=ಹ್ರಸ್ವಮುಮಕ್ಕುಂ. ಉ ॥ (ವೃ. ನೋ.)

ಸೂ ॥ ಅ[4]ಕಾರಾಂತಾನ್ಮಾಗಮೋ ಬಶ್ರುತಿಶ್ಚ ॥ 175 ॥

ವೃ ॥ ಅಕಾರಾಂತಾತ್ ಶಬ್ದಾತ್ ಉಪಮಾನಾರ್ಥೇ ಪೋಲ್‌ಪ್ರತ್ಯಯೇ ಪರೇ ಮಕಾರಾಗಮೋ ಭವತಿ । ಪಕಾರಸ್ಯ ಬಶ್ರುತಿಶ್ಚ ॥

ಉ ॥ ನಿಗಳಂಬೋಲ್ ತೊಡರ್ದಪನು, ಚಂದ್ರಂಬೋಲ್ ತೊಳಗಿತ್ತು.

ತ[5]ಥಾ ಪ್ರಯೋಗೋ ಗು[6]ಣವರ್ಣಃ—

ಶ್ರೀ ರಾಜಾವರ್ತದಿಂ ಕಂಡರಿಸಿದ ಸ[7]ತಿಪ್ರೋಲ್ ಕೌಸ್ತುಭಂ ಮೇ[8]ಘಮಾಲಾ ।
ಕಾರಂಬೋಲ್ ಶಂಖಮ[9]ಮ್ಮಂಗೆ ಅಡಲಿಸು ಮುಗುಳ್ವೋಲ್ ನಾಭಿಕೂಪೋಪಜಾತಂ ॥
ನೀರೇಜಂ ನೀಳ್ದ ಕನ್ನೆಯ್ದಿಲವೊಲಿರೆ ತನುಚ್ಛಾಯೆಯಿಂ ಮಿಕ್ಕ ಶೋಕಾ ।
ಧಾರಂ ರಕ್ಷಿಪ್ಪನಕ್ಕೀಭುವನಭವನಮಂ ಗಾಂಗಚಕ್ರಾಯುಧಾಂಕಂ ॥

ಟೀ ॥ ಅಕಾರಾಂತಾತ್=ಅಕಾರಾಂತಮಪ್ಪ ಶಬ್ದದತ್ತಣಿಂ. ಪೋಲ್ ಪ್ರತ್ಯಯಂ ಪರಮಾಗುತ್ತಿರೆ, ಮಾಗಮಃ=ಆ ಶಬ್ದದ ಮುಂದೆ ಮಕಾರಾಗಮಮುಮಕ್ಕುಂ. ಬಶ್ರುತಿಶ್ಚ=ಪೋಲ್ ಎಂಬುದರ ಪಕಾರಕ್ಕೆ ಬಕಾರಮುಮಕ್ಕುಂ. ಉ ॥ (ವೃ. ನೋ.)

ಸೂ ॥ ಸಂಖ್ಯಾಯಾಃ ಪೂರಣೇಽನೆಯಃ ॥ 176 ॥

ವೃ ॥ ಸಂಖ್ಯಾಯಾಃ ಪೂ[10]ರಣೇಽರ್ಥೇ ಅನೆಯಪ್ರತ್ಯಯೋ ಭವತಿ ॥

ಉ ॥ ಅಯ್ದನೆಯ ಚಕ್ರವರ್ತಿ, ಜ[11]ನಮದನರೊಳಗೆ ಪದಿನಾಱನೆಯಂ.

---

1 ಉಪಮಾನೇಽರ್ಥೇ. 2 ಶಬ್ದಾತ್ ಪರತಃ. 3 ಮತಿವಂತಂ. 4 ಅಕಾರಾಂತಾನ್ಮಾಗಮೋ 5 ಈ ವಾಕ್ಯವೂ ಮುಂದಣ ಪದ್ಯವೂ ಒಂದು ಪ್ರತಿಯುಳ್ಳಿಲ್ಲ. 6 ಗುಣವರ್ಣಸ್ಯ. 7 ಸಿರಿವೋಲ್. 8 ಲಕ್ಷ್ಮೀ. 9 ಮಮಾಂಗದೊಳೆಯು. 10 ಪೂರಣೇ ವಿವಕ್ಷಿತೇ. 11 ಕಾವ್ಯಾವಲೋಕನ, 869.

ಟೀ ॥ ಸಂಖ್ಯಾಯಾಃ = ಸಂಖ್ಯೆಯ. ಪೂರಣೇ = ಪೂರಣಾರ್ಥದಲ್ಲಿ. ಆನೆಯುಃ = ಆನೆಯುಪ್ರತ್ಯಯುಮಕ್ಕುಂ.

ಉ ॥ ಪದಿನಾಱನೆಯಂ ತೀರ್ಥಂಕರಂ ಶಾಂತಿನಾಥಂ.

ಜಿ[1]ನಮುದನರೊಳಗೆ ಪದಿನಾ ।
ಱನೆಯುಂ ತತ್ಸಕಳಚಕ್ರವರ್ತಿಗಳೊಳಗ ॥
ಯ್ದನೆಯುನೆನೆ ಪುಣ್ಯಪುಂಜಾ ।
ರ್ಜನಕ್ಕೆ ಶಾಂತೀಶನಂತು ನೋಂತವರೊಳರೇ ॥

ಸೂ ॥ ವಾ[2]ರಾರ್ಥೇ ಮೆ ವಾ ॥ 177 ॥

ವೃ ॥ ಸಂಖ್ಯಾವಾಚಿನಾಂ ವಾ[3]ರಾರ್ಥೇ ಮೆಪ್ರತ್ಯಯೋ ವಾ ಭವತಿ ॥

ಉ ॥ ಒರ್ಮೆ, ಇರ್ಮೆ, ಮೂಮೆ, ನಾಲ್ಮೆ, ನೂರ್ಮೆ, ಸಾಸಿರ್ಮೆ.

ಪಕ್ಷೇ — ಒಂದುಸೂಳ್, ಎರಡುಸೂಳ್, ಮೂಱುಸೂಳ್, ಇತ್ಯಾದಿ.

ಟೀ ॥ ಸಂಖ್ಯಾವಾಚಕಂಗಳ್ಗೆ, ವಾರಾರ್ಥೇ = ಸೂಳ್ ಎಂಬ ಅರ್ಥದಲ್ಲಿ. ವಾ = ವಿಕಲ್ಪದಿಂ. ಮೆ = ಮೆಪ್ರತ್ಯಯುಮಕ್ಕುಂ. ಉ ॥ (ವೃ. ನೋ.)

ವಿಕಲ್ಪದಲ್ಲಿ — ಒಂದುಸೂಳ್ ಇತ್ಯಾದಿ. (ವೃ. ನೋ.)

ಸೂ ॥ ಭಾ[4]ವೇ ಕೆವು ॥ 178 ॥

ವೃ ॥ ಭಾವಾರ್ಥೇ ಕೆ, ವು, ಇತ್ಯೇತೌ ಪ್ರತ್ಯಯೌ ಭವತಃ ॥

ಉ ॥ ಕಾಣ್ಕೆ, ತೆರಳ್ಕೆ, ಪೂಣ್ಕೆ ; ತಿಣ್ಪು, ಗುಣ್ಪು, ಸೊಂಪು.

ಟೀ ॥ ಭಾವೇ = ಭಾವಾರ್ಥದಲ್ಲಿ. ಕೆವು = ಕೆ ವು ಎಂಬೆರಡುಪ್ರತ್ಯಯಂಗಳಕ್ಕುಂ. ಉ ॥ (ವೃ. ನೋ.)

ಸೂ ॥ ಚೇ[5]ತನೇಷ್ವಿಕೆಉಮೆತನಾನಿ ॥ 179 ॥

ವೃ ॥ ಚೇತನವಿಷಯೇ ಭಾವೇ ವಿವಕ್ಷಿತೇ ಪು[6]ನಃ ಇಕೆ, ಉ, ಮೆ, ತನ, ಇತ್ಯೇತೇ ಪ್ರತ್ಯಯಾ ಭವಂತಿ.

ಉ ॥ ಮಾನಸಿಕೆ, ಆಯುಃಕೆ; ಉಕ್ಕು, ಸೊಕ್ಕು ; ಕೂರ್ಮೆ, ಪೆರ್ಮೆ ; ಕಲಿತನಂ, ಆಳ್ತನಂ.

---

1 ಕಾವ್ಯಾವಲೋಕನ, 396. 2 ವಾರಾರ್ಥೇ ಮೇ. 3 ಒಂದುಸೂಳ್, ಎರಡುಸೂಳ್, ಇತಿ ವಾರಾರ್ಥೇ ಮೆ ಪ್ರತ್ಯಯೋ ಭವತಿ. 4 ಭಾವಾರ್ಥೇ ಕೆವು. 5 ಚೇತನೇಷ್ವಿಕೆಉಮೆತನಾನಿ. 6 ಕೆಲವು ಪ್ರತಿಗಳಲ್ಲಿ ಪುನಃ ಎಂಬುದಿಲ್ಲ.

ಟೀ ॥ ಚೇತನೇಷು—ಚೇತನವಿಷಯದಲ್ಲಿ. ಭಾವಂ ವಿವಕ್ಷಿತವಾಗುತ್ತಿರೆ, ಇಕೆ ಉ ವೆ ತನಾನಿ—ಇಕೆ, ಉ, ವೆ, ತನ, ಎಂಬ ಪ್ರತ್ಯಯಂಗಳಕ್ಕುಂ. ಉ ॥ (ವೃ. ನೋ.)

ಸೂ ॥ ಕ್ರಿ[1]ಯಾರ್ಥಾದತ್ ॥ 180 ॥

ವೃ ॥ ಕ್ರಿಯಾವಾಚಿನಃ ಶಬ್ದಾತ್ ಭಾವೇ ಅ[2]ತ್ಪ್ರತ್ಯಯೋ ಭವತಿ ॥

ಉ ॥ ನೋಟಂ, ಓಟಂ, ಊಟಂ, ಕೇಟಂ, ಸೋಲಂ, ಸಾಲಂ.

ಟೀ ॥ ಕ್ರಿಯಾರ್ಥಾತ್—ಕ್ರಿಯಾವಾಚಕಮಪ್ಪ ಶಬ್ದದತ್ತಣಿಂ ಪರಮಾಗಿ. ಭಾವಾರ್ಥದಲ್ಲಿ, ಅತ್—ಅತ್ ಎಂಬ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಅತಿ ಟಃ (120) ಎಂಬ ಸೂತ್ರದಿಂ ಡಕಾರಕ್ಕೆ ಅತ್ಪ್ರತ್ಯಯಂ ಪರಮಾಗೆ ಟಕಾರಮಾಯ್ತು.

ಸೂ ॥ ಅದು ಇದು ಏ[3]ನ್ಭ್ಯಃ ಪ್ರಮಾಣೇ ನಿತುಃ ॥ 181 ॥

ವೃ ॥ ಅದು, ಇದು, ಏನ್, ಇತ್ಯೇತೇಭ್ಯಃ ಪ್ರ[4]ಮಾಣಾರ್ಥೇ ನಿ[5]ತುಃಪ್ರತ್ಯಯೋ ಭವತಿ ॥

ಉ ॥ ಅನಿತು, ಇನಿತು, ಎನಿತು.

ಅತ್ರ ತಕಾರಸ್ಯ ದಿತ್ವಂ ಕೇಚಿದಿಚ್ಛಂತಿ—ಅನಿತ್ತು, ಇನಿತ್ತು, ಎನಿತ್ತು.

ತಥಾ ಚ ಪ್ರಯೋಗಃ—

ಎ[6]ನಿತ್ತನಿತ್ತಂಬುಜಪತ್ರನೇತ್ರೆಯಾ ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ ॥
ಅನಿತ್ತನಿತ್ತಂ ವನದೊಳ್ ವನೇಚರಂ ।
ತನತ್ತು ಬಿಲ್ಲಾನದನಂತೆ ಕೆ[7]ತ್ತುಗುಂ ॥

ಟೀ ॥ ಅದು ಇದು ಏನ್ಭ್ಯಃ—ಅದು, ಇದು, ಏನ್, ಎಂಬ ಶಬ್ದಂಗಳತ್ತಣಿಂ ಪರಮಾಗಿ. ಪ್ರಮಾಣೇ—ಪ್ರಮಾಣಾರ್ಥದಲ್ಲಿ. ನಿತುಃ—ನಿತು ಎಂಬ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಇಲ್ಲಿ ಕೆಲಂಬರ್ ಕರ್ಣಾಟಭಾಷಾಚಾರ್ಯರ್ ತಕಾರಕ್ಕೆ ದ್ವಿತ್ವಮನೊಡಂಬಡುವರ್. ಉ ॥ (ವೃ. ನೋ.)

ಸೂ ॥ ಪ್ರಕಾರಕಾಲಾರ್ಥೇ ಂತು[8]ಂದೂ ॥ 182 ॥

ವೃ ॥ ಅದು, ಇದು, ಏನ್, ಇ[9]ತ್ಯೇತೇಭ್ಯಃ ಪ್ರಕಾರಾರ್ಥೇ ಕಾಲಾರ್ಥೇ ಚ ಯಥಾಸಂಖ್ಯಂ ಂತು, ಂದು, ಇತ್ಯೇತೌ ಪ್ರತ್ಯಯೌ ಭವತಃ ॥

---

1 ಕ್ರಿಯಾರ್ಥಾದ್ವಾವೇತ್, ಕ್ರಿಯಾರ್ಥಾದತಿ. 2 ಅಕಾರೋ ಭವತಿ. 3 ಏನುಭ್ಯಃ. 4 ಪ್ರಮಾಣೇರ್ಥೇ. 5 ಅಂತೇ ವಿಸರ್ಗನತಿ. 6 ಕಾವ್ಯಾವಲೋಕನ, 359. 7 ಕೆತ್ತುವಂ, ಕೆಸುವಂ. 8 ತುದೂ. 9 ಏತೇಷಾಮಂತೇ.

ಉ ॥ ಪ್ರಕಾರಾರ್ಥೇ—ಅಂತು, ಇಂತು, ಎಂತು. ಕಾಲಾರ್ಥೇ—ಅಂದು, ಇಂದು, ಎಂದು.

ಟೀ ॥ ಅದು, ಇದು, ಏ಼ (ಏನ್), ಎಂಬ ಶಬ್ದಂಗಳತ್ತಣಿಂ ಪರವಾಗಿ, ಪ್ರಕಾರಕಾಲಾರ್ಥೇ = ಪ್ರಕಾರಾರ್ಥದಲ್ಲಿ ಮತ್ತಂ ಕಾಲಾರ್ಥದಲ್ಲಿ. ಂತುಂದೂ = ಯಥಾಕ್ರಮದಿಂ ಂತು ಂದು ಎಂಬ ಪ್ರತ್ಯಯಂಗಳಕ್ಕುಂ. ಉ ॥ (ವೃ. ನೋ.)

ಸೂ ॥ ಆಳಿಸ್ತಾಚ್ಛೀಲ್ಯೇ ॥ 183 ॥

ವೃ ॥ ತಾ[1]ಚ್ಛೀಲ್ಯೇ ವಿವಕ್ಷಿತೇ ಆಳಿಪ್ರತ್ಯಯೋ ಭವತಿ ॥

ಉ ॥ ಓದಾಳಿ, ಜೂದಾಳಿ, ಮಾತಾಳಿ, ಸಿಗ್ಗಾಳಿ, ಪಿಜಾಳಿ, ಪಡಸಾಳಿ.

ಟೀ ॥ ತಾಚ್ಛೀಲ್ಯೇ = ಅದು ಇವಂಗೆ ಶೀಲಂ ಎಂಬ ಅರ್ಥದಲ್ಲಿ. ಆಳಿಃ = ಆಳಿಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ಕು[2]ಳಿಶ್ಚ ॥ 184 ॥

ವೃ ॥ ತಾ[3]ಚ್ಛೀಲ್ಯೇ ವಿವಕ್ಷಿತೇ ಕುಳಿಪ್ರತ್ಯಯೋಽಪಿ ಭವತಿ ॥

ಉ ॥ ಆಟಕುಳಿ, ಅಂಜುಕುಳಿ, ಓಡುಕುಳಿ.

ಟೀ ॥ ಅದು ಇವಂಗೆ ಶೀಲಂ ಎಂಬರ್ಥದಲ್ಲಿ, ಕುಳಿಶ್ಚ = ಕುಳಿಪ್ರತ್ಯಯಮುಮ ಕ್ಕುಂ. ಉ ॥ (ವೃ. ನೋ.)

ಸೂ ॥ ತ[4]ತ್ಕರೋತೀತ್ಯಸ್ಮಾದ್ಗಾಱಃ ॥ 185 ॥

ವೃ ॥ ತ[5]ತ್ಕರೋತೀತ್ಯೇತಸ್ಮಿನ್ನರ್ಥೇ ತದಿತಿ ದ್ವಿತೀಯಾಂತಾತ್ ಗಾಱಪ್ರತ್ಯಯೋ ಭವತಿ ॥

ಉ ॥ ಮಣಿಗಾಱಂ, ಕಂಚಗಾಱಂ, ಬಳೆಗಾಱಂ, ಮಾಲೆಗಾಱಂ.

ಟೀ ॥ ತತ್ = ಅದಂ. ಕರೋತಿ = ಮಾಡುವಂ. ಇತಿ = ಎಂಬರ್ಥದಲ್ಲಿ. ಅಸ್ಮಾತ್ = ಆ ಶಬ್ದದತ್ತಣಿಂ ಪರಮಾಗಿ. ಗಾಱಃ = ಗಾಱಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ಉ[6]ದಂತಾನ್ಮಾಗಮೋ ಬಹುಳಂ ॥ 186 ॥

ವೃ ॥ ಉಕಾರಾಂತಾತ್ ಶಬ್ದಾತ್ ಗಾಱಪ್ರತ್ಯಯೇ ಕೃತೇ ಬಹುಳಂ ಮ[7]ಕಾರಾಗಮೋ ಭವತಿ ॥

ಉ ॥ ಪಾಡುಂಗಾಱಂ, ಜಾದುಂಗಾಱಂ.

ಬ[8]ಹುಳಗ್ರಹಣಾತ್ — ನೋಂಪುಗಾಱಂ, ಕಂಪುಗಾಱಂ.

---

1 ಶೀಲಾರ್ಥೇ. 2 ಒಂದು ಪ್ರತಿಯಲ್ಲಿ ಈ ಸೂತ್ರವೇ ಇಲ್ಲ. 3 ಶೀಲಾರ್ಥೇ. 4 ತತ್ಕರೋತಿ ತಸ್ಮಾದ್ಗಾಱಿಃ, ತತ್ಕರೋತ್ಯರ್ಥೇ ಗಾಱಿಃ. 5 ತದಿತಿ ದ್ವಿತೀಯಾಂತಾತ್ಕರೋತ್ಯರ್ಥೇ ಗಾಱಿಪ್ರತ್ಯಯೋ ಭವತಿ, 6 ಉದಂತಾನ್ಮಾಗಮೋ ಬಹುಳಂ. 7 ನಕಾರಾಗಮೋ. 8 ಬಹುಳತ್ವೇ.

ಟೀ ॥ ಉದಂತಾತ್—ಉಕಾರಾಂತಮಪ್ಪ ಶಬ್ದದತ್ತಣಿಂ ಪರಮಾಗಿ, ಗಾಱಪ್ರತ್ಯಯಂ ಬರೆ, ಬಹುಳಂ—ವಿಕಲ್ಪದಿಂ, ಮಾಗಮಃ—ಮಕಾರಾಗಮಮಕ್ಕುಂ. ಉ॥ (ವೃ. ನೋ.)

ಸೂ ॥ ಅ[1]ಪಭ್ರಂಶೇಽಪ್ಯೇವಂ ಕಾರಸ್ಯ ॥ 187 ॥

ವೃ ॥ ಸಂ[2]ಸ್ಕೃತಾದಪಭ್ರಂಶವಿಷಯೇ ಕಾರಶಬ್ದಸ್ಯ ಗಾಱಾದೇಶೋ ಭವತಿ । ಯಥಾಲಕ್ಷ್ಯಂ ಮ[3]ಕಾರಾಗಮಶ್ಚ ॥

ಉ ॥ ಮಾಲೆಗಾಱಂ, ಸಮ್ಮಗಾಱಂ.

ಬಹುಳಗ್ರಹಣಾತ್ ಕ[4]ವರ್ಗಾದಾ ಆ[5]ದಿಲೋಪೋ ದೃಶ್ಯತೇ—

ಕಮ್ಮಾಱಂ, ಕಮ್ಮಱಂ ; ಕುಂಬಾಱಂ, ಕುಂಬಱಂ.

ತ[6]ಥಾಚ ಭಾರತೇ ಹಂಪಸ್ಯ ಪ್ರಯೋಗಃ—

ಮ[7]ದಗಜಮೆರಡಱ ಬಾಲದ ।
ಮೊದಲಂ ಪಿಡಿದೆತ್ತಿಯೆತ್ತಿ ನುರ್ಗುತ್ತಿರೆಯಾ ॥
ಸ್ವದಿನುಗುವ ರಕ್ತಮುರಿಯೆನೆ ।
ತಿದಿಯೊತ್ತುವ ಕಮ್ಮಱಂಬೊಲಿರ್ದಂ ಭೀಮಂ ॥

ಟೀ ॥ ಅಪಭ್ರಂಶೇಽಪಿ—ಅಪಭ್ರಂಶವಿಷಯದಲ್ಲಿಯುಂ, ಕಾರಸ್ಯ—ಕಾರಶಬ್ದಕ್ಕೆ. ಏವಂ—ಗಾಱಾದೇಶಮಕ್ಕುಂ ಮತ್ತಂ ಲಕ್ಷ್ಯಾನುಸಾರಮಾಗಿ ಮಕಾರಾಗಮಮುಮಕ್ಕುಂ. ಉ॥ (ವೃ. ನೋ.)

ಬಹುಳಶಬ್ದಸ್ವೀಕಾರದಿಂ—ಕಮ್ಮಱಂ. ಕುಂಬಱಂ.

ಕಾ[8]ವ್ಯಾವಲೋಕನದ ಸೂತ್ರಂ—

ನಿರತಂ ಗಾಱಪ್ರತ್ಯಯ ।
ಮುರುಮುದದಿಂ ಕುಂಭಕಮಾರಶಬ್ದಕ್ಕೆಂದುಂ ॥
ಪರಮಾಗಿರ ಗ[9]ತ್ವಕ್ಕಂ ।
ತರಲೋಪಂ ಬಹುಳವಿಧಿಯಿಂದಾ ದೊರೆಕೊಳ್ಗುಂ ॥

ಇದರ್ಕೆ ಪಿರಿಯ ಹಂಪದೇವಂಗಳ ಪ್ರಯೋಗಂ—

ಕರಿಯುಗದ ಪೃಚ್ಛಯುಗಮಂ ।
ಕರಯುಗದಿಂದೊತ್ತಿ ಪಿಡಿದು ತನ್ಮಱಿಯುಗದಿಂ ॥

1 ಅಪಭ್ರಂಶೇ ಕಾರಸ್ಯ. 2 ಸಂಸ್ಕೃತಾದಪಭ್ರಂಶೇ. 3 ಮಾಗಶ್ಚ. 4 ಕ್ವಚಿದನ್ಯಥಾ, ಕ್ವಚಿದಾದಿಸ್ವರಸ್ಯ ವಾ ಆದಿಲೋಪೋ ದೃಶ್ಯತೇ. 5 ಆದಿಸ್ವರೋಪಧಲೋಪೋ. 6 ಈ ವಾಕ್ಯವೂ ಮುಂದಣ ಪದ್ಯವೂ ಒಂದು ಪ್ರತಿಯಲ್ಲಿಲ್ಲ. 7 ಕ. ಭಾ. ಶ. ಪುಟ 91. 8 ಈ ಸೂತ್ರವು ಕಾವ್ಯಾವಲೋಕನದಲ್ಲಿಲ್ಲ. 9 ಗಾಱಕ್ಕಂ.

ದರುಣಜಲಮುಷ್ಣ್ಮ ತಿದಿಗಳ ।
ನಿರದೊತ್ತುವ ಕಮ್ಮಾಱಂಬೊಲಿರ್ದಂ ಭೀಮಂ ॥

ಸೂ ॥ ಸ್ತ್ರಿ[1]ಯಾಮಿತಿ ಚ ॥ 188 ॥

ವೃ ॥ ಬಹುಳಗ್ರಹಣಮನುವರ್ತತೇ । ಸ್ತ್ರಿ[2]ಯಾಂ ವಿವಕ್ಷಿತಾಯಾಂ ಪೂ[3]ರ್ವೋಕ್ತಪ್ರತ್ಯಯಾತ್ ಇತಿ ಚ ಭವತಿ ॥

ಉ ॥ ಬಾಣಸಿಗಿತಿ, ಮಡಿವಳಿತಿ, ಘಟ್ಟಿವಳಿತಿ.[4]

ಟೀ ॥ ಸ್ತ್ರಿಯಾಂ = ಸ್ತ್ರೀಲಿಂಗವಿಷಯದರ್ಥಮಂ ನುಡಿಯಲ್ವೇಡಿದೊಡೆ. ಮೊದಲೊಳಿರ್ದಪದದ ಕಡೆಯಲ್ಲಿ, ಇತಿ ಚ = ಇತಿ ಪ್ರತ್ಯಯಮುಮಕ್ಕುಂ.

ಉ ॥ (ವೃ. ನೋ.)

ಸೂ ॥ ಇ[5]ಲೋಪಃ ಪರಿಣಾಮಿನಃ ॥ 189 ॥

ವೃ ॥ ಆ[6]ದೇಶಿನಃ ಶಬ್ದಾದುತ್ತರಸ್ಯ ಇತಿಪ್ರತ್ಯಯಸ್ಯ ಇಕಾರಲೋಪೋ ಭವತಿ ॥

ಉ ॥ ಮಾಲೆಗಾರ್ತಿ, ಬಳೆಗಾರ್ತಿ, ಗೆಲ್ಲಗಾರ್ತಿ, ಆಟಗಾರ್ತಿ.

ಟೀ ॥ ಪರಿಣಾಮಿನಃ = ಆದೇಶಮಂ ಪಡೆದ ಶಬ್ದದತ್ತಣಿಂ. ಪರಮಾದ ಇತಿಪ್ರತ್ಯಯದ, ಇ ಲೋಪಃ = ಇಕಾರಕ್ಕೆ ಲೋಪಮಕ್ಕುಂ, ಉ ॥ (ವೃ. ನೋ.)

ಸೂ ॥ ಅಳೀ ಚ ಗುಣವಚನೇಭ್ಯಃ ॥ 190 ॥

ವೃ ॥ ಗುಣವಚನೇಭ್ಯಃ ಶಬ್ದೇಭ್ಯಃ ಸ್ತ್ರೀವಿವಕ್ಷಾಯಾಂ ಅಳ್, ಇ, ಚ ಪ್ರತ್ಯಯೌ ಭವತಃ ॥

ಉ ॥ ಬಳ್ಳಿದಳ್, ನಲ್ಲಳ್, ಪೊಲ್ಲಳ್, ಇನಿಯಳ್ ; ಚದುರೆ, ಮಣ್ಣೆ, ಸಿತಗೆ, ಜಾಣೆ.

ಟೀ ॥ ಗುಣವಚನೇಭ್ಯಃ = ಗುಣವಚನಮಪ್ಪ ಶಬ್ದಂಗಳತ್ತಣಿಂ ಪರಮಾಗಿ. ಸ್ತ್ರೀಲಿಂಗವಿಷಯದೊಳ್, ಅಳೀ ಚ = ಅಳ್, ಇ, ಎಂಬ ಪ್ರತ್ಯಯಂಗಳುಮಕ್ಕುಂ.

ಉ ॥ (ವೃ. ನೋ.)

ಸೂ ॥ ಇ[7]ದುದಂತಂ ಪುಂಸಿ ವಾ ॥ 191 ॥

ವೃ ॥ ಇಕಾರಾಂತಮುಕಾರಾಂತಂ ಯಚ್ಛಬ್ದರೂಪಂ ತತ್ ಪುಲ್ಲಿಂಗೇನ ಸಮಾನಂ ವಾ ಭವತಿ ॥

ಉ ॥ ನಾಣಿಲಿ, ಮೂತಾಳಿ, ಸೊಂದಿ ; ಗಾಳು, ಪಾಱು.[9]

1 ಸ್ತ್ರಿಯಾಮಪಿ ತಿಃ. 2 ಸ್ತ್ರೀವಿವಕ್ಷಾಯಾಂ. 3 ತದಂತಾದಿತಿ ಭವತಿ, ಇತಿರ್ಭವತಿ. 4 ಇದಾದವೋಲೆ, ಬಾ. ಸಿ. ಗಿ — ಬಾಣಸಿಗಿತ್ತಿ ಇತ್ಯಾದಿ, ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 5 ಈ ಸೂತ್ರವು ಒಂದು ಪ್ರತಿಯಲ್ಲಿಲ್ಲ. 6 ಪೂರ್ವೋಕ್ತಾನಾಂ ಶಬ್ದಾನಾಂ ಇತಿಪ್ರತ್ಯಯಸ್ಯ ಇಕಾರಲೋಪೋ ಭವತಿ. 7 ಇದುದಂತಂ ಪುಂಸಿ ಚ, ಇದುದಂತಃ ಪುಂವತ್, ಇದುದಂತಃ ಪುಂಸಿ ವಾ. 8 ಪುಲ್ಲಿಂಗವದ್ಭವತಿ. 9 ಇದಾದವೋಲೆ, ಕ್ವಚಿದಿಕಾರಾಂತಃ — ಕುರುಡಿ, ಕಿವುಡಿ, ಗುಜ್ಜ, ಕೆಂಚಿ — ಎಂದು ಒಂದು ಪ್ರತಿಯಲ್ಲಿದೆ.

ಕ್ವಚಿದ್ವ್ಯಂಜನಾಂತಂ — ಮರುಳ್.

ಟೀ ॥ ಇದುದಂತಂ = ಇಕಾರಾಂತಮುಂ ಉಕಾರಾಂತಮುಮಂ ಆದ ಶಬ್ದಂಗಳ್. ವಾ ... ವಿಕಲ್ಪದಿಂ. ಪುಂಸಿ = ಪುಲ್ಲಿಂಗದೊಳ್ ಸಮರೂಪಮಕ್ಕುಂ. ಉ ॥ (ವೃ. ನೋ.)

ಕೆಲವೆಡೆಯೊಳ್ ವ್ಯಂಜನಾಂತಮಕ್ಕುಂ — ಉ ॥ (ವೃ. ನೋ.)

ಸೂ ॥ ವೀಪ್ಸಾನುಕರಣಾಭೀಕ್ಷ್ಣ್ಯಕ್ರಿಯಾಸಮಭಿಹಾರಸಾಮೀಪ್ಯ[1]
ಚಾಪಲಾದೌ ಪದಸ್ಯ ದ್ವಿರ್ವಚನಂ ॥ 192 ॥

ವೃ ॥ ವೀಪ್ಸಾದ್ಯರ್ಥೇಷು ವಿವಕ್ಷಿತೇಷು ಪದಸ್ಯ ದ್ವಿರ್ವಚನಂ ಭವತಿ ॥

ಉ ॥ ವೀಪ್ಸಾಯಾಂ—	ಊರೂರ್, ಮನೆಮನೆ, ಕೇರಿಕೇರಿ, ನಾಡುನಾಡು.
ಅನುಕರಣೇ—	ಭೋಭೋರೆನೆ, ಘಲ್ಘಲ್ಲೆನೆ, ಗಳಗಳನೆ.
ಅಭೀಕ್ಷ್ಣ್ಯೇ—	ನೋಡಿನೋಡಿ, ಓದಿಯೋದಿ, ಪಾಡಿಪಾಡಿ, ಆಡಿಯಾಡಿ.
ಕ್ರಿಯಾಸಮಭಿಹಾರೇ—	ನ[2]ಡೆನಡೆಯೆಂದು ನಡೆದರ್, ಕೊ[3]ಯ್ಕೊಯ್ಯೆಂದು ಕೊಯ್ದರ್.
ಸಾಮೀಪ್ಯೇ—	ಕೆಳಕೆಳಗೆ, ಕೆಲಕೆಲದೊಳ್, ಇದಿರಿದಿರೆ.
ಚಾಪಲೇ—	ಒಪ್ಪಿಸೊಪ್ಪಿಸು, ಮಾಣ್ಮಾಣ್, ಇದಿರ್ಚಿದಿರ್ಚು, ಅಣ್ಣಾಣ್ಣು.

ಆದಿಗ್ರಹಣಾದನ್ಯತ್ರಾಪಿ ಭವತಿ–ಎನೆ ಎನೆ, ನುಡಿಯೆ ನುಡಿಯೆ, ಅಂತಂತೆ.

ಟೀ ॥ ವಿಪ್ಸಾನುಕರಣಾಭೀಕ್ಷ್ಣ್ಯಕ್ರಿಯಾಸಮಭಿಹಾರಸಾಮೀಪ್ಯಚಾಪಲಾದೌ = ವೀಪ್ಸೆ, ಅನುಕರಣಂ, ಅಭೀಕ್ಷ್ಣ್ಯಂ, ಕ್ರಿಯಾಸಮಭಿಹಾರಂ, ಸಾಮೀಪ್ಯಂ, ಚಾಪಲಂ, ಮೊದಲಾದ ಅರ್ಥಂಗಳಂ ಪೇಳ್ವಲ್ಲಿ. ಪದಸ್ಯ = ಪದಕ್ಕೆ. ದ್ವಿರ್ವಚನಂ = ದ್ವಿರಾವೃತ್ತಿಯಕ್ಕುಂ. ಉ ॥ (ವೃ. ನೋ.)

ಕೆಲವೆಡೆಯೊಳ್ ಅನುಕರಣೆಗೆ ಮೂಱುಬಾರಿ ಬಂದು ಶಬ್ದಮುಂ ಪ್ರಯೋಗಿಸಲಕ್ಕುಂ—

ಬಳೆಗಳ್ ಘಲ್ ಘಲ್ ಘಲ್ಲೆನೆ ।
ಗಿಳಿಸೋವಾಕೆಗಳನೊಪ್ಪುಗುಂ ಕೆಲವೆಡೆಯೊಳ್[4] ॥

ಆದಿಶಬ್ದಸ್ವೀಕಾರದಿಂ ಉೞಿದೆಡೆಯೊಳಂ ಪದಕ್ಕೆ ದ್ವಿರಾವೃತ್ತಿಯುಂಟು — ಉ ॥ (ವೃ. ನೋ.)

1 ಸಾಮೀಪ್ಯಚಾಪಲಾದೌ. 2 ನಡೆನಡೆ. 3 ಕೊಯ್ಕೊಯ್. 4 ಕಾವ್ಯಾವಲೋಕನ, 293.

ಸೂ ॥ ಅ[1]ತ್ರಾಪಿ ಲೋಪಾದಿಕಾರ್ಯಂ ಸಮಾಸವತ ॥ 193 ॥

ವೃ ॥ ಅ[2]ತ್ರ ಅಸ್ಮಿನ್ ಪ್ರಕರಣೇ ತದ್ಧಿತೇ ಕೃತೇ ಚ ಲೋಪಾದಿಕಾರ್ಯಂ ಪದವಿಧಾನಂ ಸಮಾಸವತ್ ದ್ರಷ್ಟವ್ಯಂ । ತ[3]ಥೈವೋದಾಹೃತಂ ॥

ಟೀ ॥ ಅತ್ರಾಪಿ = ಈ ತದ್ಧಿತಾಧಿಕರಣದಲ್ಲಿಯುಂ. ಲೋಪಾದಿಕಾರ್ಯಂ = ಲೋಪಂ ಮೊದಲಾದ ಕಾರ್ಯಂ. ಸಮಾಸವತ್ = ಸಮಾಸದಂತಪ್ಪುದು. ಅದರ್ಕೆ ಸಮಾಸದೊಳ್ ಕಾಣ್ಬುದು.

ಇತಿ ಕರ್ಣಾಟಕವ್ಯಾಕರಣವಿವರಣೇ ತದ್ಧಿತವಿಧಾನಂ ನಾಮ ಸಪ್ತಮಃ ಪರಿಚ್ಛೇದಃ.

---

1 ಅತ್ರ. 2 ಅತ್ರಾಸ್ಮಿನ್ ಪ್ರಕರಣೇ ಕದಕ್ಕಂ ಚ. 3 ತದೇವನುದಾಹೃತಂ.

8. ಆಖ್ಯಾತವಿಧಾನಂ.

ಸೂ ॥ ಕ್ರಿ[1]ಯಾರ್ಥೋ ಧಾತುಃ ॥ 194 ॥

ವೃ ॥ ಕ್ರಿಯಾ ಏವ ಅರ್ಥೋ ಯಸ್ಯಾಸೌ ಕ್ರಿಯಾರ್ಥಃ । ಸ ಧಾತುಸಂಜ್ಞೋ ಭವತಿ ॥

ಟೀ॥ ಕ್ರಿಯಾರ್ಥಃ—ಕ್ರಿಯೆಯನೆ ಅರ್ಥವಾಗುಳ್ಳುದು. ಧಾತುಃ—ಧಾತುವೆಂಬುದು.

ಸೂ ॥ ತಸ್ಮಾದಮುರಯಿರೆನೆವ್ಪೋ ವಿಭಕ್ತಯಃ ॥ 195 ॥

ವೃ ॥ ತಸ್ಮಾದ್ಧಾತುಸಂಜ್ಞಾತ್ ಪರಾಃ ಅಮ್, ಅರ್, ಆಯ್, ಇರ್, ಎಂ, ಎವ್, ಇತ್ಯೇತಾ ವಿಭಕ್ತಯೋ ಭವಂತಿ ॥

ಉ[2] ॥ ಮಾಡಂ, ಮಾಡರ ; ಮಾಡಯ್, ಮಾಡಿರ ; ಮಾಡೆಂ, ಮಾಡೆವು.

ಟೀ ॥ ತಸ್ಮಾತ್—ಆ ಧಾತುವಿನತ್ತಣಿಂ ಪರವಾಗಿ. ಅಮುರಯಿರೆನೆವಃ—ಅಮ್, ಅರ್, ಆಯ್, ಇರ್, ಎಂ, ಎವ್, ಎಂಬ. ವಿಭಕ್ತಯಃ—ವಿಭಕ್ತಿಗಳಪ್ಪವು. ಉ॥ (ವೃ. ನೋ.)

ಸೂ ॥ ದದಪವಕಾರಾದ್ಯಾಸ್ತಾ ಭೂತವತೀವರ್ತಮಾನಾಭ ವಿಷ್ಯಂತ್ಯಃ ॥ 196 ॥

ವೃ ॥ ತಾಸ್ತಾ ವಿಭಕ್ತಯಃ ದದಪವಕಾರಾದ್ಯಾಃ ಯಥಾಕ್ರಮಂ ಭೂತವತೀವರ್ತಮಾನಾ ಭವಿಷ್ಯಂತೀಸಂಜ್ಞಾ ಜ್ಞಾತವ್ಯಾಃ ॥

ಭೂತವತ್ಯಃ— ದಮ್, ದರ್ ; ದಯ್, ದಿರ್ ; ದೆಂ, ದೆವು.
ವರ್ತಮಾನಾಃ— ದಪಮ್, ದಪರ್ ; ದಪಯ್, ದಪಿರ್ ; ದಪೆಂ, ದಪೆವು.
ಭವಿಷ್ಯಂತ್ಯಃ— ವಮ್, ವರ್ ; ವಯ್, ವಿರ್ ; ವೆಂ, ವೆವು.

ಟೀ ॥ ತಾಃ—ಆ ವಿಭಕ್ತಿಗಳ್. ದದಪವಕಾರಾದ್ಯಾಃ—ದ, ದಪ, ವ, ಎಂಬಿವಂ ಮೊದಲೊಳುಳ್ಳುವಾಗಿ. ಯಥಾಕ್ರಮದಿಂ, ಭೂತವತೀವರ್ತಮಾನಾಭವಿಷ್ಯಂತ್ಯಃ—ಭೂತವತಿ, ವರ್ತಮಾನಂ, ಭವಿಷ್ಯಂತಿ, ಎಂಬ ಸಂಜ್ಞೆಗಳಂ ಪಡೆಗುಂ,

ಅದೆಂತೆನೆ—(ವೃ. ನೋ.)

ಸೂ ॥ ನೈ[3]ವಂ ನಞರ್ಥೇ ॥ 197 ॥

ವೃ ॥ ಪ್ರತಿಷೇಧಾರ್ಥೇ ಗಮ್ಯಮಾನೇ ಏವಂ ದದಪವಕಾರಾದ್ಯಾಸ್ತಾ ವಿಭಕ್ತಯೋ ನ ಭವಂತಿ । ಕೇವಲಂ ಸ್ವರೂಪತಸ್ತಿಷ್ಠಂತಿ ॥

ಉ[4] ॥ ಮಾಡಂ, ಮಾಡರ ; ಮಾಡಯ್, ಮಾಡಿರ ; ಮಾಡೆಂ, ಮಾಡೆವು.

---

1 ಕ್ರಿಯಾವಾಚಿಭ್ಯೋ ಧಾತುಸಂಜ್ಞೋ ಭವತಿ. 2 ಒಂದು ಪ್ರತಿಯಲ್ಲಿ ಈ ಉದಾಹರಣಗಳಿಲ್ಲ. 3 ನೈವಂ ನಞರ್ಥೇ, ನೇದಂ ನಾರ್ಥೇ, ನೈವಂ ನಞರ್ಥೇ. 4 ಈ ಉದಾಹರಣೆಗಳು ಟೀಕೆಯಲ್ಲಿ ಮಾತ್ರ ಇವೆ.

ಟೀ ॥ ನಞರ್ಥೇ = ಪ್ರತಿಷೇಧಾರ್ಥದೊಳ್. ಏನಂ ನ = ಆ ವಿಭಕ್ತಿಗಳ್ ದ, ದಪ, ವ, ಎಂಬಿನಂ ಮೊದಲೊಳುಳ್ಳುವಾಗವು. ಉ ॥ (ವೃ. ನೋ.)

ಸೂ ॥ ತಾಸು[1] ದ್ವೇ[2] ದ್ವೇ ಪ್ರಥಮಮಧ್ಯಮೋತ್ತಮಪುರುಷಾಃ ॥ 198 ॥

ವೃ ॥ ತಾಸು ತ್ರಿಧಾ ವಿಭಜ್ಯಮಾನಾಸು ವಿಭಕ್ತಿಷು ದ್ವೇ ದ್ವೇ ವಚನೇ ಭೂತ್ವಾ ಪ್ರಥಮಪುರುಷಮಧ್ಯಮಪುರುಷೋತ್ತಮಪುರುಷಸಂಜ್ಞಾ ಭವಂತಿ ॥

ಪ್ರಥಮಪುರುಷಃ—ಅಮ್, ಅರ್.
ಮಧ್ಯಮಪುರುಷಃ—ಅಯ್, ಇರ್.
ಉತ್ತಮಪುರುಷಃ—ಎನ್, ಎವು.[3]

ಟೀ ॥ ತಾಸು = ಆ ವಿಭಕ್ತಿಗಳೊಳ್. ದ್ವೇ ದ್ವೇ = ಎರಡೆರಡುಗಳೊಂದಾಗಿ ಏಕವಚನಬಹುವಚನಂಗಳಾಗಿ. ಯಥಾಕ್ರಮದಿಂ, ಪ್ರಥಮಮಧ್ಯಮೋತ್ತಮಪುರುಷಾಃ = ಪ್ರಥಮಪುರುಷಂ, ಮಧ್ಯಮಪುರುಷಂ, ಉತ್ತಮಪುರುಷಂ, ಎಂಬ ಸಂಜ್ಞೆಗಳಂ ಪಡೆವುವು.

ಅವಾವುವೆಂದೊಡೆ—(ವೃ. ನೋ.) ಇವರ್ಕೆ ಭೂತವತಿವರ್ತಮಾನಭವಿಷ್ಯಂತಿಗಳ್ಗಾದ ದ, ದಪ, ವ, ಎಂಬಿವಂ ಬೇಱೆವೇಱೆ ಪತ್ತಿಸುವುದು.

ಪ್ರಥಮಪುರುಷದ	ಭೂತವತಿಗೆ—	ದಂ, ದರ್.
,,	ವರ್ತಮಾನಕ್ಕೆ—	ದಪಂ, ದಪರ್.
,,	ಭವಿಷ್ಯಂತಿಗೆ—	ವಂ, ವರ್.
ಮಧ್ಯಮಪುರುಷದ	ಭೂತವತಿಗೆ—	ದಯ್, ದಿರ್.
,,	ವರ್ತಮಾನಕ್ಕೆ—	ದಪಯ್, ದಪಿರ್.
,,	ಭವಿಷ್ಯಂತಿಗೆ—	ವಯ್, ವಿರ್.
ಉತ್ತಮಪುರುಷದ	ಭೂತವತಿಗೆ—	ದೆನ್, ದೆವು.
,,	ವರ್ತಮಾನಕ್ಕೆ—	ದಪೆನ್, ದಪೆವು.
,,	ಭವಿಷ್ಯಂತಿಗೆ—	ವೆನ್, ವೆವು.

ಇಂತೆಲ್ಲವಱೊಳಂ ತಿಳಿವುದು.

ಪ್ರಥಮಮಧ್ಯಮೋತ್ತಮಪುರುಷಂಗಳ ವರ್ತನೆಗಳೆಹಗೆಂದೊಡೆ—

ಸೂ ॥ ಅನ್ಯಾರ್ಥೇ ಪ್ರಥಮಃ ॥ 199 ॥

ವೃ ॥ ಅ[4]ನ್ಯಾರ್ಥೇ ವಿ[5]ವಕ್ಷಿತೇ ಕ್ರಿಯಾವಚನಾದ್ಧಾತೋಃ ಪರಃ ಪ್ರಥಮಪುರುಷೋ ಭವತಿ ॥

---

1 ತಾಸ್ವು. 2 ದ್ವಿದ್ವೀತಿ. 3 ಇದಾದಮೇಲೆ, ಏನಂ ಸರ್ವಕಾಲೇ—ಎಂದು ಒಂದು ಪ್ರತಿಯಲ್ಲಿಮಾತ್ರ ಇದೆ.
4 ಅನ್ಯಾರ್ಥೇ ಸಾಧನೇ. 5 ಗಮ್ಯಮಾನೇ, ಕ್ರಿಯಾವಿವಕ್ಷಿತೇ ಕ್ರಿಯಾವಚನಾರ್ಥೇ ಪರಃ.

ಉ ॥ ತಾಂ ಮಾಡಿದಂ, ತಾಂ ಮಾಡಿದರ್ ; ತಾಂ ಮಾಡಿದಪಂ, ತಾಂ ಮಾಡಿದಪರ್; ತಾಂ ಮಾಡುವಂ, ತಾಂ ಮಾಡುವರ್.

ಟೀ ॥ ಅನ್ಯಾರ್ಥೇ=ನೀಂ, ಆಂ, ಎಂಬರ್ಥಮಲ್ಲದೆ ಅನ್ಯಮಾದ ತಾಂ ಎಂಬರ್ಥದಲ್ಲಿ. ಪ್ರಥಮಃ=ಪ್ರಥಮಪುರುಷಮಕ್ಕುಂ. ಉ ॥ (ವೃ. ನೋ.)

ಸೂ ॥ ಯುಷ್ಮದಸ್ಮದೋರ್ಮಧ್ಯಮೋತ್ತಮೌ ॥ 200 ॥

ವೃ ॥ ಯು[1]ಷ್ಮದರ್ಥೇ ಅಸ್ಮದರ್ಥೇ ಚ ಯಥಾಸಂಖ್ಯಂ ಮಧ್ಯಮೋತ್ತಮಪುರುಷೌ ಭವತಃ ॥

ಉ ॥ ಮಧ್ಯಮಪುರುಷೇ—ಆಡಿದಯ್, ಆಡಿದಿರ್; ಆಡಿದಪಯ್, ಆಡಿದಪಿರ್; ಆಡುವಯ್, ಆಡುವಿರ್.

ಉತ್ತಮಪುರುಷೇ—ಆಡಿದೆಂ, ಆಡಿದೆವು ; ಆಡಿದಪೆಂ, ಆಡಿದಪೆವು ; ಆಡುವೆಂ, ಆಡುವೆವು.

ಟೀ ॥ ಯುಷ್ಮದಸ್ಮದೋಃ=ನೀಂ, ಆಂ, ಎಂಬೆರಡರ್ಥಂಗಳಲ್ಲಿ. ಕ್ರಮದಿಂ, ಮಧ್ಯಮೋತ್ತಮೌ=ಮಧ್ಯಮೋತ್ತಮಪುರುಷಂಗಳಕ್ಕುಂ. ಉ ॥ (ವೃ. ನೋ.)

ಸೂ ॥ ಯುಗಪತ್ಪ್ರಯೋಗೇ ಪರಸ್ತೇಷಾಂ ॥ 201 ॥

ವೃ ॥ ತೇಷಾಂ ಪ್ರಥಮಮಧ್ಯಮೋತ್ತಮಪುರುಷಾಣಾಂ ಯುಗಪತ್ಪ್ರಯೋಗೇ ಸತಿ ಯಃ ಪರಃ ಸ ಏವ ಪುರುಷೋ ಭವತಿ ॥

ಉ ॥ ಆತನುಂ ನೀನುಂ ಮಾಡಿದಿರ್, ಮಾಡಿದಪಿರ್, ಮಾಡುವಿರ್.

ಆತನುಮಾನುಂ ಮಾಡಿದೆವು, ಮಾಡಿದಪೆವು, ಮಾಡುವೆವು.

ನೀನುಮಾನುಂ ಮಾಡಿದೆವು, ಮಾಡಿದಪೆವು ಮಾಡುವೆವು.

ಆತನುಂ ನೀನುಮಾನುಂ ಕೂಡಿ ಮಾಡಿದೆವು, ಮಾಡಿದಪೆವು, ಮಾಡುವೆವು.

ಟೀ ॥ ತೇಷಾಂ=ಆ ಪ್ರಥಮಮಧ್ಯಮೋತ್ತಮಪುರುಷಂಗಳ. ಯುಗಪತ್ಪ್ರಯೋಗೇ=ಏಕಕಾಲಪ್ರಯೋಗದಲ್ಲಿ. ಪರಃ=ಅವರೊಳಾವುದೊಂದು ಮುಂದಿರ್ದುದು ಅದುವೆ ಪುರುಷಮಕ್ಕುಂ. ಉ ॥ (ವೃ. ನೋ.)

ಸೂ ॥ ಸ್ವಾ[2]ರ್ಥೇ ಕಾಲೇ ॥ 202 ॥

ವೃ ॥ ಸ್ವ[3]ಸ್ಯಾರ್ಥೇ ಕಾಲೇ ಭೂತವತ್ಯಾದಯೋ ವಿಧಾತವ್ಯಾಃ ॥

ಏತದುಕ್ತಂ ಭವತಿ । ಭೂತಕಾಲೇ ಭೂತವತೀ । ವರ್ತಮಾನಕಾಲೇ ವರ್ತಮಾನಾ । ಭವಿಷ್ಯತ್ಕಾಲೇ ಭವಿಷ್ಯಂತೀ ವಿಧಾತವ್ಯಾ । ತದ್ಯಥಾ —

---

1 ಯುಷ್ಮದಸ್ಮದರ್ಥೇ ಬಾಧ್ಯೇ ಯಥಾಸಂಖ್ಯಂ. 2 ಸ್ವಾರ್ಥೇ ಕಾಲೇ. 3 ಸ್ವಸ್ಯಾರ್ಥ ಏವ ಅರ್ಥೋ ಯಸ್ಯ ಸ್ವಾರ್ಥಃ ತಸ್ಮಿನ್ ಸ್ವಾರ್ಥೇ ಕಾಲೇ, ಸ್ವಶಬ್ದಾರ್ಥ ಏವ ಯಸ್ಯ ಸ್ವಾರ್ಥಃ ತಸ್ಮಿನ್ ಸ್ವಾರ್ಥೇ ಕಾಲೇ.

ಭೂತೇ—ಪುಟ್ಟಿದಂ, ಪುಟ್ಟಿದರ್.
ವರ್ತಮಾನೇ—ಪುಟ್ಟಿದಪಂ, ಪುಟ್ಟಿದಪರ್.
ಭವಿಷ್ಯತಿ—ಪುಟ್ಟುವಂ, ಪುಟ್ಟುವರ್.
ಏವಂ ಮಧ್ಯಮೋತ್ತಮಯೋರಪಿ ॥

ಟೀ ॥ ಅವು, ಸ್ವಾರ್ಥೇ=ತಂತಮ್ಮ ಅರ್ಥದೊಳ್. ಕಾಲೇ=ತಂತಮ್ಮ ಕಾಲದೊಳ್ ಅಕ್ಕುಂ. ಅದೆಂತೆನೆ—

ಭೂತಕಾಲದೊಳ್ ಭೂತವತೀವಿಭಕ್ತಿಯುಕ್ಕುಂ; ವರ್ತಮಾನಕಾಲದೊಳ್ ವರ್ತಮಾನವಿಭಕ್ತಿಯುಕ್ಕುಂ; ಭವಿಷ್ಯತ್ಕಾಲದೊಳ್ ಭವಿಷ್ಯಂತೀವಿಭಕ್ತಿಯುಕ್ಕುಂ. ಭೂತಕಾಲಮೆಂಬುದು ಅತೀತಕಾಲಮಂ ಪೇೞ್ಗುಂ. ಭೂತಕಾಲಕ್ಕೆ—ಉ ॥ (ವೃ. ನೋ.) ವರ್ತಮಾನಕಾಲಮೆಂಬುದು ಈಗಳ್ ವರ್ತಿಸುವ ಕಾಲಮಂ ಪೇೞ್ಗುಂ. ವರ್ತಮಾನಕಾಲಕ್ಕೆ—ಉ ॥ (ವೃ. ನೋ.) ಭವಿಷ್ಯತ್ಕಾಲಮೆಂಬುದು ಮೇಲೆ ಬರ್ಪ ಕಾಲಮಂ ಪೇೞ್ಗುಂ. ಭವಿಷ್ಯತ್ಕಾಲಕ್ಕೆ—ಉ ॥ (ವೃ. ನೋ.) ಈ ಪ್ರಕಾರದಿಂದಱಿವುದು.

ಮಧ್ಯಮೋತ್ತಮಪುರುಷಂಗಳಲ್ಲಿಯುಮಿಂತೆ.

ಸೂ ॥ ಏಕಸ್ಮಿನ್ನೇಕವಚನಂ ॥ 203 ॥

ವೃ ॥ ಏ[1]ಕಸ್ಮಿನ್ ಏಕಾರ್ಥೇ ವಿವಕ್ಷಿತೇ ಏ[2]ಕವಚನಮೇವ ಭವತಿ ॥

ಉ ॥ ಆತನೊರ್ವನೆ ಮಾಡಿದಂ, ಮಾಡಿದಪಂ, ಮಾಡುವಂ.

ನೀನೊರ್ವನೆ ಮಾಡಿದಯ್, ಮಾಡಿದಪಯ್, ಮಾಡುವಯ್.

ಆನೊರ್ವನೆ ಮಾಡಿದೆಂ, ಮಾಡಿದಪೆಂ, ಮಾಡುವೆಂ.

ಟೀ ॥ ಏಕಸ್ಮಿನ್=ಏಕಾರ್ಥಮಂ ನುಡಿಯಲ್ವೇಡಿದೊಡೆ. ಏಕವಚನಂ=ಏಕವಚನಮಕ್ಕುಂ. ಉ ॥ (ವೃ. ನೋ.)

ಸೂ ॥ ದ್ವಿತ್ವಬಹುತ್ವಯೋರನ್ಯತ್ ॥ 204 ॥

ವೃ ॥ ದ್ವಿತ್ವೇ ಬಹುತ್ವೇ ಚ ತ[3]ದನ್ಯತ್ ಬಹುವಚನಮೇವ ಭವತಿ ॥

ಉ ॥ ಆವರ್ ಮಾಡಿದರ್, ಮಾಡಿದಪರ್, ಮಾಡುವರ್.

ನೀಂ ಮಾಡಿದಿರ್, ಮಾಡಿದಪಿರ್, ಮಾಡುವಿರ್.

ಆಂ ಮಾಡಿದೆವು, ಮಾಡಿದಪೆವು, ಮಾಡುವೆವು.

ಟೀ ॥ ದಿತ್ವಬಹುತ್ವಯೋಃ=ದ್ವಿತ್ವಬಹುತ್ವಂಗಳಲ್ಲಿ. ಅನ್ಯತ್=ಏಕವಚನದಿಂದನ್ಯಮಾದ ಬಹುವಚನಮೆ ಅಕ್ಕುಂ. ಉ ॥ (ವೃ. ನೋ.)

---

1 ಏಕಸ್ಮಿನ್ನರ್ಥೇ. 2 ಏತಾಸಾಂ ವಿಭಕ್ತೀನಾಂ ಏಕವಚನಮೇವ ಭವತಿ. 3 ಶಿಷ್ಟಂ ವಚನಂ ಭವತಿ.

ಸೂ ॥ ಉದು ಉವು ನ[1]ಪಿ ಪ್ರಥಮಸ್ಯ ॥ 205 ॥

ವೃ ॥ ನಪುಂಸಕಲಿಂಗವಿಷಯೇ ಪ್ರಥಮಪುರುಷಸ್ಯ ಏಕಾನೇಕವಚನಯೋಃ ಕ್ರಮೇಣ ಉದು, ಉವು, ಇತ್ಯೇತಾವಾದೇಶೌ ಭವತಃ ॥

ಉ ॥ ಆದುದು, ಆದುವು ; ಆದಪುದು, ಆದಪುವು ; ಅಪ್ಪುದು, ಅಪ್ಪುವು. ಪೋದುದು, ಪೋದುವು ; ಪೋದಪುದು, ಪೋದಪುವು ; ಪೋಪುದು, ಪೋಪುವು.

ಟೀ ॥ ನಪಿ = ನಪುಂಸಕಲಿಂಗದಲ್ಲಿ. ಪ್ರಥಮಸ್ಯ = ಪ್ರಥಮಪುರುಷಕ್ಕೆ. ಏಕವಚನಬಹುವಚನಂಗಳಲ್ಲಿ ಯಥಾಕ್ರಮದಿಂ, ಉದು ಉವು = ಉದು, ಉವು, ಎಂಬಾದೇಶಂಗಳಪ್ಪುವು. ಉ ॥ (ವೃ. ನೋ.)

ಸೂ ॥ ಭಾವೇ ಚ ॥ 206 ॥

ವೃ ॥ ಭಾ[2]ವಾರ್ಥೇ ವಿವಕ್ಷಿತೇ ಪ್ರಥಮಪುರುಷಸ್ಯ ಉದು, ಉವು, ಇತ್ಯೇತೌ ಭವತಃ ॥

ಉ ॥ ಇರ್ಪುದು, ಇರ್ಪುವು ; ಮಾೞ್ಪುದು, ಮಾೞ್ಪುವು ; ಕೂರ್ಪುದು, ಕೂರ್ಪುವು; ಬರ್ಪುದು, ಬರ್ಪುವು ; ನೋ[3]ಡಿದುದು, ನೋಡಿದುವು ; ಬೇಡಿದುದು, ಬೇಡಿದುವು.

ಮಾಡಿದುದು, ಮಾಡಿದುದಂ, ಮಾಡಿದುದಱಿಂ, ಮಾಡಿದುದರ್ಕೆ, ಮಾಡಿದುದಱತ್ತಣಿಂ, ಮಾಡಿದುದಱ, ಮಾಡಿದುದಱೊಳ್. ನೋಡಿದುವು, ನೋಡಿದುವಂ, ನೋಡಿದುವಱಿಂ, ನೋಡಿದುವರ್ಕೆ, ನೋಡಿದುವಱತ್ತಣಿಂ, ನೋಡಿದುವಱ, ನೋಡಿದುವಱೊಳ್.

ಟೀ ॥ ಭಾವೇ ಚ = ಭಾವಾರ್ಥದಲ್ಲಿಯುಂ ಪ್ರಥಮಪುರುಷಕ್ಕೆ ಏಕವಚನಬಹುವಚನಂಗಳಲ್ಲಿ ಕ್ರಮದಿಂ ಉದು, ಉವು, ಎಂಬಾದೇಶಂಗಳಪ್ಪುವು. ಉ ॥ (ವೃ. ನೋ.)

ಸೂ ॥ ತದೇಕವಚನಸ್ಯ ತುತ್ತೂ ವಾನ್ಯೇಷಾಂ ॥ 207 ॥

ವೃ ॥ ನಪುಂಸಕಲಿಂ[4]ಗವಿಹಿತಸ್ಯ ಪ್ರಥಮಪುರುಷೈಕವಚನಸ್ಯ ಅನ್ಯೇಷಾಂ ಮತೇನ ತುತ್ತೂ ವಾ ಭವತಃ ॥

ಉ ॥ ಪುಟ್ಟಿತು, ಪುಟ್ಟಿತ್ತು ; ಸೊಗಯಿಸಿತು, ಸೊಗಯಿಸಿತ್ತು ; ಅಳ್ಕಿತು, ಅಳ್ಕಿತ್ತು. ವ್ಯವಸ್ಥಿತವಿಭಾಷಯಾ ಕ್ವಚಿದನ್ಯದೇವ—ಕೆಟ್ಟತ್ತು, ಸತ್ತತ್ತು, ಆದತ್ತು, ಪೋದತ್ತು.

ಟೀ ॥ ತದೇಕವಚನಸ್ಯ = ಆ ನಪುಂಸಕಲಿಂಗದಲ್ಲಿ ವಿಹಿತಮಾದ ಪ್ರಥಮಪುರುಷದ ಏಕವಚನಕ್ಕೆ. ಅನ್ಯೇಷಾಂ = ಕೆಲಂಬರ ಮತದಿಂ. ವಾ = ವಿಕಲ್ಪದಿಂದೆ. ತುತ್ತೂ = ತು, ತ್ತು, ಎಂಬ ಆದೇಶಂಗಳಕ್ಕುಂ. ಉ ॥ (ವೃ. ನೋ.)

ವ್ಯವಸ್ಥಿತವಿಭಾಷೆಯಿಂ ಕೆಲವೆಡೆಯೊಳ್ ಬೇಱೆ ಆದೇಶಮಕ್ಕುಂ—ಉ ॥ (ವೃ. ನೋ.)

---

1 ನಪುಂಸಿ, ಪ್ರಥಮಸ್ಯ ನಪುಂಸಕೇ. 2 ಭಾವೇರ್ಥೇ, ಭಾವಾರ್ಥೇಪಿ ಉದು, ಉವು, ಆದೇಶೌ ಭವತಃ. 3 ಇದಱದ ಮುಂದೆ ಇರುವ ಭಾಗವು ಒಂದು ಪ್ರತಿಯಲ್ಲಿ ಮಾತ್ರ ಇದೆ. 4 ಲಿಂಗೇ.

ಸೂ ॥ ಸ್ತ್ರಿಯಾಮಳಂತೇ ॥ 208 ॥

ವೃ ॥ ಸ್ತ್ರೀ[1]ವಿವಕ್ಷಾಯಾಂ ಪ್ರಥಮಪುರುಷೈಕವಚನಸ್ಯ ಅಂತೇ ಅಳ್ ಭವತಿ ॥

ಉ ॥ ಅಱಿದಳ್, ಅಱಿದಪಳ್, ಅಱಿವಳ್; ಜನಿಯಿಸಿದಳ್, ಜನಿಯಿಸಿದಪಳ್, ಜನಿಯಿಸುವಳ್.

ಟೀ ॥ ಸ್ತ್ರಿಯಾಂ=ಸ್ತ್ರೀಲಿಂಗದಲ್ಲಿ. ಪ್ರಥಮಪುರುಷದ ಏಕವಚನದ, ಅಂತೇ=ಕಡೆಯಲ್ಲಿ. ಅಳ್=ಅಳ್ ಪ್ರತ್ಯಯಮಕ್ಕುಂ ಉ ॥ (ವೃ. ನೋ.)

ಸೂ ॥ ಗುಂಕುಮೌ ಭವಿಷ್ಯಂತ್ಯಾಃ ಸರ್ವತ್ರ ॥ 209 ॥

ವೃ ॥ ಪ್ರಥಮಪುರುಷಸ್ಯ ಭ[2]ವಿಷ್ಯಂತ್ಯಾಃ ಸರ್ವತ್ರ ಲಿಂ[3]ಗವಚನೇ ಲಕ್ಷ್ಯಾನುಸಾರೇಣ ಗುಂಕುಮೌ ಆದೇಶೌ ಭವತಃ ॥

ಉ ॥ ನಿಱುಗುವಮಾತಂ, ನಿಱುಗುವಮಾಕೆ, ನಿಱುಗುವುದು ; ಇರ್ಕುಮಾತಂ, ಇರ್ಕುಮಾಕೆ, ಇರ್ಕುಮದು.

ಟೀ ॥ ಭವಿಷ್ಯಂತ್ಯಾಃ=ಪ್ರಥಮಪುರುಷದ ಭವಿಷ್ಯಂತಿಗೆ. ಸರ್ವತ್ರ=ಎಲ್ಲಾ ಲಿಂಗವಚನಂಗಳೊಳಂ. ಗುಂಕುಮೌ=ಗುಂ, ಕುಂ, ಎಂಬಾದೇಶಂಗಳಪ್ಪುವು. ಉ ॥ (ವೃ. ನೋ.)

ಸೂ ॥ ದಾದಾವಿದಾಗಮೋ ಬಹುಳಂ ॥ 210 ॥

ವೃ ॥ ದಕಾರಾದೌ ವಿಭಕ್ತಿಗಣೇ ಪರೇ ಇಕಾರಾಗಮೋ ಬಹುಳಂ ಭವತಿ ॥

ಉ ॥ ಮೆಚ್ಚಿದಂ, ಮೆಚ್ಚಿದಪಂ ; ಮೆಚ್ಚಿದರ್, ಮೆಚ್ಚಿದಪರ್.

ಬಹುಳಗ್ರಹಣಾದನ್ಯತ್ರಾಪಿ ಭವತಿ - ಉರ್ಚಿತು, ಉರ್ಚಿತ್ತು; ಬೆರ್ಚಿತು, ಬೆರ್ಚಿತ್ತು.

ಕ್ವಚಿದನ್ಯದೇವ—ನಡೆದತ್ತು, ಒಡೆದಂ, ಪಡೆದಂ, ಕಳೆದಂ, ಬೆಳೆದಂ.

ಟೀ ॥ ದಾದೌ=ದಕಾರಮಂ ಆದಿಯಾಗುಳ್ಳ ವಿಭಕ್ತಿ ಪರಮಾಗುತ್ತಿರೆ. ಬಹುಳಂ=ಬಹುಳದಿಂ. ಇದಾಗಮಃ=ಇಕಾರಾಗಮಮಕ್ಕುಂ. ಉ ॥ (ವೃ. ನೋ.)

ಬಹುಳಶಬ್ದಸ್ವೀಕಾರದಿಂ ದಕಾರಾದಿವಿಭಕ್ತಿಯಿಲ್ಲದಲ್ಲಿಯುಮುಂಟು—ಉ ॥ (ವೃ. ನೋ.)

ಕೆಲವೆಡೆಯೊಳ್ ಬೇಱೆ ಆಗಮಮಕ್ಕುಂ—ಉ ॥ (ವೃ. ನೋ.)

ಸೂ ॥ ಯುಂಚ ವೇ ॥ 211 ॥

ವೃ ॥ ವಕಾರಾದೌ ವಿಭಕ್ತಿಗಣೇ ಪರೇ ಇಶ್ಚ ಉಶ್ಚ ಆಗಮೌ ಭವತಃ ॥

ಉ ॥ ಜಡಿವಂ, ನುಡಿವಂ, ಬಡಿವಂ, ಕುಡಿವಂ ; ಮಾಡುವಂ, ಬೇಡುವಂ, ಆಡುವಂ, ಪಾಡುವಂ.

---

1 ಸ್ತ್ರೀಲಿಂಗವಿಷಯೇ ಧಾತ್ವಂತೇ ಅಳ್ಭವತಿ. 2 ಭವಿಷ್ಯಂತ್ಯಾಂ. 3 ಲಿಂಗವಚನೇ ಚ,

ಚಕಾರಾದನ್ಯದಪಿ—ಸೆಳೆವಂ, ಬೆಳೆವಂ, ಎೞೆವಂ.

ಕ್ವಚಿನ್ನ ಭವತಿ—ಈವಂ, ಕಾವಂ.

ಟೀ ॥ ವೇ—ವಕಾರಾದಿವಿಭಕ್ತಿಗಣಂ ಪರವಾಗುತ್ತಿರೆ. ಯೂ ಚ—ಇಕಾರಾಗಮಮುಂ ಉಕಾರಾಗಮಮುಂ ಅಕ್ಕುಂ. ಉ ॥ (ವೃ. ನೋ.)

ಚಶಬ್ದಸ್ವೀಕಾರದಿಂ ಮತ್ತೊಂದಕ್ಕುಂ— ಉ ॥ (ವೃ. ನೋ.)

ಕೆಲವೆಡೆಯೊಳ್ ಆಗಮಮಿಲ್ಲ—ಉ ॥ (ವೃ. ನೋ.)

ಸೂ ॥ ರೞಾಭ್ಯಾಂ ವಸ್ಯ ಪಃ ॥ 212 ॥

ವೃ ॥ ರೇಫೞಕಾರಾಭ್ಯಾಂ ಪರಸ್ಯ ವಕಾರಸ್ಯ ಪಕಾರಾದೇಶೋ ಭವತಿ ॥

ಉ ॥ ಬರ್ಪಂ, ಬರ್ಪರ್; ಇರ್ಪಂ, ಇರ್ಪರ್. ನೋೞ್ಪಂ, ನೋೞ್ಪರ್; ಪೇೞ್ಪಂ, ಪೇೞ್ಪರ್.

ಒ[1]ಕಾರಾದಪಿ ವಕ್ತವ್ಯಃ—ಒಪಂ, ಒಪರ್.

ಟೀ ॥ ರೞಾಭ್ಯಾಂ—ರೇಫ ೞಕಾರಂಗಳತ್ತಣಿಂ ಪರವಾದ. ವಸ್ಯ—ವಕಾರಕ್ಕೆ. ಪಃ—ಪಕಾರಾದೇಶಮಕ್ಕುಂ. ಉ ॥ (ವೃ. ನೋ.)

ಒಕಾರದತ್ತಣಿಂ ಪರವಾದ ವಕಾರಕ್ಕಂ ಪಕಾರಾದೇಶಮಂ ಪೇೞವೇೞ್ಕುಂ—ಉ ॥ (ವೃ. ನೋ.)

ಸೂ ॥ ಧಾತೋರನೇಕಾಕ್ಷರಾದಿಸುಃ ॥ 213 ॥

ವೃ ॥ ಅನೇಕಾಕ್ಷರಾತ್ ಧಾತೋಃ ವಿಭಕ್ತಿಗಣೇ ಪರೇ ಇಸುರ್ಭವತಿ ॥

ಉ ॥ ಸೊಗಯಿಸುಗುಂ, ಸೊಗಯಿಸಿದಂ, ಸೊಗಯಿಸಿದಳ್, ಸೊಗಯಿಸಿದರ್; ರಂಜಿಸುಗುಂ, ರಂಜಿಸಿದಂ, ರಂಜಿಸಿದಳ್, ರಂಜಿಸಿದರ್.

ಟೀ ॥ ಅನೇಕಾಕ್ಷರಾತ್—ಅನೇಕಾಕ್ಷರಮಪ್ಪ. ಧಾತೋಃ—ಧಾತುವಿನತ್ತಣಿಂ. ವಿಭಕ್ತಿಗಣಂ ಪರವಾಗೆ, ಇಸುಃ—ನಡುವೆ ಇಸು ಎಂಬಾಗಮಮಕ್ಕುಂ. ಉ ॥ (ವೃ. ನೋ.)

ಸೂ ॥ ಪ್ರಯೋಜಕೇ ಚ ॥ 214 ॥

ವೃ ॥ ಪ್ರ[2]ಯೋಜಕೇ ಚಾರ್ಥೇ ವಿವಕ್ಷಿತೇ ಧಾತೋಃ ಪರಃ ಇಸುರ್ಭವತಿ ॥

ಉ ॥ ಮೆಚ್ಚಿಸಿದಂ, ಮಾಡಿಸಿದಂ, ಕಣ್ಗೊಳಿಸಿದಂ.

ಟೀ ॥ ಪ್ರಯೋಜಕೇ ಚ—ಪ್ರಯೋಜಕಾರ್ಥದಲ್ಲಿಯುಂ ಧಾತುವಿನತ್ತಣಿಂ ಪರವಾಗಿ ಇಸುವಕ್ಕುಂ. ಉ ॥ (ವೃ. ನೋ.)

---

1 ಕೆಲವು ಪ್ರತಿಗಳಲ್ಲಿ ಇದು ಒಂದು ಸೂತ್ರವಾಗಿ ಕೊಟ್ಟಿದೆ. 2 ಪ್ರಯೋಜಕೇ ಚಾರ್ಥೇ ವಿವಕ್ಷಿತೇ ಧಾತೋಃ ಇಸುರ್ಭವತಿ ವಿಭಕ್ತೌ ಪರತಃ.

ಸೂ ॥ ಗೆ[1]ಕೆ ವಾ ಪ್ರಥಮಸ್ಯಾಶಿಷಿ ವಿಧ್ಯಾದಿಷು ಚ ॥ 215 ॥

ವೃ ॥ ತಾಸಾಂ ವಿಭಕ್ತೀನಾಂ ಪ್ರಥಮಪುರುಷಸ್ಯ ಸ್ಥಾನೇ ಆಶಿಷಿ ವಿಧ್ಯಾದ್ಯರ್ಥೇಷು ಚ ಗೆ ಕೆ ವಾ ಭವತಃ ॥

ಉ ॥ ಆಯುಮಂ ಸಿರಿಯುಮಂ ಮಾಡುಗೆ, ಆಯುಂ ಸಿರಿಯುಮಕ್ಕೆ ; ತಾನದಂ ಮಾಡುಗೆ, ತಾನದಂ ಮಾಟ್ಕೆ. ಇತ್ಯಾದಿ.

ಟೀ ॥ ಪ್ರಥಮಸ್ಯ=ಪ್ರಥಮಪುರುಷಕ್ಕೆ. ಆಶಿಷಿ=ಪರಕೆಯಲ್ಲಿ. ವಿಧ್ಯಾದಿಷು ಚ= ವಿಧಿ ಮೊದಲಾದುವಱಲ್ಲಿಯುಂ. ವಾ=ವಿಕಲ್ಪದಿಂ. ಗೆ ಕೆ=ಗೆ, ಕೆ, ಎಂಬಾದೇಶಂಗಳಪ್ಪುವು. ಉ ॥ (ವೃ. ನೋ.)

ಸೂ ॥ ಮಧ್ಯಮೈಕವಚನಸ್ಯೇದುದೇತಃ ಪ್ರಾಯೋ ಲೋಪಶ್ಚ ॥ 216 ॥

ವೃ ॥ ಆಶೀರ್ವಿಧ್ಯಾದಿಷ್ವರ್ಥೇಷು ಮಧ್ಯಮಪುರುಷೈಕವಚನಸ್ಯ ಇತ್, ಉತ್, ಏತ್, ಇತ್ಯೇತೇ ಆದೇಶಾ ಭ[2]ವಂತಿ। ಪ್ರಾಯೋ ಯಥಾಲಕ್ಷ್ಯಂ ಲೋಪಶ್ಚ ಭವತಿ ॥

ಉ ॥ ಕುಡಿ, ಪಿಡಿ, ಜಡಿ, ಕಡಿ ; ಕುಡು, ಮಾಡು, ಮಾಡು, ಪೂಡು ; ಕಳೆ, ತೆಗೆ, ಬಗೆ, ತಗೆ ; ನಿಲ್, ಕೊಳ್, ಪೇೞ್, ಮಾಣ್.

